ಗುರುವಾರ, ಅಕ್ಟೋಬರ್ 5, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 276 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

8ನೇ ಖಂಡ ಗೊತ್ತೆ? 'ಝೀಲ್ಯಾಂಡಿಯಾ'

ಮಹಾರಾಷ್ಟ್ರ : 80 ದಾಟಿದ ಮೃತರ ಸಂಖ್ಯೆ 7

'ಬಹುತೇಕ ಶಾಸಕರು ಮೈತ್ರಿಗೆ ಒಪ್ಪಿಲ್ಲ' 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,226 ▼	19,436 ▼	₹58,430 (ಬೆಂಗಳೂರು) ▲	₹69,100 (ಬೆಂಗಳೂರು)	83.24 ▼

ಏಷ್ಯನ್ ಕ್ರೀಡಾಕೂಟದಲ್ಲಿ ಸಾರ್ವಕಾಲಿಕ ಶ್ರೇಷ್ಠ ಸಾಧನೆ ಮೆರೆದ ಭಾರತೀಯ ಕ್ರೀಡಾಪಟುಗಳು

ಪದಕಗಳ ದಾಖಲೆ ಸಂಭ್ರಮ

ಚಿನ್ನ ಕಾಂಪೌಂಡ್ ಆರ್ಚರಿಯಲ್ಲಿ ಚಿನ್ನ ಗೆದ್ದ ಜ್ಯೋತಿ ಸುರೇಖಾ ವೆನ್ನಂ ಮತ್ತು ಓಜಸ್ ದೇವತಾಳೆ

ಹಾಂಗ್‌ಝೌ (ಚೀನಾ): ಕ್ರೀಡಾ ಕ್ಷೇತ್ರದಲ್ಲಿ ಭಾರತ ಇತ್ತೀಚಿನ ವರ್ಷಗಳಲ್ಲಿ ಸಾಧಿಸುತ್ತಿರುವ ಗಮನಾರ್ಹ ಪ್ರಗತಿಗೆ 19ನೇ ಏಷ್ಯನ್ ಕ್ರೀಡಾಕೂಟ ಕನ್ನಡಿ ಹಿಡಿದಿದೆ. ಕ್ರೀಡಾಕೂಟದ 11ನೇ ದಿನವಾದ ಬುಧವಾರ ಭಾರತದ ಸ್ಪರ್ಧಿಗಳು ಮೂರು ಚಿನ್ನ ಸೇರಿ 12 ಪದಕಗಳನ್ನು ಗೆದ್ದುಕೊಂಡರು. ಇದರೊಂದಿಗೆ ಪದಕಗಳ ಸಂಖ್ಯೆ 81ಕ್ಕೆ ಏರಿದ್ದು, ಇದು, ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಸಾರ್ವಕಾಲಿಕ ಶ್ರೇಷ್ಠ ಸಾಧನೆ ಎನಿಸಿದೆ.

2018ರ ಜಕಾರ್ತಾ ಕ್ರೀಡೆಗಳಲ್ಲಿ 70 ಪದಕಗಳನ್ನು ಗೆದ್ದಿದ್ದೇ ಇದುವರೆಗಿನ ಶ್ರೇಷ್ಠ ಪ್ರದರ್ಶನ ಎನಿಸಿತ್ತು. ಭಾರತ ಗೆದ್ದ ಪದಕಗಳಲ್ಲಿ 18 ಚಿನ್ನ, 31 ಬೆಳ್ಳಿ, 32 ಕಂಚಿನ ಪದಕಗಳು ಸೇರಿದ್ದು ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲೇ ಇದೆ. ಭಾರತ ಹಿಂದೆಂದೂ ಇಷ್ಟೊಂದು ಚಿನ್ನ ಗೆದ್ದಿರಲಿಲ್ಲ. ಜಕಾರ್ತಾದಲ್ಲಿ 16 ಚಿನ್ನ ಬಂದಿದ್ದೇ ಅತ್ಯಧಿಕ ಎನಿಸಿತ್ತು.

ಭಾರತ ಗೆದ್ದುಕೊಂಡ ಅರ್ಧಕ್ಕಿಂತ ಹೆಚ್ಚು ಪದಕಗಳು ಶೂಟಿಂಗ್ (22) ಮತ್ತು ಅಥ್ಲೆಟಿಕ್ಸ್ (29)ನಿಂದ ಬಂದಿವೆ. ಇನ್ನು ಹಾಕಿ, ಕಬಡ್ಡಿ, ಆರ್ಚರಿ, ಪುರುಷರ ಕ್ರಿಕೆಟ್, ಬ್ರಿಜ್, ಬ್ಯಾಡ್ಮಿಂಟನ್, ಚೆಸ್, ವೇಟ್‌ಲಿಫ್ಟಿಂಗ್, ಬ್ರಿಜ್, ಸ್ಕ್ವಾಷ್‌ನಲ್ಲೂ ಭಾರತದ ಕ್ರೀಡಾಪಟುಗಳು ಪದಕದ ಸನಿಹ ಬಂದಿದ್ದಾರೆ. ಇವುಗಳಲ್ಲಿ ಕೆಲವದರಲ್ಲಿ ಪದಕಗಳು ಖಚಿತವಾಗಿದೆ.

ವಿವರ: ಕ್ರೀಡಾಪುಟ

ಬೆಳ್ಳಿ ಪದಕ ವಿಜೇತರು

- **ಕಿಶೋರ್ ಕುಮಾರ್ ಜೇನಾ** (ಜಾವೆಲಿನ್)
- **ಹರ್ಮಿಲನ್ ಬೇನ್ಸ್** (ಮಹಿಳೆಯರ 800 ಮೀ. ಓಟ)
- **ಅವಿನಾಶ್ ಸಾಬ್ಳೆ** (ಪುರುಷರ 5,000 ಮೀ. ಓಟ)
- ಮಹಿಳೆಯರ **4x400** ಮೀ. ರಿಲೇ **(ವಿದ್ಯಾ ರಾಮರಾಜ್, ಐಶ್ವರ್ಯಾ ಮಿಶ್ರಾ, ಪ್ರಾಚಿ, ಶುಭಾ ವೆಂಕಟೇಶನ್)**
- **ಲವ್ಲಿನಾ ಬೋರ್ಗೋಹೈನ್** (ಬಾಕ್ಸಿಂಗ್, 75 ಕೆ.ಜಿ ವಿಭಾಗ)

ಕಂಚಿನ ಪದಕ ಗೆದ್ದವರು

- 35 ಕಿ.ಮೀ. ರೇಸ್‌ವಾಕ್ ಮಿಕ್ಸೆಡ್ ವಿಭಾಗ **(ರಾಮ್ ಬಾಬೂ, ಮಂಜು ರಾಣಿ)**
- **ಸುನಿಲ್ ಕುಮಾರ್** (ಕುಸ್ತಿ, 87 ಕೆ.ಜಿ. ಗ್ರೀಕೊ ರೋಮನ್)
- **ಪರ್ವಿನ್ ಹೂಡಾ** (ಬಾಕ್ಸಿಂಗ್, 57 ಕೆ.ಜಿ. ವಿಭಾಗ)
- ಸ್ಕ್ವಾಷ್ ಮಿಕ್ಸೆಡ್ ತಂಡ **(ಅಭಯ್ ಸಿಂಗ್, ಅನಾಹತ್ ಸಿಂಗ್)**

ಚಿನ್ನ **4x400** ಮೀ. ರಿಲೇ ತಂಡ

ಚಿನ್ನದ ಸಂಭ್ರಮ... ರಾಜೇಶ್ ರಮೇಶ್, ಮೊಹಮ್ಮದ್ ಅಜ್ಮಲ್, ಅಮೋಜ್ ಜೇಕಬ್ ಮತ್ತು ಮೊಹಮ್ಮದ್ ಅನಾಸ್ ಯಾಹ್ಯಾ

ಚಿನ್ನ ಸರಿಸಾಟಿಯಿಲ್ಲದ ನೀರಜ್ ಚೋಪ್ರಾ....

ಜಾವೆಲಿನ್ ಥ್ರೋ, ದೂರ **88.88** ಮೀ.

ವಿಶ್ವಕಪ್ ಕ್ರಿಕೆಟ್

ಹಬ್ಬ ಇಂದು ಚಾಲನೆ

ಏಕದಿನ ಕ್ರಿಕೆಟ್ ಮಾದರಿಯ ಪುನರುತ್ಥಾನದ ವೇದಿಕೆ ಎಂದೇ ನಿರೀಕ್ಷೆ ಮೂಡಿಸಿರುವ ವಿಶ್ವಕಪ್ ಟೂರ್ನಿಗೆ ಗುರುವಾರ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಚಾಲನೆ ದೊರೆಯಲಿದೆ. ಭಾರತದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್, ಪಾಕಿಸ್ತಾನದ ಬಾಬರ್ ಆಜಂ, ಆಸ್ಟ್ರೇಲಿಯಾದ ಸ್ಟೀವನ್ ಸ್ಮಿತ್, ಅಫ್ಗಾನಿಸ್ತಾನದ ರಶೀದ್ ಖಾನ್ ಮತ್ತು ಬಾಂಗ್ಲಾದ ಶಕೀಬ್ ಅಲ್ ಹುಸೇನ್ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಇಂದಿನಿಂದ ನವೆಂಬರ್ 19ರವರೆಗೆ

10	48	10
ತಂಡಗಳು	ಪಂದ್ಯಗಳು	ಕ್ರೀಡಾಂಗಣಗಳು

- ಹಾಲಿ ಚಾಂಪಿಯನ್: **ಇಂಗ್ಲೆಂಡ್**
- ಹಾಲಿ ರನ್ನರ್ಸ್ ಅಪ್: **ನ್ಯೂಜಿಲೆಂಡ್**

ಮೊದಲ ಪಂದ್ಯ ಇಂದು

- **ಇಂಗ್ಲೆಂಡ್ –ನ್ಯೂಜಿಲೆಂಡ್**
- ಸ್ಥಳ: **ನರೇಂದ್ರ ಮೋದಿ ಕ್ರೀಡಾಂಗಣ**
- ಮೊಟೇರಾ, ಅಹಮದಾಬಾದ್.
- ಆರಂಭ: **ಮಧ್ಯಾಹ್ನ 2ರಿಂದ**
- ನೇರಪ್ರಸಾರ: **ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್**

'ಜಾತಿಗಣತಿ ವರದಿ ಮೀಸಲಾತಿ ಬೇಡಿಕೆಗೆ ಬಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು (ಜಾತಿಗಣತಿ) ಆದಷ್ಟು ಶೀಘ್ರ ಸರ್ಕಾರಕ್ಕೆ ಸಲ್ಲಿಸುವುದಾಗಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಹೇಳಿದ್ದಾರೆ. ವರದಿ ಬೇಗ ಸಲ್ಲಿಕೆಯಾದರೆ ಒಳ್ಳೆಯದು' ಎಂದು ಗೃಹ ಸಚಿವ ಜಿ. ಪರಮೇಶ್ವರ ಅಭಿಪ್ರಾಯಪಟ್ಟರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಸಮೀಕ್ಷೆ ನಡೆಸಲು ₹ 100 ಕೋಟಿಗೂ ಹೆಚ್ಚು ಹಣ ವೆಚ್ಚವಾಗಿದೆ. ಇಷ್ಟೆಲ್ಲಾ ಖರ್ಚು ಮಾಡಿ ಸಿದ್ಧಪಡಿಸಿದ ವರದಿಯನ್ನು ನೀಡದೇ ಇದ್ದರೆ ಹಣ ವ್ಯರ್ಥ ಅಲ್ಲವೇ? ರಾಜ್ಯದಲ್ಲಿ ಯಾವ ಯಾವ ಸಮುದಾಯದವರು ಎಷ್ಟಿದ್ದಾರೆಂದು ವರದಿ ಬಂದ ಬಳಿಕ ಗೊತ್ತಾಗಲಿದೆ' ಎಂದರು.

'ಮಾಹಿತಿ ಇದ್ದರೆ ಮೀಸಲಾತಿ ನೀಡುವ ಸಂದರ್ಭದಲ್ಲಿ ಅನುಕೂಲ ಆಗಲಿದೆ. ತಮಿಳುನಾಡಿನಲ್ಲಿ ಮೀಸಲಾತಿ ಪ್ರಮಾಣ ಶೇ 69ರಷ್ಟಿದೆ. ನಮ್ಮ ರಾಜ್ಯದಲ್ಲಿ ಸದ್ಯ ಇರುವ ಶೇ 50ರಷ್ಟು ಪ್ರಮಾಣವನ್ನು ಹೆಚ್ಚಿಸುವಂತೆ ಬೇಡಿಕೆಯಿದೆ. ವರದಿ ಬಂದರೆ ಮೀಸಲಾತಿ ಹೆಚ್ಚಿಸಬೇಕೆಂಬ ಬೇಡಿಕೆಗೆ ಬಲ ಸಿಗಬಹುದು' ಎಂದೂ ಹೇಳಿದರು.

ರಾಜ್ಯ ಸರ್ಕಾರಕ್ಕೆ ₹5 ಲಕ್ಷ ದಂಡ

ಬೆಂಗಳೂರು: ಸಾರ್ವಜನಿಕ ಶೌಚಾಲಯಗಳ ಸ್ಥಿತಿಗತಿಯ ವಿವರವಾದ ಹೇಳಿಕೆ ಸಲ್ಲಿಸುವಂತೆ ನೀಡಲಾಗಿದ್ದ ಆದೇಶ ಪಾಲಿಸದ ಸರ್ಕಾರಕ್ಕೆ ಹೈಕೋರ್ಟ್ ₹ 5 ಲಕ್ಷ ದಂಡ ವಿಧಿಸಿದೆ. 3A

ಚಿನಕುರಳಿ

ಪ್ರಕಾಶ್ ಶೆಟ್ಟಿ

ಉಜ್ವಲಾ: ಎಲ್‌ಪಿಜಿ ಸಬ್ಸಿಡಿ ಹೆಚ್ಚಳ

ನವದೆಹಲಿ (ಪಿಟಿಐ): ಉಜ್ವಲಾ ಯೋಜನೆಯ ಅಡಿಯಲ್ಲಿ ಉಚಿತವಾಗಿ ಅಡುಗೆ ಅನಿಲ ಸಂಪರ್ಕ ಪಡೆದವರಿಗೆ ನೀಡುವ ಸಬ್ಸಿಡಿ ಮೊತ್ತವನ್ನು ಕೇಂದ್ರ ಸರ್ಕಾರವು ಪ್ರತಿ ಸಿಲಿಂಡರ್‌ಗೆ ₹300ಕ್ಕೆ ಹೆಚ್ಚಿಸಿದೆ. ಈ ಮೂಲಕ, ಅಡುಗೆ ಅನಿಲ ದರ ಹೆಚ್ಚಾಗಿದೆ ಎಂದು ಟೀಕಿಸುತ್ತಿರುವ ವಿರೋಧ ಪಕ್ಷಗಳ ವಾದವನ್ನು ತಣ್ಣಗಾಗಿಸಲು ಯತ್ನಿಸಿದೆ.

14.2 ಕೆ.ಜಿ. ತೂಕದ ಪ್ರತಿ ಅಡುಗೆ ಅನಿಲ ಸಿಲಿಂಡರ್‌ಗೆ ₹200ರಷ್ಟು ಸಬ್ಸಿಡಿ ನೀಡಲಾಗುತ್ತದೆ. ವರ್ಷಕ್ಕೆ 12 ಸಿಲಿಂಡರ್‌ಗಳಿಗೆ ಈ ಸಬ್ಸಿಡಿ ಅನ್ವಯವಾಗುತ್ತದೆ. ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಸಂಪುಟ ಸಮಿತಿಯು ಈ ಸಬ್ಸಿಡಿ ಮೊತ್ತವನ್ನು ₹300ಕ್ಕೆ ಹೆಚ್ಚಿಸಲು ತೀರ್ಮಾನಿಸಿದೆ. ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರು ಈ ವಿಷಯವನ್ನು ಸುದ್ದಿಗಾರರಿಗೆ ತಿಳಿಸಿದರು.

ಈ ಕ್ರಮದಿಂದಾಗಿ 9.6 ಕೋಟಿ ಕುಟುಂಬಗಳಿಗೆ ಪ್ರಯೋಜನ ಆಗಲಿದೆ. ಕೇಂದ್ರವು ಅಡುಗೆ ಅನಿಲ ಸಿಲಿಂಡರ್ ದರವನ್ನು ಆಗಸ್ಟ್‌ನಲ್ಲಿ ಪ್ರತಿ ಸಿಲಿಂಡರ್‌ಗೆ ₹200 ತಗ್ಗಿಸಿತ್ತು. ಮಧ್ಯಪ್ರದೇಶ ಮತ್ತು ರಾಜಸ್ಥಾನ ಸೇರಿದಂತೆ ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿರುವ ಹೊತ್ತಿನಲ್ಲಿ ಕೇಂದ್ರವು ಈ ಕ್ರಮ ಕೈಗೊಂಡಿತ್ತು.

ಉಜ್ವಲಾ ಯೋಜನೆಯ ಅಡಿಯಲ್ಲಿ ಸಿಲಿಂಡರ್ ಪಡೆದವರಿಗೆ ಈ ಬೆಲೆ ಇಳಿಕೆಯ ನಂತರ, ₹200 ಸಬ್ಸಿಡಿ ಮೊತ್ತವನ್ನೂ ಪರಿಗಣಿಸಿದರೆ ಪ್ರತಿ ಸಿಲಿಂಡರ್ ಬೆಲೆಯು ₹703 ಆಗುತ್ತಿತ್ತು. ಈಗ ಸಬ್ಸಿಡಿ ಮೊತ್ತವನ್ನು ಹೆಚ್ಚಿಸಿರುವುದರ ಪರಿಣಾಮವಾಗಿ ಸಿಲಿಂಡರ್ ಬೆಲೆಯು ಈ ಯೋಜನೆಯ ಫಲಾನುಭವಿಗಳಿಗೆ ₹603 ಆಗಲಿದೆ. ಸಬ್ಸಿಡಿ ಮೊತ್ತವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುತ್ತದೆ.

ಪ್ರವಾಹದಿಂದಾಗಿ ಸಿಕ್ಕಿಂ ರಾಜ್ಯದ ಕಣಿವೆ ನಗರಿ ಲಾಚೆನ್ ಜಲಾವೃತಗೊಂಡಿತ್ತು ಎಎಫ್‌ಪಿ ಚಿತ್ರ

ಮೇಘಸ್ಫೋಟ: 10 ಸಾವು

ಸಿಕ್ಕಿಂ: ಕೊಚ್ಚಿಹೋದ ಸೇತುವೆ, 22 ಸೇನಾ ಸಿಬ್ಬಂದಿ ಕಾಣೆ

ಗ್ಯಾಂಗ್ಟಕ್ (ಪಿಟಿಐ): ಉತ್ತರ ಸಿಕ್ಕಿಂನ ಹ್ಲೋನಕ್ ಸರೋವರದ ಮೇಲೆ ಮೇಘಸ್ಫೋಟದಿಂದ ತೀಸ್ತಾ ನದಿ ಜಲಾನಯನ ಪ್ರದೇಶದಲ್ಲಿ ಹಠಾತ್ ಪ್ರವಾಹ ಉಂಟಾಗಿ ಬುಧವಾರ 10 ಮಂದಿ ಮೃತಪಟ್ಟಿದ್ದಾರೆ. 22 ಸೇನಾ ಸಿಬ್ಬಂದಿ ಸೇರಿದಂತೆ 82 ಮಂದಿ ನಾಪತ್ತೆಯಾಗಿದ್ದಾರೆ.

ಅನೇಕ ಪ್ರದೇಶಗಳು ಜಲಾವೃತಗೊಂಡಿವೆ. ಸೇತುವೆಗಳು, ಹೆದ್ದಾರಿಗಳು ಕೊಚ್ಚಿ ಹೋಗಿದ್ದು, ಹಲವೆಡೆ ರಸ್ತೆ ಸಂಪರ್ಕ ಕಡಿತಗೊಂಡಿದೆ.

ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ನಾಪತ್ತೆಯಾಗಿರುವ ಸಿಬ್ಬಂದಿ ಪತ್ತೆಗೆ ಶೋಧ ಕಾರ್ಯ ಮುಂದುವರಿದಿದೆ.

ಮಂಗಳವಾರ ಮಧ್ಯರಾತ್ರಿ 1.30ರ ಸುಮಾರಿಗೆ ಪ್ರವಾಹ ಆರಂಭವಾಗಿದ್ದು, ಚುಂಗ್‌ತಾಂಗ್ ಅಣೆಕಟ್ಟಿನಿಂದ ನೀರು ಬಿಡುಗಡೆ ಮಾಡಿದ್ದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ.

ಸಿಂಗ್‌ತಮ್‌ನಲ್ಲಿರುವ 'ಇಂದ್ರೇನಿ' ಉಕ್ಕಿನ ಸೇತುವೆ ತೀಸ್ತಾ ನದಿ ನೀರಿನಿಂದ ಸಂಪೂರ್ಣವಾಗಿ ಕೊಚ್ಚಿಹೋಗಿದೆ. ಈ ದುರಂತವನ್ನು ಸಿಕ್ಕಿಂ ಸರ್ಕಾರ ವಿಪತ್ತು ಎಂದು ಘೋಷಿಸಿದೆ. ಗೋಲಿಟಾರ್ ಮತ್ತು ಸಿಂಗ್‌ತಮ್ ಪ್ರದೇಶದಲ್ಲಿ ಈವರೆಗೂ ಐದು ಮೃತದೇಹಗಳನ್ನು ಪತ್ತೆ ಮಾಡಲಾಗಿದೆ ಎಂದು ಗ್ಯಾಂಗ್ಟಕ್ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ (ಎಸ್‌ಡಿಎಂ) ಮಹೇಂದ್ರ ಚೆಟ್ರಿ ತಿಳಿಸಿದ್ದಾರೆ.

ಚುಂಗ್‌ತಾಂಗ್ ಅಣೆಕಟ್ಟಿನಿಂದ ನೀರು ಬಿಡುಗಡೆ ಮಾಡಿದ್ದರಿಂದ ನೀರಿನ ಮಟ್ಟವು 15-20 ಅಡಿ ಎತ್ತರಕ್ಕೆ ಏರಿದೆ. 22 ಸೇನಾ ಸಿಬ್ಬಂದಿ, 47 ನಾಗರಿಕರು ಕಾಣೆಯಾಗಿದ್ದಾರೆ. ಯೋಧ ಸೇರಿದಂತೆ 166 ಮಂದಿಯನ್ನು ಈವರೆಗೂ ರಕ್ಷಿಸಲಾಗಿದೆ. 41 ವಾಹನಗಳು ಕೆಸರಿನ ಅಡಿ ಮುಳುಗಿವೆ. ಸಂಪರ್ಕ ಕಡಿತದಿಂದಾಗಿ ನಾಪತ್ತೆಯಾದ ಸಿಬ್ಬಂದಿಯ ಗುರುತು ಇನ್ನೂ ಪತ್ತೆಯಾಗಿಲ್ಲ ಎಂದು ರಕ್ಷಣಾ ವಕ್ತಾರ ಲೆಫ್ಟಿನೆಂಟ್ ಕರ್ನಲ್ ಮಹೇಂದ್ರ ರಾವತ್ ತಿಳಿಸಿದ್ದಾರೆ.

ರಾಯ್‌ಗಂಜ್ ಜಿಲ್ಲೆಯ ಸ್ವರ್ಣ ದ್ವೀಪ್ ಮಜುಂದಾರ್, ಶ್ರೀಕಾಂತ್ ಮಜುಂದಾರ್ ಹಾಗೂ ಜಾರ್ಖಂಡ್‌ನ ಇಶಾನ್ ಎಂಬ ಯುವಕರು ಸಿಕ್ಕಿಂನಲ್ಲಿ ಬುಧವಾರ ನಾಪತ್ತೆಯಾಗಿದ್ದಾರೆ ಎಂದು ನೆರೆಯ ಪಶ್ಚಿಮ ಬಂಗಾಳದ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

7ನೇ ಪುಟ ನೋಡಿ

ದೆಹಲಿ ಅಬಕಾರಿ ಹಗರಣ: ಎಎಪಿ ಮುಖಂಡನ ನಿವಾಸದಲ್ಲಿ ಇ.ಡಿ ಶೋಧ

ಸಂಸದ ಸಂಜಯ್ ಸಿಂಗ್ ಬಂಧನ

ಪ್ರಜಾವಾಣಿ ವಾರ್ತೆ

ನವದೆಹಲಿ: ಎಎಪಿ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರನ್ನು ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಬುಧವಾರ ಬಂಧಿಸಿದೆ.

ಕೇಂದ್ರ ತನಿಖಾ ಏಜೆನ್ಸಿಯ ಈ ಕ್ರಮಕ್ಕೆ ಪ್ರತಿಪಕ್ಷಗಳ ಮೈತ್ರಿಕೂಟವಾದ 'ಇಂಡಿಯಾ' ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು, 'ಇದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಸರ್ವಾಧಿಕಾರಿ ಧೋರಣೆಗೆ ಹಿಡಿದ ಕನ್ನಡಿ' ಎಂದು ಕಿಡಿಕಾರಿದೆ.

ಸಿಬಿಐ ಹಾಗೂ ಇ.ಡಿ ದಾಖಲಿಸಿರುವ ಪ್ರಕರಣಗಳಲ್ಲಿ ಬಂಧಿತರಾಗಿರುವ ಆಮ್ ಆದ್ಮಿ ಪಕ್ಷದ ನಾಯಕರಲ್ಲಿ ಸಂಸದ ಸಿಂಗ್ ಮೂರನೆಯವರಾಗಿದ್ದಾರೆ. ಹಣ ಅಕ್ರಮ ವರ್ಗಾವಣೆ ಆರೋಪದ ಮೇಲೆ ಸತ್ಯೇಂದ್ರ ಜೈನ್ ಅವರನ್ನು ಬಂಧಿಸಲಾಗಿತ್ತು. ಸದ್ಯ ಅವರಿಗೆ ಜಾಮೀನು ಸಿಕ್ಕಿದೆ. ಅಬಕಾರಿ ಪ್ರಕರಣದಲ್ಲಿ ಮನೀಶ್ ಸಿಸೋಡಿಯಾ ಅವರನ್ನು ಬಂಧಿಸಲಾಗಿದೆ.

ಸಿಂಗ್ ಅವರು ಸಂಸತ್‌ನ ಮೇಲ್ಮನೆಯಲ್ಲಿ ಎಎಪಿ ನಾಯಕರಾಗಿದ್ದಾರೆ. ರಾಷ್ಟ್ರಪತಿ ಭವನ ಸಮೀಪದ ಉತ್ತರ ರಸ್ತೆಯಲ್ಲಿರುವ ಅವರ ನಿವಾಸದ ಮೇಲೆ ಬೆಳಿಗ್ಗೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದರು. ತೀವ್ರ ಶೋಧ ನಡೆಸಿದ ಬಳಿಕ ಸಂಜೆ ಮನೆಯಲ್ಲಿಯೇ ಅವರನ್ನು ಬಂಧಿಸಿದರು.

ಬಂಧಿತ ಎಎಪಿ ಸಂಸದ ಸಂಜಯ್ ಸಿಂಗ್ —ಪಿಟಿಐ ಚಿತ್ರ

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಸೋಲುವ ಭೀತಿ ಶುರುವಾಗಿದೆ. ಅದಕ್ಕಾಗಿಯೇ ಇ.ಡಿ ದಾಳಿ ನಡೆಯುತ್ತಿದೆ. ಎಷ್ಟೇ ದಾಳಿ ನಡೆದರೂ ಭಯಪಡುವುದಿಲ್ಲ

ಅರವಿಂದ ಕೇಜ್ರಿವಾಲ್
ಮುಖ್ಯಮಂತ್ರಿ, ದೆಹಲಿ

7ನೇ ಪುಟ ನೋಡಿ

'ಪಕ್ಷವನ್ನು ಏಕೆ ಆರೋಪಿಯಾಗಿಸಿಲ್ಲ'

ನವದೆಹಲಿ: ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಗರಣದಲ್ಲಿ ಲಾಭ ಪಡೆದುಕೊಂಡಿದೆ ಎನ್ನಲಾಗಿರುವ ರಾಜಕೀಯ ಪಕ್ಷವನ್ನು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಅಡಿಯಲ್ಲಿ ಆರೋಪಿ ಸ್ಥಾನದಲ್ಲಿ ಏಕೆ ನಿಲ್ಲಿಸಿಲ್ಲ ಎಂದು ಸುಪ್ರೀಂ ಕೋರ್ಟ್, ಜಾರಿ ನಿರ್ದೇಶನಾಲಯವನ್ನು (ಇ.ಡಿ) ಪ್ರಶ್ನಿಸಿದೆ.

ಎಎಪಿ ನಾಯಕ ಮತ್ತು ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಸಲ್ಲಿಸಿರುವ ಜಾಮೀನು ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಬುಧವಾರ ಕೋರ್ಟ್ ಈ ಪ್ರಶ್ನೆ ಎತ್ತಿದೆ. ದೆಹಲಿ ಅಬಕಾರಿ ನೀತಿ ರೂಪಿಸುವಲ್ಲಿ ಮತ್ತು ಅದರ ಅನುಷ್ಠಾನದಲ್ಲಿನ ಅಕ್ರಮಗಳಲ್ಲಿ ಸಿಸೋಡಿಯಾ ಅವರು ಹಣದ ಅಕ್ರಮ ವರ್ಗಾವಣೆಯಲ್ಲಿ ಭಾಗಿಯಾಗಿದ್ದಾರೆ, ಭ್ರಷ್ಟಾಚಾರ ನಡೆಸಿದ್ದಾರೆ ಎಂಬ ಆರೋಪ ಇದೆ. ಈ ಅಬಕಾರಿ ನೀತಿಯನ್ನು ಈಗ ರದ್ದು ಮಾಡಲಾಗಿದೆ.

ಹಣವು ಒಂದು ರಾಜಕೀಯ ಪಕ್ಷಕ್ಕೆ ಸಂದಿದೆ ಎಂಬುದು ಇಡೀ ಪ್ರಕರಣದ ತಿರುಳು. ಆದರೆ ಆ ರಾಜಕೀಯ ಪಕ್ಷವು ಈಗಲೂ ಆರೋಪಿ ಆಗಿಲ್ಲದಿರುವುದು ಏಕೆ ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್.ವಿ.ಎನ್. ಭಟ್ಟಿ ಅವರಿದ್ದ ಪೀಠವು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರನ್ನು ಪ್ರಶ್ನಿಸಿತು.

ರಾಜು ಅವರು ಇ.ಡಿ. ಮತ್ತು ಸಿಬಿಐ ಪರ ಹಾಜರಾಗುತ್ತಿದ್ದಾರೆ. ಅಬಕಾರಿ ನೀತಿ ರೂಪಿಸುವಲ್ಲಿ ಪಿತೂರಿ ನಡೆದಿದೆ. ವಿಜಯ್ ನಾಯರ್ ಹಾಗೂ ಇತರ ಕೆಲವರು ಸಮನ್ವಯಕಾರರಾಗಿ ಕೆಲಸ ಮಾಡಿದ್ದಾರೆ ಎಂದು ಇ.ಡಿ. ಆರೋಪಿಸಿದೆ. ನಾಯರ್ ಅವರು ಸಿಸೋಡಿಯಾ ಅವರ ನಿಕಟವರ್ತಿ ಎಂದು ಆರೋಪಿಸಲಾಗಿದೆ. ನಾಯರ್ ಅವರು ಸಿಸೋಡಿಯಾ ಅವರ ಏಜೆಂಟ್ ಎಂಬುದನ್ನು ಸಾಬೀತು ಮಾಡಲು ಯಾವ ಆಧಾರವೂ ಇಲ್ಲ, ಅವರು ಹಣ ಪಡೆದಿದ್ದಾರೆ ಎಂಬುದಕ್ಕೆ ಸಹ ಆಧಾರ ಇಲ್ಲ ಎಂದು ಸಿಸೋಡಿಯಾ ಪರವಾಗಿ ಹಿರಿಯ ವಕೀಲ ಎ.ಎಂ. ಸಿಂಘ್ವಿ ವಾದಿಸಿದರು.

ಮಾತು ಬಾರದವರ ಸಂವಹನಕ್ಕೆ 'ರೈಟೆಲ್' ನೆರವು

ಬರೆದರೆ ಧ್ವನಿ ಹೊರಹೊಮ್ಮಿಸುವ ಆ್ಯಪ್

• ವೆಂಕಟೇಶ ಜಿ.ಎಚ್.

ಶಿವಮೊಗ್ಗ: ಮಾತು ಬಾರದವರ ಸಂವಹನಕ್ಕೆ ನೆರವಾಗಲು ನಗರದ ಸಾಫ್ಟ್‌ವೇರ್ ಎಂಜಿನಿಯರ್‌ಗಳಾದ ಅಕ್ಷಯ್ ವಿ.ನಾಯಕ್ ಹಾಗೂ ಬಿ.ಎಸ್. ಕಾರ್ತಿಕ್ ಜಂಟಿಯಾಗಿ 'ರೈಟೆಲ್' (writell- ಬರೆದು ಹೇಳು) ಹೆಸರಿನ ಆ್ಯಪ್ ಅಭಿವೃದ್ಧಿಪಡಿಸಿದ್ದಾರೆ.

ಈ ಆ್ಯಪ್‌ನಲ್ಲಿ ಏನಾದರೂ ಬರೆದರೆ ಅದು ಧ್ವನಿ ರೂಪದಲ್ಲಿ ಹೊರಹೊಮ್ಮುತ್ತದೆ. ಹೀಗಾಗಿ ಮಾತು ಬಾರದವರು ತಮ್ಮ ಅನಿಸಿಕೆ ಹಾಗೂ ಅಗತ್ಯವನ್ನು ಬರವಣಿಗೆಯಲ್ಲಿ ಮೂಡಿಸಿದರೆ ಅದು ಎದುರಿಗಿರುವವರಿಗೆ ಧ್ವನಿ ರೂಪದಲ್ಲಿ ಅಭಿವ್ಯಕ್ತಿಸುತ್ತದೆ. ಇದು ಸುಲಭ ಸಂವಹನಕ್ಕೆ ದಾರಿಯಾಗಲಿದೆ.

ಗೂಗಲ್ ಸ್ಟೋರ್‌ನಲ್ಲಿ ಲಭ್ಯ: 'ಮಾತು ಬಾರದವರು ಬೇರೆಯವರ ಜತೆ ಸಂವಹನ ನಡೆಸಲು ಸ್ಲೇಟ್ ಇಲ್ಲವೇ ಕಾಗದದಲ್ಲಿ ಬರೆಯುತ್ತಾರೆ. ಅದರ ಬದಲು ನೇರವಾಗಿ ಈ ಆ್ಯಪ್‌ನಲ್ಲಿಯೇ ಬರೆಯಬಹುದು. ಕನ್ನಡ, ಇಂಗ್ಲಿಷ್, ಹಿಂದಿ, ತಮಿಳು, ತೆಲುಗು, ಮಲೆಯಾಳಿ, ಬೆಂಗಾಲಿ, ಗುಜರಾತಿ, ಉರ್ದು, ಮರಾಠಿ ಒಳಗೊಂಡಂತೆ 10 ಭಾಷೆಗಳಲ್ಲಿನ ಈ ಆ್ಯಪ್ ಗೂಗಲ್ ಸ್ಟೋರ್‌ನಲ್ಲೂ ಲಭ್ಯವಿದೆ' ಎಂದು ಅಕ್ಷಯ್ ವಿ.ನಾಯಕ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬಳಕೆದಾರರಿಂದಲೂ ಉತ್ತಮ ಸ್ಪಂದನೆ ದೊರೆತಿದೆ. ಆ್ಯಪ್ ಬಿಡುಗಡೆಯಾಗಿ ಒಂದು ವಾರ ಆಗಿದೆ. ಈಗಾಗಲೇ 700ಕ್ಕೂ ಹೆಚ್ಚು ಜನರು ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಬೆಂಗಳೂರಿನ ಎನೇಬಲ್ ಇಂಡಿಯಾ ಸಂಸ್ಥೆ ಹಾಗೂ ಮೈಸೂರಿನ ಸ್ಪೀಚ್ ಅಂಡ್ ಹಿಯರಿಂಗ್ ಸಂಸ್ಥೆಯಲ್ಲೂ ಪ್ರಾತ್ಯಕ್ಷಿಕೆ ನೀಡಲು ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದು ಅವರು ಹೇಳಿದರು.

ಅಕ್ಷಯ್ ವಿ.ನಾಯಕ್ ಹಾಗೂ ಬಿ.ಎಸ್.ಕಾರ್ತಿಕ್

'ಶಿವಮೊಗ್ಗದ ಎಲೆಕ್ಟ್ರಾನಿಕ್ ಶಾಪ್ ಮಾಲೀಕರೊಬ್ಬರ ಭೇಟಿಗೆ ತೆರಳಿದ್ದಾಗ ಅಲ್ಲಿ ಬೀರೂರಿನಿಂದ ಮಾಜಿ ಸೈನಿಕರೊಬ್ಬರು ಬಂದಿದ್ದರು. ಧ್ವನಿಪೆಟ್ಟಿಗೆಗೆ ಸೋಂಕು ತಗುಲಿ ಮಾತು ಬಾರದೇ ಕಷ್ಟಪಡುತ್ತಿದ್ದ ಅವರು ಎಲ್ಲವನ್ನೂ ಸ್ಲೇಟ್‌ನಲ್ಲಿ ಬರೆದು ತೋರಿಸುತ್ತಿದ್ದರು. ಆಗ ಅವರ ಸಂಕಷ್ಟಕ್ಕೆ ಸ್ಪಂದಿಸಬೇಕು ಅನ್ನಿಸಿತು. ಬರೆದು ತೋರಿಸುವ ಬದಲು ಬರೆಯುತ್ತಿದ್ದಂತೆಯೇ ಅದನ್ನು ಧ್ವನಿಯಾಗಿಸುವ ಆ್ಯಪ್ ಅಭಿವೃದ್ಧಿಗೆ ಇದು ಪ್ರೇರಣೆಯಾಯಿತು' ಎಂದು ಅವರು ವಿವರಿಸಿದರು.

Writell by Speakster

ಆ್ಯಪ್‌ಗೆ ಕೀಬೋರ್ಡ್ ಸೇರಿಸುವ ಜೊತೆಗೆ ಸಾಮಾನ್ಯವಾಗಿ ಬಳಸುವ 'ಹೇಗಿದ್ದೀಯ ಊಟ ಆಯ್ತಾ' ಎಂಬ ರೀತಿಯ ವಾಕ್ಯಗಳನ್ನು ಸಿದ್ಧಪಡಿಸಿ ಇಟ್ಟು ಕ್ಲಿಕ್ ಮಾಡಿದ ತಕ್ಷಣ ಅದೇ ಪಟಪಟನೆ ಬರುವ ರೀತಿ (ಫ್ರೀ ಟೈಪ್) ಫೀಚರ್‌ಗಳನ್ನು ಅಳವಡಿಸುವ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್‌ನಲ್ಲಿ (ಎನ್‌ಐಇ) ಪದವಿ ಪಡೆದಿರುವ ಈ ಇಬ್ಬರೂ ಕೆಲಕಾಲ ಬೆಂಗಳೂರಿನಲ್ಲಿ ಕೆಲಸ ಮಾಡಿದ್ದಾರೆ. ನಂತರ ಕೆಲಸ ಬಿಟ್ಟು ಶಿವಮೊಗ್ಗದಲ್ಲಿ ತಮ್ಮದೇ ಅನ್‌ರಿಡಲ್ ಟೆಕ್ನಾಲಜೀಸ್ ಹೆಸರಿನ ಕಂಪನಿ ಆರಂಭಿಸಿ ಈ ಆ್ಯಪ್ ಅಭಿವೃದ್ಧಿಪಡಿಸಿದ್ದಾರೆ.

'ಈಗ ಆ್ಯಪ್ ಉಚಿತವಾಗಿ ಬಳಕೆಗೆ ಲಭ್ಯವಿದೆ. ಮುಂದೆ ಬೇಡಿಕೆ ಆಧರಿಸಿ ಶುಲ್ಕ ವಿಧಿಸುವ ಬಗ್ಗೆ ನಿರ್ಧರಿಸಲಿದ್ದೇವೆ. ದೇಶದಲ್ಲಿ 50 ಲಕ್ಷಕ್ಕೂ ಹೆಚ್ಚು ಮಾತು ಬಾರದ ಜನ ಇದ್ದಾರೆ. ಅವರು ಈ ತಾಂತ್ರಿಕತೆ ಬಳಸಿಕೊಳ್ಳಬಹುದಾಗಿದೆ' ಎಂಬ ಆಶಯ ವ್ಯಕ್ತಪಡಿಸಿದರು.

ಸುಧಾ ಮತ್ತು ಮಯೂರ ಓದಿರಿ...

ಫೆಬ್ರುವರಿಗೆ ಮೆಟ್ರೊ ಹಳದಿ ಮಾರ್ಗ ಸೇವೆಗೆ ಲಭ್ಯ

ಆನೇಕಲ್ : ತಾಲ್ಲೂಕಿನ ಬೊಮ್ಮಸಂದ್ರದಿಂದ ಬೆಂಗಳೂರಿನ ಆರ್.ವಿ ರಸ್ತೆ ಸಂಪರ್ಕಿಸುವ 18.8 ಕಿ.ಮೀ ದೂರದ ಮೆಟ್ರೊ ರೈಲು ಕಾಮಗಾರಿ ಶೇ 90ರಷ್ಟು ಪೂರ್ಣಗೊಂಡಿದೆ. ಫೆಬ್ರುವರಿ 2024ರ ವೇಳೆಗೆ ಸಾರ್ವಜನಿಕರಿಗೆ ಲಭ್ಯವಾಗುವ ನಿರೀಕ್ಷೆ ಇದೆ ಎಂದು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಹೇಳಿದರು.

ತಾಲ್ಲೂಕಿನ ಬೊಮ್ಮಸಂದ್ರದ ಬಳಿ ಮೆಟ್ರೊ ಕಾಮಗಾರಿಯನ್ನು ಬುಧವಾರ ಪರಿಶೀಲಿಸಿ ಮಾತನಾಡಿದರು. ಬೊಮ್ಮಸಂದ್ರ-ಆರ್.ವಿ.ರಸ್ತೆಯ ಹಳದಿ ಮಾರ್ಗ ಮೆಟ್ರೊ ಯೋಜನೆ ಅತ್ಯಂತ ಪ್ರಮುಖವಾಗಿದೆ. ಐಟಿ–ಬಿಟಿ, ಕೈಗಾರಿಕಾ ಮತ್ತು ವಸತಿ ಪ್ರದೇಶಗಳನ್ನು ಜೋಡಿಸುವ ಮಾರ್ಗ ಇದಾಗಿದೆ. ಪ್ರತಿದಿನ 2.5ಲಕ್ಷ ಪ್ರಯಾಣಿಕರು ಸಂಚರಿಸುವ ನಿರೀಕ್ಷೆ ಇದೆ. ಇದರಿಂದಾಗಿ ಈ ಭಾಗದ ಸಂಚಾರ ಒತ್ತಡ ಕಡಿಮೆಯಾಗಲಿದೆ ಎಂದರು.

ಈ ಮಾರ್ಗದಲ್ಲಿ 16 ಮೆಟ್ರೊ ನಿಲ್ದಾಣಗಳಿವೆ. ಈ ಪೈಕಿ 15 ನಿಲ್ದಾಣಗಳ ಕಾಮಗಾರಿ ಶೇ 95ರಷ್ಟು ಪೂರ್ಣಗೊಂಡಿದೆ. ಡಿಸೆಂಬರ್ 31ರೊಳಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಈ ಯೋಜನೆಯಿಂದಾಗಿ ಈ ಭಾಗದ ಸಂಚಾರ ಸುಗಮವಾಗಲಿದೆ. ಇನ್ಫೊಸಿಸ್ ಪ್ರತಿಷ್ಠಾನವು ಬಿಎಂಆರ್‌ಸಿಎಲ್ ಸಹಯೋಗದಲ್ಲಿ ನಿಲ್ದಾಣವೊಂದರ ನಿರ್ಮಾಣಕ್ಕೆ ಸುಮಾರು ₹180 ಕೋಟಿ ನೀಡಿ ಸಾರ್ವಜನಿಕ ಸಹಭಾಗಿತ್ವಕ್ಕೆ ಸಾಕ್ಷಿಯಾಗಿದೆ ಎಂದರು.

ಹೆಬ್ಬಗೋಡಿ ಮತ್ತು ಬೊಮ್ಮಸಂದ್ರ ಬಳಿ ಸ್ಕೈವಾಕ್ ವ್ಯವಸ್ಥೆ ಕಲ್ಪಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು. ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ ಆಗಿರುವುದರಿಂದ ಸ್ಕೈವಾಕ್ ಅವಶ್ಯ ಇದೆ. ಬಿಬಿಎಂಪಿ, ಬೆಸ್ಕಾಂ, ಸಂಚಾರ ಪೊಲೀಸ್ ಇಲಾಖೆಗಳು ಸಮನ್ವಯ ಸಾಧಿಸಿ ಕಾಮಗಾರಿ ತ್ವರಿತವಾಗಿ ಪೂರ್ಣಗೊಳ್ಳಲು ನೆರವಾಗಬೇಕು ಎಂದು ತಿಳಿಸಿದರು.

ಆರ್‌ವಿ. ರೋಡ್– ಬೊಮ್ಮಸಂದ್ರ ನಡುವಿನ ಮೆಟ್ರೊ ಹಳದಿ ಮಾರ್ಗದ ಕಾಮಗಾರಿಯನ್ನು ಸಂಸದ ತೇಜಸ್ವಿ ಸೂರ್ಯ ಬುಧವಾರ ವೀಕ್ಷಿಸಿದರು

‘ಜಿಹಾದಿಗಳಿಗೆ ಸರ್ಕಾರ ಪ್ರೋತ್ಸಾಹ’

ರಾಜ್ಯದ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರ ನಡುವೆ ಜಿಹಾದಿ ಶಕ್ತಿಗಳ ಪರವಾಗಿ ವಕಾಲತ್ತು ವಹಿಸಲು ಪೈಪೋಟಿ ಏರ್ಪಟ್ಟಿದೆ. ಹೇಳಿಕೆಗಳ ಮೂಲಕ ವೋಟ್‌ಬ್ಯಾಂಕ್ ಮಾಡಿಕೊಳ್ಳಲು ಮುಂದಾಗಿದ್ದಾರೆ ಎಂದು ಸಂಸದ ತೇಜಸ್ವಿ ಸೂರ್ಯ ಟೀಕಿಸಿದರು.

ಮುಖ್ಯ ರಸ್ತೆಗಳಲ್ಲಿ ತಲ್ವಾರ್‌ಗಳನ್ನು ಹಿಡಿದು ಮೆರವಣಿಗೆ ಮಾಡಲಾಗುತ್ತಿದೆ. ಪೊಲೀಸರ ಮೇಲೆ ಕಲ್ಲು ತೂರಾಟ ನಡೆಯುತ್ತಿದೆ. ಆದರೆ, ಸರ್ಕಾರ ಪೊಲೀಸರಿಗೆ ರಕ್ಷಣೆ ನೀಡುವಲ್ಲಿ ವಿಫಲವಾಗಿದೆ ಎಂದು ದೂರಿದರು.

ಜಾತಿ ಗಣತಿ ವರದಿ ಸ್ವೀಕಾರಕ್ಕೆ ಆಗ್ರಹ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನಗಣತಿ) ವರದಿಯನ್ನು ಸ್ವೀಕರಿಸಿ, ಶಿಫಾರಸುಗಳನ್ನು ಜಾರಿಗೊಳಿಸುವಂತೆ ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಎಂ.ಸಿ. ವೇಣುಗೋಪಾಲ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ‘ಬಿಹಾರದಲ್ಲಿ ಅಲ್ಲಿನ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಜಾತಿ ಗಣತಿಯ ವರದಿಯನ್ನು ಸ್ವೀಕರಿಸಿ, ಬಹಿರಂಗಪಡಿಸಿರುವುದು ಸ್ವಾಗತಾರ್ಹ. ಅದೇ ಮಾದರಿಯಲ್ಲಿ ಕರ್ನಾಟಕದಲ್ಲೂ ಜಾತಿ ಗಣತಿ ವರದಿಯನ್ನು ಸ್ವೀಕಾರ ಮಾಡಬೇಕು. ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸುವುದಕ್ಕೆ ಪೂರಕವಾಗಿ ವರದಿಯನ್ನು ಬಳಸಿಕೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

ಹಿಂದುಳಿದ ವರ್ಗಗಳ ಆಯೋಗವು ಮೂರು ವರ್ಷಗಳ ಕಾಲ ಸಮೀಕ್ಷೆ ನಡೆಸಿ ವರದಿ ಸಿದ್ಧಪಡಿಸಿದೆ. ಹಿಂದುಳಿದ ವರ್ಗಗಳ ಹಲವು ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಈ ವರದಿ ನೆರವಾಗಲಿದೆ. ವರದಿಯ ಶಿಫಾರಸುಗಳನ್ನು ಪರಿಶೀಲಿಸಿ ಹಿಂದುಳಿದ ವರ್ಗಗಳು ಮತ್ತು ಅತಿ ಹಿಂದುಳಿದ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವ ನಿರ್ಧಾರವನ್ನೂ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

‘ಪುಸ್ತಕ ಪಟ್ಟಿ ಬಿಡುಗಡೆ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಅಂತಿಮಗೊಂಡಿದ್ದ 2020ನೇ ಸಾಲಿನ ಪುಸ್ತಕಗಳ ಪಟ್ಟಿಯನ್ನು ಕೂಡಲೇ ಬಿಡುಗಡೆ ಮಾಡಿ ಎಂದು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು ಸರ್ಕಾರಕ್ಕೆ ಮನವಿ ಮಾಡಿದೆ.

2023–24ನೇ ಸಾಲಿನ ಬಜೆಟ್‌ನಲ್ಲಿ ಪುಸ್ತಕಗಳ ಖರೀದಿಗೆ ₹ 10 ಕೋಟಿ ಮೀಸಲಿಡಲಾಗಿದೆ. ಕಳೆದ ಮೂರು ವರ್ಷಗಳಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಪುಸ್ತಕ ಖರೀದಿಗೆ ಸರ್ಕಾರ ಹಣ ನೀಡಿರಲಿಲ್ಲ. ಇದರಿಂದ ಪ್ರಕಾಶಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆದ್ದರಿಂದ ಪಟ್ಟಿಯನ್ನು ಬಿಡುಗಡೆ ಮಾಡಿ, ಪುಸ್ತಕ ಖರೀದಿ ಪ್ರಕ್ರಿಯೆಯನ್ನು ನಡೆಸಬೇಕು ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರಿಗೆ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಹಾಗೂ ಆರ್. ದೊಡ್ಡೆಗೌಡ ಅವರು ಜಂಟಿ ಪ್ರಕಟಣೆಯಲ್ಲಿ ವಿನಂತಿಸಿಕೊಂಡಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AUTOMOTIVE

Four Wheelers Selling

Maruti

DAMAGED_BY ACCIDENT KA40B 1914`Maruti TourS-STD(O)CNG 2021`at Kalyani Motors Yelahanka for`sale Quote`for`with RC`&.RC cancelled-after inspection within`Seven days-Sampat Surveyor 9900182098.

BUSINESS

Business Offers

Finance

WANTED BUSINESS
Partner Veg Hotel Investment 15 Lakhs Contact: 8892501007/ 9606701007

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

ಕ್ಲಾಸಿಫೈಡ್ಸ್
ADMISSION CORNER
Earn while you Learn
MBA
Admissions Open 2023-24
At Hindustan Business School, we believe students learn best when they experience authentic real world learning. That's why we've forged strong industry collaborations to provide you with rich hands-on experiences that set you apart. HBS offers MBA aspirants the chance to intern, gain invaluable insights and build a network that will help them advance in their future careers. Through our 'Earn while you Learn' program, students benefit from paid internships, providing them with a taste of corporate life even before graduation. This one-of-a-kind initiative is a pioneering collaboration between Industry and Academia, ensuring you're not just prepared for the global industrial landscape, but are also well ahead of the game. Enroll at Hindustan Business School today.
HINDUSTAN BUSINESS SCHOOL
P. B. No. 3776, Ashwathanagar, Marathahalli, Bengaluru 560037
Ph: +91-80-25238650, 25232217
Email: contactus@hindustanacademy.edu.in
www.hindustanacademy.edu.in
8971404357
9740037853

ಕ್ಲಾಸಿಫೈಡ್ಸ್
CONNECT
ಆರ್ಟಿಸನ್ಸ್ ಬಜಾರ್
Artisans Bazaar
There is a memory in every single piece of art.
Date : 29th Sept to 9th Oct, 2023
Timings: 11 AM to 7 PM
Dussehra Festival Shopping Carnival
Arts, Crafts & Handlooms Exhibition
100+ Shopping Stalls | Live Performance & More
Entry Free! (11 Days Exhibition)





TROY Play Activity Workshop
7th Oct 2023
5.00 PM - 7.00 PM

The Puppet Show Live
8th Oct 2023
5.00 PM - 6.30 PM
Organized By Grand Flea Market
For Details Contact 9036658774 / 6364685716
Karnataka Chitrakala Parishath, Kumara Krupa Road, Near Shivananda Circle Bengaluru -560 001.
HANDLOOMS | HOME DECOR | HANDICRAFTS | CLOTHING | JEWELLERS

PUBLIC NOTICE

PUBLIC NOTICE

The public in general is hereby informed that Mr. S.T Rajashekhara S/o S. B Tanke Gowda residing at **229, 2nd Block, 2nd Stage, RMV Extn., Bangalore: 560094**, has entered into an Agreement to Sell dated 03rd Oct.2023 with respect to the Schedule Property in favour of my client Mr. Naveen Kumar M, S/o Mr. G Manoharan. Mr. S.T Rajashekhara S/o S. B Tanke Gowda has represented that he is the present owner of the Schedule Property.

Any person having any rights, title, claim or interest in the Schedule Property, by way of sale, inheritance, possession, succession, mortgage, lien, lease, gift or otherwise howsoever in respect of the same, shall intimate the objection in writing to the undersigned with supporting documents thereof within 07 days from the date of publication of this notice or else any such claims by anyone shall not be considered and shall be deemed to have been waived and/or abandoned. And my client shall proceed in purchasing the Schedule Property and no claims shall be entertained.

SCHEDULE

All that piece and parcel of the property bearing BDA site number 229, later assessed to Bangalore Mahanagara Palike with No. 229, falling in Ganganagar Range, Sanjay Nagar War (no. 100), RMV 2nd Stage, 2nd block, Bengaluru, measuring East to West by 26.50 meters and North to South by 15.00 meters, together with all rights, appurtenances whatsoever whether underneath or above the surface and bounded on:
East by : Site no. 202
West by : Road
North by : Site no. 228
South by : Site no. 230
In total area measuring 397.50 sq mts.

Sd/-
Pranav Kumar Mysore, Advocate
AEQUALIS ATTORNEYS
F 102, #37/2, 1st Floor, Chicago Avenue, Cunningham Road, Bengaluru- 560052.
M: 9731300067. O: 080-41440149

PUBLIC NOTICE

Our client has entered into registered Agreement of sale to purchase Converted Land Bearing **Sy.No.3/7**, measuring **2-00 Acres** (Converted vide OM dated 29/11/1997 bearing No.ALN(De) SR:180/1997-98 and renewed vide OM dated 08/09/2005 bearing No.ALN(De) SR:180/1997-98, issued by Deputy Commissioner, Bangalore Rural District), situated at **PALYA VILLAGE, KasabaHobli, Devanahalli Taluk, Bangalore Rural District** and bounded on the;
East by : Land in Sy.No.3/27;
West by : Road;
North by : Land in Sy.No.3/6;
South by : Private Property;
from its owner **M/s.IINSPIRA SPRINGS LLP**, duly represented by its Designated partners **Mr.PRABHU.U.R, Son of Sri.Rangaswamy and Mr.AKARSH.S, Son of Sri.H.R.S.Reddy**

Persons having any right over the said property may lodge their objections/claims with documentary evidence within **15 days** from the date of this publication, to the undersigned.

Prashanth Vijayalakshmi & Associates, Advocates,
No.162, 1st Floor, Above Venkateshwara Mobile Store, Next Kanthi Sweets, 2nd Main Kasturinagar, Bangalore-560043.
Ph: 9845638758/080 42065536
Mail @ prashanthviji.adv@gmail.com

REAL ESTATE SELLING

Agricultural Land

East

SALE 4 Acre land Hoskote Malur SH 95 Highway road 200 feet frontage near ITC factory call 9901115611 or 8431659271

PERSONAL

Change of Name

I PRAKASH VENKATASWAMY R/a, #171, Sidihosakote, Anekal Taluk, Bengaluru- 562106 My Name has been wrongly mentioned as SAVA PRAKASH In my Son VILAS SIDIHOSAKOTE PRAKASH SSLC Certificate. I Hereby Declare My Name Is PRAKASH VENKATASWAMY Vide Affidavit Dated 04/10/2023 before Notary Hegde Ganapati Venkatraman Bangalore.

I JYOTHIBAI G R/a No 278, 1st Stage, 4th Cross, 6th phase, Mahaganapathi Nagar, Rajajinagar, Bangalore North, Karnataka-560010, have changed my Name from JYOTHI BAI to JYOTHIBAI G vide affidavit dated 04.10.2023 before Notary K.H. JAGADISH Bangalore.

I RAGHUNATHAREDDY H.A. Flat- 304, 3rd Floor, Near HP Petrol Bunk, Huskur Gate, Bengaluru-100, have changed my name to RAGHUNATHA REDDY, Vide affidavit dated- 04/10/2023

CHANGE OF NAME

I **MANJULA RAJANNA** (Old name) W/o **K RAJANNA** Resident of Kannamangala Village & post, Devanahalli Taluk, Banglaore Rural District, Have Changed My Name From **MANJULA RAJANNA** to **J.N.MANJULA** Vide affidavit Dated : 3-10-2023 Sworn before the notary A.Narayanaswamy at Devanahalli.

I HARINAKSHI w/o DurgadasShetty, No. 67/135, Savera Layout, Vajarahalli, Nelamangala 562123 have Changed my Name to Harini Durgadas Vide affidavit Dated 3/10/2023, before Notary Gangaraja.C.B, Nelamangala

I,MANORANJAN SRIVATHSALAN R/at No.55,Flat No.201, 4th-Main Road,Suncity Layout, J.P.Nagar 7th Phase, Bengaluru-560078 have changed-my name-to MANORANJAN SRIVATHSALA vide_Affidavit dated:04.10.2023, Sworn_Before Notary Ambreshappa, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ATTENTION TRADERS!!!
BECOME A MEMBER OF INDIA'S FIRST PREMIER TRADING FLOOR
proptradingfloor
FOR NEW & EXPERIENCED TRADERS
DEDICATED TRADING DESK & FLOOR | TOOLS & RESOURCES | 24 HOURS OPEN | TRAINING & EDUCATION | HIGH SPEED INTERNET | EVENTS & SEMINARS | INTERNATIONAL PROP FIRM PROGRAMS | COMMUNITY MEMBERSHIP | RISK MANAGEMENT & ANALYSIS TEAM
TRADING IS A SERIOUS BUSINESS
TRADING & LEARNING FROM A PROFESSIONAL FLOOR ENHANCES YOUR PROSPECTS OF PROFIT, OFFERING A COMPETITIVE EDGE OVER OTHER SPACES OR BEDROOM SETUPS. CHOOSE EXPERTISE; CHOOSE OUR FLOOR
LIMITED MEMBERSHIPS AFFORDABLE PLANS JOIN US TODAY
OUR TRADING FLOOR NESTLED INSIDE VIBRANT WORLD CLASS INTERNATIONAL TECH PARK
#01-107, WEWORK, L BLOCK, EMBASSY TECH VILLAGE, OUTER RING ROAD, BELLANDUR, BANGALORE
+91-6364938335
+91-6364938336
OPENING THIS NOV 1ST, 2023
www.proptradingfloor.com

DH DECCAN HERALD
Classifieds
More value, more impact
REAL ESTATE
ಪ್ರಜಾವಾಣಿ
#1 PLACE YOUR AD HERE
The 1st thing to do when Selling/Buying your Property
www.dhclassifieds.com BOOK NOW
Book your ad with us now! For more details contact:
+91 9901641752 | +91 9886213331 |
+91 9845114560 | +91 9731810277 |
+91 9900428036 | 080- 45557163/164

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು-560 064
ವೆಬ್‌ಸೈಟ್: www.rwf.indianrailways.gov.in

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ ಡಬ್ಲ್ಯೂ/ 23-24/10 ದಿನಾಂಕ: 03.10.2023

ಇ-ಟೆಂಡರುಗಳು: ಭಾರತದ ರಾಷ್ಟ್ರಪತಿಗಳ ಪರವಾಗಿ ಉಪ ಮುಖ್ಯ ಇಂಜಿನಿಯರ್, ಈ ಕೆಳಕಂಡ ಕೆಲಸಗಳಿಗಾಗಿ ಎಲೆಕ್ಟ್ರಾನಿಕ್ ಟೆಂಡರುಗಳನ್ನು ಆನ್‌ಲೈನ್ ವೆಬ್‌ಸೈಟ್ http://www.ireps.gov.in (Works) ಮೂಲಕ ಆಹ್ವಾನಿಸಿದ್ದಾರೆ.

ಟೆಂಡರ್ ಸಂಖ್ಯೆ: ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ ವೈಎನ್‌ಕೆ/1023
ವಿವರಣೆ: ಆರ್‌ಡಬ್ಲ್ಯೂಎಫ್ ಪಶ್ಚಿಮ ಕಾಲೋನಿಯಲ್ಲಿ ಕಬ್ಬಡ್ಡಿ ಕೋರ್ಟ್ ನಿರ್ಮಾಣ ಕಾಮಗಾರಿ.
ಅಂದಾಜು ಮೌಲ್ಯ: ರೂ. 83,76,438.42

ಟೆಂಡರ್ ಸಂಖ್ಯೆ: ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ ವೈಎನ್‌ಕೆ/1024
ವಿವರಣೆ: ಆರ್‌ಡಬ್ಲ್ಯೂಎಫ್ ಪಶ್ಚಿಮ ಕಾಲೋನಿಯಲ್ಲಿ ಟೈಪ್ III ಕ್ವಾರ್ಟರ್ಸ್ (312 ರಿಂದ 315) 24 ಘಟಕಗಳಿಗೆ ಹೆಚ್ಚುವರಿ ಮಲಗುವ ಕೋಣೆ ನಿರ್ಮಾಣ.
ಅಂದಾಜು ಮೌಲ್ಯ: ರೂ. 77,35,659.46

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 03.11.2023, ಬೆಳಿಗ್ಗೆ 11.00 ಗಂಟೆಗೆ

ಟೆಂಡರ್ ಪ್ರಕಟಣೆಯ ವಿವರಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.
ಕಾರ್ಯನಿರ್ವಾಹಕ ಇಂಜಿನಿಯರ್

PUBLIC NOTICE

We would like to inform the General Public that our client is investigating the title of the Schedule Property from its owner M/s Subramanya Constructions & Development Co. Ltd., having its registered office at: 4/11, Tumkur Road, Yeshwanthpur, Bangalore 560022 represented by its Director Arjun Balasubramanyam.

It is mentioned to our client that there is an O.S No. 544/2014 on Schedule Property, If there is anybody has any charge, lien, interest or title or claim or agreement on the Schedule Property apart from the claimants in the above mentioned suit, they should come forth with copies of documents in support of such claim and produce the same to the undersigned within **7 days** from the date of publication of this notice. In the event no such legally tenable claim is received within the above period, our Client shall proceed with the transaction as if no such claims exist or that they have been waived or abandoned.

SCHEDULE PROPERTY

All that piece and parcel of the Vacant Land bearing Survey No. 78, which is converted to Non- Agriculture, measuring 2 Acres 12 Guntas situated at Bettanahalli Village, Kundana Hobli, Devanahalli Taluk and bounded on the
East by : Portion of Sy. No. 76;
West by : Dodda Arasappa's Property and Kharab Land;
North by : Land bearing Sy. No. 79,
South by : Road.

Sd/- **Ms. Deekshitha M.S. & Mr. Varun Pai,** Advocates
AKS LAW ASSOCIATES
301, Sunrise Chambers, Ulsoor Rd, Bengaluru 560042. Dated: 02-10-2023

SBI ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಪ್ರಾದೇಶಿಕ ವ್ಯವಹಾರ ಕಚೇರಿ–4, ಚಾಮರಾಜನಗರ, ಎಓ–5, ಮೈಸೂರು.

ಗುತ್ತಿಗೆ ಆಧಾರದ ಮೇಲೆ ಕಛೇರಿ ಸ್ಥಳಾವಕಾಶ ಅಗತ್ಯವಿದೆ

ಎಸ್‌ಬಿಐ ಪ್ರಾದೇಶಿಕ ವ್ಯವಹಾರ ಕಚೇರಿ–4, ಚಾಮರಾಜನಗರ ಇವರು ಎಸ್‌ಬಿಐ ಆರ್‌ಎಸಿಸಿ ರಾಮನಗರಂ (63068) ಶಾಖೆ, ಇವರ ಪರವಾಗಿ ಎಸ್‌ಬಿಐ ಆರ್‌ಎಸಿಸಿ ರಾಮನಗರಂ (63068) ಶಾಖೆಗಾಗಿ **ಮುಖ್ಯ ರಸ್ತೆಯಲ್ಲಿ ಹೊಂದಿಕೊಂಡಂತೆ 232 ಚದರ ಮೀ. (2500 ಚದರ ಅಡಿ) (+/- 20%) ಕಾರ್ಪೆಟ್ ಪ್ರದೇಶ ಹೊಂದಿರುವ ವಾಣಿಜ್ಯ / ಕಚೇರಿಯ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ ನೀಡಲು** ಮಾಲೀಕರು/ಪವರ್ ಆಫ್ ಅಟಾರ್ನಿ ಹೊಂದಿರುವವರಿಂದ ಆಫರ್‌ಗಳನ್ನು ಆಹ್ವಾನಿಸಿದೆ.

ಸ್ಥಳಾವಕಾಶವು ಸಾಕಷ್ಟು ವಿದ್ಯುತ್ ಲೋಡ್, ನೀರು ಸರಬರಾಜು, ಪಾರ್ಕಿಂಗ್ ಸ್ಥಳ, ಜನರೇಟರ್ ಇರಿಸಲು ಸ್ಥಳಾವಕಾಶ, ಇ–ಲಾಬಿ ಮತ್ತು ವಿ–ಸ್ಯಾಟ್ ಹಾಗೂ ಉತ್ತಮ ಮುಂಭಾಗ ದ್ವಾರ (ಉಚಿತವಾಗಿ) ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಹೊಂದಿರಬೇಕು. ಸ್ಥಳಾವಕಾಶವು ಒಂದೇ ಮಹಡಿಯಲ್ಲಿದ್ದು, ಮುಖ್ಯವಾಗಿ ನೆಲಮಹಡಿಯಲ್ಲಿರಬೇಕು. ಸ್ಥಳಾವಕಾಶವು ಸ್ವಾಧೀನಕ್ಕೆ/ವ್ಯವಹಾರಕ್ಕೆ ಅಥವಾ ಪ್ಲಾಟ್‌ಗೆ ಸಿದ್ಧವಿರಬೇಕು. ಆದಾಗ್ಯೂ, ಎಲ್ಲಾ ಸೌಕರ್ಯಗಳನ್ನು ಸರಿಯಾಗಿ ಲಭಿಸುವಂತ ಸ್ಥಳಾವಕಾಶಕ್ಕೆ ಆದ್ಯತೆ ನೀಡಲಾಗುವುದು. ವಿವರವಾದ ಮಾನದಂಡಗಳು, ನಿಯಮಗಳು ಮತ್ತು ಷರತುಗಳು ಹಾಗೂ ಬಿಡ್ ಬೆಲೆಯನ್ನು ಒಳಗೊಂಡಿರುವ ತಾಂತ್ರಿಕ ಬಿಡ್‌ನ ಸಲ್ಲಿಕೆಯ ನಮೂನೆಯನ್ನು ಎಸ್‌ಬಿಐ ವೆಬ್‌ಸೈಟ್ **www.sbi.co.in** ಅಥವಾ **www.statebankofindia.com** ನಿಂದ **ದಿನಾಂಕ: 05.10.2023 ರಿಂದ 20.10.2023 ರವರೆಗೆ** ಡೌನ್‌ಲೋಡ್ ಮಾಡಬಹುದು. ಸರ್ಕಾರಿ ಇಲಾಖೆಗಳ ಒಡೆತನದ ಮತ್ತು ಸಾರ್ವಜನಿಕ ವಲಯ ಘಟಕಗಳು/ಬ್ಯಾಂಕುಗಳ ಕಟ್ಟಡಗಳಿಗೆ ಆದ್ಯತೆ ನೀಡಲಾಗುವುದು. ಎಲ್ಲಾ ಮಾಹಿತಿಗಳಿರುವ ಆಫರ್‌ಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿ **ಪ್ರಾದೇಶಿಕ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪ್ರಾದೇಶಿಕ ವ್ಯವಹಾರ ಕಚೇರಿ–4, ಶ್ರೀ ಲಕ್ಷ್ಮಿ ವೆಂಕಟೇಶ್ವರ ಕಾಂಪ್ಲೆಕ್ಸ್, ನಂಜನಗೂಡು ರಸ್ತೆ, ಚಾಮರಾಜನಗರ–571313 ಇವರಿಗೆ ದಿನಾಂಕ: 20.10.2023ರಂದು ಮಧ್ಯಾಹ್ನ 3.00 ಗಂಟೆಯ ಅಥವಾ ಮುಂಚಿತವಾಗಿ** ಸಲ್ಲಿಸಬೇಕು. ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಆಫರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಎಸ್‌ಬಿಐ ಹೊಂದಿರುತ್ತದೆ. ಯಾವುದೇ ರೀತಿಯ ದಲ್ಲಾಳಿಗಳಿಗೆ ಆಸ್ಪದವಿರುವುದಿಲ್ಲ.

ಸಹಿ/– ಪ್ರಾದೇಶಿಕ ವ್ಯವಸ್ಥಾಪಕರು, ಎಸ್‌ಬಿಐ ಆರ್‌ಬಿಓ–4, ಚಾಮರಾಜನಗರ

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ, ನಿರ್ಮಾಣ ಮತ್ತು ನಿರ್ವಹಣೆ ವಿಭಾಗ

इसरो isro
ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು–560008. ದೂ: 080–25037 131/174/214

ದಿನಾಂಕ: 04.10.2023

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು	ಬೆಂಗಳೂರಿನ ಎಲ್‌ಪಿಎಸ್‌ಸಿ (ಬಿ) ಕ್ಯಾಂಪಸ್‌ನಲ್ಲಿ ವಿದ್ಯುತ್ ಮತ್ತು ಎಸಿ ಅನುಸ್ಥಾಪನಾ ಕಾರ್ಯ ಮತ್ತು ನಿರ್ವಹಣೆಗೆ ವಾರ್ಷಿಕ ನಿರ್ವಹಣಾ ವೆಚ್ಚ.
ಟೆಂಡರ್ ಪ್ರಕಟಣೆ ಸಂಖ್ಯೆ	ಸಿಎಂಡಿ/ ಎಲ್‌ಪಿಎಸ್‌ಸಿ(ಬಿ)/ ಇ/ ಎಂಟಿ/ 26/ 2023–24 ದಿನಾಂಕ: 03.10.2023
ಅಂದಾಜು ಮೊತ್ತ	₹ 52.85 ಲಕ್ಷಗಳು
ಪೂರ್ಣಗೊಳಿಸುವ ಅವಧಿ	12 ತಿಂಗಳು
ಮಾರಾಟದ ಅವಧಿ	04.10.2023 ರಿಂದ 15.10.2023 ರ ವರೆಗೆ
ಇಎಂಡಿ	₹ 1,05,700/-

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಟ್ಟು www.tenderwizard.com/ISRO ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳನ್ನೊಳಗೊಂಡ ವಿವರವಾದ ಟೆಂಡರ್ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ www.isro.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಿ .

ಸಹಿ/- ಮುಖ್ಯಸ್ಥರು ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಸಂಘ

ರಾಷ್ಟ್ರೀಯ ಆರೋಗ್ಯ ಅಭಿಯಾನ, ಜಿಲ್ಲಾ ಆರ್.ಸಿ.ಹೆಚ್. ಘಟಕ, ಕೊಠಡಿ ಸಂಖ್ಯೆ 207, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಇ–ಮೇಲ್ : rchobangalorerural@gmail.com, dpmbangalorerural2@gmail.com

ಸಂಖ್ಯೆ: NHM/BR/DPMU&RCH/RBSK/V.TENDER/01/23-24 ದಿನಾಂಕ: 03–10–2023

ಅಲ್ಪಾವಧಿ ಇ-ಟೆಂಡರ್ ಆಹ್ವಾನ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ 2023–24 ನೇ ಸಾಲಿಗೆ ಈ ಕೆಳಕಂಡ ಕಾರ್ಯಕ್ರಮಗಳಿಗೆ ಚಾಲಕ ಸಹಿತ ವಾಹನ ಸರಬರಾಜು ಸೇವೆಯನ್ನು ಪಡೆಯಲು ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ (eproc.karnataka.gov.in) ಮುಖಾಂತರ ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷಡ್ಯೂಲ್ ಈ ಕೆಳಕಂಡಂತಿದೆ.

ಕ್ರ. ಸಂ.	ಕಾರ್ಯಕ್ರಮ	ವಾಹನಗಳ ಸಂಖ್ಯೆ	ಇ.ಎಂ.ಡಿ. ಮೊತ್ತ
01	ಆರ್.ಬಿ.ಎಸ್.ಕೆ.	08	ರೂ. 29,000/–
02	ಜಿಲ್ಲಾ ಕಾರ್ಯಕ್ರಮ / ಲೆಕ್ಕಪತ್ರ ವ್ಯವಸ್ಥಾಪಕರು	01	ರೂ. 22,375/–
03	ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ	01	
04	ಜಿಲ್ಲಾ ಸಲಹೆಗಾರರು – ಕ್ವಾಲಿಟಿ ಅಶ್ಯೂರೆನ್ಸ್	01	
05	ಜಿಲ್ಲಾ ಸಲಹೆಗಾರರು – ತಂಬಾಕು ನಿಯಂತ್ರಣ	01	
06	ಜಿಲ್ಲಾ ಎನ್.ಸಿ.ಡಿ./ಐ.ಡಿ.ಎಸ್.ಪಿ. ಘಟಕ	01	
07	ಜಿಲ್ಲಾ ಐ.ಇ.ಸಿ. ಘಟಕ	01	

ವಿವರಗಳು : 1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುತ್ತದೆ ದಿನಾಂಕ : 04–10–2023, 2) ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 24–10–2023 ರ ಸಂಜೆ 5.00 ಗಂಟೆ, 3) ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ : (ತಾಂತ್ರಿಕ ಬಿಡ್) : 26–10–2023, 4) ಟೆಂಡರ್ ತೆರೆಯುವ ಸ್ಥಳ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 5) ಟೆಂಡರ್ ತೆರೆಯುವ ಪ್ರಾಧಿಕಾರಿಗಳು : ಜಿಲ್ಲಾ ಆರೋಗ್ಯ ಸಂಘ, ಬೆಂಗಳೂರು ಗ್ರಾಮಾಂತರ ಜಿಲ್ಲೆ, 6) ಟೆಂಡರ್ ಮೊತ್ತ : ರೂ. 11.60 ಲಕ್ಷಗಳು ಮತ್ತು ರೂ. 8.95 ಲಕ್ಷಗಳು ಅಂದಾಜು ಮೊತ್ತ, 7) ಹೆಚ್ಚಿನ ಮಾಹಿತಿಗಾಗಿ eproc.karnataka.gov.in ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪಡೆಯಬಹುದು.

ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿ ಕಛೇರಿಯ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ.

ಸಹಿ/– ಉಪಾಧ್ಯಕ್ಷರು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ,
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/1533/2023–24

Dr. AMBEDKAR INSTITUTE OF TECHNOLOGY

BDA Outer Ring Road, Mallathahally, Bengaluru - 560 056
Tel: 080-23211232 & Mob No: 9986003865

AIT/SS/1272/2023-24 Date: 04-10-2023

TENDER NOTIFICATION

Sealed quotations are invited from Reputed/ Authorized firms for supply of **"National Hard Journals Jan-2024 to Dec-2024 70 Nos to Central Library".** Details and specification of requirements can be downloaded from college website **www.drait.edu.in** or collect from the college store section. The filled Quotation shall be attached with a DD of Rs.500/- drawn in favor of the Principal Dr.AIT, Bangalore-56.

Last date for downloading or collecting tender forms along with specifications from college website or store section is on or before **30.10.2023** and submit the sealed quotations on or before **31.10.2023 by 1.00 PM.** Quotations will be opened on the same day i.e. **31.10.2023 at 4.00 PM.**

Principal **Secretary, PVPWT**

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಆನೇಕಲ್ ತಾಲ್ಲೂಕು ಪಂಚಾಯಿತಿ, ಆನೇಕಲ್ ತಾಲ್ಲೂಕು, ಗ್ರಾಮ ಪಂಚಾಯಿತಿ ಕಾರ್ಯಾಲಯ, ಸರ್ಜಾಪುರ ಬೆಂಗಳೂರು ನಗರ ಜಿಲ್ಲೆ.

ಸಂಖ್ಯೆ: ಸ.ಗ್ರಾ.ಪಂ.ಟೆಂ.ಪ್ರ.ಸಂ:01/2023–24 ದಿನಾಂಕ: 04–10–2023

ಟೆಂಡರ್ ಪ್ರಕಟಣೆ

ಸರ್ಜಾಪುರ ಗ್ರಾಮ ಪಂಚಾಯಿತಿ ಕಾರ್ಯಾಲಯ, ಸರ್ಜಾಪುರ, ಆನೇಕಲ್ ತಾಲ್ಲೂಕು ಇವರು, ವರ್ಗ–1 ರ ನಿಧಿ / 15ನೇ ಹಣಕಾಸು, ಯೋಜನೆಯ ಅನುದಾನಕ್ಕೆ ಸಂಬಂಧಿಸಿದಂತೆ ಕ್ರ.ಸಂ. 01 ರಿಂದ 05 ರವರೆಗೆ ಜಿ.ಎಸ್.ಟಿ ಹೊಂದಿರುವ ಅಧಿಕೃತ ಸರಬರಾಜುದಾರರಿಂದ / ಅಂಗೀಕೃತ ಸಂಸ್ಥೆ / ಏಜನ್ಸಿ / ಪಂಚಾಯಿತಿ ನಿರ್ದಿಷ್ಟಪಡಿಸುವ ಅರ್ಹತೆಗಳನ್ನು ಹೊಂದಿರುವ ಅರ್ಹ ವ್ಯಕ್ತಿಗಳಿಂದ ಈ ಕೆಳಕಂಡ ವಿಷಯಗಳ ಬಗ್ಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಇ.ಎಂ.ಡಿ ಮೊತ್ತ
01	ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊಳವೆ ಮಾರ್ಗಗಳ ನಿರ್ವಹಣೆಗಾಗಿ ಬಿಡಿಭಾಗಗಳ ಪೂರೈಕೆ, 2023–24ನೇ ಸಾಲು (ಬೇಡಿಕೆಗೆ ತಕ್ಕಂತೆ).	ರೂ. 25000.00
02	ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊಳವೆ ಬಾವಿಗಳ ಪಂಪು ಮೋಟಾರ್‌ಗಳ ದುರಸ್ತಿ ಮತ್ತು ನಿರ್ವಹಣೆ ಹಾಗೂ ಪಂಪು ಮೋಟಾರ್ ಮತ್ತು ಅಗತ್ಯ ಸಾಮಗ್ರಿಗಳ ಪೂರೈಕೆ, 2023–24ನೇ ಸಾಲು (ಬೇಡಿಕೆಗೆ ತಕ್ಕಂತೆ).	ರೂ. 25000.00
03	ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಬೀದಿ ದೀಪಗಳ ನಿರ್ವಹಣೆಗಾಗಿ ಹೊಸ ಸೆಟ್‌ಗಳು, ಬಲ್ಬ್‌ಗಳು ಮತ್ತು ಇತರೆ ಬಿಡಿಭಾಗಗಳ ಪೂರೈಕೆ, 2023–24ನೇ ಸಾಲು (ಬೇಡಿಕೆಗೆ ತಕ್ಕಂತೆ).	ರೂ. 20000.00
04	ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಗ್ರಾಮಗಳಲ್ಲಿನ ಸ್ವಚ್ಛತೆಗೆ ಬ್ಲೀಚಿಂಗ್ ಪೌಡರ್, ಪೆನಾಯಿಲ್, ಮೆಲಾಥಿನ್ ಡಸ್ಟ್, ಕಳೆನಾಶಕ ಹಾಗೂ ಇತರೆ ಸ್ವಚ್ಛತಾ ಸಾಮಗ್ರಿಗಳ ಪೂರೈಕೆ 2023–24ನೇ ಸಾಲು (ಬೇಡಿಕೆಗೆ ತಕ್ಕಂತೆ)	ರೂ. 10000.00
05	ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕುಡಿಯುವ ನೀರಿನ ಜಿ.ಐ. ಕೊಳವೆ ಮಾರ್ಗಗಳ ದುರಸ್ತಿಗಾಗಿ ವೆಲ್ಡಿಂಗ್ ವರ್ಕ್ಸ್ ಮತ್ತು ಚಿಪ್ಪಿಂಗ್ ಕಾಮಗಾರಿ (ಮಾನವ ಸಂಪನ್ಮೂಲ) 2023–24ನೇ ಸಾಲು (ಬೇಡಿಕೆಗೆ ತಕ್ಕಂತೆ).	ರೂ. 10000.00

• ಸಾಮಗ್ರಿ ಪೂರೈಕೆ ಅವಧಿ: **ಕ್ರ.ಸಂ. 1 ರಿಂದ 5ಕ್ಕೆ ತಲಾ 12 ತಿಂಗಳು.**
• ಖಾಲಿ ಟೆಂಡರ್ ಫಾರಂ ಬೆಲೆ: **ಕ್ರ.ಸಂ. 1 ರಿಂದ 5ಕ್ಕೆ ತಲಾ ರೂ. 1000/–.**

1) ಸರಬರಾಜುದಾರರು / ಅಂಗೀಕೃತ ಸಂಸ್ಥೆ / ನೋಂದಾಯಿತ ಏಜೆನ್ಸಿಗಳಿಗೆ ಟೆಂಡರ್ ಫಾರಂ ವಿತರಣೆ: **07-10-2023 ರಿಂದ 18-10-2023.** 2) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **19–10–2023ರ ಸಂಜೆ 5.00 ಗಂಟೆವರೆಗೆ.** 3) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **21–10–2023ರ ಮಧ್ಯಾಹ್ನ 3.00 ಗಂಟೆಯ ನಂತರ.** 4) ಹೆಚ್ಚಿನ ಮಾಹಿತಿಗೆ ಪಂಚಾಯಿತಿ ಕಾರ್ಯಾಲಯವನ್ನು ಸಂಪರ್ಕಿಸುವುದು. 5) ಮೇಲ್ಕಂಡ ಟೆಂಡರ್‌ನ್ನು ಅಂಗೀಕರಿಸುವ / ತಿರಸ್ಕರಿಸುವ / ಮಾರ್ಪಡಿಸುವ ಹಾಗೂ ಯಾವುದೇ ಹಂತದಲ್ಲಿ ರದ್ದುಪಡಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/– ಅಧ್ಯಕ್ಷರು, ಸರ್ಜಾಪುರ ಗ್ರಾಮ ಪಂಚಾಯಿತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸರ್ಜಾಪುರ ಗ್ರಾಮ ಪಂಚಾಯಿತಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.

ವಾಸಾಸಂಇ/ವಾ.ಪ್ರ/1547/ಅಡ್ವರ್ಟೋರ್/2023–24

ಬಿಬಿಎಂಪಿ ವ್ಯಾಪ್ತಿಯಲ್ಲಿ ಶೇ 71.85ರಷ್ಟು ಬೀದಿನಾಯಿಗಳಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ

ಬೀದಿನಾಯಿಗಳ ಸಂಖ್ಯೆ ಶೇ 10ರಷ್ಟು ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಸಂಖ್ಯೆ ಶೇ 10ರಷ್ಟು ಕಡಿಮೆಯಾಗಿದ್ದು, ಶೇ 71.85ರಷ್ಟು ಬೀದಿನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

ನಗರದಲ್ಲಿ 2.79 ಲಕ್ಷ ಬೀದಿನಾಯಿಗಳಿದ್ದು, 2019ಕ್ಕೆ ಹೋಲಿಸಿದರೆ ಶೇ 20 ಕ್ಕಿಂತ ಹೆಚ್ಚು ಬೀದಿನಾಯಿಗಳಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಈ ಎಲ್ಲ ಮಾಹಿತಿಗಳು ಬಿಬಿಎಂಪಿ ನಡೆಸಿರುವ ಸಮೀಕ್ಷೆಯಿಂದ ಲಭ್ಯವಾಗಿವೆ ಎಂದು ಬಿಬಿಎಂಪಿ ಆರೋಗ್ಯ ಹಾಗೂ ಪಶುಪಾಲನಾ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯ ಎಂಟು ವಲಯಗಳಲ್ಲಿ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮತ್ತು ಆಂಟಿರೇಬಿಸ್ ಲಸಿಕಾ ಕಾರ್ಯಕ್ರಮ ಅನುಷ್ಠಾನದ ಮಾಹಿತಿ, ಬೀದಿನಾಯಿಗಳ ಹಾವಳಿ, ಅವುಗಳ ನಿಯಂತ್ರಣಕ್ಕೆ ಯೋಜನೆ ರೂಪಿಸಲು ಎನ್‌ಎಪಿಆರ್‌ಇ ಶಿಫಾರಸಿನಂತೆ 'ಸೈಟ್–ರಿಸೈಟ್' ವಿಧಾನ ಅಳವಡಿಸಿಕೊಂಡು ಬೀದಿನಾಯಿಗಳ ಸಮೀಕ್ಷೆ ನಡೆಸಲಾಗಿದೆ. ಜುಲೈ 11ರಿಂದ ಆಗಸ್ಟ್ 2ರವರೆಗೆ ಈ ಸಮೀಕ್ಷೆ ನಡೆಯಿತು ಎಂದರು.

ದೇಶದಲ್ಲೇ ಪ್ರಥಮ ಬಾರಿಗೆ ಡ್ರೋನ್ ಮೂಲಕ ಬೀದಿನಾಯಿಗಳ ಸಮೀಕ್ಷೆ ಮಾಡಲಾಗಿದೆ. ನಗರ ಪ್ರದೇಶಗಳಲ್ಲಿ ಪ್ರಾಣಿಗಳ ಗಣತಿಗೆ ಡ್ರೋನ್ ಬಳಕೆ ಮಾಡಿರುವುದು ಇದೇ ಮೊದಲು. ಬೀದಿನಾಯಿಗಳಿಗೆ 'ಫೈವ್ ಇನ್ ಒನ್' ಲಸಿಕೆಗಳನ್ನು ಹಾಕಲಾಗುತ್ತದೆ. ಇದೂ ನಗರ ಪಾಲಿಕೆ ಮಟ್ಟದಲ್ಲಿ ಪ್ರಥಮವಾಗಿದೆ ಎಂದರು.

ಬೀದಿನಾಯಿಗಳಲ್ಲಿ ಕೋರೆಹಲ್ಲು ರೋಗ ಕೂಡ ಹೆಚ್ಚಾಗುತ್ತಿದ್ದು, ಅವುಗಳಿಗೆ ಲಸಿಕೆ ನೀಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ. ಟೆಂಡರ್ ಮೂಲಕ ಲಸಿಕೆ ಪಡೆದುಕೊಳ್ಳಲಾಗುತ್ತದೆ ಎಂದು ತ್ರಿಲೋಕ್ ಚಂದ್ರ ಹೇಳಿದರು.

ಪ್ರತಿವರ್ಷ ಬೀದಿನಾಯಿಗಳ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ₹6 ಕೋಟಿಯಿಂದ ₹7 ಕೋಟಿಯಷ್ಟು ವೆಚ್ಚ ಮಾಡಲಾಗುತ್ತಿದೆ ಎಂದರು.

ಸಾಕುಪ್ರಾಣಿ ಪರವಾನಗಿ ಬಗ್ಗೆ ನಿಯಮ ರೂಪಿಸಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಸರ್ಕಾರ ಕೆಲವು ತಿದ್ದುಪಡಿಗಳಿಗೆ ಸೂಚಿಸಿದೆ. ಅವುಗಳನ್ನು ಅಳವಡಿಸಿಕೊಂಡು ಮತ್ತೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಐಸಿಎಆರ್–ಎನ್‌ಐವಿಇಡಿಐ ನಿರ್ದೇಶಕ ಡಾ. ಬಲದೇವ್ ರಾಜ್ ಗುಲಾಟಿ, ಪ್ರಧಾನ ವಿಜ್ಞಾನಿ ಡಾ. ಕೆ.ಪಿ. ಸುರೇಶ್, ಬಿಬಿಎಂಪಿ ಪಶುಪಾಲನಾ ವಿಭಾಗದ ಜಂಟಿ ನಿರ್ದೇಶಕ ಡಾ. ರವಿಕುಮಾರ್ ಇದ್ದರು.

ನಾಯಿ ಕಡಿತ– 15 ಸಾವಿರ ಪ್ರಕರಣ: ಪ್ರಸಕ್ತ ಸಾಲಿನಲ್ಲಿ 15 ಸಾವಿರ ಬೀದಿ ನಾಯಿ ಕಡಿತದ ಪ್ರಕರಣಗಳು ದಾಖಲಾಗಿವೆ.2022–23ನೇಸಾಲಿನಲ್ಲಿ22ಸಾವಿರ ಹಾಗೂ 2017–18ರಲ್ಲಿ 35 ಸಾವಿರ ಪ್ರಕರಣಗಳು ದಾಖಲಾಗಿದ್ದವು. ಇತ್ತೀಚೆಗೆ ವರ್ಷಕ್ಕೆ ಸರಾಸರಿ 15 ಸಾವಿರ ದಷ್ಟು ಬೀದಿನಾಯಿ ಕಡಿತ ಪ್ರಕರಣಗಳು ದಾಖಲಾಗಿವೆ ಎಂದು ಡಾ. ತ್ರಿಲೋಕ್ ಚಂದ್ರ ಅಂಕಿ ಅಂಶ ನೀಡಿದರು.

ರೇಬಿಸ್ ಪ್ರಕರಣಗಳು ಕಡಿಮೆಯಾಗುತ್ತಿವೆ. ಕಳೆದ ವರ್ಷ 130, ಈ ವರ್ಷ 70 ಪ್ರಕರಣಗಳು ದಾಖಲಾಗಿವೆ. ಬೀದಿನಾಯಿಗಳಿಗೆ ರೇಬಿಸ್ ನಿಯಂತ್ರಣ ಲಸಿಕೆ ನೀಡುವ ಕಾರ್ಯಕ್ರಮವನ್ನೂ ನಡೆಸಲಾಗುತ್ತಿದೆ ಎಂದರು.

ಬೀದಿನಾಯಿಗಳ ನಿಯಂತ್ರಣ ಹಾಗೂ ಲಸಿಕೆ ನೀಡುವ ಪ್ರಕ್ರಿಯೆಗಾಗಿ ಅವುಗಳಿಗೆ ಜಿಯೊ ಟ್ಯಾಗಿಂಗ್ (ಕಾಲರ್) ಹಾಗೂ ಮೈಕ್ರೊಚಿಪ್ ಅಳವಡಿಕೆ ಪ್ರಾಯೋಗಿಕವಾಗಿ ಚಾಲನೆಯಲ್ಲಿದೆ. ಪಶು ವೈದ್ಯಕೀಯ ವಿ.ವಿಯವರು 200 ಬೀದಿನಾಯಿಗಳಿಗೆ ಉಚಿತವಾಗಿ ಜಿಯೊ ಟ್ಯಾಗಿಂಗ್ ಮಾಡುತ್ತಿದ್ದಾರೆ. ಸ್ವಯಂ ಸೇವಾ ಸಂಸ್ಥೆಯೊಂದು ಮೈಕ್ರೊಚಿಪ್ ಅಳವಡಿಕೆ ಕಾರ್ಯವನ್ನು ಮಾಡುತ್ತಿದೆ ಎಂದು ಮಾಹಿತಿ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಬೀದಿನಾಯಿಗಳ ಗಣತಿ ವರದಿಯನ್ನು ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ ಬಿಡುಗಡೆ ಮಾಡಿದರು. ಐಸಿಎಆರ್–ಎನ್‌ಐವಿಇಡಿಐ ಪ್ರಧಾನ ಎಂಜಿನಿಯರ್ ಡಾ. ಕೆ.ಪಿ. ಸುರೇಶ್, ಐಸಿಎಆರ್–ಎನ್‌ಐವಿಇಡಿಐ ನಿರ್ದೇಶಕ ಡಾ. ಬಲದೇವ್ ರಾಜ್ ಗುಲಾಟಿ, ಬಿಬಿಎಂಪಿ ಪಶುಪಾಲನಾ ವಿಭಾಗದ ಜಂಟಿ ನಿರ್ದೇಶಕ ಡಾ. ರವಿಕುಮಾರ್ ಇದ್ದರು

ವಲಯ	ಬೀದಿ ನಾಯಿಗಳ ಸಂಖ್ಯೆ	ವಲಯ	ಬೀದಿ ನಾಯಿಗಳ ಸಂಖ್ಯೆ
ಪೂರ್ವ	37,685	ಯಲಹಂಕ	36,343
ಪಶ್ಚಿಮ	22,025	ಮಹದೇವಪುರ	58,371
ದಕ್ಷಿಣ	23,241	ಒಟ್ಟು	2,79,335
ದಾಸರಹಳ್ಳಿ	21,221	ಗಂಡು	1,65,341
ಆರ್.ಆರ್.ನಗರ	41,266	ಹೆಣ್ಣು	82,757
ಬೊಮ್ಮನಹಳ್ಳಿ	39,183	ಲಿಂಗ ಪತ್ತೆಯಾಗದ್ದು	31,237

ಡೆಂಗಿ ನಿಯಂತ್ರಣಕ್ಕೆ ಕ್ರಮ

ಬಿಬಿಎಂಪಿ ವ್ಯಾಪ್ತಿಯಲ್ಲಿ ಡೆಂಗಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಸೆಪ್ಟೆಂಬರ್‌ನಲ್ಲಿ ಎರಡು ಸಾವಿರ ಪ್ರಕರಣಗಳು ದಾಖಲಾಗಿದ್ದವು. ಎಲ್ಲ ವಾರ್ಡ್‌ಗಳಲ್ಲಿ ಸಮೀಕ್ಷೆ ನಡೆಸಿ, ಮನೆಗಳಲ್ಲಿ ಉತ್ಪತ್ತಿಯಾಗುತ್ತಿರುವ ಡೆಂಗಿ ಹರಡುವ ಸೊಳ್ಳೆಯ ಮೊಟ್ಟೆಗಳ ನಿಯಂತ್ರಣಕ್ಕೆ ಸೂಚಿಸಲಾಗಿದೆ. ನಿರ್ಮಾಣ ಹಂತದ ಕಟ್ಟಡಗಳಲ್ಲಿ ಸ್ವಚ್ಛತೆ ಕಾಪಡಲು ಸೂಚಿಸಲಾಗಿದೆ ಎಂದು ಡಾ.ತ್ರಿಲೋಕ್ ಚಂದ್ರ ತಿಳಿಸಿದರು.

'ನಮ್ಮ ಕ್ಲಿನಿಕ್'ನಲ್ಲಿ ಪ್ರತಿ ತಿಂಗಳು ಒಂದು ಲಕ್ಷ ರೋಗಿಗಳು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಪ್ರಾರಂಭದಲ್ಲಿ 50 ಸಾವಿರವಿದ್ದ ಈ ಸಂಖ್ಯೆ ಈಗ ದ್ವಿಗುಣಗೊಂಡಿದೆ. ಇದಲ್ಲದೆ ಪ್ರತಿ ತಿಂಗಳು 1,500 ಡಯಾಗ್ನೊಸಿಸ್ ಮಾಡಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ಸಮೀಕ್ಷೆಯ ಅಂಶಗಳು

- ಐಸಿಎಆರ್–ಎನ್‌ಐವಿಇಡಿಐನ ಪ್ರಧಾನ ವಿಜ್ಞಾನಿ ಡಾ. ಕೆ.ಪಿ.ಸುರೇಶ್ ಹಾಗೂ ಅವರ ಸಿಬ್ಬಂದಿಯೊಂದಿಗೆ ಬಿಬಿಎಂಪಿ ಪಶುಪಾಲನಾ ವಿಭಾಗದ ಸಿಬ್ಬಂದಿ, ನಗರ ಜಿಲ್ಲೆ ಪಶುಪಾಲನಾ ಹಾಗೂ ಪಶುವೈದ್ಯ ಸೇವಾ ಇಲಾಖೆ ಅರೆತಾಂತ್ರಿಕ ಸಿಬ್ಬಂದಿ.
- 100 ಸಮೀಕ್ಷೆದಾರರು, 15 ಮೇಲ್ವಿಚಾರಕರು ಸೇರಿದ ಒಟ್ಟು 50 ತಂಡ
- ವಸತಿ, ಕೊಳಚೆ, ವಾಣಿಜ್ಯ ಹಾಗೂ ಕೆರೆಗಳ 0.5 ಚ.ಕಿ.ಮೀ ವ್ಯಾಪ್ತಿಯ 6,850 ಮೈಕ್ರೊ ಝೋನ್
- ಶೇ 20ರಷ್ಟು ರ್‍ಯಾಂಡಂ ಸ್ಯಾಂಪಲ್, 1,360 ಮೈಕ್ರೊ ಝೋನ್‌ಗಳಲ್ಲಿ ಸಮೀಕ್ಷೆ

ಕ್ಯಾಂಪಸ್ ತೆರೆಯಲು ಎಕಾಗ್ರಿಡ್ ವಿ.ವಿ ಆಸಕ್ತಿ:ಎಂ.ಬಿ.ಪಾಟೀಲ

ಬೆಂಗಳೂರು: ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊ ಮೂಲದ ಎಕಾಗ್ರಿಡ್ ವಿಶ್ವ ವಿದ್ಯಾಲಯವು ಬೆಂಗಳೂರು ಅಥವಾ ಮೈಸೂರಿನಲ್ಲಿ ತನ್ನ ಕ್ಯಾಂಪಸ್ ತೆರೆಯಲು ಆಸಕ್ತಿ ತೋರಿದ್ದು, ಇದಕ್ಕಾಗಿ ರಾಜ್ಯ ಸರ್ಕಾರದಿಂದ 200 ಎಕರೆ ಜಮೀನಿಗಾಗಿ ಬೇಡಿಕೆ ಸಲ್ಲಿಸಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ಅಮೆರಿಕ ಪ್ರವಾಸದಲ್ಲಿರುವ ಸಚಿವರು ಮಂಗಳವಾರ ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ವಿ.ವಿ ಪ್ರತಿನಿಧಿಗಳಾದ ಪ್ರೊ. ಕೃಷ್ಣ ಸಾರಸ್ವತ್, ಸಿಒಒ ಶೈಲೇಂದ್ರ ಕುಮಾರ್ ಅವರೊಂದಿಗೆ ಮಾತುಕತೆ ನಡೆಸಿರುವುದಾಗಿ ಹೇಳಿದ್ದಾರೆ.

2018ರಲ್ಲಿ ಭಾರತದಲ್ಲೇ ಕಾರ್ಯಾರಂಭ ಮಾಡಿರುವ ಎಕಾಗ್ರಿಡ್ ವಿಶ್ವವಿದ್ಯಾಲಯವು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕ್ಷೇತ್ರದಲ್ಲಿ ಉನ್ನತ ಮಟ್ಟದ ಸಂಶೋಧನೆಗಳನ್ನು ಕೈಗೊಳ್ಳುವ ಗುರಿ ಹೊಂದಿದೆ. ಮುಂಬರುವ ದಿನಗಳಲ್ಲಿ ವಿಶ್ವವಿದ್ಯಾಲಯವು ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಲು ಉದ್ದೇಶಿಸಿದೆ. ಅಲ್ಲದೇ ದೇಶದಲ್ಲಿ ಅದು ಅಗ್ರಶ್ರೇಣಿಯ ಮೊದಲ 25 ಸ್ಥಾನಗಳಲ್ಲಿ ಕಾಣಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'₹5 ಸಾವಿರ ಕೋಟಿ ವೆಚ್ಚದ ಕಾಮಗಾರಿ ಪುನರಾರಂಭ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸ್ಥಗಿತಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪುನರಾರಂಭಿಸಲು ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಸಂತನಗರದ ಅಯ್ಯಪ್ಪ ಸ್ವಾಮಿ ದೇವಾಸ್ಥಾನದ ಸಮೀಪ ಒಳಚರಂಡಿ ಕಾಮಗಾರಿ ಹಾಗೂ ಜಯಮಹಲ್ ಪ್ಯಾಲೇಸ್ ರಸ್ತೆಯ ವಿಸ್ತರಣೆ, ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ಪರಿಶೀಲಿಸಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಅಮೃತನಗರ ಯೋಜನೆಯಲ್ಲಿ ₹5 ಸಾವಿರ ಕೋಟಿ ವೆಚ್ಚದ 352 ಪ್ಯಾಕೇಜ್ ಕಾಮಗಾರಿಗಳ ಪೂರ್ಣಗೊಳಿಸಲು ಸೂಚಿಸಲಾಗಿದೆ. ಜನರಿಗೆ ತೊಂದರೆ ಆಗದಂತೆ ಕೆಲಸ ಆರಂಭಿಸಿ ಬೇಗ ಪೂರ್ಣಗೊಳಿಸಿ ಎಂದಿರುವುದಾಗಿ' ತಿಳಿಸಿದರು.

'ಎಸ್‌ಐಟಿ ತನಿಖೆ ನಡೆಯುತ್ತಿದೆ. ಪೂರ್ಣಗೊಂಡ ನಂತರ ಅದರ ವರದಿ ಸಲ್ಲಿಕೆಯಾಗಲಿದೆ. ಅದಕ್ಕಾಗಿ ನಾವು ಸ್ವಲ್ಪ ಪ್ರಮಾಣದಬಿಲ್‌ಗಳನ್ನುಪಾವತಿಮಾಡುತ್ತಿದ್ದೇವೆ. ₹675 ಕೋಟಿ ಸರ್ಕಾರದ ಅನುದಾನ ಬಿಡುಗಡೆ ಮಾಡಲಾಗಿದೆ. ₹432 ಕೋಟಿ ಬಿಬಿಎಂಪಿ ಅನುದಾನ ಕೂಡ ಬಿಡುಗಡೆ ಮಾಡಲಾಗುವುದು. ಉಳಿದ ಬಾಕಿ ಮೊತ್ತವನ್ನು ಪಾವತಿಸಲಾಗುವುದು' ಎಂದರು.

7ರಂದು ಸಭೆ: ಪೊಲೀಸ್ ಇಲಾಖೆ ಹಾಗೂ ಪಾಲಿಕೆ ಸೇರಿ ರಸ್ತೆಗುಂಡಿಗಳನ್ನುಸರಿಪಡಿಸುವಕೆಲಸಮಾಡಲಾಗುವುದು. ಇದೇ ತಿಂಗಳು 7ರಂದು ಹೊರ ವರ್ತುಲ ರಸ್ತೆಗೆ ಭೇಟಿ ನೀಡಿ ಸಂಚಾರ ದಟ್ಟಣೆ ಸಮಸ್ಯೆ ಪರಿಹರಿಸಲು ಚರ್ಚಿಸಲಾಗುವುದು ಎಂದರು.

ಶಾಲಾ ಸಮಯ ಬದಲಾವಣೆ: ಅ.9ಕ್ಕೆ ಸಭೆ

ಬೆಂಗಳೂರು: ಹೈಕೋರ್ಟ್ ನಿರ್ದೇಶ
ನಂತೆ ನಗರ ಜಿಲ್ಲಾ ವ್ಯಾಪ್ತಿಯ ಶಾಲೆಗಳ ವೇಳೆ ಬದಲಾವಣೆ ಕುರಿತು ಚರ್ಚಿಸಲು ಅ.9ರಂದು ಮಧ್ಯಾಹ್ನ 3.30ಕ್ಕೆ ಸಭೆ ಕರೆಯಲಾಗಿದೆ.

ಕೆ.ಆರ್. ವೃತ್ತದ ನೃಪತುಂಗ ರಸ್ತೆಯಲ್ಲಿನ ಸಮಗ್ರ ಶಿಕ್ಷಣ ಕರ್ನಾಟಕದ ಸಭಾಂಗಣದಲ್ಲಿ ಆಯೋಜಿಸಿರುವ ಸಭೆಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಾಲಾ ಆಡಳಿತ ಮಂಡಳಿಗಳ ಮುಖ್ಯಸ್ಥರು, ಪೋಷಕರ ಪ್ರತಿನಿಧಿಗಳು ಭಾಗವಹಿಸಲು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಕೋರಿದ್ದಾರೆ.

ಬಿಬಿಎಂಪಿ ಸಂಘದ ಬೇಡಿಕೆಗಳಿಗೆ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಬೇಡಿಕೆಗಳನ್ನು ಶೀಘ್ರ ಪರಿಹರಿಸುವುದಾಗಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಭರವಸೆ ನೀಡಿದ್ದಾರೆ.

ಸಂಘದ ಪದಾಧಿಕಾರಿಗಳೊಂದಿಗೆ 'ಕುಂದುಕೊರತೆ' ಸಭೆ ನಡೆಸಿದ ತುಷಾರ್ ಗಿರಿನಾಥ್, ಸಿಬ್ಬಂದಿಯ ಸಮಸ್ಯೆಗಳನ್ನು ನಿವಾರಿಸಬೇಕು. ಅವರ ಬೇಡಿಕೆಗಳನ್ನು ಪರಿಹರಿಸಲು ಕ್ರಮಗೊಳ್ಳಬೇಕು ಎಂದು ಆಡಳಿತ ವಿಶೇಷ ಆಯುಕ್ತರಿಗೆ ಸೂಚಿಸಿದರು.

ಸಹ ಕಂದಾಯ ಅಧಿಕಾರಿಗಳ ವಿರುದ್ಧ ಸಕಾಲ ಪ್ರಕ್ರಿಯೆಯಲ್ಲಿ ಇಲಾಖೆ ವಿಚಾರಣೆ ಕೈಬಿಡಬೇಕು. ಎಲ್ಲ ವೃಂದದ ಜೇಷ್ಠತಾ ಪಟ್ಟಿ ಅಂತಿಮಗೊಳಿಸಬೇಕು. ಮುಂಬಡ್ತಿಗಳನ್ನುನೀಡಬೇಕು. ಬಿ, ಸಿ, ಡಿ ವೃಂದದ ಸಿಬ್ಬಂದಿಗೆ ಮುಖ್ಯ ಆಯುಕ್ತರ ಹಂತದಲ್ಲಿಯೇ ವರ್ಗಾವಣೆ, 36 ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಮುಂಬಡ್ತಿ ನೀಡಬೇಕು ಎಂಬ 18 ಬೇಡಿಕೆಗಳನ್ನು ಸಂಘದ ಅಧ್ಯಕ್ಷ ಎ. ಅಮೃತ್ ರಾಜ್ ಅವರು ಸೆ.13ರಂದು ಸಲ್ಲಿಸಿದ್ದರು.

12,000 ಹುದ್ದೆಗಳನ್ನು ಮಂಜೂರು ಮಾಡಬೇಕು ಮತ್ತು 6,000 ಹುದ್ದೆಗಳನ್ನು ಭರ್ತಿ ಮಾಡಬೇಕು. ಎಲ್ಲ ಸಿಬ್ಬಂದಿಗೆ ಆರೋಗ್ಯ ಸೌಲಭ್ಯ ಒದಗಿಸಬೇಕು, ಎರವಲು ಸಿಬ್ಬಂದಿಯನ್ನು ಮಾತೃ ಇಲಾಖೆಗೆ ಹಿಂದಿರುಗಿಸಬೇಕು, ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು. ಈ ಕುರಿತು ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಆಯುಕ್ತರು ಸೂಚಿಸಿದರು.

ಸಲ್ಲಿಕೆಯಾಗದ ಶೌಚಾಲಯ ಸ್ಥಿತಿಗತಿ ವರದಿ • ಸೌಜನ್ಯದ ಭಾಷೆ ಅರ್ಥವಾಗದೇ: ಹೈಕೋರ್ಟ್ ಕಿಡಿ

ರಾಜ್ಯ ಸರ್ಕಾರಕ್ಕೆ ₹5 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಪಿ.ಬಿ. ವರಾಳೆ

ಕೃಷ್ಣ ಎಸ್. ದೀಕ್ಷಿತ್

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಸಾರ್ವಜನಿಕ ಶೌಚಾಲಯಗಳ ಸ್ಥಿತಿಗತಿ ಹಾಗೂ ನಿರ್ವಹಣೆ ವಿಚಾರದಲ್ಲಿ ವಿವರವಾದ ಹೇಳಿಕೆ ಸಲ್ಲಿಸುವಂತೆ ನೀಡಲಾಗಿದ್ದ ಆದೇಶ ಪಾಲನೆ ಮಾಡಿಲ್ಲ ಎಂಬ ಆಕ್ಷೇಪಣೆಯನ್ನು ಗಂಭೀರವಾಗಿ ಪರಿಗಣಿಸಿದ ಹೈಕೋರ್ಟ್, 'ರಾಜ್ಯ ಸರ್ಕಾರಕ್ಕೆ ಸೌಜನ್ಯದ ಭಾಷೆ ಅರ್ಥವಾಗುವುದಿಲ್ಲ' ಎಂದು ಕಿಡಿ ಕಾರಿದ್ದು, ₹ 5 ಲಕ್ಷ ದಂಡ ವಿಧಿಸಿದೆ.

ಈ ಸಂಬಂಧ 'ಲೆಟ್ಸ್ ಕಿಟ್ ಫೌಂಡೇಷನ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ, 'ಸರ್ಕಾರಕ್ಕೆ ದಂಡದೇ ಭಾಷೆಯೊಂದೇ ಅರ್ಥವಾಗುತ್ತದೆ' ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಪುತ್ತಿಗೆ ರಮೇಶ್, 'ನಗರದಲ್ಲಿನ ಸಾರ್ವಜನಿಕ ಶೌಚಾಲಯಗಳ ಸ್ಥಿತಿಗತಿ ಹಾಗೂ ನಿರ್ವಹಣೆ ಕುರಿತ ಪ್ರಕರಣ ಮೂರು ವರ್ಷಗಳಿಂದ ನಡೆಯುತ್ತಿದೆ. ಆದರೆ, ರಾಜ್ಯ ಸರ್ಕಾರ ಈ ಬಗ್ಗೆ ಗಾಢ ಮೌನ ವಹಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮೂರು ವಾರಗಳಲ್ಲಿ ವಿವರವಾದ ವರದಿ ಸಲ್ಲಿಸಿ ಎಂದು 2023ರ ಆಗಸ್ಟ್ 8ರಂದು ಹೈಕೋರ್ಟ್ ನೀಡಿದ್ದ ನಿರ್ದೇಶನಕ್ಕೆ ಈತನಕ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಒಂದೇ ಒಂದು ಹೇಳಿಕೆಯನ್ನಾಗಲೀ, ವರದಿಯನ್ನಾಗಲೀ, ಪ್ರಮಾಣ ಪತ್ರವನ್ನಾಗಲೀ ಅಥವಾ ಕನಿಷ್ಠ ಆಕ್ಷೇಪಣೆಯನ್ನೂ ಸಲ್ಲಿಸಿಲ್ಲ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, 'ಸರ್ಕಾರ ₹5 ಲಕ್ಷದ ಮೊತ್ತವನ್ನು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ಖಾತೆಗೆ ಎರಡು ವಾರಗಳಲ್ಲಿ ಜಮಾ ಮಾಡಬೇಕು. ಮುಂದಿನ ವಿಚಾರಣೆಗೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ನ್ಯಾಯಾಲಯಕ್ಕೆ ಖುದ್ದು ಹಾಜರಾಗಬೇಕು' ಎಂದು ನಿರ್ದೇಶಿಸಿ ವಿಚಾರಣೆಯನ್ನು ನವೆಂಬರ್ 2ಕ್ಕೆ ಮುಂದೂಡಿತು.

ಮನವಿ ತಿರಸ್ಕೃತ: ದಂಡದ ಮೊತ್ತವನ್ನು ಕಡಿಮೆ ಮಾಡುವಂತೆ ಸರ್ಕಾರದ ಪರ ವಕೀಲರು ಮನವಿ ಮಾಡಿಕೊಂಡರು. ಆದರೆ, ಇದನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಸಾರಾಸಗಟಾಗಿ ತಿರಸ್ಕರಿಸಿದರಲ್ಲದೆ, 'ನನ್ನ ಪ್ರಕಾರ ಸರ್ಕಾರದ ಈ ನಡೆಗೆ ₹ 25 ಲಕ್ಷ ದಂಡ ವಿಧಿಸಬೇಕು. ಆದರೆ, ಮುಖ್ಯ ನ್ಯಾಯಮೂರ್ತಿಗಳು ಕರುಣೆ ತೋರಿ ₹ 5 ಲಕ್ಷ ದಂಡ ವಿಧಿಸಿದ್ದಾರೆ. ಇದನ್ನು ಹೇಳಲು ನಮಗೆ ಬೇಸರವಾಗುತ್ತದೆ. ಆದರೆ, ಸರ್ಕಾರ ಮತ್ತು ಅಧಿಕಾರಿಗಳಿಗೆ ಇಂತಹದ್ದೇ ಭಾಷೆ ಅರ್ಥವಾಗುತ್ತದೆ' ಎಂದರು.

'ಶರಣರ ಪೋಕ್ಸೊ ಪ್ರಕರಣ ದಿಕ್ಕು ತಪ್ಪದಿರಲಿ'

ಬೆಂಗಳೂರು: 'ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರ ವಿರುದ್ಧದ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಪ್ರಕರಣದಲ್ಲಿ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ.ಬಸವರಾಜನ್ ಮತ್ತು ಅವರ ಪತ್ನಿ ಸೌಭಾಗ್ಯ ಬಸವರಾಜನ್ ವಿರುದ್ಧ ಪ್ರತಿ ದೂರು ದಾಖಲಿಸಿರುವುದರಿಂದ ಶರಣರ ವಿರುದ್ಧದ ಪೋಕ್ಸೊ ಪ್ರಕರಣದ ವಿಚಾರಣೆ ದಿಕ್ಕು ತಪ್ಪಲಿದೆಯಲ್ಲವೇ' ಎಂಬ ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, 'ಶರಣರ ವಿರುದ್ಧದ ಪ್ರಕರಣ ಸೆಷನ್ಸ್ ಕೋರ್ಟ್‌ನಲ್ಲಿ ವಿಚಾರಣೆ ಹಂತ ತಲುಪಿದ್ದು ಸತ್ಯ ಹೊರಬರಲಿ ಬಿಡಿ' ಎಂದು ಸರ್ಕಾರದ ಕಿವಿ ಹಿಂಡಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದುಪಡಿಸುವಂತೆ ಕೋರಿ ಬಸವರಾಜನ್ ಮತ್ತು ಸೌಭಾಗ್ಯ ಬಸವರಾಜನ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಸವರಾಜನ್ ಮತ್ತು ಸೌಭಾಗ್ಯ ಪರ ಹಿರಿಯ ವಕೀಲ ಹಸ್ಮತ್ ಪಾಷ ವಾದ ಮಂಡಿಸಿ, 'ಬಸವಪ್ರಭು ಸ್ವಾಮೀಜಿ ಸಲ್ಲಿಸಿರುವ ಈ ದೂರಿನಲ್ಲಿ ಯಾವುದೇ ಹುರುಳಿಲ್ಲ. ಶಿವಮೂರ್ತಿ ಶರಣರ ವಿರುದ್ಧ ದಾಖಲಾಗಿರುವ ಬಾಲಕಿಯರ ಮೇಲಿನ ಅತ್ಯಾಚಾರದ ಆಪಾದನೆಗಳಿಗೆ ರಕ್ಷಣೆ ಪಡೆಯಲು ಇಂತಹ ಪ್ರತಿ ದೂರು ದಾಖಲಿಸಲಾಗಿದೆ' ಎಂದು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟರು.

ಈ ಕುರಿತು ರಾಜ್ಯ ಸರ್ಕಾರದ ಪರ ವಕೀಲರನ್ನು ಪ್ರಶ್ನಿಸಿದ ನ್ಯಾಯಪೀಠ, 'ಪ್ರತಿ ದೂರನ್ನು ಗಮನಿಸಿದರೆ ಈ ಪ್ರಕರಣದಲ್ಲಿನ ಸಾಕ್ಷಿಗಳ ರಕ್ಷಣೆ ಹೇಗೆ ತಾನೆ ಸಾಧ್ಯ' ಎಂದು ಪ್ರಶ್ನಿಸಿತು. ಪ್ರಕರಣದ ಕುರಿತಂತೆ ಜೆಎಂಎಫ್‌ಸಿ ಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣಾ ಪ್ರಕ್ರಿಯೆಗೆ ಈ ಹಿಂದೆಯೇ ತಡೆ ಆದೇಶ ನೀಡಿದೆ. ವಿಚಾರಣೆಯನ್ನು ಇದೇ 9ಕ್ಕೆ ಮುಂದೂಡಿತು. 'ಮುಂದಿನ ದಿನಾಂಕದಂದು ಯಾವುದೇ ಕಾರಣಕ್ಕೂ ವಿಚಾರಣೆ ವಿಸ್ತರಣೆ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ' ಎಂದು ಪ್ರತಿವಾದಿಗಳಿಗೆ ಎಚ್ಚರಿಕೆ ನೀಡಿತು.

ಎಕ್ಸ್ ಕಾರ್ಪ್ ಕಂಪನಿ ಮೇಲ್ಮನವಿ ವಿಚಾರಣೆ 9ಕ್ಕೆ

ಬೆಂಗಳೂರು: 'ಕೆಲವು ವೈಯಕ್ತಿಕ ಟ್ವಿಟರ್ ಖಾತೆಗಳನ್ನು ನಿರ್ಬಂಧಿಸಲು ಎಕ್ಸ್ ಕಾರ್ಪ್ (ಹಿಂದಿನ ಟ್ವಿಟರ್) ಕಂಪನಿಗೆ ಸೂಚಿಸಿದ ಆದೇಶವನ್ನು ಮರು ಪರಿಶೀಲಿಸಲು ಸಾಧ್ಯವಿಲ್ಲ' ಎಂದು ಕೇಂದ್ರ ಸರ್ಕಾರ, ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

ಈ ಸಂಬಂಧ ಎಕ್ಸ್ ಕಾರ್ಪ್ (ಟ್ವಿಟರ್) ಸಲ್ಲಿಸಿರುವ ಮೇಲ್ಮನವಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ಮತ್ತು ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯ ಪರ ವಕೀಲರು, 'ಆದೇಶ ಮರು ಪರಿಶೀಲಿಸಲು ಯಾವುದೇ ಸಕಾರಣ ಇಲ್ಲ. ಹೀಗಾಗಿ, ನಿರ್ಬಂಧದ ಆದೇಶವನ್ನು ಮರು ಪರಿಶೀಲಿಸಲು ಸಾಧ್ಯವಾಗುವುದಿಲ್ಲ' ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ಮೇಲ್ಮನವಿಯನ್ನು ನವೆಂಬರ್ 9ಕ್ಕೆ ವಿಚಾರಣೆಗೆ ನಿಗದಿಪಡಿಸಿತು.

ಕೆಲವು ವೈಯಕ್ತಿಕ ಖಾತೆಗಳ ಮೇಲೆ ನಿರ್ಬಂಧ ವಿಧಿಸಿ ಕೇಂದ್ರ ಸರ್ಕಾರ 2021ರ ಫೆಬ್ರುವರಿ ಮತ್ತು 2022ರ ಅವಧಿಯಲ್ಲಿ ಮಾಡಿದ್ದ ಆದೇಶಗಳನ್ನು ಪ್ರಶ್ನಿಸಿದ್ದ ಅರ್ಜಿ ವಜಾಗೊಳಿಸಿದ್ದ ಏಕಸದಸ್ಯ ನ್ಯಾಯಪೀಠದ ತೀರ್ಪು ಪ್ರಶ್ನಿಸಿ ಎಕ್ಸ್ ಕಾರ್ಪ್ ಈ ಮೇಲ್ಮನವಿ ಸಲ್ಲಿಸಿದೆ.

ಕಂಬಳ ನಿರ್ವಹಣೆಗೆ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೆಂಬರ್ ಅಂತ್ಯದಲ್ಲಿ ನಗರದಲ್ಲಿ ನಡೆಯಲಿರುವ ಕಂಬಳವನ್ನು ಯಶಸ್ವಿಯಾಗಿ ನಿರ್ವಹಿಸಲು ಸಮಿತಿಯೊಂದನ್ನು ರಚಿಸಲಾಗಿದೆ.

ಸಮಿತಿ ರಚನೆ ಜೊತೆಗೆ, ಕಾರ್ಯಕ್ರಮದ ರೂಪುರೇಷೆ, ಸಿದ್ಧತೆಗಳ ಕುರಿತು ಪೂರ್ವಭಾವಿ ಸಭೆಯಲ್ಲಿ ಚರ್ಚಿಸ ಲಾಯಿತು. ಬೆಂಗಳೂರಿನಲ್ಲಿ ನೆಲೆಸಿರುವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸಂಘ–ಸಂಸ್ಥೆಗಳು ಸಭೆಯಲ್ಲಿ ಭಾಗವಹಿಸಿದ್ದವು.

'ಕಂಬಳ'ದ ನಿರ್ವಹಣೆಗೆ 2 ಸಾವಿರ ಸ್ವಯಂ ಸೇವಕರನ್ನು ಸಜ್ಜುಗೊಳಿಸಬೇಕು ಎಂಬ ಸಲಹೆ ಸಭೆಯಲ್ಲಿ ಕೇಳಿಬಂತು. ಜತೆಗೆ ಆಹಾರ ಮೇಳ, ಸಾಂಸ್ಕೃತಿಕ ಮೇಳಗಳನ್ನು ಆಯೋಜಿಸುವ ಕುರಿತು ಚರ್ಚಿಸಲಾಯಿತು.

'130 ಕೋಣಗಳು ಭಾಗವಹಿಸಲಿದ್ದು, ಕಂಬಳದ ಕೋಣಗಳನ್ನು ಓಡಿಸುವ ಕೆರೆ ನಿರ್ಮಿಸುವ ತಾಂತ್ರಿಕತೆ ಬಗ್ಗೆ ತಜ್ಞರು ಸಲಹೆ ಸೂಚನೆಗಳನ್ನು ನೀಡಿದರು' ಎಂದು ಸಭೆಯಲ್ಲಿದ್ದ ಗುರುಕಿರಣ್ ಮತ್ತು ಗುಣರಂಜನ ಶೆಟ್ಟಿ ತಿಳಿಸಿದ್ದಾರೆ. ತುಳುಕೂಟದ ಅಧ್ಯಕ್ಷ ಸುಂದರ ರಾಜ್ ರೈ, ದಕ್ಷಿಣ ಕನ್ನಡಿಗರ ಸಂಘದ ಅಧ್ಯಕ್ಷ ಜಯಂತ ರಾವ್ ಇದ್ದರು.

ಸ್ನಾತಕೋತ್ತರ ಕೋರ್ಸ್‌ಗಳ ಅರ್ಜಿ: ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು ಮತ್ತು ಸಂಯೋಜಿತ ಕಾಲೇಜುಗಳ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಾತಿಯ ಕೊನೆಯ ದಿನಾಂಕವನ್ನು ಶುಲ್ಕರಹಿತವಾಗಿ ಇದೇ 7ರವರೆಗೆ ನಿಗದಿಪಡಿಸಲಾಗಿದೆ. ₹200 ದಂಡ ಶುಲ್ಕದೊಂದಿಗೆ ಇದೇ 17ರವರೆಗೆ ವಿಸ್ತರಿಸಲಾಗಿದೆ ಎಂದು ಕುಲಸಚಿವರು ಪ್ರಕಟಣೆ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸುಳ್ಳು ಜಾತಿ ಪ್ರಮಾಣಪತ್ರ: ಸುಳ್ಳು ಮಾಹಿತಿ– ಎಂ.ಪಿ. ದಾರಕೇಶ್ವರಯ್ಯ

ಬೆಂಗಳೂರು: 'ಬೇಡ ಜಂಗಮ ಜಾತಿಯು ವೀರಶೈವ ಲಿಂಗಾಯತ ಪಂಥದಲ್ಲಿಯೇ ಬರುವ ಜಾತಿ ಆಗಿದೆಯೆಂದು ವಿವಿಧ ವರದಿಗಳು ಮತ್ತು ಹೈಕೋರ್ಟ್‌ನ ತೀರ್ಪು ಉಲ್ಲಂಘಿಸಿ ಬೆಂಗಳೂರು ನಗರ ಜಿಲ್ಲಾಧಿಕಾರಿ ನನ್ನ ಮತ್ತು ನನ್ನ ಸಹೋದರರ ಜಾತಿ ಪ್ರಮಾಣಪತ್ರಗಳನ್ನು ರದ್ದುಪಡಿಸಿದ್ದಾರೆ' ಎಂದು ಎಂ.ಪಿ. ದಾರಕೇಶ್ವರಯ್ಯ ಹೇಳಿದ್ದಾರೆ.

'ಜಿಲ್ಲಾಧಿಕಾರಿಯವರ ಆದೇಶಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿದ್ದು, ಮುಂದಿನ ವಿಚಾರಣೆವರೆಗೆ ಯಾವುದೇ ಪ್ರತಿಕ್ರಿಯೆ ನೀಡಬಾರದೆಂದು ಸ್ಪಷ್ಟವಾಗಿ ಹೇಳಿದೆ. ಆದರೂ, ಸುಳ್ಳು ಜಾತಿ ಪ್ರಮಾಣಪತ್ರ ಪಡೆದಿರುವವರ ಮೇಲೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಎಡಿಜಿಪಿ ತೆಗೆದುಕೊಂಡಿರುವ ಕ್ರಮದ ಕುರಿತು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರ ಮೂಲಕ ಜಿಲ್ಲಾಧಿಕಾರಿ ಮಾಹಿತಿ ಕೇಳಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

'ಕುಲಶಾಸ್ತ್ರ ಅಧ್ಯಯನ, ಕೆ.ಎಸ್. ಸಿಂಗ್ ವರದಿ, ಸೂರ್ಯನಾಥ ಕಾಮತ್ ವರದಿ ಪ್ರಕಾರ ಬೇಡ ಜಂಗಮ ಜಾತಿ ವೀರಶೈವ ಲಿಂಗಾಯತ ಪಂಥದಲ್ಲಿಯೇ ಬರುವ ಜಾತಿ ಆಗಿದೆಯೆಂದು 2022ರ ಏಪ್ರಿಲ್ 20ರಂದು ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ವರದಿ ನೀಡಲಾಗಿದೆ' ಎಂದೂ ತಿಳಿಸಿದ್ದಾರೆ.

ಉದ್ಯೋಗಕ್ಕೆ ನೆರವಾಗುವ ಕೌಶಲ ತರಬೇತಿ: ಶರಣಪ್ರಕಾಶ ಪಾಟೀಲ

ಪೀಣ್ಯ ದಾಸರಹಳ್ಳಿ: ಸಾಂಪ್ರದಾಯಿಕ ಶಿಕ್ಷಣ ಜತೆಗೆ ಕೌಶಲ ತರಬೇತಿ ಪಡೆದರೆ ಉತ್ತಮ ಉದ್ಯೋಗ ಪಡೆಯಲು ಸಹಕಾರಿಯಾಗುತ್ತದೆ ಎಂದು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಶರಣಪ್ರಕಾಶ ಪಾಟೀಲ ಹೇಳಿದರು.

ಮಂಜುನಾಥ ನಗರದಲ್ಲಿ ಬುಧವಾರ ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ, ಜಪಾನ್‌ನ ಕಿಮುರಾ ಫೌಂಡ್ರಿ ಕಂಪನಿ ಸಹಯೋಗದಲ್ಲಿ ಆರಂಭಿಸಿರುವ ಕಾಸ್ಟಿಂಗ್ ಟೆಕ್ನಾಲಜಿ (ಅಚ್ಚು ಎರಕ ತಂತ್ರಜ್ಞಾನ) ಕೋರ್ಸ್‌ನ ಪ್ರಯೋಗಾಲಯ ಉದ್ಘಾಟಿಸಿ ಅವರು ಮಾತನಾಡಿದರು.

'ಅರೆಕಾಲಿಕ ಹಾಗೂ ಪೂರ್ಣ ಪ್ರಮಾಣದ ಕೌಶಲಾಭಿವೃದ್ಧಿ ತರಬೇತಿ ಕೋರ್ಸ್‌ಗಳಿದ್ದು, ವಿಶ್ವದ ಪ್ರಮುಖ ಕಂಪನಿಗಳು ನೆರವಾಗುತ್ತಿವೆ. ಎಸ್‌ಎಸ್‌ಎಲ್‌ಸಿಯಿಂದ ಪದವಿವರೆಗಿನ ಶಿಕ್ಷಣ ಪಡೆದವರಿಗೆ ಆಯಾಯ ವಿಭಾಗಗಳಲ್ಲಿ ಕೌಶಲ ತರಬೇತಿ ನೀಡಲಾಗುತ್ತಿದೆ' ಎಂದು ಹೇಳಿದರು.

ದಾಸರಹಳ್ಳಿ ಶಾಸಕ ಎಸ್. ಮುನಿರಾಜು, ಏಳು ಎಕರೆಯಲ್ಲಿ ಸಂಸ್ಥೆ ಇದೆ. ವಿದ್ಯಾರ್ಥಿಗಳು ತರಬೇತಿ ಪಡೆದು ಒಳ್ಳೆಯ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ಕಿಮುರಾ ಫೌಂಡ್ರಿ ಅಧ್ಯಕ್ಷ ಕಜುತೋಶಿ ಕಿಮುರಾ, ಉತ್ತಮ ಅಭ್ಯಾಸಗಳು ಮತ್ತು ಕಿಮುರಾ ಫೌಂಡ್ರಿಯ ಜ್ಞಾನವನ್ನು ಭಾರತೀಯ ತರಬೇತುದಾರ ಜತೆ ಹಂಚಿಕೊಳ್ಳಲು ಕೆಜಿಟಿಟಿಐ ಕಾಸ್ಟಿಂಗ್ ತರಬೇತಿ ಕೋರ್ಸ್ ಆರಂಭಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜೆಐಸಿಎ ಭಾರತದ ಮುಖ್ಯ ಪ್ರತಿನಿಧಿ ಸೈಟೊ ಮಿಸುನೋರಿ, ಪ್ರಧಾನ ವ್ಯವಸ್ಥಾಪಕ ಮಮೋರು ಮಿಸೋಗೌಚಿ, ಕೌಶಲ್ಯಾಭಿವೃದ್ಧಿ ಇಲಾಖೆ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಉಮಾ ಮಹಾದೇವನ್, ಐಟಿಐ ಆಯುಕ್ತೆ ಡಾ.ರಾಗಪ್ರಿಯಾ, ಕೆಜಿಎಂಎಸ್ ಜಂಟಿ ಕಾರ್ಯದರ್ಶಿ ಬಿ.ಎಸ್. ರಘುಪತಿ, ಸಂಸ್ಥೆಯ ನಿರ್ದೇಶಕ ಕೆ.ಕುಮಾರ್ ಉಪಸ್ಥಿತರಿದ್ದರು.

ಎಲೆಕ್ಟ್ರಿಕ್ ವೈರ್ ಕಳ್ಳತನ: ಸೆರೆ

ಪ್ರಜಾವಾಣಿ ವಾರ್ತೆ

ಮಾಯಾ ಕಣ್ಣನ್

ಬೆಂಗಳೂರು: ಹೊಸದಾಗಿ ನಿರ್ಮಿಸುತ್ತಿದ್ದ ಮನೆಗೆ ಅಳವಡಿಸಲು ತಂದಿಟ್ಟಿದ್ದ ಎಲೆಕ್ಟ್ರಿಕ್ ವೈರ್ ಬಂಡಲ್‌ಗಳನ್ನು ಕಳ್ಳತನ ಮಾಡಿದ್ದ ಆರೋಪಿಯನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

ರಾಮನಗರ ಜಿಲ್ಲೆಯ ಬಿಡದಿ ಸಮೀಪದ ಬೈರಮಂಗಲ ಕ್ರಾಸ್‌ನಲ್ಲಿ ನೆಲೆಸಿದ್ದ ಮಾಯಾಕಣ್ಣನ್ ಬಂಧಿತ ಆರೋಪಿ. ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಪಪ್ಪಿರೆಡ್ಡಿಪತ್ತಿ ತಾಲ್ಲೂಕಿನ ಅಸ್ತಗಿರಿಯೂರ್ ಗ್ರಾಮದ ಆರೋಪಿ, ಬಿಡದಿ ಬಳಿ ಗುಜರಿ ಅಂಗಡಿ ನಡೆಸುತ್ತಿದ್ದ.

'ಜ್ಞಾನಭಾರತಿ ಲೇಔಟ್‌ನ ಲಕ್ಷ್ಮೀಶ್ ಎಂಬುವರು 7ನೇ ಕ್ರಾಸ್‌ನಲ್ಲಿ ಹೊಸದಾಗಿ ಮನೆ ನಿರ್ಮಿಸುತ್ತಿದ್ದರು. ಈ ಮನೆಯಲ್ಲಿ ವಿವಿಧ ಬಣ್ಣದ ವೈರ್‌ಗಳನ್ನು ತಂದಿಟ್ಟಿದ್ದರು. ಅದನ್ನು ಕಳ್ಳತನ ಮಾಡಿದ್ದ. ಆರೋಪಿಯಿಂದ ₹6 ಲಕ್ಷ ಮೌಲ್ಯದ 93 ಬಂಡಲ್ ಎಲೆಕ್ಟ್ರಿಕ್ ವೈರ್ ಹಾಗೂ 1 ದ್ವಿಚಕ್ರ ವಾಹನ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ರಸ್ತೆ ವಿಭಜಕಕ್ಕೆ ಬಿಎಂಟಿಸಿ ಬಸ್ ಡಿಕ್ಕಿ: ಕೃಷ್ಣರಾಜ ಮಾರುಕಟ್ಟೆಯ ಮೇಲ್ಸೇತುವೆಯಲ್ಲಿ ಬ್ರೇಕ್ ವಿಫಲಗೊಂಡು ರಸ್ತೆ ವಿಭಜಕಕ್ಕೆ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದಿದ್ದು ಚಾಲಕ, ನಿರ್ವಾಹಕ ಅಪಾಯದಿಂದ ಪಾರಾಗಿದ್ದಾರೆ. ಬಸ್‌ನಲ್ಲಿ ಪ್ರಯಾಣಿಕರು ಇರಲಿಲ್ಲ.

ಬೆಳಿಗ್ಗೆ 7.30ರ ಸುಮಾರಿಗೆ ಈ ಘಟನೆ ನಡೆದಿದೆ. ಬಸ್ ಡಿಕ್ಕಿಯಿಂದ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ಸ್ಥಳಕ್ಕೆ ಬಂದ ಚಿಕ್ಕಪೇಟೆ ಸಂಚಾರ ಪೊಲೀಸರು ಬಸ್ ತೆರವುಗೊಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಿದರು.

ಉದ್ಯಮಿಗಳ ಮನೆ ಮೇಲೆ ಐ.ಟಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆ ವಂಚನೆ ಆರೋಪದ ಮೇಲೆ ನಗರದ ರಿಯಲ್ ಎಸ್ಟೇಟ್ ಉದ್ಯಮಿಗಳು, ಚಿನ್ನಾಭರಣ ವ್ಯಾಪಾರಿಗಳು, ಟೈರ್ ವ್ಯಾಪಾರಿ, ವೈದ್ಯರು ಸೇರಿದಂತೆ ಹಲವರ ಮನೆ, ಕಚೇರಿಗಳ ಮೇಲೆ ಬುಧವಾರ ದಾಳಿ ಮಾಡಿರುವ ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು, ಶೋಧ ನಡೆಸಿದ್ದಾರೆ.

ವಿಜಯನಗರ, ಬಿ.ಟಿ.ಎಂ. ಬಡಾವಣೆ, ಹುಳಿಮಾವು, ಸದಾಶಿವನಗರ, ಶಾಂತಿನಗರ, ಜೆ.ಸಿ. ರಸ್ತೆ ಸೇರಿದಂತೆ ನಗರದ ವಿವಿಧೆಡೆ 15ಕ್ಕೂ ಹೆಚ್ಚು ಸ್ಥಳಗಳಲ್ಲಿ ಐ.ಟಿ ಅಧಿಕಾರಿಗಳು ಬುಧವಾರ ನಸುಕಿನಿಂದ ತಡ ರಾತ್ರಿಯವರೆಗೂ ಶೋಧ ನಡೆಸಿದರು. ದೆಹಲಿ, ಚೆನ್ನೈ ಸೇರಿದಂತೆ ಹೊರ ರಾಜ್ಯಗಳಿಂದ ಬಂದಿದ್ದ ನೂರಾರು ಮಂದಿ ಅಧಿಕಾರಿಗಳು ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ನಗರದ ಪ್ರಮುಖ ರಿಯಲ್ ಎಸ್ಟೇಟ್ ಕಂಪನಿಯೊಂದಕ್ಕೆ ಸೇರಿದ ಹಲವು ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ಸದಾಶಿವನಗರದಲ್ಲಿರುವ ಇಬ್ಬರು ಚಿನ್ನಾಭರಣ ವ್ಯಾಪಾರಿಗಳ ಮನೆಗಳ ಮೇಲೆ ದಾಳಿ ಮಾಡಿದ್ದ ಐ.ಟಿ ಅಧಿಕಾರಿಗಳು, ಇಡೀ ದಿನ ಶೋಧ ನಡೆಸಿದರು. ಅರಮನೆ ರಸ್ತೆಯಲ್ಲಿರುವ ಒಂದು ಚಿನ್ನಾಭರಣ ಮಳಿಗೆ ಹಾಗೂ ಮತ್ತೊಬ್ಬ ಉದ್ಯಮಿಗೆ ಸೇರಿದ ಚಿನ್ನಾಭರಣ ಮಳಿಗೆಗಳ ಸಮೂಹದ ಮೇಲೂ ದಾಳಿ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಿಜಯನಗರದಲ್ಲಿ ಕ್ಲಿನಿಕ್ ಹೊಂದಿರುವ ದಂತ ವೈದ್ಯೆಯೊಬ್ಬರ ಮನೆಯಲ್ಲೂ ಶೋಧ ನಡೆಸಲಾಗಿದೆ. ಮಧ್ಯಾಹ್ನದ ವೇಳೆಗೆ ವೈದ್ಯೆಯನ್ನು ಕಾರಿನಲ್ಲಿ ಕರೆದೊಯ್ದ ತನಿಖಾ ತಂಡವು, ತೆರಿಗೆ ವಂಚನೆಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿತು. ಟೈರು ವ್ಯಾಪಾರದ ಜತೆಯಲ್ಲೇ ಲೇವಾದೇವಿ ವ್ಯವಹಾರ ನಡೆಸುತ್ತಿರುವ ಉದ್ಯಮಿಯೊಬ್ಬರು ಜೆ.ಸಿ. ರಸ್ತೆಯಲ್ಲಿ ಹೊಂದಿರುವ ಮಳಿಗೆಯಲ್ಲೂ ಶೋಧ ನಡೆದಿದೆ. ಕೋಳಿ ಸಾಕಾಣಿಕೆ ಉದ್ದಿಮೆ ನಡೆಸುತ್ತಿರುವ ವ್ಯಕ್ತಿಯೊಬ್ಬರ ಶಾಂತಿನಗರದ ಮನೆಯಲ್ಲೂ ಶೋಧ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.

ಗ್ರಾಹಕನಿಗೆ ಸಂತೈಸಿದ ಕೆಜಿಎಫ್ ಬಾಬು

ಅರಮನೆ ಗುಟ್ಟಹಳ್ಳಿ ರಸ್ತೆಯಲ್ಲಿರುವ ಚಿನ್ನಾಭರಣ ಮಳಿಗೆಯಲ್ಲಿ ಐ.ಟಿ ಅಧಿಕಾರಿಗಳು ಶೋಧ ನಡೆಸುತ್ತಿದ್ದ ಸುದ್ದಿ ತಿಳಿದ ಗ್ರಾಹಕರೊಬ್ಬರು ದೌಡಾಯಿಸಿ ಬಂದು ತಾವು ಮುಂಗಡ ಕಾಯ್ದಿರಿಸಿದ್ದ ಒಡವೆಗಳನ್ನು ಕೊಡುವಂತೆ ದುಂಬಾಲು ಬಿದ್ದರು.

ದೆಹಲಿಯ ಆ ವ್ಯಕ್ತಿ ಮುಂದಿನ ತಿಂಗಳು ನಡೆಯುವ ಮದುವೆ ಸಮಾರಂಭಕ್ಕಾಗಿ ₹ 46 ಲಕ್ಷ ಮೌಲ್ಯದ ಒಡವೆಗಳನ್ನು ಮುಂಗಡವಾಗಿ ಕಾಯ್ದಿರಿಸಿದ್ದರು. ಶೋಧದ ವಿಷಯ ತಿಳಿದು ಕಂಗಾಲಾಗಿ ಅಂಗಡಿ ಬಳಿ ಬಂದಿದ್ದರು.

ಚಿನ್ನಾಭರಣ ಮಳಿಗೆ ಮಾಲೀಕರನ್ನು ಭೇಟಿಯಾಗಲು ಅಲ್ಲಿಗೆ ಬಂದಿದ್ದ ಉದ್ಯಮಿ ಯೂಸುಫ್ ಷರೀಫ್ (ಕೆಜಿಎಫ್ ಬಾಬು), 'ಅಂಗಡಿ ಮಾಲೀಕರು ನನ್ನ ಸ್ನೇಹಿತರು. ನಿಮಗೆ ಒಡವೆ ಒದಗಿಸುತ್ತಾರೆ. ಧೈರ್ಯದಿಂದ ಇರಿ' ಎಂದು ಸಮಾಧಾನಪಡಿಸಿ ಕಳುಹಿಸಿದರು.

'ಹಾಮಾನಾ ಕನ್ನಡ ಜಾಗೃತಿ ಪುಸ್ತಕ ಬಹುಮಾನ'ಕ್ಕೆ ಕೃತಿಗಳ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಗೆಳೆಯರ ಬಳಗವು 'ಹಾಮಾನಾ ಕನ್ನಡ ಜಾಗೃತಿ ಪುಸ್ತಕ ಬಹುಮಾನ'ಕ್ಕೆ ಪುಸ್ತಕಗಳನ್ನು ಆಹ್ವಾನಿಸಿದೆ.

ಹಾ.ಮಾ. ನಾಯಕರ ನೆನಪಿನಲ್ಲಿ ಈ ಬಹುಮಾನ ನೀಡಲಾಗುತ್ತಿದೆ. ಕನ್ನಡ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ರಚಿಸಿರುವ ಪುಸ್ತಕಗಳನ್ನು ಪರಿಗಣಿಸಲಾಗುತ್ತದೆ. ಆಯ್ಕೆಯಾದ ಒಂದು ಪುಸ್ತಕಕ್ಕೆ ₹ 5 ಸಾವಿರ ನಗದು ಹಾಗೂ ಇನ್ನೊಂದು ಪುಸ್ತಕಕ್ಕೆ ಸಮಾಧಾನಕರ ಬಹುಮಾನವಾಗಿ ₹ 2 ಸಾವಿರ ನಗದು ನೀಡಲಾಗುತ್ತದೆ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

ಆಸಕ್ತರು ಈ ಬಹುಮಾನಕ್ಕೆ ಪುಸ್ತಕದ ಎರಡು ಪ್ರತಿಗಳನ್ನು ನ.1 ರೊಳಗೆ ರಾ.ನಂ. ಚಂದ್ರಶೇಖರ, ಸಂಚಾಲಕ, ಕನ್ನಡ ಗೆಳೆಯರ ಬಳಗ, #1 'ಶ್ರೀನಿಲಯ', ಮಾರಮ್ಮ ದೇವಸ್ಥಾನದ ರಸ್ತೆ, ಕತ್ರಗುಪ್ಪೆ, ಬೆಂಗಳೂರು-560 085 ಈ ವಿಳಾಸಕ್ಕೆ ಕಳುಹಿಸಬೇಕು. ನವೆಂಬರ್ ಕೊನೆಯ ವಾರ ನಡೆಯುವ ಬಳಗದ ವಾರ್ಷಿಕ ಪ್ರಶಸ್ತಿ ಹಾಗೂ 'ಚಿಮೂ ಕನ್ನಡ ಸಂಸ್ಕೃತಿ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಈ ಬಹುಮಾನವನ್ನು ವಿತರಿಸಲಾಗುವುದು ಎಂದು ಹೇಳಿದ್ದಾರೆ.

ನಿಯಮ ಉಲ್ಲಂಘಿಸಿ ಬ್ಯಾಸ್ಕೆಟ್‌ಬಾಲ್ ಸಂಸ್ಥೆಗೆ ಭೂಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನು ಇಲಾಖೆ ಅಭಿಪ್ರಾಯಕ್ಕೆ ವಿರುದ್ಧವಾಗಿ ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಗೆ ದೇವನಹಳ್ಳಿ ಬಳಿ ಐದು ಎಕರೆ ಸರ್ಕಾರಿ ಭೂಮಿಯನ್ನು ಸರ್ಕಾರ ಮಂಜೂರು ಮಾಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು ಗೌರವ ಕಾರ್ಯದರ್ಶಿ ಹಾಗೂ ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ ಅಧ್ಯಕ್ಷರಾಗಿರುವ ಸಂಘಕ್ಕೆ ದೇವನಹಳ್ಳಿ ತಾಲ್ಲೂಕು ಗೊಬ್ಬರಗುಂಟೆ ಬಳಿ ಐದು ಎಕರೆ ಭೂಮಿ ನೀಡಲು ಆ.19ರಂದು ನಡೆದಿದ್ದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

'ಕರ್ನಾಟಕ ಭೂ ಮಂಜೂರಾತಿ ನಿಯಮಗಳು–1969 ಹಾಗೂ ಕೋರ್ಟ್‌ಗಳ ನಿರ್ದೇಶನದಂತೆ ಸಾಗುವಳಿ ಮಾಡದ ಬಿ-ಖರಾಬು ಭೂಮಿಯನ್ನು ಸಹಕಾರ ಸಂಘಗಳು, ಧಾರ್ಮಿಕ ಟ್ರಸ್ಟ್‌ಗಳು, ಶಿಕ್ಷಣ ಸಂಸ್ಥೆಗಳು ಮತ್ತು ಇತರ ಸಾಮಾಜಿಕ ಕಲ್ಯಾಣ ಚಟುವಟಿಕೆಗಳಿಗೆ ಮಾತ್ರ ನೀಡಬಹುದು. ಇತರೆ ಉದ್ದೇಶಗಳಿಗಾಗಿ ಖಾಸಗಿ ಸಂಸ್ಥೆಗಳಿಗೆ ಸರ್ಕಾರಿ ಭೂಮಿ ನೀಡಲು ಸಾಧ್ಯವಿಲ್ಲ' ಎಂದು ಕಾನೂನು ಇಲಾಖೆ ಲಿಖಿತ ಅಭಿಪ್ರಾಯ ತಿಳಿಸಿದೆ.

ಬ್ಯಾಸ್ಕೆಟ್‌ಬಾಲ್ ಸಂಸ್ಥೆಗೆ ನೀಡುತ್ತಿರುವ ಭೂಮಿಯ ಮಾರ್ಗಸೂಚಿ ಮೌಲ್ಯ ₹ 40 ಲಕ್ಷ ಇದ್ದರೂ, ಮಾರುಕಟ್ಟೆ ದರ ಹೆಚ್ಚು ಇದೆ. ಆದರೂ, ಕಡಿಮೆ ದರಕ್ಕೆ ಭೂಮಿ ನೀಡಲಾಗಿದೆ ಎಂದು ಆರೋಪಿಸಲಾಗಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಗೋವಿಂದರಾಜು, ಮಕ್ಕಳನ್ನು ಅಂತರರಾಷ್ಟ್ರೀಯ ಸ್ಪರ್ಧೆಗೆ ಸಿದ್ಧಗೊಳಿಸಲು ಸುಸಜ್ಜಿತ ಬ್ಯಾಸ್ಕೆಟ್‌ಬಾಲ್ ಕ್ರೀಡಾಂಗಣದ ಅವಶ್ಯ ಇದೆ. ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅವಧಿಯಲ್ಲೇ ಸಂಪುಟದ ಅನುಮೋದನೆ ದೊರಕಿತ್ತು. ಅಂದಿನ ಕಂದಾಯ ಸಚಿವ ಆರ್.ಅಶೋಕ ಸಹ ಶಿಫಾರಸು ಮಾಡಿದ್ದರು. ಚುನಾವಣಾ ನೀತಿ ಸಂಹಿತೆ ಆರಂಭವಾದ ಕಾರಣ ಪ್ರಕ್ರಿಯೆ ಅಂತಿಮಗೊಂಡಿರಲಿಲ್ಲ' ಎಂದರು.

ಕಾನೂನು ಮತ್ತು ಹಣಕಾಸು ಇಲಾಖೆಗಳು ಯಾವುದೇ ಸಂಘಕ್ಕೆ ಭೂಮಿ ನೀಡಲು ಅನುಮೋದನೆ ನೀಡುವುದಿಲ್ಲ. ಹಾಗಾಗಿಯೇ, ಸಂಪುಟದ ಅನುಮೋದನೆ ಪಡೆಯ ಲಾಗಿದೆ. ಅಲ್ಲದೇ ಯಲಹಂಕ ಸಮೀಪ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಗೆ ಏಳು ಎಕರೆ ಗೋಮಾಳ ಜಮೀನು ನೀಡಲಾಗಿದೆ. ಇದೇ ರೀತಿ 8ರಿಂದ 10 ಸಂಘಗಳಿಗೆ ಭೂಮಿ ಮಂಜೂರು ಮಾಡಲಾಗಿದೆ ಎಂದು ವಿವರ ನೀಡಿದರು.

ಆರ್‌ಎಂಕೆವಿ ಸಿಲ್ಕ್ಸ್ ಕಂಪನಿಯ ದೀಪಾವಳಿ ಹಬ್ಬದ ಸೀರೆಗಳ ಸಂಗ್ರಹವನ್ನು ಕಂಪನಿಯ ನಿರ್ದೇಶಕರಾದ ಎಸ್. ಶಂಕರ್ ಕುಮಾರಸ್ವಾಮಿ ಮತ್ತು ಪಿ. ಪ್ರಣವ್ ಕುಮಾರಸ್ವಾಮಿ ಅವರು ಚೆನ್ನೈನಲ್ಲಿ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದರು.


ಕನ್ನಡ ವಿದ್ಯಾರ್ಥಿಗಳ ಸಂಘಟನೆ 'ಕೆಎಸ್‌ಒ' ಪದಾಧಿಕಾರಿಗಳು 'ಜನಮಾನಸಗಳಿಗೆ ಪೈಗಂಬರ್' ಎಂಬ ಅಭಿಯಾನದಡಿ 'ಮುಹಮ್ಮದ್' ಎಂಬ ಪುಸ್ತಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಿದರು

ಪ್ರವಾದಿ ಪರಿಚಯಕ್ಕೆ ಪುಸ್ತಕ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾದಿ ಮೊಹಮ್ಮದ್ ಅವರ ಜೀವನ ಹಾಗೂ ಸಂದೇಶಗಳನ್ನು ಕರ್ನಾಟಕದಾದ್ಯಂತ ಪಸರಿಸುವ ನಿಟ್ಟಿನಲ್ಲಿ ಕೇರಳದ ಕೋಯಿಕ್ಕೋಡ್‌ನ ಮರ್ಕಝ್ ವಿದ್ಯಾಸಂಸ್ಥೆಯ ಕನ್ನಡ ವಿದ್ಯಾರ್ಥಿಗಳ ಸಂಘಟನೆ 'ಕೆಎಸ್‌ಒ' ಪದಾಧಿಕಾರಿಗಳು 'ಜನಮಾನಸಗಳಿಗೆ ಪೈಗಂಬರ್' ಎಂಬ ಅಭಿಯಾನ ಹಮ್ಮಿಕೊಂಡಿದ್ದಾರೆ. 'ಮುಹಮ್ಮದ್' ಎಂಬ ಪುಸ್ತಕವನ್ನು ಈ ಅಭಿಯಾನದ ಮೂಲಕ ಹಂಚುತ್ತಿದ್ದಾರೆ.

ಲೇಖಕ ಮಾರ್ಟಿನ್ ಲಿಂಗ್ಸ್ ಅವರು ಬರೆದಿರುವ ಸ್ವಾಲೀಹ್ ತೋಡಾರ್ ಅವರು ಕನ್ನಡಕ್ಕೆ ಅನುವಾದಿಸಿರುವ ಈ ಪುಸ್ತಕವನ್ನು ರಾಜ್ಯದಾದ್ಯಂತ ವಿತರಿಸಲಾಗುತ್ತಿದೆ.

ಅಭಿಯಾನದ ಭಾಗವಾಗಿ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಸೇರಿದಂತೆ ಹಲವು ಜನಪ್ರತಿನಿಧಿಗಳಿಗೆ ಪುಸ್ತಕವನ್ನು ನೀಡಲಾಯಿತು.

'ಕೆಎಸ್‌ಒ ವಿದ್ಯಾರ್ಥಿ ಸಂಘಟನೆ ಮೂರು ದಶಕಗಳಿಂದ ಕೋಯಿಕ್ಕೋಡಿನಲ್ಲಿ ಕನ್ನಡ ಸೇವೆ ಮಾಡುತ್ತಿದ್ದು, ಜನರು ಬುದ್ಧ, ಬಸವ, ಅಂಬೇಡ್ಕರ್ ಅವರನ್ನು ಓದಿದಂತೆ ಪೈಗಂಬರರನ್ನು ಓದಿಕೊಳ್ಳಬೇಕು ಎಂಬುದು ನಮ್ಮ ಉದ್ದೇಶ'ಎಂದು ಪದಾಧಿಕಾರಿಗಳು ತಿಳಿಸಿದ್ದಾರೆ.

ಕೃಷಿ ಕಾಯ್ದೆ ವಾಪಸ್‌ಗೆ ರೈತ ಮುಖಂಡರ ಆಗ್ರಹ

ಬೆಂಗಳೂರು ತಲುಪಿದ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಹಾಗೂ ಕೊಬ್ಬರಿಗೆ ಹೆಚ್ಚಿನ ದರ ನಿಗದಿ ಪಡಿಸುವಂತೆ ಆಗ್ರಹಿಸಿ, ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ಹಾಸನ ಜಿಲ್ಲೆಯ ಅರಸೀಕೆರೆಯಿಂದ ಆರಂಭಗೊಂಡಿದ್ದ ರೈತರ ಪಾದಯಾತ್ರೆ ಬುಧವಾರ ನಗರ ತಲುಪಿತು.

ಸೆ.26ರಂದು ಸಂಘದ ರಾಜ್ಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರ ನೇತೃತ್ವದಲ್ಲಿ ಪಾದಯಾತ್ರೆ ಆರಂಭಗೊಂಡಿತ್ತು. ವಿವಿಧ ಪಟ್ಟಣ ಹಾಗೂ ಗ್ರಾಮಗಳ ಮೂಲಕ ಬುಧವಾರ ಬೆಳಿಗ್ಗೆ ನಗರ ತಲುಪಿದಾಗ ಅಲ್ಲಲ್ಲಿ ಪೊಲೀಸರು ತಡೆಯೊಡ್ಡಿದರು. ಪೊಲೀಸರಿಂದ ಪ್ರತಿಭಟನಕಾರರು ತಪ್ಪಿಸಿಕೊಂಡು ಸ್ವಾತಂತ್ರ್ಯ ಉದ್ಯಾನ ತಲುಪಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ)ಯನ್ನು ಶಾಸನ ಬದ್ಧಗೊಳಿಸಬೇಕು. ಇಡೀ ರಾಜ್ಯದಲ್ಲಿ ಬರ ಆವರಿಸಿದ್ದು, ಬರಪೀಡಿತ ರಾಜ್ಯ ಎಂದು ಘೋಷಣೆ ಮಾಡಬೇಕೆಂದು ರೈತರು ಆಗ್ರಹಿಸಿದರು.


ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ಬುಧವಾರ ರೈತರು ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ಸಮಸ್ಯೆ ತಲೆದೋರಿದೆ. ವಿದ್ಯಾರ್ಥಿಗಳು ಹಾಗೂ ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶಕ್ಕೆ ನಿರಂತರ ವಿದ್ಯುತ್ ಪೂರೈಸಬೇಕು ಎಂದು ಆಗ್ರಹಿಸಿದರು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬಗರ್‌ಹುಕುಂ ಸಾಗುವಳಿದಾರರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಒಕ್ಕಲೆಬ್ಬಿಸುತ್ತಿದ್ದಾರೆ. ಇದನ್ನು ಕೈಬಿಡಬೇಕು ಎಂದು ಒತ್ತಾಯಿಸಿದರು.

ಅಧಿಕಾರಕ್ಕೆ ಬಂದರೆ ತಕ್ಷಣವೇ ಮಹದಾಯಿ ಯೋಜನೆ ಆರಂಭಿಸುವುದಾಗಿ ಕಾಂಗ್ರೆಸ್ ಹೇಳಿತ್ತು. ಅಧಿಕಾರ ಸಿಕ್ಕಿದ ಮೇಲೆ ಮೌನ ವಹಿಸಿದೆ ಎಂದು ರೈತ ಸಂಘದ ರಾಜ್ಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಆಕ್ರೋಶ ಹೊರಹಾಕಿದರು.

ಆಡಳಿತದ ದುರಾಸೆಯಿಂದ ರಾಜ್ಯ ಸರ್ಕಾರವು ತಮಿಳುನಾಡಿಗೆ ಕಾವೇರಿ ನೀರು ಹರಿಸಿ ರಾಜ್ಯದ ಅನ್ನದಾತರಿಗೆ ಮೋಸ ಎಸಗಿದೆ. ತಕ್ಷಣವೇ ನೀರು ಹರಿಸುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಪ್ರತಿ ಕ್ವಿಂಟಲ್ ಕೊಬ್ಬರಿಗೆ ₹ 8 ಸಾವಿರ ನೀಡಲಾಗುತ್ತಿದೆ. ಕೊಬ್ಬರಿಗೆ ₹ 25 ಸಾವಿರ ನಿಗದಿ ಮಾಡಬೇಕು ಎಂದು ಒತ್ತಾಯಿಸಿದರು.

ವಾಹನ ಬಿಡುಗಡೆಗೆ ಲಂಚ: ಹೆಡ್ ಕಾನ್‌ಸ್ಟೆಬಲ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೂಜು ತಾಣವೊಂದರ ಮೇಲಿನ ದಾಳಿ ವೇಳೆ ವಶಕ್ಕೆ ಪಡೆದಿದ್ದ ದ್ವಿಚಕ್ರ ವಾಹನ ಹಿಂದಿರುಗಿಸಲು ₹ 20,000 ಲಂಚ ಪಡೆದ ಆರೋಪದ ಮೇಲೆ ಹನುಮಂತನಗರ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಕವಿನ್ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಹನುಮಂತನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಜೂಜಾಟ ನಡೆಯುತ್ತಿದ್ದ ಸ್ಥಳವೊಂದರ ಮೇಲೆ ಇತ್ತೀಚೆಗೆ ಪೊಲೀಸರು ದಾಳಿ ನಡೆಸಿದ್ದರು. ಜೂಜುಕೋರರನ್ನು ವಶಕ್ಕೆ ಪಡೆಯುವ ಕಾರ್ಯಾಚರಣೆ ನಡೆಸುತ್ತಿದ್ದಾಗ ಶ್ರೀನಗರ ನಿವಾಸಿ ಶಿವಕುಮಾರ್ ಎಂಬುವವರು ಅಲ್ಲಿಗೆ ಹೋಗಿದ್ದರು. ಅವರ ದ್ವಿಚಕ್ರ ವಾಹನವನ್ನೂ ಪೊಲೀಸರು ವಶಕ್ಕೆ ಪಡೆದು, ಕೊಂಡೊಯ್ದಿದ್ದರು.

ಪೊಲೀಸ್ ಠಾಣೆಗೆ ತೆರಳಿದ್ದ ಶಿವಕುಮಾರ್ ತನ್ನ ವಾಹನವನ್ನು ಮರಳಿಸುವಂತೆ ಮನವಿ ಮಾಡಿದ್ದರು. ವಾಹನ ಬಿಡುಗಡೆಗೆ ₹ 25,000 ಲಂಚ ನೀಡುವಂತೆ ಕವಿನ್ ಬೇಡಿಕೆ ಇಟ್ಟಿದ್ದರು. ಚೌಕಾಸಿ ನಡೆಸಿದಾಗ ₹ 20,000 ಕೊಟ್ಟರೆ ವಾಹನ ಮರಳಿಸುವುದಾಗಿ ತಿಳಿಸಿದ್ದರು. ಈ ಕುರಿತು ವಾಹನ ಮಾಲೀಕ ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕಕ್ಕೆ ದೂರು ನೀಡಿದ್ದರು.

ಬುಧವಾರ ಲಂಚದ ಹಣದೊಂದಿಗೆ ದೂರುದಾರರು ಕವಿನ್ ಅವರನ್ನು ಸಂಪರ್ಕಿಸಿದ್ದರು. ಠಾಣೆಯಿಂದ ಬೇರೆ ಕಡೆ ಬಂದ ಹೆಡ್ ಕಾನ್‌ಸ್ಟೆಬಲ್, ವಾಹನ ಮಾಲೀಕರಿಂದ ₹ 20,000 ನಗದು ಪಡೆದುಕೊಂಡರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು ಆರೋಪಿಯನ್ನು ಬಂಧಿಸಿದರು ಎಂದು ಲೋಕಾಯುಕ್ತದ ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಾಯುಕ್ತದ ಬೆಂಗಳೂರು ವಿಭಾಗದ ಪ್ರಭಾರ ಎಸ್‌ಪಿ ಶ್ರೀನಾಥ್ ಜೋಶಿ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಡಿವೈಎಸ್‌ಪಿ ಆರ್. ಉಮಾದೇವಿ, ಇನ್‌ಸ್ಪೆಕ್ಟರ್‌ಗಳಾದ ಶಂಕರಪ್ಪ, ಕುಮಾರಸ್ವಾಮಿ, ಅಂಜನ್‌ಕುಮಾರ್ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ಅಧಿಕಾರಿಗಳೊಂದಿಗೆ ಡಿಜಿಪಿ ಸಭೆ • ಐ.ಟಿ ಕಂಪನಿಗಳ ಮುಖ್ಯಸ್ಥರ ಜತೆ ಚರ್ಚಿಸಲು ಸೂಚನೆ

'ಟೆಕ್ ಪಾರ್ಕ್'ನಲ್ಲಿ ದಟ್ಟಣೆ ನಿವಾರಣೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಕೆಲವು ದಿನಗಳಿಂದ ನಗರದಲ್ಲಿ ವಾಹನ ದಟ್ಟಣೆ ತೀವ್ರವಾಗಿದ್ದು ಈ ಸಮಸ್ಯೆ ನಿವಾರಿಸಲು ಪೊಲೀಸ್ ಇಲಾಖೆ ಕೆಲವು ಕ್ರಮ ತೆಗೆದುಕೊಳ್ಳಲು ಮುಂದಾಗಿದೆ.

ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಬುಧವಾರ ನಡೆದ ಇಲಾಖೆ ಹಿರಿಯ ಅಧಿಕಾರಿಗಳ ಸಭೆಯಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಕೆಲವು ಸೂಚನೆಗಳನ್ನು ನೀಡಿದ್ದಾರೆ.

ಅಲೋಕ್ ಮೋಹನ್

ಹೊರವರ್ತುಲ ರಸ್ತೆ ಮತ್ತು ಟೆಕ್‌ಪಾರ್ಕ್‌ಗಳ ಬಳಿ ಉಂಟಾಗಿರುವ ಸಂಚಾರ ದಟ್ಟಣೆ ನಿವಾರಣೆಗೆ ಐ.ಟಿ ಕಂಪನಿಗಳ ಮುಖ್ಯಸ್ಥರ ಜತೆ ಚರ್ಚಿಸಿ, ಕೆಲ ಮಾರ್ಪಾಡು ಮಾಡಿಕೊಳ್ಳಲು ಸಲಹೆ ಪಡೆದುಕೊಳ್ಳಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

'ಸಮಸ್ಯೆಗಳ ಬಗ್ಗೆ ಜನರು ಸಾಮಾಜಿಕ ಮಾಧ್ಯಮಗಳಲ್ಲೂ ಪೋಸ್ಟ್ ಹಾಕುತ್ತಿದ್ದಾರೆ. ಹೀಗಾಗಿ ಐಟಿ ಕಂಪನಿಗಳ ಅಧಿಕಾರಿಗಳ ಜತೆ ಚರ್ಚಿಸಬೇಕು. ಜತೆಗೆ, ದೊಡ್ಡ ಐ.ಟಿ ಪಾರ್ಕ್‌ಗಳಲ್ಲಿ ಕಚೇರಿ ಆರಂಭ ಮತ್ತು ಮುಕ್ತಾಯ ಸಮಯವನ್ನು ಬೇರೆ ಬೇರೆ ಮಾಡಬೇಕು' ಎಂಬ ಎಂಬ ಅಭಿಪ್ರಾಯ ಈ ಸಭೆಯಲ್ಲಿ ವ್ಯಕ್ತವಾಗಿವೆ' ಎಂದು ಮೂಲಗಳು ತಿಳಿಸಿವೆ.

'ಇಲಾಖೆಗೆ ಹೊಸದಾಗಿ ಬರುವ ಪ್ರತಿ ಸಿಬ್ಬಂದಿಗೂ ಸೈಬರ್ ಕ್ರೈಂ ಕುರಿತು ತರಬೇತಿ ನೀಡಲಾಗುತ್ತಿದೆ. ಹಾಗೆಯೇ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಪೊಲೀಸರಿಗೂ ಕಡ್ಡಾಯವಾಗಿ ಸೈಬರ್ ಕ್ರೈಂ ಕುರಿತು ತರಬೇತಿ ಆಗಿರಲೇಬೇಕು. ಮುಂದಿನ ದಿನಗಳಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆಯಿದೆ. ಹೀಗಾಗಿ ತರಬೇತಿ ಅಗತ್ಯ' ಎಂದು ಡಿಜಿಪಿ ಸಭೆಯಲ್ಲಿ ತಿಳಿಸಿದ್ದಾರೆ.

ದೂರು ದಾಖಲು ಕಡ್ಡಾಯ: 'ಯಾರೇ ಠಾಣೆಗೆ ದೂರು ನೀಡಲು ಬಂದರೂ ದೂರು ದಾಖಲಿಸಿಕೊಳ್ಳಬೇಕು. ಎಫ್‌ಐಆರ್ ದಾಖಲು ಮಾಡಿಕೊಳ್ಳಲು ಹಿಂದೇಟು ಸಲ್ಲದು. ತಮ್ಮ ಠಾಣೆ ವ್ಯಾಪ್ತಿಗೆ ಬಾರದಿದ್ದರೆ ಪ್ರಕರಣ ದಾಖಲಿಸಿಕೊಂಡು ಆಯಾ ವ್ಯಾಪ್ತಿಯ ಠಾಣೆಗೆ ವರ್ಗಾವಣೆ ಮಾಡಬೇಕು' ಎಂದು ಸೂಚಿಸಿದ್ದಾರೆ.

'ರೌಡಿ ಚಟುವಟಿಕೆಗೆ ಕಡಿವಾಣ, ಗಸ್ತು ಹೆಚ್ಚಿಸಬೇಕು ಎಂದು ಸೂಚಿಸಿದ್ದಾರೆ. ಗಸ್ತು ವೇಳೆ ಸಾರ್ವಜನಿಕರಿಂದ ಮಾಹಿತಿ ಪಡೆದುಕೊಳ್ಳಬೇಕು' ಎಂದು ಹೇಳಿದ್ದಾರೆ.

ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಹೆಚ್ಚುವರಿ ಪೊಲೀಸ್ ಆಯುಕ್ತರಾದ ಸತೀಶ್ ಕುಮಾರ್, ರಮಣ್ ಗುಪ್ತಾ, ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಎಂ.ಎನ್. ಅನುಚೇತ್ ಇದ್ದರು.

'40 ದಿನಗಳಲ್ಲೇ ಇತ್ಯರ್ಥ ಪಡಿಸಿ'

ಎಸ್‌ಸಿ–ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಹಾಗೂ ಪೋಕ್ಸೊ ಪ್ರಕರಣಗಳನ್ನು 60 ದಿನಗಳ ಬದಲಿಗೆ 40 ದಿನಗಳಲ್ಲೇ ಇತ್ಯರ್ಥ ಪಡಿಸಬೇಕು. ನಗರದ ಎಲ್ಲ ವಿಭಾಗಗಳ ಡಿಸಿಪಿಗಳು ತಮ್ಮ ವ್ಯಾಪ್ತಿಗಳ ಠಾಣೆಗಳಿಗೆ ಭೇಟಿ ನೀಡಿ ಕಾರ್ಯ ವೈಖರಿ ಪರಿಶೀಲಿಸಬೇಕು ಎಂದು ಡಿಜಿಪಿ ಸೂಚಿಸಿದ್ದಾರೆ.

ಮಾರತ್ತಹಳ್ಳಿ ಜಂಕ್ಷನ್‌ನಲ್ಲಿ ಟ್ರಾಫಿಕ್ ಜಾಮ್

ಮತ್ತೆ ದಟ್ಟಣೆ: ಜನರಿಗೆ ಸಂಕಷ್ಟ

ನಗರದ ಹಲವು ಪ್ರದೇಶಗಳಲ್ಲಿ ಬುಧವಾರ ಮಧ್ಯಾಹ್ನದಿಂದಲೂ ಮತ್ತೆ ವಾಹನ ದಟ್ಟಣೆ ಕಂಡುಬಂತು. ಅದರಲ್ಲೂ ಐ.ಟಿ ಪಾರ್ಕ್‌ನಲ್ಲಿ ತೀವ್ರ ದಟ್ಟಣೆಯಿಂದ ಜನರು ಹೈರಾಣಾದರು.

ಮಾರತ್ತಹಳ್ಳಿ ಜಂಕ್ಷನ್‌ನ ಸರ್ಜಾಪುರದ ಮುಖ್ಯರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ವಾಹನಗಳು ಮಂದಗತಿಯಲ್ಲಿ ಸಾಗಬೇಕಾಯಿತು. ಆಂಬುಲೆನ್ಸ್‌ಗಳು ಮುಂದಕ್ಕೆ ಸಾಗಲು ಸಾಧ್ಯವಾಗಲಿಲ್ಲ. ನಗರದ ಹೃದಯ ಭಾಗದಲ್ಲೂ ಮತ್ತೆ ದಟ್ಟಣೆ ಕಂಡುಬಂತು.

ಹೆಬ್ಬಾಳ ರಸ್ತೆ, ರಾಜಭವನ ರಸ್ತೆ, ಚಾಲುಕ್ಯ ವೃತ್ತ, ರೇಸ್‌ಕೋರ್ಸ್ ರಸ್ತೆ, ಕೆ.ಆರ್.ವೃತ್ತ, ಕಾರ್ಪೊರೇಷನ್ ವೃತ್ತದಲ್ಲಿ ಸಾಲು ಸಾಲು ವಾಹನಗಳಿದ್ದವು. ಮೈಸೂರು ರಸ್ತೆ, ಯಶವಂತಪುರ, ಮೆಜೆಸ್ಟಿಕ್‌ನಲ್ಲೂ ಅದೇ ಸ್ಥಿತಿ ಕಂಡುಬಂತು.

ರಿಚ್ಮಂಡ್ ವೃತ್ತ, ಕಾರ್ಪೊರೇಷನ್ ವೃತ್ತ, ರೆಸಿಡೆನ್ಸಿ ರಸ್ತೆ, ಮೆಜೆಸ್ಟಿಕ್, ಕೆ.ಆರ್. ವೃತ್ತ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಿಪರೀತ ದಟ್ಟಣೆ ಕಂಡುಬಂತು. ದಟ್ಟಣೆಯಲ್ಲಿ ಸಿಲುಕಿ ಚಾಲಕರು ಹೈರಾಣಾದರು. ಕಳೆದ ಕೆಲವು ದಿನಗಳಿಂದ ದಟ್ಟಣೆ ತೀವ್ರಗೊಂಡಿದ್ದು, ಚಾಲಕರು ಸಾಮಾಜಿಕ ಮಾಧ್ಯಮದಲ್ಲಿ ಕಿಡಿಕಾರಿದ್ದಾರೆ. ಮನೆಗೂ ಸಮಯಕ್ಕೆ ಸರಿಯಾಗಿ ತಲುಪಲು ಸಾಧ್ಯವಾಗುತ್ತಿಲ್ಲ ಎಂದು ಆಕ್ರೋಶ ಹೊರಹಾಕಿದ್ದಾರೆ. ಕೇಂದ್ರ ವಾಣಿಜ್ಯ ಪ್ರದೇಶದ (ಸಿಬಿಡಿ) ರಸ್ತೆಗಳಲ್ಲೂ ಸಂಜೆಯಿಂದ ರಾತ್ರಿಯವರೆಗೂ ದಟ್ಟಣೆ ಇತ್ತು.

ಸಾರಿಗೆ ನಿಗಮದ ಮಂಡಳಿ ಕಾರ್ಯದರ್ಶಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿರಿಯ ಅಧಿಕಾರಿಗಳ ಹೆಸರಿನಲ್ಲಿ ನಕಲಿ ಸಹಿ ಮಾಡಿ ಬಿಎಂಟಿಸಿಗೆ ಅಂದಾಜು ₹18 ಕೋಟಿ ನಷ್ಟವುಂಟು ಮಾಡಿದ್ದಾರೆ ಎಂಬ ದೂರು ಆಧರಿಸಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಮಂಡಳಿ ಕಾರ್ಯದರ್ಶಿ ಶ್ರೀರಾಮ್ ಮುಲ್ಕಾವನ್ ಅವರನ್ನು ಬುಧವಾರ ಪೊಲೀಸರು ಬಂಧಿಸಿದ್ದಾರೆ.

ಶಾಂತಿನಗರದ ಬಿಎಂಟಿಸಿ ಕಚೇರಿಯಲ್ಲಿ ಮುಖ್ಯಸಂಚಾರ ವ್ಯವಸ್ಥಾಪಕರಾಗಿದ್ದ ಅವಧಿಯಲ್ಲಿ ಶ್ರೀರಾಮ್ ಮುಲ್ಕಾವನ್ ಸೇರಿದಂತೆ ಏಳು ಮಂದಿ ಸಿಬ್ಬಂದಿ ಸಂಸ್ಥೆಗೆ ನಷ್ಟವುಂಟು ಮಾಡಿದ್ದರು ಎಂದು ಬಿಎಂಟಿಸಿ ಅಧಿಕಾರಿ ಸಿ.ಕೆ.ರಮ್ಯಾ ಅವರು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಸಹಾಯಕ ಸಂಚಾರ ವ್ಯವಸ್ಥಾಪಕಿಯಾಗಿದ್ದ ಬಿ.ಕೆ.ಮಮತಾ, ಸಂಚಾರ ಅಧೀಕ್ಷಕಿಯಾಗಿದ್ದ ಟಿ.ಅನಿತಾ, ಸಹಾಯಕ ಸಂಚಾರ ನಿರೀಕ್ಷಕಿಯಾಗಿದ್ದ ಗುಣಶೀಲಾ, ಕಿರಿಯ ಸಹಾಯಕರಾಗಿದ್ದ ಆರ್.ವೆಂಕಟೇಶ್, ಕಿರಿಯ ಸಹಾಯಕರಾಗಿದ್ದ ಪ್ರಕಾಶ್ ಕೊಪ್ಪಳ ವಿರುದ್ಧವೂ ಎಫ್‌ಐಆರ್ ದಾಖಲಾಗಿದ್ದು ಅವರು ತಲೆಮರೆಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೂರು ವರ್ಷದ ಅವಧಿಯಲ್ಲಿ ಈ ಅಕ್ರಮ ನಡೆದಿತ್ತು. ತನಿಖೆ ಆಧರಿಸಿ, ಇವರನ್ನು ನಿಗಮದ ಬೇರೆ ಬೇರೆ ವಿಭಾಗಕ್ಕೆ ವರ್ಗಾವಣೆ ಮಾಡಲಾಗಿತ್ತು. ಕೆಲವರನ್ನು ಅಮಾನತು ಮಾಡಲಾಗಿತ್ತು.

ಏನಿದು ಪ್ರಕರಣ: 'ಶಾಂತಿನಗರದ ಬಿಎಂಟಿಸಿ ಪ್ರಧಾನ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಏಳು ಮಂದಿ, ಬಿಎಂಟಿಸಿ ಭದ್ರತೆ ಹಾಗೂ ಜಾಗೃತದಳ ನಿರ್ದೇಶಕರಾಗಿದ್ದ ಅರುಣ್ ಹಾಗೂ ವ್ಯವಸ್ಥಾಪಕ ನಿರ್ದೇಶಕಿಯಾಗಿದ್ದ ಶಿಖಾ ಅವರ ಸಹಿಯುಳ್ಳ ಕಡತವನ್ನು ಜೆರಾಕ್ಸ್ ಮಾಡಿ ಸಂಸ್ಥೆಗೆ ₹17.41 ಕೋಟಿ ನಷ್ಟವುಂಟು ಮಾಡಿದ್ದರು. ಲಾಕ್‌ಡೌನ್ ಅವಧಿಯಲ್ಲಿ ಪರವಾನಗಿ ಶುಲ್ಕವನ್ನು ಸಂಪೂರ್ಣ ಮನ್ನಾ ಸಂಬಂಧ ಅಂದಿನ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ರೇಜು ಅನುಮೋದಿಸಿದ ಸಹಿಗಳನ್ನು ಜೆರಾಕ್ಸ್ ಮಾಡಿ, ₹21 ಲಕ್ಷ ನಷ್ಟ ಮಾಡಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಯಶವಂತಪುರ ನಿಲ್ದಾಣದ ಸ್ವಚ್ಛತಾ ನಿರ್ವಹಣೆ ಪರವಾನಗಿಯ ಒಪ್ಪಂದ ಮುಕ್ತಾಯವಾಗಿದ್ದರೂ ಅಧಿಕಾರಿಗಳ ಅನುಮತಿಯಿಲ್ಲದೇ ಪರವಾನಗಿ ಮುಂದುವರಿಸಲಾಗಿತ್ತು. ಅಧಿಕಾರಿಗಳಾದ ಅರುಣ್, ಶಿಖಾ ಸಹಿ ಜೆರಾಕ್ಸ್ ಮಾಡಿ ₹1 ಲಕ್ಷ ನಷ್ಟ ಮಾಡಿದ್ದರು' ಎಂದು ಮೂಲಗಳು ಹೇಳಿವೆ.

'ಇಲಾಖೆಗೆ ನಷ್ಟ ಮಾಡಿದ್ದ ಸಿಬ್ಬಂದಿ ಹಣ ಪಡೆದುಕೊಂಡಿರುವ ಸಾಧ್ಯತೆ ಇದೆ. ಈ ಸಂಬಂಧ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಕಾರ್ ಪೂಲಿಂಗ್ ನಿಷೇಧವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ ಪೂಲಿಂಗ್ ವ್ಯವಸ್ಥೆಯನ್ನು ನಿಷೇಧಿಸುವ ಬಗ್ಗೆ ಯಾವುದೇ ಚಿಂತನೆಗಳು ನಡೆದಿಲ್ಲ. ನಿಯಮ ಉಲ್ಲಂಘನೆಯನ್ನು ನಿಯಂತ್ರಿಸುವುದು ಅನಿವಾರ್ಯ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ರಾಮಲಿಂಗಾ ರೆಡ್ಡಿ

ಒಂದೇ ದಾರಿಯಲ್ಲಿ ಸಾಗುವವರು ಬೇರೆ ಬೇರೆ ವಾಹನಗಳಲ್ಲಿ ಹೋಗುವ ಬದಲು ನಾಲ್ಕೈದು ಜನ ಸೇರಿ ಒಂದೇ ವಾಹನದಲ್ಲಿ ಹೋಗುವ ಪದ್ಧತಿಯೇ ಕಾರ್ ಪೂಲಿಂಗ್. ಇದು ವಾಣಿಜ್ಯ ವ್ಯವಹಾರ ಆಗಬಾರದು. ಬಿಳಿ ನಂಬರ್‌ಪ್ಲೇಟ್ ಬದಲು ಹಳದಿ ನಂಬರ್‌ಪ್ಲೇಟ್ ಹೊಂದಿರುವ ವಾಹನಗಳನ್ನೇ (ವಾಣಿಜ್ಯದ ಉದ್ದೇಶದ ವಾಹನಗಳು) ಕಾರ್ ಪೂಲಿಂಗ್‌ಗೆ ಬಳಸಿದರೆ ಸಮಸ್ಯೆ ಇರುವುದಿಲ್ಲ ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಕಾರ್ ಪೂಲಿಂಗ್ ಮಾಡಬೇಕಿದ್ದರೆ ಸಾರಿಗೆ ಇಲಾಖೆಯಿಂದ ಅನುಮತಿ ಪಡೆಯಬೇಕು. ಅನುಮತಿ ಇಲ್ಲದೇ ಕಾರ್ ಪೂಲಿಂಗ್ ಮಾಡಿದಾಗ ದಂಡ ವಿಧಿಸುವುದು ಅನಿವಾರ್ಯ. ಇತ್ತೀಚೆಗೆ ಖಾಸಗಿ ಬಸ್, ಆಟೊ, ಟ್ಯಾಕ್ಸಿ ಚಾಲಕರ ಸಂಘಟನೆಗಳು ಸೇರಿ ಪ್ರತಿಭಟನೆ ನಡೆಸಿದ್ದರು. ಅವರ ಬೇಡಿಕೆಗಳಲ್ಲಿ ಬಿಳಿ ನಂಬರ್‌ಪ್ಲೇಟ್ ವಾಹನಗಳಲ್ಲಿ ಬಾಡಿಗೆ ಓಡಿಸುತ್ತಿರುವುದನ್ನು ನಿಲ್ಲಿಸಬೇಕು ಎಂಬುದು ಕೂಡ ಸೇರಿತ್ತು. ಈ ಬೇಡಿಕೆ ನ್ಯಾಯಯುತವಾಗಿದ್ದು, ಹಳದಿ ನಂಬರ್‌ಪ್ಲೇಟ್‌ನ ವಾಹನಗಳಿಗೆ ತೆರಿಗೆ ಹೆಚ್ಚಿರುತ್ತದೆ. ವೈಯಕ್ತಿಕ ವಾಹನಗಳಿಗೆ (ಬಿಳಿ ನಂಬರ್‌ಪ್ಲೇಟ್) ತೆರಿಗೆ ಕಡಿಮೆ ಇರುತ್ತದೆ ಎಂದು ವಿವರಿಸಿದ್ದಾರೆ.

ಕಾರ್ ಪೂಲಿಂಗ್ ವ್ಯವಸ್ಥೆಯಿಂದ ವಾಹನದಟ್ಟಣೆ ಕಡಿಮೆಯಾಗಲಿದೆ. ವಾಯುಮಾಲಿನ್ಯ, ಶಬ್ದ ಮಾಲಿನ್ಯ ಕಡಿಮೆಯಾಗಲಿದೆ. ಅದಕ್ಕಾಗಿಯೇ ಈ ವ್ಯವಸ್ಥೆಯನ್ನು ನಿಷೇಧಿಸುವ ಪ್ರಶ್ನೆಯೇ ಇಲ್ಲ. ಕಾನೂನು ಪ್ರಕಾರ ನಡೆಸುವುದಕ್ಕೆ ಅನುಮತಿ ಇರುತ್ತದೆ ಎಂದು ತಿಳಿಸಿದ್ದಾರೆ.

'ಸಾರಿಗೆ ಇಲಾಖೆಯು ಕಾರ್‌ಪೂಲಿಂಗ್ ವ್ಯವಸ್ಥೆಯನ್ನು ನಿಷೇಧಿಸಲು ಹೊರಟಿದೆ. ಆದರೆ ಯಾವುದೇ ಕಾರಣಕ್ಕೂ ಈ ವ್ಯವಸ್ಥೆಯನ್ನು ನಿಷೇಧಿಸಬಾರದು. ಬದಲಿಗೆ ಸ್ಪಷ್ಟ ನಿಯಮಗಳನ್ನು ರೂಪಿಸಬೇಕು' ಎಂದು ಸಂಸದ ತೇಜಸ್ವಿ ಸೂರ್ಯ ಮಾಧ್ಯಮದವರ ಮುಂದೆ ಹೇಳಿಕೆ ನೀಡಿದ ಮೇಲೆ ಈ ವಿಚಾರ ಹೆಚ್ಚು ಚರ್ಚೆಗೆ ಗ್ರಾಸವಾಗಿತ್ತು.

ಹಳದಿ ಬೋರ್ಡ್‌ಗೆ ಆಕ್ಷೇಪ

'ಕಾರ್ ಪೂಲಿಂಗ್ ನಿಷೇಧವಿಲ್ಲ. ಇದೊಂದು ಸುಳ್ಳು ಸುದ್ದಿ... ಹಳದಿ ನಂಬರ್‌ಪ್ಲೇಟ್‌ಗಳನ್ನು ಹೊಂದಿರುವ ವಾಣಿಜ್ಯ ಬಳಕೆಯ ವಾಹನಗಳನ್ನು ಕಾರ್‌ಪೂಲಿಂಗ್‌ಗೆ ಬಳಸಬಹುದು' ಎಂದು ಸಾರಿಗೆ ಸಚಿವರು ಎಕ್ಸ್ ಖಾತೆ‌ನಲ್ಲಿ ಕೂಡ ಪೋಸ್ಟ್ ಹಾಕಿದ್ದಾರೆ. ಈ ನಿರ್ಧಾರಕ್ಕೆ ಅನೇಕರು ಆಕ್ಷೇಪ ವ್ಯಕ್ತಪಡಿಸಿ ಕಮೆಂಟ್ ಹಾಕಿದ್ದಾರೆ.

'ಹಳದಿ ನಂಬರ್ ಇರುವವರು ಬಾಡಿಗೆ ಮಾಡುತ್ತಾರೆ. ಅವರು ಯಾಕೆ ಕಾರ್ ಪೂಲಿಂಗ್ ಮಾಡುತ್ತಾರೆ' ಎಂದು ಒಬ್ಬರು ಕೇಳಿದ್ದಾರೆ. 'ಕಚೇರಿಗೆ ಅನೇಕ ವಾಹನಗಳನ್ನು ತೆಗೆದುಕೊಂಡು ಹೋಗುವುದನ್ನು ತಪ್ಪಿಸಲು ನಾವು ನಮ್ಮ ಕಚೇರಿ ಸಹೋದ್ಯೋಗಿಗಳೊಂದಿಗೆ ಕಾರ್‌ಪೂಲ್ ಮಾಡಬೇಕಾದರೆ, ಸಾರಿಗೆ ಇಲಾಖೆಯಿಂದ ಅನುಮತಿ ಅಗತ್ಯವಿದೆಯೇ' ಎಂದು ಇನ್ನೊಬ್ಬರು ಪ್ರಶ್ನಿಸಿದ್ದಾರೆ.

'ಯೆಲ್ಲೊ ಬೋರ್ಡ್ ಕಾರ್ ತಗೊಂಡು ಯಾರು ಗುರು ಆಫೀಸ್ ಕೆಲಸಕ್ಕೆ ಹೋಗ್ತಾರೆ? ಅದರಲ್ಲಿ ಕಾರ್ ಪೂಲಿಂಗ್ ಯಾಕೆ ಮಾಡಬೇಕು? ಟ್ಯಾಕ್ಸಿ ಓಡಿಸಿದರೆ ಇನ್ನು ಜಾಸ್ತಿನೇ ದುಡಿಯಬಹುದಲ್ವಾ' ಎಂದು ಇನ್ನೊಬ್ಬರು ವ್ಯಂಗ್ಯ ಮಾಡಿದ್ದಾರೆ.

ಜಿಎಸ್‌ಟಿ ಪರಿಹಾರ ಬಾಕಿ: ಒತ್ತಡ ಹೇರಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ಬಾಕಿ ಇರಿಸಿಕೊಂಡಿರುವ ₹ 2,300 ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪರಿಹಾರವನ್ನು ಪಾವತಿಸುವಂತೆ ಜಿಎಸ್‌ಟಿ ಮಂಡಳಿ ಸಭೆಯಲ್ಲೇ ಆಗ್ರಹಿಸಲು ರಾಜ್ಯ ಸರ್ಕಾರ ಸಿದ್ಧತೆ ನಡಸಿದೆ.

ಜಿಎಸ್‌ಟಿ ಮಂಡಳಿ ಸಭೆ ಶನಿವಾರ ನಡೆಯಲಿದೆ. ಮಂಡಳಿಯಲ್ಲಿ ರಾಜ್ಯದ ಪ್ರತಿನಿಧಿಯಾಗಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳ ಜತೆ ಬುಧವಾರ ಸಭೆ ನಡೆಸಿದ್ದು, ಜಿಎಸ್‌ಟಿ ಪರಿಹಾರದ ಬಾಕಿ ಕುರಿತು ಮಾಹಿತಿ ಪಡೆದಿದ್ದಾರೆ.

2022 ಹಾಗೂ ಅದರ ಹಿಂದಿನ ವರ್ಷಗಳಲ್ಲಿ ರಾಜ್ಯಕ್ಕೆ ಬರಬೇಕಿದ್ದ ಜಿಎಸ್‌ಟಿ ಪರಿಹಾರದಲ್ಲಿ ₹ 2,300 ಕೋಟಿಯಷ್ಟು ಬಾಕಿ ಉಳಿದಿದೆ. ಮಹಾಲೇಖಪಾಲರಿಂದ (ಸಿಎಜಿ) ಲೆಕ್ಕಪರಿಶೋಧನೆಯೂ ಪೂರ್ಣಗೊಂಡಿದೆ. ಕರ್ನಾಟಕಕ್ಕೆ ಜಿಎಸ್‌ಟಿ ಪರಿಹಾರ ಬಾಕಿ ಉಳಿದಿರುವುದನ್ನು ಸಿಎಜಿ ವರದಿಯಲ್ಲೂ ದೃಢಪಡಿಸಲಾಗಿದೆ. ಆ ಬಳಿಕವೂ ಬಾಕಿ ಪಾವತಿಗೆ ಕ್ರಮ ಕೈಗೊಂಡಿಲ್ಲ. ಈ ಕಾರಣದಿಂದ ಮಂಡಳಿಯ ಸಭೆಯಲ್ಲೇ ವಿಷಯ ಪ್ರಸ್ತಾಪಿಸಲು ನಿರ್ಧರಿಸಲಾಗಿದೆ.

ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಕೃಷ್ಣ ಬೈರೇಗೌಡ, 'ಜಿಎಸ್‌ಟಿ ಪರಿಹಾರದ ಬಾಕಿ ಮೊತ್ತವನ್ನು ಶೀಘ್ರ ಪಾವತಿಸುವಂತೆ ಮಂಡಳಿಯ ಸಭೆಯಲ್ಲೇ ಒತ್ತಾಯಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ಈ ಕುರಿತು ಜಿಎಸ್‌ಟಿ ಮಂಡಳಿಗೆ ಬುಧವಾರವೇ ಪತ್ರ ಬರೆದಿದ್ದು, ಸಭೆಯ ಕಾರ್ಯಸೂಚಿಯಲ್ಲಿ ವಿಷಯವನ್ನು ಸೇರಿಸುವಂತೆ ಒತ್ತಾಯಿಸಿದ್ದೇನೆ' ಎಂದರು.

ಸೆಸ್ ಬಗ್ಗೆಯೂ ಚರ್ಚೆ: ತಂಬಾಕು, ತಂಪು ಪಾನೀಯಗಳು, ಐಷಾರಾಮಿ ಕಾರುಗಳು ಸೇರಿದಂತೆ ವಿವಿಧ ಉತ್ಪನ್ನಗಳ ಮೇಲೆ ವಿಧಿಸುತ್ತಿರುವ ಮೇಲು ಸುಂಕದ (ಸೆಸ್) ಮೊತ್ತವನ್ನು ಈಗ ಕೋವಿಡ್ ಅವಧಿಯಲ್ಲಿ ಕೇಂದ್ರ ಸರ್ಕಾರವು ನೀಡಿದ್ದ ಸಾಲದ ಮರುಪಾವತಿಗೆ ಹೊಂದಾಣಿಕೆ ಮಾಡಲಾಗುತ್ತದೆ. ಸಾಲ ಮರುಪಾವತಿ ಆದ ಬಳಿಕ ಸೆಸ್‌ಗಳನ್ನು ಹಂಚಿಕೆ ಮಾಡುವ ಕುರಿತೂ ಮಾಹಿತಿ ಹಂಚಿಕೊಳ್ಳುವಂತೆ ಸಭೆಯಲ್ಲಿ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಸಿರಿ ಧಾನ್ಯಗಳ ಉತ್ಪನ್ನಗಳ ಮೇಲಿನ ಜಿಎಸ್‌ಟಿ ಕಡಿತ ಮಾಡುವಂತೆ ರಾಜ್ಯ ಒತ್ತಾಯಿಸುತ್ತಲೇ ಇದೆ. ಇದನ್ನೂ ಸಭೆಯಲ್ಲಿ ಚರ್ಚಿಸಲು ಸಿದ್ಧತೆ ನಡೆಸಲಾಗಿದೆ. ಕಾರ್ಯಸೂಚಿಯಲ್ಲಿ ಈ ವಿಚಾರವನ್ನೂ ಸೇರಿಸುವಂತೆ ಮಂಡಳಿಯನ್ನು ಕೋರಲಾಗಿದೆ ಎಂದರು.

ವಾಯುಪಡೆಗೆ ಅವಳಿ ಸೀಟರ್ ತೇಜಸ್ ಯುದ್ಧ ವಿಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಎಎಲ್ ಅವಳಿ ಸೀಟರ್‌ಗಳ ಎಲ್‌ಸಿಎ ತೇಜಸ್ ಯುದ್ಧ ವಿಮಾನವನ್ನು ಬುಧವಾರ ಭಾರತೀಯ ವಾಯುಪಡೆಗೆ ಹಸ್ತಾಂತರಿಸಿದೆ.

ಭಾರತೀಯ ವಾಯುಪಡೆಯ ತರಬೇತಿಯ ಅಗತ್ಯಗಳು ಮತ್ತು ಯುದ್ಧದ ಸಂದರ್ಭಗಳಲ್ಲೂ ಹೋರಾಟಕ್ಕೆ ಬಳಸುವ ಸಾಮರ್ಥ್ಯವನ್ನು ಈ ವಿಮಾಗಳು ಹೊಂದಿವೆ.

ಸಮಕಾಲಿನ ತಂತ್ರಜ್ಞಾನ ಹೊಂದಿರುವ ಅವಳಿ ಸೀಟರ್‌ಗಳ ತೇಜಸ್ ಸರ್ವ ಋತುವಿನ ಬಹು ಉಪಯೋಗಿ 4.5 ತಲೆಮಾರಿನ ಹಗುರ ಶ್ರೇಣಿಯ ಯುದ್ಧ ವಿಮಾನ. ಇಂದು ಮೊದಲ ಯುದ್ಧ ವಿಮಾನ ಹಸ್ತಾಂತರಿಸಲಾಗಿದೆ ಎಂದು ಎಚ್‌ಎಎಲ್ ತಿಳಿಸಿದೆ.

ಕೆಲವೇ ಕೆಲವು ದೇಶಗಳು ಮಾತ್ರ ಈ ರೀತಿಯ ಸಾಮರ್ಥ್ಯದ ಯುದ್ಧ ವಿಮಾನವನ್ನು ತಯಾರಿಸಿ ತಮ್ಮ ವಾಯು ಸೇನೆಗಳ ಬತ್ತಳಿಕೆಗೆ ಸೇರಿಸಿದ್ದು, ಇದೀಗ ಆ ಸಾಲಿಗೆ ಭಾರತವೂ ಸೇರ್ಪಡೆಗೊಂಡಿದೆ. ಭಾರತ ಸರ್ಕಾರದ 'ಆತ್ಮ ನಿರ್ಭರ ಭಾರತ' ಪ್ರಯತ್ನದ ಭಾಗವಾಗಿ ಅವಳಿ ಸೀಟರ್‌ಗಳ ತೇಜಸ್ ಯುದ್ಧ ವಿಮಾನವನ್ನು ಅಭಿವೃದ್ಧಿ ಪಡಿಸಲಾಗಿದೆ.

ಅವಳಿ ಸೀಟರ್‌ಗಳ ಎಲ್‌ಸಿಎ ಯುದ್ಧ ವಿಮಾನ

'ಇದೊಂದು ಐತಿಹಾಸಿಕ ದಿನ. ಅವಳಿ ಸೀಟರ್‌ಗಳ ಹಗುರ ಯುದ್ಧ ವಿಮಾನ ತಯಾರಿಸುವ ಮೂಲಕ ಎಚ್‌ಎಎಲ್ ಮಹತ್ತರ ಸಾಧನೆ ಮಾಡಿದೆ. ವಾಯು ಪಡೆಯ ಪೈಲಟ್‌ಗಳು ಈ ಅವಳಿ ಸೀಟರ್‌ಗಳ ಎಲ್‌ಸಿಎಯಲ್ಲಿ ತರಬೇತಿ ಪಡೆಯುವುದರಿಂದ ಅತಿ ಬೇಗನೇ ಯುದ್ಧ ವಿಮಾನಗಳ ಹಾರಾಟ ನಡೆಸಲು ಸಾಧ್ಯವಾಗುತ್ತದೆ. ಅವಳಿ ಸೀಟರ್‌ಗಳ 18 ಯುದ್ಧ ವಿಮಾನಗಳಿಗಾಗಿ ಭಾರತೀಯ ವಾಯು ಪಡೆಯು ಬೇಡಿಕೆ ಸಲ್ಲಿಸಿದೆ. 2023–24 ರ ಸಾಲಿನಲ್ಲಿ ಒಟ್ಟು ಎಂಟು ವಿಮಾನಗಳನ್ನು ಹಸ್ತಾಂತರಿಸಲಾಗುವುದು' ಎಂದು ಎಚ್‌ಎಎಲ್ ಮಾಹಿತಿ ನೀಡಿದೆ.

ವಿಮಾನ ಹಸ್ತಾಂತರ ಕಾರ್ಯಕ್ರಮದಲ್ಲಿ ರಕ್ಷಣಾ ರಾಜ್ಯ ಸಚಿವ ಅಜಯ್ ಭಟ್, ವಾಯು ಸೇನೆ ಮುಖ್ಯಸ್ಥ ವಿ.ಆರ್. ಚೌಧರಿ, ಎಚ್‌ಎಎಲ್ ವ್ಯವಸ್ಥಾಪಕ ನಿರ್ದೇಶಕ ಸಿ.ಬಿ.ಅನಂತಕೃಷ್ಣನ್‌ಮುಂತಾದವರು ಇದ್ದರು.

ಬೆಂಗಳೂರು ಮೂಲದ ಚಾರಣಿಗನ ಶವ ಪತ್ತೆ

ಮನಾಲಿ/ ಶಿಮ್ಲಾ (ಪಿಟಿಐ): 'ಸೆಪ್ಟೆಂಬರ್ 28ರಂದು ನಾಪತ್ತೆಯಾಗಿದ್ದ ಬೆಂಗಳೂರು ಮೂಲದ ಚಾರಣಿಗರೊಬ್ಬರು ಮನಾಲಿ ಅರಣ್ಯದಲ್ಲಿನ ಜೋಗಿನಿ ಜಲಪಾತದ ಬಳಿ ಶವವಾಗಿ ಪತ್ತೆಯಾಗಿದ್ದಾರೆ' ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

'ಬೆಂಗಳೂರಿನ ರಾಹುಲ್ ರಮೇಶ್ (35) ಮೃತಪಟ್ಟ ಚಾರಣಿಗ. ರಕ್ಷಣಾ ತಂಡಕ್ಕೆ ಮೃತದೇಹ ಮಂಗಳವಾರವೇ ದೊರಕಿತ್ತಾದರೂ, ಗುರುತು ಪತ್ತೆಹಚ್ಚಲು ಸಾಧ್ಯವಾಗಿರಲಿಲ್ಲ. ರಮೇಶ್ ಅವರು ಇಲ್ಲಿನ ಕಡಿದಾದ ಬಂಡೆ ಮೇಲಿಂದ ಕಾಲು ಜಾರಿ ಬಿದ್ದಿರಬಹುದು. ಈ ಬಂಡೆಯಿಂದ 400 ಮೀಟರ್ ದೂರದಲ್ಲಿ ಅವರ ಮೃತದೇಹ ದೊರೆತಿದೆ' ಎಂದು ಮನಾಲಿಯ ಡಿಎಸ್‌ಪಿ ಕೆ.ಡಿ. ಶರ್ಮಾ ಅವರು ಮಾಹಿತಿ ನೀಡಿದರು.

'ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ, ಅಟಲ್ ಬಿಹಾರಿ ವಾಜಪೇಯಿ ಇನ್‌ಸ್ಟಿಟ್ಯೂಟ್ ಆಫ್ ಮೌಂಟೇನಿಯರಿಂಗ್ ಅಂಡ್ ಅಲೈಡ್ ಸ್ಪೋರ್ಟ್ಸ್, ಪೊಲೀಸರು ಮತ್ತು ಸ್ಥಳೀಯ ಪರ್ವತಾರೋಹಿಗಳ ರಕ್ಷಣಾ ತಂಡದಿಂದ ಮೃತದೇಹವನ್ನು ಹೊರತೆಗೆಯಲಾಗಿದೆ' ಎಂದರು.

'ರಾಹುಲ್ ರಮೇಶ್ ಅವರು ಮ್ಯಾರಥಾನ್ ಸೋಲಾಂಗ್ ಸ್ಕೈಲ್ರಾ ಸ್ಪರ್ಧೆಯಲ್ಲಿ ಭಾಗವಹಿಸಲು ಮನಾಲಿಗೆ ಬಂದಿದ್ದರು. ಈ ಸ್ಪರ್ಧೆಯನ್ನು ಸೆಪ್ಟೆಂಬರ್ 30 ಮತ್ತು ಅಕ್ಟೋಬರ್ 1 ರಂದು ನಿಗದಿಪಡಿಸಲಾಗಿತ್ತು. ಸೆಪ್ಟೆಂಬರ್ 29ರಂದು ರಾಹುಲ್ ರಮೇಶ್ ಅವರ ಮೊಬೈಲ್ ಜೋಗಿನಿ ಜಲಪಾತದ ಬಳಿಯ ಕಾಡಿನಲ್ಲಿ ಪತ್ತೆಯಾಗಿತ್ತು. ಅದರಲ್ಲಿನ ಫೋಟೊ ಹಾಗೂ ಸಂದೇಶಗಳನ್ನು ಪರಿಶೀಲಿಸಿದಾಗ ರಾಹುಲ್ ಅವರು ಭ್ರಿಗು ಸರೋವರದಿಂದ ಮರಳುವಾಗ ದಾರಿ ತಪ್ಪಿದ್ದಾರೆ. ಈ ಕುರಿತು ರಾಹುಲ್ ತಮ್ಮ ಸಹೋದರನಿಗೂ ಸಂದೇಶ ಕಳುಹಿಸಿದ್ದರು' ಎಂದು ಶರ್ಮಾ ತಿಳಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಆಮ್ ಆದ್ಮಿ ಕಾರ್ಯಕರ್ತರು ಕಾವೇರಿ ನದಿ ನೀರನ್ನು ತಮಿಳುನಾಡಿಗೆ ಹರಿಸುವುದನ್ನು ಖಂಡಿಸಿ ಪ್ರತಿಭಟನೆ ನಡೆಸಿದರು. ಪ್ರಜಾವಾಣಿ ಚಿತ್ರ/

ಕಾವೇರಿಗಾಗಿ ಎಎಪಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನೀರಿನ ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿ ಕರ್ನಾಟಕ ಜಲ ಸಂರಕ್ಷಣಾ ಸಮಿತಿ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಧರಣಿ ಬುಧವಾರವೂ ಮುಂದುವರಿದಿತ್ತು.

ಕಾವೇರಿ ನೀರಿನ ಸಮಸ್ಯೆಗೆ ಜೆಡಿಎಸ್, ಕಾಂಗ್ರೆಸ್ ಮತ್ತು ಬಿಜೆಪಿ ಮೂರು ಪಕ್ಷಗಳೂ ಕಾರಣ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ದೂರಿದರು.

'ಕಾವೇರಿ ಜಲಾನಯನ ಪ್ರದೇಶದ ಜಿಲ್ಲೆಗಳಾದ ಮೈಸೂರು, ಮಂಡ್ಯ, ರಾಮನಗರ, ಬೆಂಗಳೂರು ಸುತ್ತಮುತ್ತ ಕುಡಿಯಲು ಮತ್ತು ಜಾನುವಾರುಗಳಿಗೆ ನೀರಿನ ಸಮಸ್ಯೆಯಾಗಿದೆ. ಈಗಾಗಲೇ ರಾಜ್ಯದಲ್ಲಿ ಸಂಕಷ್ಟ ಸ್ಥಿತಿ ಇದ್ದು ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ತಕ್ಷಣ ನಿಲ್ಲಿಸಬೇಕು' ಎಂದು ಆಗ್ರಹಿಸಿದರು.

ದೇವಾನಂದ ಪ್ರಕರಣ: ಕ್ರಮಕ್ಕೆ ಆಗ್ರಹ

ಬೆಂಗಳೂರು: ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಕಲಗುರ್ತಿ ಗ್ರಾಮದ ದೇವಾನಂದ ರಾಮಚಂದ್ರ ಆತ್ಮಹತ್ಯೆ ಪ್ರಕರಣದ ಸೂಕ್ತ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಬೇಕು ಎಂದು ಕರ್ನಾಟಕ ರಾಜ್ಯ ಗಂಗಾಮತಸ್ಥರ ಸಂಘ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಿ. ಮೌಲಾಲಿ, 'ಕಲಬುರಗಿ ಜಿಲ್ಲೆಯ ಕಲಗುರ್ತಿ ಗ್ರಾಮದ ಹಿಂದುಳಿದ ವರ್ಗಕ್ಕೆ ಸೇರಿದ್ದ ದೇವಾನಂದ ರಾಮಚಂದ್ರ ಕೋರಬಾ ಎಂಬ ಯುವಕ 2023ರ ಜುಲೈ 20ರಂದು ಪೊಲೀಸರ ಕಿರುಕುಳ ತಾಳಲಾರದೇ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಪೊಲೀಸರು ಇದುವರೆಗೂ ಆರೋಪಿಗಳನ್ನು ಬಂಧಿಸದೇ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ. ಕೋಲಿ/ಕಬ್ಬಲಿಗ ಸಮಾಜದ ದೇವಾನಂದ ಆತ್ಮಹತ್ಯೆಗೆ ಶಿವರಾಜ ಪಾಟೀಲ, ಸಿದ್ದಣ್ಣಗೌಡ ಪಾಟೀಲ, ಅಣ್ಣಪ ಹಡಪದ ಮತ್ತು ಸಿದ್ದು ಎಂಬುವವರು ಕಾರಣ. ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ವಿಮಾನ ನಿಲ್ದಾಣದ ಬಳಿ 'ಇಂಟಿಗ್ರೇಟೆಡ್ ಟೌನ್‌ಶಿಪ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪ ಗೃಹ ಮಂಡಳಿಯು 'ಇಂಟಿಗ್ರೇಟೆಡ್ ಟೌನ್‌ಶಿಪ್' ನಿರ್ಮಿಸಲು ಮುಂದಾಗಿದ್ದು, ವಸತಿ ಸಚಿವ ಜಮೀರ್ ಅಹಮದ್ ಜಮೀನನ್ನು ಬುಧವಾರ ವೀಕ್ಷಿಸಿದರು.

ಚಿಕ್ಕಜಾಲ-ಮೀನುಕುಂಟೆ ಗ್ರಾಮದ 95.23 ಎಕರೆ ಪೈಕಿ, 65 ಎಕರೆಯಲ್ಲಿ ವಸತಿ ಹಾಗೂ ವಾಣಿಜ್ಯ ಸಂಕೀರ್ಣ ಒಳಗೊಂಡ ಟೌನ್‌ಶಿಪ್ ತಲೆ ಎತ್ತಲಿದೆ. ಜಮೀನು ಮಾಲೀಕರು ಹಾಗೂ ಗೃಹ ಮಂಡಳಿ ಸಹಭಾಗಿತ್ವದಲ್ಲಿ 50:50 ಅನುಪಾತದಲ್ಲಿ ಯೋಜನೆ ರೂಪಿಸಲಾಗಿದೆ.

ಯೋಜನೆ ಬಗ್ಗೆ ವಿವರಿಸಿದ ಜಮೀರ್ ಅಹಮದ್ ಖಾನ್, 'ಗೃಹ ಮಂಡಳಿ ವತಿಯಿಂದ ಕೈಗೆತ್ತಿಕೊಳ್ಳುತ್ತಿರುವ ಮಹತ್ವದ ಯೋಜನೆ ಇದಾಗಿದೆ. ₹ 850 ಕೋಟಿ ವೆಚ್ಚದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಇಂಟಿಗ್ರೇಟೆಡ್ ಟೌನ್‌ಶಿಪ್ ನಿರ್ಮಾಣಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. 95.23 ಎಕರೆಯಲ್ಲಿ 43 ಎಕರೆಯನ್ನು ಯೋಜನೆಯಡಿ ನೀಡಲು ರೈತರು ಸಮ್ಮತಿ ಪತ್ರ ನೀಡಿದ್ದಾರೆ. ಇದರಿಂದಾಗಿ ಒಟ್ಟು 65 ಎಕರೆ ಜಾಗ ಲಭ್ಯವಿದೆ. ಉಳಿದ ಜಮೀನು ಸಹ ಸಿಗುವ ವಿಶ್ವಾಸವಿದೆ' ಎಂದು ಹೇಳಿದರು.

'ಟೌನ್ ಶಿಪ್‌ಗೆ ಸಂಬಂಧಿಸಿದಂತೆ ಶೀಘ್ರವೇ ಸಮಗ್ರ ಕ್ರಿಯಾ ಯೋಜನೆ ರೂಪಿಸಿ, ಸರ್ಕಾರದ ಅನುಮತಿ ಪಡೆದು ಟೆಂಡರ್ ಕರೆಯಲಾಗುವುದು' ಎಂದು ತಿಳಿಸಿದರು.

ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕೆ. ಆರ್. ಪುರ ವಿಧಾನ ಸಭೆ ಕ್ಷೇತ್ರದ ನಗರೇಶ್ವರ ನಾಗೇನಹಳ್ಳಿ ಬಳಿ ₹ 95 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ 1,047 ಮನೆಗಳ ವಸತಿ ಸಮುಚ್ಚಯವನ್ನೂ ವೀಕ್ಷಿಸಿದ ಅವರು, ಶೀಘ್ರ ಕಾಮಗಾರಿ ಪೂರ್ಣ ಗೊಳಿಸಲು ಸೂಚನೆ ನೀಡಿದರು.

ಪತ್ರಕರ್ತರ ಮನೆಗೆ ದಾಳಿ: ಖಂಡನೆ

ಬೆಂಗಳೂರು: ಪತ್ರಕರ್ತರ, ವಿಡಂಬನಕಾರರ ಮನೆಗೆ ದೆಹಲಿ ಪೊಲೀಸರು ದಾಳಿ ಮಾಡಿರುವುದನ್ನು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷವು ಖಂಡಿಸಿದೆ.

ಭಯೋತ್ಪಾದಕರ ಸಂಪರ್ಕ ಇದೆ ಎಂದು ಆರೋಪಿಸಿ ಕರಾಳ ಯುಎಪಿಎ ಮೊಕದ್ದಮೆ ದಾಖಲಿಸಲು ಮುಂದಾಗಿರುವುದು ಖಂಡನೀಯ. ಇದು 1975ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಪತ್ರಿಕಾ ರಂಗದ ಮೇಲೆ ನಡೆದ ದಬ್ಬಾಳಿಕೆಯನ್ನು ನೆನಪಿಸುತ್ತಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಪೊಲೀಸರ ಈ ನಡೆಯ ಬಗ್ಗೆ ಯಾವುದೇ ಸಮರ್ಥನೆ ಅಥವಾ ವಿವರಣೆಯನ್ನು ನೀಡಿಲ್ಲ. ಸರ್ವಾಧಿಕಾರಿ ಫ್ಯಾಸಿಸ್ಟ್ ಸರ್ಕಾರವು ಹೇಗೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡುತ್ತದೆ ಎಂಬುದಕ್ಕೆ ಇದು ಉದಾಹರಣೆ ಎಂದು ಎಸ್‌ಯುಸಿಐ (ಕಮ್ಯುನಿಸ್ಟ್) ರಾಜ್ಯ ಕಾರ್ಯದರ್ಶಿ ಕೆ. ಉಮಾ ತಿಳಿಸಿದ್ದಾರೆ.

24 ಪ್ರಬೇಧಗಳಲ್ಲಿ 2 ವಿನಾಶದಂಚಿಗೆ, ಅಪಾಯದ ಸ್ಥಿತಿಯಲ್ಲಿ 15 ಪ್ರಬೇಧಗಳು

ಕರ್ನಾಟಕದ 'ಕುಣಿವ ಕಪ್ಪೆ'ಗಳು ಅಪಾಯದಂಚಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ಹವಾಮಾನ ಬದಲಾವಣೆ ಕಾರಣಕ್ಕಾಗಿ 2004 ರಿಂದ 2022 ರ ಅವಧಿಯಲ್ಲಿ ಜಾಗತಿಕವಾಗಿ 300 ಕ್ಕೂ ಹೆಚ್ಚು ಉಭಯಜೀವಿಗಳು ವಿನಾಶದಂಚಿಗೆ ತಲುಪಿವೆ.

ಕರ್ನಾಟಕದಲ್ಲಿ ಮಾತ್ರ ಕಂಡುಬರುವ 'ಕುಣಿವ ಕಪ್ಪೆ'ಗಳ 24 ಪ್ರಬೇಧಗಳಲ್ಲಿ 2 ವಿನಾಶದಂಚಿಗೆ ತಲುಪಿದ್ದರೆ, 15 ಪ್ರಬೇಧಗಳು ಅಪಾಯದ ಸ್ಥಿತಿಯಲ್ಲಿವೆ. 'ನೇಚರ್' ವೈಜ್ಞಾನಿಕ ಪತ್ರಿಕೆಯಲ್ಲಿ (ಅ.4 ರ ಸಂಚಿಕೆ) ಈ ಕುರಿತು ವಿಸ್ತೃತ ವೈಜ್ಞಾನಿಕ ಲೇಖನವೊಂದು ಪ್ರಕಟವಾಗಿದೆ.

'ಕುಣಿವ ಕಪ್ಪೆ'ಗಳ ಪ್ರಬೇಧಗಳು ಭಾರತ- ಮಲಯಾ ಭೂಭಾಗದ ಅತಿ ಹೆಚ್ಚು ಅಪಾಯದಲ್ಲಿರುವ ಕಪ್ಪೆಗಳ ಕುಟುಂಬ. ಭಾರತದಲ್ಲಿ 426 ಪ್ರಬೇಧಗಳ ಅಧ್ಯಯನ ನಡೆಸಿದ್ದು, 136 ಪ್ರಬೇಧಗಳು (ಶೇ 41) ಅಪಾಯದಂಚಿಗೆ ತಲುಪಿವೆ. ಕೇರಳದಲ್ಲಿ ಅತಿ ಹೆಚ್ಚು ಪ್ರಬೇಧಗಳು ಅಪಾಯದ ಸ್ಥಿತಿಯಲ್ಲಿವೆ. ಆ ಬಳಿಕ ತಮಿಳುನಾಡು ಮತ್ತು ಕರ್ನಾಟಕದಲ್ಲೂ ಕಪ್ಪೆಗಳು ಅಪಾಯದಂಚಿಗೆ ಹೋಗಿವೆ. ರಾಜ್ಯದಲ್ಲಿ 100 ಪ್ರಬೇಧದ ಕಪ್ಪೆಗಳಲ್ಲಿ 30 ರಷ್ಟು ಅಪಾಯದಲ್ಲಿವೆ.

ಮೂಡಿಗೆರೆ ತಾಲ್ಲೂಕಿನ ಕೊಟ್ಟಿಗೆಹಾರದ ಕುಣಿವ ಕಪ್ಪೆಗಳು

'ಸೃಷ್ಟಿ ಮಣಿಪಾಲ ಕಲೆ, ವಿನ್ಯಾಸ ಮತ್ತು ತಂತ್ರಜ್ಞಾನ ಸಂಸ್ಥೆ'ಯ ಪ್ರಾಧ್ಯಾಪಕ ಗುರುರಾಜ ಕೆ.ವಿ ಅವರು ಈ ವೈಜ್ಞಾನಿಕ ಲೇಖನದ ಸಹ ಲೇಖಕರೂ ಆಗಿದ್ದಾರೆ. ಗುರುರಾಜ್ ಪ್ರಕಾರ 'ಕಪ್ಪೆಗಳ ಬಗ್ಗೆ ಅರಿವು ಮಾತ್ರವಲ್ಲ, ಅವುಗಳ ಆವಾಸಸ್ಥಾನ, ಹವಾಮಾನ ವೈಪರೀತ್ಯದಿಂದ ಆಗುವ ಪರಿಣಾಮಗಳು, ಗುಣಲಕ್ಷಣಗಳು ಮತ್ತು ವಿಕಸನಗಳ ಬಗ್ಗೆ ವೈಜ್ಞಾನಿಕ ಅಧ್ಯಯನದ ಅವಶ್ಯ ಇದೆ. ಅಲ್ಲದೇ, ರಾಜ್ಯ ಮತ್ತು ರಾಷ್ಟ್ರ ವ್ಯಾಪಿ ಉಭಯ ಜೀವಿ ಸಂರಕ್ಷಣಾ ನೀತಿಯ ಅವಶ್ಯಕತೆ ಇದೆ. ಕಪ್ಪೆಗಳನ್ನು ಗುರುತಿಸುವುದರ ಜತೆಗೆ ಅಧ್ಯಯನದಲ್ಲೂ ಪಾಲ್ಗೊಳ್ಳಲು ಪ್ರೋತ್ಸಾಹ ನೀಡಬೇಕಾಗಿದೆ'.

ಹಿಂದಿನ ಅಧ್ಯಯನಕ್ಕಿಂತ ಭಿನ್ನ ಫಲಿತಾಂಶ: ಈ ಹಿಂದೆ ನಡೆಸಿದ್ದ ಅಧ್ಯಯನದಲ್ಲಿ ಆವಾಸಸ್ಥಾನ ನಾಶ ಮತ್ತು ಸಾಂಕ್ರಾಮಿಕ ರೋಗಗಳು ಉಭಯಜೀವಿಗಳ ಅವನತಿಗೆ ಕಾರಣ ಎಂದು ಹೇಳಲಾಗಿತ್ತು. ಆದರೆ, ವಿಶ್ವದಾದ್ಯಂತ ಎರಡು ದಶಕಗಳ ಅಮೂಲ್ಯ ದತ್ತಾಂಶವನ್ನು ವಿಶ್ಲೇಷಿಸಿರುವ ಹೊಸ ಲೇಖನವು ಹವಾಮಾನ ಬದಲಾವಣೆಯು ಕಪ್ಪೆಗಳು, ಸಲಾಮಾಂಡರ್‌ಗಳು ಮತ್ತು ಸಿಸಿಲಿಯನ್‌ಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಲು ಏಕೈಕ ಕಾರಣ ಎಂದು ಲೇಖನವು ಪ್ರತಿಪಾದಿಸಿದೆ.

ಕೃಷಿಯ ಪರಿಣಾಮ ಆವಾಸಸ್ಥಾನ ನಾಶ, ಅವನತಿ (ಬೆಳೆಗಳು, ಜಾನುವಾರುಗಳು ಮತ್ತು ಜಾನುವಾರು ಮೇಯಿಸುವಿಕೆ, ಮರಗಳ ಬೆಳೆಸುವುದು), ಅಭಿವೃದ್ಧಿ ಮತ್ತು ಇತರ ಕೈಗಾರಿಕೆಗಳೂ ಉಭಯ ಜೀವಿಗಳ ಸಂಖ್ಯೆಯ ಕುಸಿತಕ್ಕೆ ಪ್ರಮುಖ ಕಾರಣವಾಗಿವೆ. ಅಲ್ಲದೇ, ಕೆಲವು ದೇಶಗಳಲ್ಲಿ ಮಾನವರು ಮತ್ತು ಇತರ ಪ್ರಾಣಿಗಳು ಶಿಲೀಂಧ್ರವನ್ನು ಹೊಸ ಸ್ಥಳಗಳಿಗೆ ಪರಿಚಯಿಸುವುದರಿಂದ ಎರಡನೇ ಜಾಗತಿಕ ಉಭಯಜೀವಿಗಳ ಸಾಂಕ್ರಾಮಿಕ ರೋಗವನ್ನು ಕಾಣಬಹುದು. ಇದರಿಂದ ಕಪ್ಪೆಗಳ ಸಾಮೂಹಿಕ ನಾಶವಾಗುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.

ಅಂಕಿ-ಅಂಶಗಳು

8,000 ಉಭಯಜೀವಿ ಪ್ರಬೇಧಗಳ ಮೌಲ್ಯಮಾಪನ

2,286 ಕಪ್ಪೆ ಜಾತಿಗಳ ಮೊದಲ ಬಾರಿ ಮೌಲ್ಯಮಾಪನ

1000 ವಿಷಯ ತಜ್ಞರು ದತ್ತಾಂಶ ಮತ್ತು ಪರಿಣಿತಿ ಹಂಚಿಕೆ

ದಕ್ಷಿಣ ಭಾರತದ ಸ್ಥಿತಿಗತಿ

ರಾಜ್ಯ	ಪ್ರಬೇಧಗಳು	ಅಳಿವಿನತ್ತ	ಶೇ
ಕೇರಳ	178	84	53.5
ತಮಿಳುನಾಡು	128	54	45.4
ಕರ್ನಾಟಕ	100	30	30

(ನೇಚರ್‌ನಲ್ಲಿ ಪ್ರಕಟಗೊಂಡ ಲೇಖನ 'ongoing declines for the worlds amphibians in the emerging threat's')

ಅಳಿವಿನಂಚಿನ ಜಾಗತಿಕ ಕಪ್ಪೆಗಳು

2004 ರ ಬಳಿಕ ಅಳಿವಿನಂಚಿನಲ್ಲಿರುವ ಕಪ್ಪೆಗಳೆಂದರೆ ಕೋಸ್ಟರಿಕಾದ ಚಿರಿಕ್ವಿ ಹಾರ್ಲೆಕ್ವಿನ್ ಟೋಡ್. ಆಸ್ಟ್ರೇಲಿಯಾದ ಚೂಪು ಮೂತಿಯ ದಿನದ ಕಪ್ಪೆ. ಗ್ವಾಟೆಮಾಲದ ಕ್ರಾಗಸ್ಟರ್ ಮೈಲೋಮಿಲೋನ್ ಮತ್ತು ಜಲ್ಪಾ ಫಾಲ್ಸ್ ಬ್ರೂಕ್ ಸಲಾಮಾಂಡರ್. 27 ಹೆಚ್ಚುವರಿ ತೀಕ್ಷ್ಣವಾಗಿ ಅಳಿವಿನಂಚಿನಲ್ಲಿರುವ ಪ್ರಭೇದಗಳು ಈಗ ವಿನಾಶ ಹೊಂದಿರುವುದಾಗಿ ಪರಿಗಣಿಸಲಾಗಿದೆ.

ಮೈಸೂರು ರೇಸ್

ಶ್ಯಾಮ್‌ರಾಕ್ ಗೆಲ್ಲುವ ನಿರೀಕ್ಷೆ

ರಾಜಕುಮಾರಿ ಲೀಲಾವತಿ ದೇವಿ ಮೆಮೋರಿಯಲ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರದಾನ ಆಕರ್ಷಣೆಯಾಗಿದ್ದು, ಶ್ಯಾಮ್‌ರಾಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಪರ್ಫೆಕ್ಟ್ ಹಾಲೊ 11, ಸ್ಟಾರ್ ಸಿಟಿಜನ್ 12, ಸ್ಕೈ ಪ್ರಿನ್ಸೆಸ್ 2
2ನೇ ರೇಸ್: ದಿ ಅಟ್ಲಾಂಟಸ್ 4, ಸ್ಟಾರ್ ಅಜೀಮ್ 2, ರಾಜ್ 1
3ನೇ ರೇಸ್: ಲಿಯೊಪಾರ್ಡ್ 4, ಎಂಬೊಸಮ್ 3, ಅಥುಲ್ಯಾ 1
4ನೇ ರೇಸ್: ಫೆರೆಟ್ಟ 3, ಇಂಡಿಯನ್ ಗ್ಲೋರಿ 4, ಡಿ ರೋಮನ್ ರೀನ್ಸ್ 2
5ನೇ ರೇಸ್: ಶ್ಯಾಮ್‌ರಾಕ್ 4, ಫಾರೆಸ್ಟಿ 6, ಮೂನ್ಸ್ ಬ್ಲೆಸಿಂಗ್ 3
6ನೇ ರೇಸ್: ಕೆನ್ಸಿಂಗ್ಟನ್ ಕೋರ್ಟ್ 1, ಡೆವಿಲ್ಸ್ ಮ್ಯಾಜಿಕ್ 6, ಕಿಂಗ್ ಎನ್ ಐ 11
7ನೇ ರೇಸ್: ಪೆಲೂಷೆ 5, ಸ್ಟ್ರೈಕಿಂಗ್ ಮೆಮೋರಿ 10, ಸೂಪರ್ ಗ್ಲೇಡಿಯೇಟರ್ 6

ಉತ್ತಮ ಬೆಟ್: ಲಿಯೊಪಾರ್ಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ಸ್ಪರ್ಧಾ ವಾಣಿ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಮತ್ತಷ್ಟು 'ಪ್ರಚಲಿತ'ಕ್ಕಾಗಿ..
ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳು ಸೇರಿದಂತೆ ನಾಗರಿಕ ಸೇವಾ ಪರೀಕ್ಷೆಗಳಿಗೆ ಪೂರಕವಾದ ಲೇಖನ, ವಿಡಿಯೊಗಳಿಗಾಗಿ ಪ್ರಜಾವಾಣಿ- ಡೆಕ್ಕನ್‌ಹೆರಾಲ್ಡ್ ಎಕ್ಸಾಮ್ 'ಮಾಸ್ಟರ್‌ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ.
ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.
www.exammastermind.com

8ನೇ ಖಂಡ ಗೊತ್ತೆ? 'ಝೀಲ್ಯಾಂಡಿಯಾ'

> ಝೀಲ್ಯಾಂಡಿಯಾ ಪ್ರಾಚೀನ ಮಹಾಖಂಡವಾದ ಗೊಂಡ್ವಾನಾದ ಭಾಗವಾಗಿತ್ತು ಎಂಬುದು ವಿಶೇಷ. ಝೀಲ್ಯಾಂಡಿಯಾ ವಿಶಾಲವಾದ ಖಂಡವಾಗಿದ್ದು, ಮಡಗಾಸ್ಕರ್‌ಗಿಂತ ಆರು ಪಟ್ಟು ದೊಡ್ಡದಾಗಿದೆ.

ಆರ್.ಬಿ.ಗುರುಬಸವರಾಜ

ಈವರೆಗೆ ವಿಶ್ವದಲ್ಲಿದ್ದ 7 ಖಂಡಗಳ ಪಟ್ಟಿಗೆ ಮತ್ತೊಂದು ಖಂಡ ಸೇರ್ಪಡೆಯಾಗಿದೆ. 375 ವರ್ಷಗಳಿಂದ ನಮ್ಮ ಜ್ಞಾನದಿಂದ ಕಾಣೆಯಾಗಿದ್ದ ಹೊಸ ಖಂಡವನ್ನು ವಿಜ್ಞಾನಿಗಳು ಇತ್ತೀಚೆಗೆ ಕಂಡುಹಿಡಿದಿದ್ದಾರೆ. ಹೊಸ ಖಂಡಕ್ಕೆ 'ಝೀಲ್ಯಾಂಡಿಯಾ' ಎಂದು ಹೆಸರಿಡಲಾಗಿದೆ. ಹೊಸ ಖಂಡವು ಶೇ 94ರಷ್ಟು ನೀರಿನ ಅಡಿಯಲ್ಲಿದೆ ಹಾಗೂ ನ್ಯೂಜಿಲೆಂಡ್‌ನಂತೆ ಕೆಲ ದ್ವೀಪಗಳ ಗುಂಪನ್ನು ಹೊಂದಿದೆ.

ಝೀಲ್ಯಾಂಡಿಯಾ ಪ್ರಾಚೀನ ಮಹಾಖಂಡವಾದ ಗೊಂಡ್ವಾನಾದ ಭಾಗವಾಗಿತ್ತು ಎಂಬುದು ವಿಶೇಷ. ಝೀಲ್ಯಾಂಡಿಯಾ ವಿಶಾಲವಾದ ಖಂಡವಾಗಿದ್ದು, ಮಡಗಾಸ್ಕರ್‌ಗಿಂತ ಆರು ಪಟ್ಟು ದೊಡ್ಡದಾಗಿದೆ. 1.89 ದಶಲಕ್ಷ ಚದರ ಮೈಲುಗಳು ಅಥವಾ 4.9 ದಶಲಕ್ಷ ಚದರ ಕಿಲೋಮೀಟರ್ ವಿಸ್ತೀರ್ಣ ಹೊಂದಿದೆ.

ಹೆಸರು ಬಂದಿದ್ದು ಹೀಗೆ: ಝೀಲ್ಯಾಂಡಿಯಾ ಎಂಬ ಇಂಗ್ಲಿಷ್ ಪದವು ನ್ಯೂಜಿಲೆಂಡ್‌ನ ಲ್ಯಾಟಿನೇಟ್ ಮೂಲದ್ದಾಗಿದೆ. 1990ರ ದಶಕದ ಮಧ್ಯಭಾಗದಲ್ಲಿ ಈ ಹೆಸರನ್ನು ರೂಪಿಸಲಾಯಿತು. ಮಾವೋರಿ ಭಾಷೆಯಲ್ಲಿ ಈ ಭೂಪ್ರದೇಶವನ್ನು 'ತೆ ರಿಯು-ಎ-ಮೌಯಿ' ಎಂದು ಹೆಸರಿಸಲಾಗಿದೆ. ಇದರರ್ಥ 'ಮೌಯಿ ಬೆಟ್ಟಗಳು, ಕಣಿವೆಗಳು ಮತ್ತು ಬಯಲು ಪ್ರದೇಶಗಳು' ಎಂಬರ್ಥ ನೀಡುತ್ತದೆ.

ಸಂಪನ್ಮೂಲಗಳು : ಝೀಲ್ಯಾಂಡಿಯಾವು ಸಾಕಷ್ಟು ಆರ್ಥಿಕ ಸಂಪನ್ಮೂಲ ಹೊಂದಿದೆ. ಅದರಲ್ಲಿ ಹೆಚ್ಚಿನ ಪ್ರಮಾಣದ ಕಡಲತೀರದ ಮೀನುಗಾರಿಕೆ ಇದೆ ಮತ್ತು ಅನಿಲ ಕ್ಷೇತ್ರಗಳನ್ನು ಹೊಂದಿದೆ. ಅದರಲ್ಲಿ ತಾರಾನಕಿ ಬಳಿಯ ನ್ಯೂಜಿಲೆಂಡ್ ಮಾಯಿ ಅನಿಲ ಕ್ಷೇತ್ರವು ದೊಡ್ಡದು. 2007ರಲ್ಲಿ ಗ್ರೇಟ್ ಸೌತ್ ಬೇಸಿನ್‌ನಲ್ಲಿ ತೈಲ ಪರಿಶೋಧನೆಗಾಗಿ ಅನುಮತಿಯನ್ನು ನೀಡಲಾಯಿತು. ಕಡಲಾಚೆಯ ಖನಿಜ ಸಂಪನ್ಮೂಲಗಳಲ್ಲಿ ಕಬ್ಬಿಣಾಂಶಭರಿತ ಮರಳು, ಬೃಹತ್ ಜ್ವಾಲಾಮುಖಿ ಸಲ್ಫೈಡ್‌ಗಳು ಮತ್ತು ಫೆರೋಮಾಂಗನೀಸ್ ಗಂಟು ನಿಕ್ಷೇಪಗಳು ಸೇರಿವೆ.



ಭೂವೈಜ್ಞಾನಿಕ ಉಪವಿಭಾಗಗಳು ಝೀಲ್ಯಾಂಡಿಯಾವನ್ನು ಸಾಂದರ್ಭಿಕವಾಗಿ ವಿಜ್ಞಾನಿಗಳು ಎರಡು ಪ್ರದೇಶಗಳಾಗಿ ವಿಂಗಡಿಸಿದ್ದಾರೆ. ಒಂದು ಉತ್ತರ ಝೀಲ್ಯಾಂಡಿಯಾ ಅಥವಾ ಪಶ್ಚಿಮ ಪ್ರಾಂತ್ಯ. ಇನ್ನೊಂದು ದಕ್ಷಿಣ ಝೀಲ್ಯಾಂಡಿಯಾ ಅಥವಾ ಪೂರ್ವ ಪ್ರಾಂತ್ಯ. ಈ ಎರಡು ವೈಶಿಷ್ಟ್ಯಗಳನ್ನು ಆಲ್ಪೈನ್ ಫಾಲ್ಟ್ ಮತ್ತು ಕೆರ್ಮಾಡೆಕ್ ಟ್ರೆಂಚ್ ಮತ್ತು ಬೆಣೆಯಾಕಾರದ ಹಿಕುರಂಗಿ ಪ್ರಸ್ಥಭೂಮಿಯಿಂದ ಪ್ರತ್ಯೇಕಿಸಲಾಗಿದೆ.

2022ರ ಹೊತ್ತಿಗೆ, ಝೀಲ್ಯಾಂಡಿಯಾದ ಒಟ್ಟು ಮಾನವ ಜನಸಂಖ್ಯೆಯು ಸರಿಸುಮಾರು 5.4 ದಶಲಕ್ಷ ಆಗಿದೆ. ಸುಮಾರು 1.7 ದಶಲಕ್ಷ ಜನಸಂಖ್ಯೆ ಹೊಂದಿರುವ ಆಕ್ಲೆಂಡ್ ದೊಡ್ಡ ನಗರವಾಗಿದ್ದು, ಖಂಡದ ಒಟ್ಟು ಜನಸಂಖ್ಯೆಯ ಮೂರನೇ ಒಂದು ಭಾಗ ಹೊಂದಿದೆ. ❖

ಪತ್ತೆ ಹಚ್ಚಿದ್ದು ಹೀಗೆ

ಎಂಟನೇ ಖಂಡದ ಬಹುಭಾಗವು ನೀರಿನಲ್ಲಿ ಮುಳುಗಿರುವುದರಿಂದ ಸಾಗರ ತಳದಲ್ಲಿನ ಬಂಡೆಗಳ ಮಾದರಿಗಳ ದತ್ತಾಂಶಗಳಿಂದ ಝೀಲ್ಯಾಂಡಿಯಾದ ಹೊಸ ನಕ್ಷೆ ರೂಪಿಸಲಾಗಿದೆ. ಅನೇಕ ಭೂವಿಜ್ಞಾನಿಗಳು ಮತ್ತು ಭೂಕಂಪಶಾಸ್ತ್ರಜ್ಞರನ್ನು ಒಳಗೊಂಡ ಅಂತರರಾಷ್ಟ್ರೀಯ ತಂಡವು ಝೀಲ್ಯಾಂಡಿಯಾದ ಸಂಸ್ಕರಿಸಿದ ನಕ್ಷೆಯನ್ನು ಬಿಡುಗಡೆ ಮಾಡಿದ್ದಾರೆ.

ಹೊಸ ಖಂಡವನ್ನು ಅಧ್ಯಯನ ಮಾಡುವುದು ವಿಜ್ಞಾನಿಗಳಿಗೆ ಸವಾಲಾಗಿತ್ತು. ಏಕೆಂದರೆ ಖಂಡದ ಬಹುಭಾಗವು ನೀರಿನಲ್ಲಿ ಮುಳುಗಿತ್ತು. ಸಮುದ್ರದ ತಳದಿಂದ ಬೆಳೆದ ಬಂಡೆಗಳು ಮತ್ತು ಕೆಸರು ಮಾದರಿಗಳ ಸಂಗ್ರಹಗಳನ್ನು ಅಧ್ಯಯನಕ್ಕೆ ಒಳಪಡಿಸಿದರು. ಹಲವಾರು ಭೂವಿಜ್ಞಾನಿಗಳು ಮತ್ತು ಭೂಕಂಪಶಾಸ್ತ್ರಜ್ಞರನ್ನು ಒಳಗೊಂಡಿರುವ ವಿಭಿನ್ನ ಸಂಶೋಧನಾ ತಂಡವು ಉತ್ತರ ಝೀಲ್ಯಾಂಡಿಯಾದ ಮೇಲೆ ಗಮನ ಕೇಂದ್ರೀಕರಿಸಿತು. ನಿರ್ದಿಷ್ಟವಾಗಿ ಆಸ್ಟ್ರೇಲಿಯಾದ ಕರಾವಳಿಯ ದಕ್ಷಿಣ ಪೆಸಿಫಿಕ್‌ನಲ್ಲಿರುವ ಫೇರ್‌ವೇ ರಿಡ್ಜ್ ಪ್ರದೇಶ, ಝೀಲ್ಯಾಂಡ್‌ನ ಉತ್ತರದ ತುದಿ. ಅಲ್ಲಿ ಜ್ವಾಲಾಮುಖಿ ಮತ್ತು ಸೆಡಿಮೆಂಟರಿ ರಚನೆಗಳ ಮಿಶ್ರಣವನ್ನು ಒಳಗೊಂಡಿರುವ 25 ಮಿಲಿಯನ್ ವರ್ಷಗಳವರೆಗೆ ಒಣ ಭೂಮಿಯಿಂದ ಸ್ಪರ್ಶಿಸದ ಪ್ರಾಚೀನ ಬಂಡೆಗಳನ್ನು ಭೂವಿಜ್ಞಾನಿಗಳು ವಿಶ್ಲೇಷಿಸಿದ್ದಾರೆ.

ರಸಾಯನವಿಜ್ಞಾನ ಮತ್ತು ವಿಕಿರಣಶೀಲ ಐಸೊಟೋಪ್‌ಗಳನ್ನು ಕೂಲಂಕಷವಾಗಿ ಪರಿಶೀಲಿಸುವ ಮೂಲಕ, ಅವರು ಬಂಡೆಗಳ ವಯಸ್ಸನ್ನು ನಿರ್ಧರಿಸಿದರು. ಆರಂಭಿಕ ಕ್ರಿಟೇಶಿಯಸ್‌ನಿಂದ ಉಂಡೆಗಳನ್ನೂ, ಕ್ರಿಟೇಶಿಯಸ್‌ನಿಂದ ಮರಳುಗಲ್ಲು ಮತ್ತು ಈಯೋಸೀನ್‌ನಿಂದ ಕಿರಿಯ ಬಸಾಲ್ಟ್‌ಗಳನ್ನು ಪತ್ತೆಹಚ್ಚಿದರು. ಅಸ್ಪಷ್ಟ ಭೂಪ್ರದೇಶವಾಗಿದ್ದ ಝೀಲ್ಯಾಂಡಿಯಾವನ್ನು ವಿಭಿನ್ನ ಭೌಗೋಳಿಕತೆಯಿಂದ ನಿರೂಪಿಸಲ್ಪಟ್ಟ ಪ್ರದೇಶವಾಗಿ ಪರಿವರ್ತಿಸಿದರು.

ಪಶ್ಚಿಮ ಅಂಟಾರ್ಕ್ಟಿಕಾ ಹಾಗೂ ಸುತ್ತಮುತ್ತಲಿನ ಸಾಗರ ತಳದಲ್ಲಿನ ಕಾಂತೀಯ ವೈಪರೀತ್ಯಗಳನ್ನು ಪರಿಶೀಲಿಸಿ, ಅದರ ಪ್ರಾಚೀನ ವಿಸ್ತರಣೆ ಮತ್ತು ದಿಕ್ಕಿನ ಪಲ್ಲಟಗಳ ಮೇಲೆ ಬೆಳಕು ಚೆಲ್ಲಿದರು. ಹೀಗೆ ವಿವಿಧ ಅಧ್ಯಯನಗಳ ನಂತರ ಇದೊಂದು ಮುಳುಗಿದ ಹಾಗೂ ಅತಿ ತೆಳು ಖಂಡ ಎಂದು ಅಂತಿಮಗೊಳಿಸಿದರು. ನವೀಕರಿಸಿದ ನಕ್ಷೆಯು ಝೀಲ್ಯಾಂಡಿಯಾ ಖಂಡವನ್ನು ರೂಪಿಸುವ ಮ್ಯಾಗ್ಮ್ಯಾಟಿಕ್ ಆರ್ಕ್ ಅಕ್ಷದ ಸ್ಥಳವನ್ನು ಮತ್ತು ಹಲವಾರು ಪ್ರಮುಖ ಭೂವೈಜ್ಞಾನಿಕ ಲಕ್ಷಣಗಳನ್ನು ತೋರಿಸಿದೆ.

1642ರಲ್ಲಿ ಡಚ್ ಪರಿಶೋಧಕ ಅಬೆಲ್ ಟ್ಯಾಸ್ಮನ್ ಝೀಲ್ಯಾಂಡಿಯಾ ಖಂಡದ ಬಗ್ಗೆ ಒಂದಿಷ್ಟು ಅನುಮಾನ ವ್ಯಕ್ತಪಡಿಸಿದ್ದರು. ಆದರೆ ನಿರ್ದಿಷ್ಟ ಅಧ್ಯಯನದ ಕೊರತೆಯಿಂದ ಅದು ಅಂತಿಮಗೊಂಡಿರಲಿಲ್ಲ. 1995 ರಲ್ಲಿ ಬ್ರೂಸ್ ಲ್ಯುಯೆಂಡಿಕ್ ಅವರು ಝೀಲ್ಯಾಂಡಿಯಾದ ಹೆಸರು ಮತ್ತು ಪರಿಕಲ್ಪನೆಯನ್ನು ಪುನರ್ ಪ್ರಸ್ತಾಪಿಸಿದರು. ಉಪಗ್ರಹದ ಚಿತ್ರಗಳ ಆಧಾರದ ಮೇಲೆ 2021ರ ಅಧ್ಯಯನವು ಝೀಲ್ಯಾಂಡಿಯಾವು ಭೂವಿಜ್ಞಾನಿಗಳು ಹಿಂದೆ ಭಾವಿಸಿದ್ದಕ್ಕಿಂತ ಎರಡು ಪಟ್ಟು ಹಳೆಯದು. ಅಂದರೆ ಅದು ಒಂದು ಶತಕೋಟಿ ವರ್ಷಗಳಷ್ಟು ಹಳೆಯದಾಗಿದೆ ಎಂದು ಸೂಚಿಸುತ್ತದೆ ಎಂದು ತೀರ್ಮಾನಿಸಿದರು. ಸುಮಾರು 23 ದಶಲಕ್ಷ ವರ್ಷಗಳ ಹಿಂದೆ ಭೂಪ್ರದೇಶವು ಸಂಪೂರ್ಣವಾಗಿ ಮುಳುಗಿ ಹೋಗಿರಬಹುದು ಎಂದು ಲೆಕ್ಕಾಚಾರ ಹಾಕಲಾಗಿದೆ. 2017ರಿಂದ ಪ್ರಾರಂಭವಾದ ಅಧ್ಯಯನ 2023ರಲ್ಲಿ ಮುಕ್ತಾಯಗೊಂಡಿದ್ದು, ಹೊಸ ನಕ್ಷೆಯನ್ನು ರೂಪಿಸಲಾಗಿದೆ. ❖

ಪ್ರಚಲಿತ ವಿದ್ಯಮಾನಗಳು

ದೀರ್ಘಾವಧಿಯ ಹಸಿರು ಬಾಂಡುಗಳು ಮತ್ತು ಸರ್ಕಾರಿ ಭದ್ರತೆಗಳು

50 ವರ್ಷಗಳ ನಂತರ ಮರು ಪಾವತಿ ಮಾಡಬೇಕಾದ ಸರ್ಕಾರಿ ಬಾಂಡುಗಳ ಮತ್ತು 30 ವರ್ಷದ ನಂತರ ಮರುಪಾವತಿ ಮಾಡಬೇಕಾದ ಹಸಿರು ಬಾಂಡುಗಳ ವಿತರಿಸುವ ಕುರಿತು ಇತ್ತೀಚೆಗೆ ಭಾರತ ಸರ್ಕಾರ ನಿರ್ಧಾರ ಕೈಗೊಂಡಿದೆ. ಜೀವವಿಮಾ ಸಂಸ್ಥೆಗಳು ಮತ್ತು ಭವಿಷ್ಯನಿಧಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ದೀರ್ಘಾವಧಿಯ ಹೂಡಿಕೆಗೆ ಅವಕಾಶಗಳನ್ನು ಕಲ್ಪಿಸಬೇಕು ಎಂದು ಸರ್ಕಾರದಲ್ಲಿ ಮನವಿ ಮಾಡುತ್ತಿತ್ತು. ಈ ಬೇಡಿಕೆಗೆ ಅನುಸಾರ ದೀರ್ಘಾವಧಿಯ ಹಸಿರು ಬಾಂಡು ಮತ್ತು ಸರ್ಕಾರಿ ಬಾಂಡುಗಳನ್ನು ವಿತರಿಸಲು ಮುಂದಾಗಿದೆ.

ಭವಿಷ್ಯ ನಿಧಿಯ ನಿರ್ವಹಣೆಯಲ್ಲಿ ತೊಡಗಿಕೊಂಡಿರುವ ಸಂಸ್ಥೆಗಳು ಮತ್ತು ಪಿಂಚಣಿ ವಲಯದಲ್ಲಿ ತೊಡಗಿಕೊಂಡಿರುವ ಸಂಸ್ಥೆಗಳು ಹಾಗೂ ವಿಮಾ ಸಂಸ್ಥೆಗಳು ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಸಂದರ್ಭದಲ್ಲಿ ದೀರ್ಘಾವಧಿಗೆ ಸಂಗ್ರಹಿಸುತ್ತದೆ. ಸಂಗ್ರಹಣೆಗೆ ಅನುಗುಣವಾಗಿ ವಿಮಾ ಕಂಪನಿಗಳು, ಭವಿಷ್ಯ ನಿಧಿಯ ಕಂಪನಿಗಳು ಮತ್ತು ಪಿಂಚಣಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ನಷ್ಟದ ಸಾಧ್ಯತೆಗಳು ಕಡಿಮೆ ಇರುವ ವಲಯದಲ್ಲಿ ಹೂಡಿಕೆಗೆ ಹೆಚ್ಚು ಆಸಕ್ತರಾಗಿರುತ್ತಾರೆ. ಖಾಸಗಿ ವಲಯದ ಬಾಂಡುಗಳ ಮೇಲೆ ಹೂಡಿಕೆಯನ್ನು ಮಾಡಿದರೆ ನಷ್ಟ ಅನುಭವಿಸುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ ಆದ್ದರಿಂದ ವಿಮಾ ಸಂಸ್ಥೆಗಳು, ಭವಿಷ್ಯ ನಿಧಿಯ ಸಂಸ್ಥೆಗಳು 20 ಪಿಂಚಣಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಸಾರ್ವಜನಿಕರಿಂದ ಸಂಗ್ರಹಿಸಿದ ಹಣವನ್ನು ಸರ್ಕಾರಿ ಬಾಂಡುಗಳ ಮೇಲೆ ಹೂಡಿಕೆ ಮಾಡಿದರೆ ನಷ್ಟದ ಯಾವುದೇ ಸಾಧ್ಯತೆ ಇರುವುದಿಲ್ಲ.

ಹಸಿರು ಬಾಂಡುಗಳ ಮರುಪರಿಚಯ

ಹಸಿರು ಬಾಂಡುಗಳನ್ನು ಕೆಲ ವರ್ಷಗಳ ಮುಂಚೆ ವಿತರಣೆ ಮಾಡಿತ್ತು. ಮತ್ತೊಮ್ಮೆ 2023ರಲ್ಲಿ ಹಸಿರು ಬಾಂಡುಗಳ ವಿತರಣೆಗೆ ಮುಂದಾಗಿದೆ.

ಭಾರತೀಯ ನೌಕಾಪಡೆಯ ಸ್ವಾವಲಂಬನ್-2.0

ಅಕ್ಟೋಬರ್ 2023ರ ಮೊದಲ ವಾರದಲ್ಲಿ ಭಾರತೀಯ ನೌಕಾಪಡೆ ಸ್ವಾವಲಂಬನ-2.0 ಕಾರ್ಯಸೂಚಿಯನ್ನು ಬಿಡುಗಡೆ ಮಾಡುವುದಾಗಿ ಘೋಷಿಸಿದೆ. ನೌಕಾಪಡೆಗೆ ಬೇಕಾಗುವ ಶಸ್ತ್ರಾಸ್ತ್ರ ಮತ್ತು ಉಪಕರಣಗಳನ್ನು ಭಾರತದಲ್ಲಿ ತಯಾರಿಸುವ ಕಾರ್ಯಸೂಚಿ ಎಂದು ಪರಿಗಣಿಸಬಹುದು.

ಭಾರತೀಯ ನೌಕಾಪಡೆಗೆ ಬೇಕಾದ ಉಪಕರಣಗಳು ಮತ್ತು ಶಸ್ತ್ರಾಸ್ತ್ರಗಳನ್ನು ಹೆಚ್ಚಾಗಿ ಆಮದು ಮಾಡಿಕೊಳ್ಳುತ್ತಿದ್ದು ವಿದೇಶಿ ವಿನಿಮಯದ ಮೇಲೆ ಹೊರೆ ಹೆಚ್ಚಾಗುತ್ತಿದೆ. ಇದನ್ನು ತಗ್ಗಿಸಲು ಭಾರತೀಯ ನೌಕಾಪಡೆ ಭಾರತದಲ್ಲಿ ತಯಾರಿಸಿ ಯೋಜನೆಗೆ ಅನುಗುಣವಾಗಿ ದೇಶೀಯ ಮಟ್ಟದಲ್ಲಿ ಉಪಕರಣಗಳನ್ನು ಮತ್ತು ಶಸ್ತ್ರಾಸ್ತ್ರಗಳನ್ನು ತಯಾರಿಸಲು ಸ್ವಾವಲಂಬನ ಯೋಜನೆಯನ್ನು ಕೈಗೆತ್ತಿಕೊಂಡಿತ್ತು.

2022ರ ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ನೌಕಾಪಡೆಗೆ ಅನುಗುಣವಾಗುವ 75 ವಿವಿಧ ಬಗೆಯ ನೂತನ ತಂತ್ರಜ್ಞಾನದ ಅಭಿವೃದ್ಧಿಗೆ ಭಾರತೀಯ ನೌಕಾಪಡೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಗುರಿಯನ್ನು ತಲುಪಿರುವುದು ಮಾತ್ರವಲ್ಲದೆ ಹೆಚ್ಚುವರಿಯಾಗಿ ನೂತನ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲಾಗಿದೆ.

ನೂತನ ತಂತ್ರಜ್ಞಾನಗಳು ಜಾಗತಿಕ ಮಟ್ಟದ ಮಾನದಂಡಗಳಿಗೆ ಅನುಗುಣವಾಗಿ ಸಿದ್ಧವಾಗಿದ್ದು ಕಡಿಮೆ ವೆಚ್ಚದಾಯಕವಾಗಿದೆ. ಭಾರತದಲ್ಲಿ ತಯಾರಿಸಿರುವುದರಿಂದ ವೆಚ್ಚ ಕಡಿಮೆಯಾಗಿದ್ದು ಬೇರೆ ರಾಷ್ಟ್ರಗಳಿಗೆ ಈ ಉಪಕರಣಗಳನ್ನು ರಫ್ತು ಮಾಡುವ ಉದ್ದೇಶವನ್ನು ಕೂಡ ಭಾರತೀಯ ನೌಕಾಪಡೆ ಹಮ್ಮಿಕೊಂಡಿದೆ. ಸ್ವಾವಲಂಬನ-2.0 ಕಾರ್ಯಕ್ರಮ ಖಾಸಗಿ ವಲಯದೊಂದಿಗೆ ಸಹಭಾಗಿತ್ವಗಳಿಗೆ ಸಹಿ ಹಾಕಲಾಗುತ್ತದೆ ಮತ್ತು ಜಂಟಿ ಸಹಭಾಗಿತ್ವ ಯೋಜನೆಗಳ ಮೂಲಕ ನೂತನ ತಂತ್ರಜ್ಞಾನಗಳ ಅಭಿವೃದ್ಧಿಗೆ ಕಾರ್ಯಸೂಚಿಯನ್ನು ಹಮ್ಮಿಕೊಳ್ಳಲಾಗುತ್ತದೆ ಎಂದು ತನ್ನ ವರದಿಯಲ್ಲಿ ಬಿಡುಗಡೆ ಮಾಡಿದೆ.

ಕೈಮೂರ್ ವನ್ಯಜೀವಿ ಧಾಮ

ಬಿಹಾರ್ ಸರ್ಕಾರ ಕೈಮೂರ್ ಜಿಲ್ಲೆಯಲ್ಲಿ ಎರಡನೇ ಹುಲಿ ಅಭಯಾರಣ್ಯವನ್ನು ಸ್ಥಾಪಿಸಲು ನಿರ್ಧಾರ ಕೈಗೊಂಡಿದೆ. ಪಶ್ಚಿಮ ಚಂಪಾರಣ್ ಜಿಲ್ಲೆಯ ವಾಲ್ಮೀಕಿ ಹುಲಿ ಅಭಯಾರಣ್ಯ ಮಾತ್ರ ಇದೆ. ಬಿಹಾರ್ ರಾಜ್ಯ ಅರಣ್ಯ ಇಲಾಖೆ ಈಗಾಗಲೇ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಅನುಮೋದನೆಗೆ ಅರ್ಜಿಯನ್ನು ಸಲ್ಲಿಸಿದ್ದು ಮುಂದಿನ ವರ್ಷದ ವೇಳೆಗೆ ಕೈಮೂರ್ ವನ್ಯಜೀವಿಧಾಮವನ್ನು ಕೂಡ ಹುಲಿ ಅಭಯಾರಣ್ಯವನ್ನಾಗಿ ಘೋಷಿಸಲು ಅನುಮತಿ ನೀಡಬೇಕೆಂದು ಅರ್ಜಿಯನ್ನು ಸಲ್ಲಿಸಿದೆ. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಈಗಾಗಲೇ ಪ್ರಾಥಮಿಕ ಹಂತದ ಅನುಮೋದನೆಯನ್ನು ನೀಡಿದ್ದು, ಅಂತಿಮ ಹಂತದ ಅನುಮೋದನೆಯನ್ನು ನೀಡಲು ಇದರ ಪರ ಮತ್ತು ವಿರೋಧಗಳನ್ನು ಕೂಲಂಕಷವಾಗಿ ಚರ್ಚಿಸುತ್ತಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ENGLISH

Unit-1 Prose : A Hero

Refusing: *(.....Contd)*

d) It is certainly a possibility. May I think about it?
e) That's very good of you but I am not sure I want to.
f) Do you mind if I didn't? I know you are being kind.

Answer:

Father: Swami, can you think of learning and doing a trekking during this summer vacation?
Swami: Thank you for the suggestion. I will certainly think about it.
Father: You can start with practicing at rock climbing club in town sports complex during weekends.
Swami: That may be good idea. Let me think about it.
Father: You may also learn map reading with help of your school NCC officer.
Swami: I think, on the whole, I would rather not.
Father: If you master the electronic map reading, I will buy you a GPS navigator
Swami: Thank you all the same.
Father: Would you like to increase your physical fitness by accompanying me on morning running?
Swami: It is certainly a possibility. May I think about it?
Father: If you do not want to run with me, would you want to run on your own at school?
Swami: That's very good of you but I am not sure I want to.
Father: Can you at least practice running on the spot at home?
Swami: Do you mind if I didn't? I know you are being kind.

Read and Respond:

Task 1: A man went to the astrologer
Astrologer:- Come my child, your name is Suraj khanna,
Khanna:- yes, indeed!
Astrologer:- You have two sons and two daughters
Khanna:- How true!
Astrologer:- You brought four kilos of sugar and five kilos of rice yesterday, and there are five members of your household remaining after your parents passed away.
Khanna:- I am impressed. But can you tell me about my future?
Astrologer:- Okay then. Come back with your horoscope booklet tomorrow. And, here, take your ration card back

Questions:

1) Mr Khanna was surprised at the astrologer's prediction. What made him feel so?
2) Why astrologer wasn't able to predict Mr Khanna's future?
In the conversation given above, who do you think has better common sense?

Answers:

1) Mr Khanna was surprised as astrologer very accurately said his name, details of family members and even details of grocery brought by him on previous day.
2) Astrologer wasn't able to predict the future as Mr Khanna hadn't brought his horoscope.
3) Astrologer has better common sense. He was able to impress Mr Khanna using his ration card.

****

Unit-2 PROSE
There's a Girl by the Tracks!

2."Behenji, aap theek hai?" But there was no response and no help in sight. Why was it so? Read paragraph 6 and answer.

Ans: The fall had resulted in gash behind Ms Roma's head and blood oozing out of it, as a result she had lost her consciousness. Hence there was no response to Mr Baleshwar's words. Mr Baleswar and Ms Roma were alone somewhere between two stations five kilometers apart in Thane district, hence no help was insight.

3. Fill in the table with appropriate details.

Name	Age	Education	State they belong to	Profession	Reason for boarding the train
Roma					
Baleshawar Mishra					

Ans:-

Name	Age	Education	State they belong to	Profession	Reason for boarding the train
Roma	*21*	*B Com*	*Pune, Maharashtra*	*Executive in a call centre*	*Returning home*
Baleshawar Mishra	*20*	*High School dropout*	*Mirzapur, Uttar Pradesh*	*Unemployed*	*Returning home, after spending day with a friend having lunch and watching movies*

Check your understanding

1. Who volunteered to help Baleshwar?
Ans: A middle aged Gujarati speaking driver of a tempo truck, volunteered to help Mr Baleshwar.
2. "Roma stirred and her eyes fluttered open." What could have made her react so?
Ans: Ms Roma was woken up by jerks given by lurching of the vehicle in which she was being carried to the hospital
3. Some details of Roma's brother are given paragraph 14. Read and fill in the columns appropriately.

Name	Job	Place	Vehicle

Ans:-

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHEMATICS

MATRICES

Problems:- *(......Contd)*

11. Prove that $\begin{bmatrix} i & 0 & -i \\ 0 & -i & i \\ -i & i & 0 \end{bmatrix}\begin{bmatrix} -i & i \\ 0 & 0 \\ i & -i \end{bmatrix} = \begin{bmatrix} 2 & -2 \\ -1 & 1 \\ -1 & 1 \end{bmatrix}$

(here $i = \sqrt{-1}$)

Soln:– Consider L.H.S $\begin{bmatrix} i & 0 & -i \\ 0 & -i & i \\ -i & i & 0 \end{bmatrix}\begin{bmatrix} -i & i \\ 0 & 0 \\ i & -i \end{bmatrix}$

$$\Rightarrow \begin{bmatrix} -i^2+0-i^2 & i^2+0+i^2 \\ 0+0+i^2 & 0+0-i^2 \\ i^2+0+0 & -i^2+0+0 \end{bmatrix}$$

(as $i = \sqrt{-1}$; so $i^2 = -1$)

$$\Rightarrow \begin{bmatrix} 2 & -2 \\ -1 & 1 \\ -1 & 1 \end{bmatrix} = \text{R.H.S; Hence proved.}$$

12. If $A = \begin{bmatrix} 1 & -1 \\ 2 & -1 \end{bmatrix}$, $B = \begin{bmatrix} a & -1 \\ b & -1 \end{bmatrix}$ **and** $(A+B)^2 = A^2 + B^2$, **find a and b.**

Soln:– Given $(A+B)^2 = A^2 + B^2$

$(A+B)(A+B) = A^2 + B^2$

$\Rightarrow A(A+B) + B(A+B) = A^2 + B^2$

$\Rightarrow AA + AB + BA + BB = A^2 + B^2$

$\Rightarrow A^2 + AB + BA + B^2 = A^2 + B^2$

$\Rightarrow AB + BA = 0$

$$\Rightarrow \begin{bmatrix} 1 & -1 \\ 2 & -1 \end{bmatrix}\begin{bmatrix} a & -1 \\ b & -1 \end{bmatrix} + \begin{bmatrix} a & -1 \\ b & -1 \end{bmatrix}\begin{bmatrix} 1 & -1 \\ 2 & -1 \end{bmatrix} = 0$$

$$\Rightarrow \begin{bmatrix} a-b & -1+1 \\ 2a-b & -2+1 \end{bmatrix} + \begin{bmatrix} a-2 & -a+1 \\ b-2 & -b+1 \end{bmatrix} = \begin{bmatrix} 0 & 0 \\ 0 & 0 \end{bmatrix}$$

$$\Rightarrow \begin{bmatrix} a-b-a-2 & 0-a+1 \\ 2a-b+b-2 & -1-b+1 \end{bmatrix} = \begin{bmatrix} 0 & 0 \\ 0 & 0 \end{bmatrix}$$

$$\Rightarrow \begin{bmatrix} 2a-b-2 & -a+1 \\ 2a-2 & -b \end{bmatrix} = \begin{bmatrix} 0 & 0 \\ 0 & 0 \end{bmatrix}$$

$\Rightarrow 2a-b-2 = 0$
$-a+1 = 0$
$2a-2 = 0$
$-b = 0$

From (2) and (4), we get a =1, b = 0

Also these values of a and b satisfy the eqns (1) and (3).

Hence a = 1, b = 0 are the required values.

13. If $A = \begin{bmatrix} 4 & 3 \\ 2 & 5 \end{bmatrix}$, **find x and y such that** $A^2 - xA + yI = 0$

Soln:– $A^2 = \begin{bmatrix} 4 & 3 \\ 2 & 5 \end{bmatrix}\begin{bmatrix} 4 & 3 \\ 2 & 5 \end{bmatrix}$

$$= \begin{bmatrix} 16+6 & 12+15 \\ 8+10 & 6+25 \end{bmatrix} = \begin{bmatrix} 22 & 27 \\ 18 & 31 \end{bmatrix}$$

Consider $A^2 - xA + yI = 0$

$$\Rightarrow \begin{bmatrix} 22 & 27 \\ 18 & 31 \end{bmatrix} - x\begin{bmatrix} 4 & 3 \\ 2 & 5 \end{bmatrix} + y\begin{bmatrix} 1 & 0 \\ 0 & 1 \end{bmatrix} = 0$$

$$\Rightarrow \begin{bmatrix} 22-4x+y & 27-3x \\ 18-2x & 31-5x+y \end{bmatrix} = 0 = \begin{bmatrix} 0 & 0 \\ 0 & 0 \end{bmatrix}$$

$\therefore 22 - 4x + y = 0,$
$27 - 3x = 0$
$31 - 5x + y = 0$
$18 - 2x = 0$

$\Rightarrow x = 9$ and $31 - 45 + y = 0$

$\therefore y = 14$; Hence $x = 9$, $y = 14$

14. If $A = \begin{bmatrix} \alpha & 0 \\ 1 & 1 \end{bmatrix}$ **and** $B = \begin{bmatrix} 1 & 0 \\ 5 & 1 \end{bmatrix}$ **whenever** $A^2 = B$, **the value of** α **is**

a) 5 **b) –1**
c) 11 **d) no real value of α**

Soln:– $A^2 = \begin{bmatrix} \alpha & 0 \\ 1 & 1 \end{bmatrix}\begin{bmatrix} \alpha & 0 \\ 1 & 1 \end{bmatrix} = \begin{bmatrix} \alpha^2 & 0 \\ \alpha+1 & 1 \end{bmatrix}$

$B = \begin{bmatrix} 1 & 0 \\ 5 & 1 \end{bmatrix}$ (given)

$\Rightarrow \alpha^2 = 1$, $\alpha + 1 = 5$ i.e., $\alpha = 4$ not possible.
i.e., α has no real value.

15. Express $A = \begin{bmatrix} 6 & 7 \\ -2 & 1 \end{bmatrix}$ **as the sum of a symmetric and skew symmetric matrix.**

Soln:– Let $A = \begin{bmatrix} 6 & 7 \\ -2 & 1 \end{bmatrix}$ & $A' = \begin{bmatrix} 6 & -2 \\ 7 & 1 \end{bmatrix}$

$$A + A' = \begin{bmatrix} 6 & 7 \\ -2 & 1 \end{bmatrix} + \begin{bmatrix} 6 & -2 \\ 7 & 1 \end{bmatrix} = \begin{bmatrix} 12 & 5 \\ 5 & 2 \end{bmatrix}$$

$$\therefore \frac{A + A'}{2} = \begin{bmatrix} 6 & \frac{5}{2} \\ \frac{5}{2} & 1 \end{bmatrix}$$

$$A - A' = \begin{bmatrix} 6 & 7 \\ -2 & 1 \end{bmatrix} - \begin{bmatrix} 6 & -2 \\ 7 & 1 \end{bmatrix} = \begin{bmatrix} 0 & 9 \\ -9 & 0 \end{bmatrix}$$

DETERMINANTS

Notes:- i) Only square matrices have determinants.
ii) For a matrix A, $|A|$ is read as determinant of A and not, as modulus of A.

Determinant of a matrix of order one

Let A = [a] be the matrix of order 1, then determinant of A is defined to be equal to a.

Determinant of a matrix of order two

Let $A = [a_{ij}] = \begin{bmatrix} a & b \\ c & d \end{bmatrix}$ be a matrix of order 2.

Then the determinant of A is defined as

det (A) = $|A|$ = ad – bc

1. Show that if one row or column of a determinant is a multiple of another row or column, the value of the determinant will become zero.

Soln:– To show that – If one row (or column) of a determinant is a multiple of another row (or column), then the determinant becomes zero.

Proof:– Let $\Delta = \begin{bmatrix} a & ka \\ b & kb \end{bmatrix}$

$\Rightarrow kab - kab = 0$ hence proved.

ಕೇಂದ್ರದ ಬರ ಅಧ್ಯಯನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ ಬರ ಪರಿಸ್ಥಿತಿ ಅಧ್ಯಯನಕ್ಕೆ ಕೇಂದ್ರದ ಮೂರು ತಂಡಗಳು ಬಂದಿದ್ದು, ಗುರುವಾರದಿಂದ (ಅ.5) ನಾಲ್ಕು ದಿನಗಳ ಕಾಲ ವಿವಿಧ ಜಿಲ್ಲಾ ಪ್ರವಾಸ ಕೈಗೊಂಡು ವಾಸ್ತವ ಸ್ಥಿತಿಯ ಅಧ್ಯಯನ ನಡೆಸಲಿವೆ.

ಮೂರು ತಂಡಗಳು ಒಟ್ಟು 10 ಸದಸ್ಯರನ್ನು ಒಳಗೊಂಡಿದ್ದು, ರಾಜ್ಯದ ಸ್ಥಳೀಯ ಅಧಿಕಾರಿಗಳೊಂದಿಗೆ ಕೃಷಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಲಿವೆ. ಮೂರು ತಂಡಗಳು ಗುರುವಾರ ಬೆಳಿಗ್ಗೆ 9.30 ಕ್ಕೆ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಲಿವೆ. ಆ ಬಳಿಕ ಮಧ್ಯಾಹ್ನ 12 ಕ್ಕೆ ವಿಧಾನಸೌಧದಲ್ಲಿ ಬರ ಪರಿಸ್ಥಿತಿಯ ಸಂಕ್ಷಿಪ್ತ ವಿವರ ಪಡೆದ ಬಳಿಕ ಜಿಲ್ಲೆಗಳಿಗೆ ತೆರಳಲಿವೆ.

ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಜಂಟಿ ಕಾರ್ಯದರ್ಶಿ ಅಜಿತ್‌ಕುಮಾರ್ ಸಾಹು ಅವರು ಮೊದಲ ತಂಡ ನೇತೃತ್ವ ವಹಿಸಿದ್ದಾರೆ. ತಂಡವು ಎಣ್ಣೆ ಬೀಜಗಳ ಅಭಿವೃದ್ಧಿ ಇಲಾಖೆ ನಿರ್ದೇಶಕ ಡಾ.ಜೆ. ಪೊನ್ನುಸ್ವಾಮಿ, ವೆಚ್ಚ ವ್ಯವಹಾರಗಳ ಇಲಾಖೆಯ ಸಹಾಯಕ ನಿರ್ದೇಶಕ ಮಹೇಂದ್ರ ಚಂಡೇಲಯ, ನೀತಿ ಆಯೋಗದ ಸಂಶೋಧನಾಧಿಕಾರಿ ಶಿವಚರಣ್ ಮೀನಾ, ರಾಜ್ಯ ಕೃಷಿ ಆಯುಕ್ತ ವೈ.ಎಸ್. ಪಾಟೀಲ ಅವರನ್ನು ಒಳಗೊಂಡಿದೆ.

ಕೇಂದ್ರ ಕುಡಿಯುವ ನೀರು ಹಾಗೂ ಸ್ವಚ್ಛತಾ ಸಚಿವಾಲಯದ ಹೆಚ್ಚುವರಿ ಸಲಹೆಗಾರ ಡಿ.ರಾಜಶೇಖರ್ ಎರಡನೇ ತಂಡ ನೇತೃತ್ವ ವಹಿಸಿದ್ದಾರೆ. ಪಶುಸಂಗೋಪನೆ ಇಲಾಖೆ ನಿರ್ದೇಶಕರಾದ ಆರ್ ಥಾಕರೆ, ಗ್ರಾಮೀಣಾಭಿವೃದ್ಧಿ ಇಲಾಖೆ ಸಹಾಯಕ ಆಯುಕ್ತ ಮೋತಿರಾಂ, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಕರೀಗೌಡ ಅವರು ತಂಡದ ಸದಸ್ಯರಾಗಿದ್ದಾರೆ.

ಕೇಂದ್ರ ಜಲ ಆಯೋಗದ ನಿರ್ದೇಶಕ ಅಶೋಕ್ ಕುಮಾರ್. ವಿ ಮೂರನೇ ತಂಡದ ನೇತೃತ್ವ ವಹಿಸಿದ್ದಾರೆ. ಎಂ.ಎನ್.ಸಿ.ಎಫ್.ಸಿಯ ಉಪನಿರ್ದೇಶಕ ಕರಣ್ ಚೌಧರಿ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಉಪಕಾರ್ಯದರ್ಶಿ ಸಂಗೀತ್ ಕುಮಾರ್ ಹಾಗೂ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಹಿರಿಯ ಸಲಹೆಗಾರ ಡಾ. ಶ್ರೀನಿವಾಸರೆಡ್ಡಿ ತಂಡದ ಸದಸ್ಯರಾಗಿದ್ದಾರೆ. ಮೂರೂ ತಂಡಗಳು ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ ಅ.8 ಕ್ಕೆ ಬೆಂಗಳೂರಿಗೆ ವಾಪಸ್ ಬರಲಿವೆ. ಅ.9 ರಂದು ಬೆಂಗಳೂರಿನಲ್ಲಿ ಮತ್ತೊಮ್ಮೆ ಅಧಿಕಾರಿಗಳಿಂದ ಸಂಕ್ಷಿಪ್ತ ವಿವರಣೆ ಪಡೆದು ದೆಹಲಿಗೆ ತೆರಳಲಿವೆ.

ಯಾವ ತಂಡ ಎಲ್ಲಿಗೆ?

- **ಮೊದಲ ತಂಡ:** ಅ.5 ರಂದು ಬೆಳಗಾವಿ ಬರಲಿದ್ದು, ಅ.6 ರಂದು ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಬರಪರಿಶೀಲನೆ ನಡೆಸಲಿದೆ. ಅ.7 ರಂದು ಬಾಗಲಕೋಟೆ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಬರಪರಿಶೀಲನೆ ನಡೆಸಲಿದೆ.
- **ಎರಡನೇ ತಂಡ:** ಅ.6 ರಿಂದ ಗದಗ ಮತ್ತು ಕೊಪ್ಪಳ ಜಿಲ್ಲೆಗಳು, ಅ.7 ರಂದು ವಿಜಯನಗರ, ಬಳ್ಳಾರಿ ಜಿಲ್ಲೆಗಳ ಬರ ಅಧ್ಯಯನ ನಡೆಸಲಿದೆ.
- **ಮೂರನೇ ತಂಡ:** ಅ.6 ರಂದು ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳ ಪ್ರವಾಸ ನಡೆಸಲಿದೆ. ಅ.7 ರಂದು ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯಲ್ಲಿ ಅಧ್ಯಯನ ನಡೆಸಲಿದೆ. ಅ. 8 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬರಪರಿಸ್ಥಿತಿ ಅಧ್ಯಯನ ನಡೆಸಲಿದೆ.

ಅಧಿಕಾರಿಗಳಿಗೆ ಸೂಚನೆ

ಕೇಂದ್ರ ತಂಡ ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಕಂದಾಯ, ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳು ಈ ಸಾಲಿನ ಮಳೆಯ ವಾಸ್ತವ ಪರಿಸ್ಥಿತಿ ಮನವರಿಕೆ ಮಾಡಿಕೊಡಬೇಕು. ಹಲವು ಕಡೆ ಸಂಪೂರ್ಣ ಬೆಳೆ ಹಾನಿಯಾಗಿದ್ದು, ಕೆಲವೆಡೆ ಬೆಳೆ ಇದ್ದರೂ ಉಂಟಾಗಲಿರುವ ತೀವ್ರ ಇಳುವರಿ ಕುಸಿತದ ಬಗ್ಗೆ ಪರಿಣಾಮಕಾರಿಯಾಗಿ ವಿವರಿಸಿ ವಾಸ್ತವ ಸ್ಥಿತಿಯನ್ನು ಮನವರಿಕೆ ಮಾಡಿಕೊಡಬೇಕು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

‘ಆಳ್ವಾಸ್ ಪ್ರಗತಿ’ಗೆ 192 ಕಂಪನಿ

ಮಂಗಳೂರು: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಅ.6 ಮತ್ತು 7ರಂದು ಹಮ್ಮಿಕೊಂಡಿರುವ ‘ಆಳ್ವಾಸ್ ಪ್ರಗತಿ-2023’ ಉದ್ಯೋಗ ಮೇಳದಲ್ಲಿ ಗಲ್ಫ್ ದೇಶದ ಕಂಪನಿಗಳು ಸೇರಿದಂತೆ ಒಟ್ಟು 192 ಕಂಪನಿಗಳು ಭಾಗವಹಿಸಲಿದ್ದು, 13,605 ಹುದ್ದೆಗಳಿಗೆ ನೇಮಕಾತಿ ನಡೆಯಲಿದೆ ಎಂದು ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಮೂಡುಬಿದಿರೆಯ ಆಳ್ವಾಸ್ ವಿದ್ಯಾಗಿರಿ ಆವರಣದಲ್ಲಿ ಮೇಳ ನಡೆಯಲಿದೆ. ದೂರದ ಊರುಗಳಿಂದ ಬರುವ 1,500 ವಿದ್ಯಾರ್ಥಿಗಳಿಗೆ ಉಚಿತ ವಸತಿ ವ್ಯವಸ್ಥೆ ಕಲ್ಪಿಸಲಾಗುತ್ತದೆ ಎಂದರು.

ಆನ್‌ಲೈನ್ ನೋಂದಣಿ ಕಡ್ಡಾಯವಾಗಿದ್ದು, ಮಾಹಿತಿಗೆ www.alvaspragati.com ಈ ವೆಬ್‌ಸೈಟ್, ಸಂಪರ್ಕ ಸಂಖ್ಯೆ: 9008907716, 9663190590 ಸಂಪರ್ಕಿಸಬಹುದು. ನೋಂದಣಿಯನ್ನು http://alvaspragati.com/CandidateRegistrationPage ಇಲ್ಲಿ ಮಾಡಬಹುದು ಎಂದು ತಿಳಿಸಿದರು.

‘ಬಗರ್ ಹುಕುಂ ಅರ್ಜಿ ಶೀಘ್ರ ವಿಲೇವಾರಿಗೆ ಆ್ಯಪ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಕ್ರಮ ಸಕ್ರಮ ಯೋಜನೆಯಡಿ ನಮೂನೆ 50, 53, 57 ಅಡಿ ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿ ಮತ್ತು ಅನಧಿಕೃತ ಸಾಗುವಳಿ ಭೂಮಿಯನ್ನು ‘ಬಗರ್ ಹುಕುಂ ತಂತ್ರಾಂಶ’ (ಆ್ಯಪ್) ಮೂಲಕ ಸಕ್ರಮಗೊಳಿಸುವ ಪ್ರಕ್ರಿಯೆಯನ್ನು ಶೀಘ್ರ ಮುಗಿಸುವಂತೆ ಅಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೂಚಿಸಿದ್ದಾರೆ.

ವಿಕಾಸಸೌಧದಲ್ಲಿ ಬುಧವಾರ ನಡೆದ ಸಭೆಯಲ್ಲಿ ಬಗರ್ ಹುಕುಂ ಆ್ಯಪ್ ಕುರಿತು ಅಧಿಕಾರಿಗಳು ಸಚಿವರಿಗೆ ಪ್ರಾತ್ಯಕ್ಷಿಕೆ ತೋರಿಸಿದರು. ಈ ವೇಳೆ ಸಚಿವರು, ಯಾವುದೇ ಲೋಪದೋಷ ಇಲ್ಲದಂತೆ ಆ್ಯಪ್ ಅಭಿವೃದ್ಧಿಪಡಿಸುವಂತೆ ನಿರ್ದೇಶನ ನೀಡಿದರು.

‘ರಾಜ್ಯದಾದ್ಯಂತ ನಮೂನೆ 50, 53, 57 ಅಡಿ ಸಾಗುವಳಿ ಜಮೀನಿನ ಸಕ್ರಮಕ್ಕೆ ಸಲ್ಲಿಕೆಯಾಗುತ್ತಿರುವ ಅರ್ಜಿಗಳ ಸಂಖ್ಯೆ ಹೆಚ್ಚುತ್ತಿದೆ. ಅನಧಿಕೃತವಾಗಿ ಸಾಗುವಳಿದಾರರು ಕೃಷಿಯಲ್ಲಿ ತೊಡಗಿದರೆ, ಅಕ್ರಮ-ಸಕ್ರಮ ಅಡಿಯಲ್ಲಿ ಸಾಗುವಳಿ ಚೀಟಿ ನೀಡಲು ಇಲಾಖೆ ಬದ್ಧವಾಗಿದೆ. ಆದರೆ, ಸಾವಿರಾರು ಎಕರೆ ಭೂಮಿ ಅಕ್ರಮ ಸಾಗುವಳಿದಾರರ ಪಾಲಾಗಿದೆ. ಅಧಿಕಾರಿಗಳು ಎಲ್ಲ ಕಡೆಗೆ ತೆರಳಿ ಪರಿಶೀಲಿಸುವುದು ಸಾಧ್ಯವಿಲ್ಲ. ಈ ಆ್ಯಪ್‌ನ ನೆರವಿನಿಂದ ಅಕ್ರಮ ಸಾಗುವಳಿ ಭೂಮಿಯಲ್ಲಿ ಕೃಷಿ ಅಥವಾ ಇತರ ಚಟುವಟಿಕೆ ಬಗ್ಗೆ ಸ್ಯಾಟಲೈಟ್ ಚಿತ್ರದ ಮೂಲಕ ಮಾಹಿತಿ ಪಡೆದು ಅರ್ಜಿ ವಿಲೇವಾರಿ ಮಾಡುವುದು ನ್ಯಾಯ-ಸಮ್ಮತವಾಗಲಿದೆ. ಅರ್ಜಿಗಳ ಶೀಘ್ರ ವಿಲೇವಾರಿಗೂ ಈ ಆ್ಯಪ್ ಸಹಕಾರಿ ಆಗಲಿದೆ’ ಎಂದರು.

ಆರೋಗ್ಯ ಇಲಾಖೆಯಿಂದ ₹185 ಕೋಟಿ ಅನುದಾನಕ್ಕೆ ಕ್ರಿಯಾಯೋಜನೆ

ರಕ್ತಹೀನತೆ ಮುಕ್ತ ರಾಜ್ಯ: ಯೋಜನೆ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವಜಾತ ಶಿಶುಗಳು, ಮಕ್ಕಳು, ಹದಿಹರೆಯದವರು, ಗರ್ಭಿಣಿಯರು, ತಾಯಂದಿರಲ್ಲಿ ರಕ್ತಹೀನತೆ ಮತ್ತು ಅಪೌಷ್ಟಿಕತೆ ನಿವಾರಿಸಲು ‘ಅನೀಮಿಯಾ ಮುಕ್ತ ಪೌಷ್ಟಿಕ ಕರ್ನಾಟಕ’ (ಎಎಂಪಿಕೆ) ಯೋಜನೆ ಅನುಷ್ಠಾನಗೊಳಿಸಲು ಆರೋಗ್ಯ ಇಲಾಖೆ ಮುಂದಾಗಿದೆ.

ಸಮಗ್ರವಾದ ಪರೀಕ್ಷೆ, ಚಿಕಿತ್ಸೆ, ಅರಿವು ಮೂಡಿಸುವಿಕೆ ಮತ್ತು ಆರೋಗ್ಯ ಕಾರ್ಯಕರ್ತರ ಸಾಮರ್ಥ್ಯ ಬಲವರ್ಧನೆಯ ಗುರಿ ಹೊಂದಿರುವ ಈ ಯೋಜನೆಯನ್ನು ₹ 185.74 ಕೋಟಿ ಅನುದಾನದಲ್ಲಿ ಕಾರ್ಯಗತಗೊಳಿಸಲು ಕ್ರಿಯಾ ಯೋಜನೆಯನ್ನು ಇಲಾಖೆ ಸಿದ್ಧಪಡಿಸಿದೆ. ಗುರುವಾರ (ಅ. 5) ನಡೆಯಲಿರುವ ಸಚಿವ ಸಂಪುಟ ಸಭೆಗೆ ಇಲಾಖೆ ಈ ಪ್ರಸ್ತಾವವನ್ನು ಮಂಡಿಸಿದೆ.

ಯೋಜನೆಗೆ 15ನೇ ಹಣಕಾಸು ಆಯೋಗದಿಂದ ₹ 66.58 ಕೋಟಿ, ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ₹ 87.51 ಕೋಟಿ ಲಭ್ಯವಾಗಲಿದ್ದು, ರಾಜ್ಯ ಸರ್ಕಾರ ₹ 31.65 ಕೋಟಿ ಭರಿಸಬೇಕಾಗಿದೆ. ಯೋಜನೆಯಡಿ ಅನೀಮಿಯಾ ಪರೀಕ್ಷೆಗೆ ₹ 66.58 ಕೋಟಿ, ಔಷಧಕ್ಕೆ ₹ 87.51 ಕೋಟಿ, ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗೆ (ಐಇಸಿ) ₹ 16.01 ಕೋಟಿ ವೆಚ್ಚ ಅಂದಾಜಿಸಲಾಗಿದೆ.

ಒಟ್ಟು ಆರು ಹಂತಗಳಲ್ಲಿ ‘ಅನೀಮಿಯಾ ಮುಕ್ತ ಪೌಷ್ಟಿಕ ಕರ್ನಾಟಕ’ ಕ್ರಿಯಾ ಯೋಜನೆ ಹಮ್ಮಿಕೊಳ್ಳಲು ಆರೋಗ್ಯ ಇಲಾಖೆ ಉದ್ದೇಶಿಸಿದೆ.

ಮೊದಲ ಹಂತದಲ್ಲಿ ರಕ್ತಹೀನತೆ ಮತ್ತು ಅಪೌಷ್ಟಿಕತೆ ಪತ್ತೆ ಮಾಡಲು ಸಾಮೂಹಿಕವಾಗಿ ತಪಾಸಣೆ ನಡೆಸಲಾಗುವುದು. ಮೂರು ವರ್ಷದೊಳಗಿನ ಮಕ್ಕಳಿಗೆ ವರ್ಷಕ್ಕೆ ಎರಡು ಬಾರಿ ವಿಟಮಿನ್ ‘ಎ’ ಪೂರೈಕೆಯ ಸಮಯದಲ್ಲಿ ರಕ್ತಹೀನತೆ ತಪಾಸಣೆ ನಡೆಸಲಾಗುವುದು. ಪ್ರಸವಪೂರ್ವ ಆರೈಕೆಗೆ ಭೇಟಿ ನೀಡುವ ಸಮಯದಲ್ಲಿ ಗರ್ಭಿಣಿಯರ ತಪಾಸಣೆ ನಡೆಸಲಾಗುವುದು. ಎರಡನೇ ಹಂತದಲ್ಲಿ ಲಭ್ಯ ದತ್ತಾಂಶಗಳ ಮೇಲೆ ನಿಗಾ ವಹಿಸಲಾಗುವುದು. ಮೂರನೇ ಹಂತದಲ್ಲಿ ಕಬ್ಬಿಣಾಂಶ, ಫೋಲಿಕ್ ಆಮ್ಲ ನೀಡುವಿಕೆ ಮತ್ತು ಜಂತುಹುಳು ನಿವಾರಣೆಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪ್ರಸ್ತಾವನೆಯಲ್ಲಿ ವಿವರಿಸಲಾಗಿದೆ.

ಈ ಯೋಜನೆಯಡಿ ರಾಜ್ಯದ 102 ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿ ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಪೌಷ್ಟಿಕ ಊಟ ಒದಗಿಸಲಾಗುವುದು. ಅಲ್ಲದೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕ ಆರೋಗ್ಯ, ವೈದ್ಯಕೀಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆ ನಡುವೆ ಸಮನ್ವಯದಿಂದ ತಪಾಸಣೆ ಶಿಬಿರ ಆಯೋಜಿಸಲಾಗುವುದು. ರಕ್ತಹೀನತೆಯನ್ನು ಗುರುತಿಸಿದ ಫಲಾನುಭವಿಗಳಿಗೆ ಸರ್ಕಾರಿ ಆಸ್ಪತ್ರೆಗಳ ಮೂಲಕ ಚಿಕಿತ್ಸೆ ನೀಡಲಾಗುವುದು ಎಂದೂ ಆರೋಗ್ಯ ಇಲಾಖೆಯ ಟಿಪ್ಪಣಿಯಲ್ಲಿ ತಿಳಿಸಲಾಗಿದೆ.

ಮತ್ತೆ ‘ಉರಿಗೌಡ ನಂಜೇಗೌಡ’ ವೇದಿಕೆ

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ವಿಶ್ವ ಹಿಂದೂ ಪರಿಷತ್‌ಗೆ 60 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಬುಧವಾರ ಪಟ್ಟಣಕ್ಕೆ ‘ಶೌರ್ಯ ಶೋಭಾ ಯಾತ್ರೆ’ ಬಂದ ವೇಳೆ ‘ಉರಿಗೌಡ- ದೊಡ್ಡನಂಜೇಗೌಡ ವೇದಿಕೆ’ ಗಮನ ಸೆಳೆಯಿತು.

ಪಟ್ಟಣದ ಸಂಜಯ ಚಿತ್ರಮಂದಿರದ ಬಳಿ ಭಜರಂಗದಳದ ಕಾರ್ಯಕರ್ತರು ವೇದಿಕೆ ನಿರ್ಮಿಸಿದ್ದರು. ವೇದಿಕೆಯ ಫ್ಲೆಕ್ಸ್‌ನಲ್ಲಿ ದೊಡ್ಡನಂಜೇಗೌಡ-ಉರಿಗೌಡ ಎನ್ನಲಾದ ಭಾವಚಿತ್ರಗಳನ್ನು ಅಳವಡಿಸಲಾಗಿತ್ತು. ಮುಖಂಡರೆಲ್ಲರೂ ಇಬ್ಬರನ್ನೂ ಕೊಂಡಾಡಿದರು.

‘ಇಬ್ಬರು ಸಹೋದರರು ಅಂದು ಇಲ್ಲದೇ ಹೋಗಿದ್ದಿದ್ದರೆ ಇಂದು ಮಂಡ್ಯ, ಮೈಸೂರು ಭಾಗದಲ್ಲಿ ಹಿಂದೂಗಳು ನೆಮ್ಮದಿಯಿಂದ ಇರಲು ಸಾಧ್ಯವಾಗುತ್ತಿರಲಿಲ್ಲ. ಈ ಇಬ್ಬರೂ ಸಹೋದರರು ಮತಾಂಧ ಟಿಪ್ಪುವನ್ನು ಕೊಂದು ಹಿಂದೂಗಳ ಮೇಲಾಗುತ್ತಿದ್ದ ದೌರ್ಜನ್ಯವನ್ನು ತಡೆದರು. ಅವರ ಶೌರ್ಯ, ಪರಾಕ್ರಮವನ್ನು ಎಲ್ಲರೂ ಸ್ಮರಿಸಬೇಕು’ ಎಂದು ವಿಎಚ್‌ಪಿ ನಾಯಕ ಸೂರ್ಯನಾರಾಯಣ ದೀಕ್ಷಿತ್ ಹೇಳಿದರು.

ಬೆಂಗಳೂರು- ಮೈಸೂರು ಹೆದ್ದಾರಿ ಉದ್ಘಾಟಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಮಂಡ್ಯಕ್ಕೆ ಬಂದಿದ್ದಾಗ ನಿರ್ಮಿಸಲಾಗಿದ್ದ ಉರಿಗೌಡ-ದೊಡ್ಡನಂಜೇಗೌಡ’ ವೇದಿಕೆಯು ಚರ್ಚೆಗೆ ಕಾರಣವಾಗಿತ್ತು.

‘ಅನುಕಂಪ ನೌಕರಿ: ವಿವಾಹಿತ ಪುತ್ರಿ ಅರ್ಹಳಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನುಕಂಪದ ಆಧಾರದಡಿ ಕೋರಲಾಗುವ ಉದ್ಯೋಗಕ್ಕೆ ವಿವಾಹಿತ ಪುತ್ರಿಯೂ ಅರ್ಹಳು‘ ಎಂಬ ವಾದವನ್ನು ತಿರಸ್ಕರಿಸಿರುವ ಹೈಕೋರ್ಟ್, ಈ ಸಂಬಂಧ ಸಲ್ಲಿಸಲಾಗಿದ್ದ ಮೇಲ್ಮನವಿಯನ್ನು ವಜಾಗೊಳಿಸಿದೆ.

ಈ ಕುರಿತಂತೆ ಆದೇಶಿಸಿರುವ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, ‘ಎಲ್‌ಐಸಿ ಉದ್ಯೋಗಿಯಾಗಿದ್ದ ತಂದೆಯ ನಿಧನದ ನಂತರ ಅರ್ಜಿದಾರರು ಉದ್ಯೋಗ ಕೋರಿದ್ದಾರೆ. ಆದರೆ, ತಂದೆಯ ನಿಧನಕ್ಕೆ ಹಲವು ವರ್ಷಗಳ ಮುನ್ನವೇ ಅರ್ಜಿದಾರ ಮಹಿಳೆ ಮದುವೆಯಾಗಿ ಪತಿಯ ಜತೆ ನೆಲೆಸಿದ್ದಾರೆ. ಹಾಗಾಗಿ ಹಕ್ಕು ಮಂಡಿಸಲಾಗದು‘ ಎಂದು ಹೇಳಿದೆ.

‘ಒಂದು ವೇಳೆ ಮೃತರ ಕುಟುಂಬ ಆರ್ಥಿಕವಾಗಿ ಸಂಕಷ್ಟದಲ್ಲಿದ್ದರೆ ಅನುಕಂಪದ ಆಧಾರದ ಮೇಲೆ ಉದ್ಯೋಗ ಕೋರಬಹುದು. ಆದರೆ, ಈ ಪ್ರಕರಣದಲ್ಲಿ ಎಲ್‌ಐಸಿ ಮೃತರ ಕುಟುಂಬಕ್ಕೆ ₹ 1.58 ಕೋಟಿ ಪರಿಹಾರವನ್ನು ಪಾವತಿಸಿದೆ‘ ಎಂಬ ಅಂಶವನ್ನು ನ್ಯಾಯಪೀಠ ಆದೇಶದಲ್ಲಿ ಉಲ್ಲೇಖಿಸಿದೆ.

ಕರ್ನಾಟಕ ಸರಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿಗಳ ಕಾರ್ಯಾಲಯ ಕಲಬುರಗಿ.

Email: dlogulbarga@gmail.com ದೂರವಾಣಿ:08472-278649

ಸಂಖ್ಯೆ: ಜಿಅಂನಿಕಾ/88/2023-24/ ದಿನಾಂಕ: 03.10.2023

:: ಅಲ್ಪಾವಧಿ ಟೆಂಡರ್ ಪ್ರಕಟಣೆ ::

REF NO: DHFWS/2023-24/IND0108/CALL-2 ದಿನಾಂಕ:02.10.2023

1) ಕಾಮಗಾರಿ ವಿವರ : ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದಡಿಯಲ್ಲಿ ನಡೆಯುವ ಆಶಾಕಿರಣ ಅಭಿಯಾನ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳಿಗೆ ನೀಡುವ ಉಚಿತ ಕನ್ನಡಕಗಳ ಇ-ಟೆಂಡರ (Re Tender) ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: ರೂ. 23681000/-, 3) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:12-10-2023 @ 16.00 Hrs, 4) ಟೆಂಡರ(ತಾಂತ್ರಿಕ ಬಿಡ್)ತೆರೆಯುವ ದಿನಾಂಕ: 13-10-2023 @ 17:00 Hrs, 5) ಮಾದರಿ ಸಲ್ಲಿಕೆ ದಿನಾಂಕ: 13-10-2023 till 12:00 Hrs, 6) ಟೆಂಡರ (ಆರ್ಥಿಕ ಬಿಡ್) ತೆರೆಯುವ ದಿನಾಂಕ: 16-10-2023 @ 11:30 Hrs (Tentative), 7) ಹೆಚ್ಚಿನ ವಿವರಗಳಿಗೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿಗಳ ಕಾರ್ಯಾಲಯ ಕಲಬುರಗಿ, ದೂ.ಸಂ: 08472-278649 8) ಅಂತರಜಾಲ ತಾಣದ ವಿಳಾಸ : www.e-proc.karnataka.gov.in

ಸಹಿ/- ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿಗಳು ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/344/ಕೆ.ಎಸ್.ಎಂ.ಸಿ.&ಎ/2023-24

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು-560 029. ಫೋನ್: 25536625, 25536789

IFT NO. ಕಹಾಮ/ಅಭಿ/Bemul-3.5 Ton Boiler/1540/2023-24 ದಿನಾಂಕ: 03-10-2023

ಇ-ಪ್ರೋಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರ ಹಾಲು ಮಂಡಳವು ಇ-ಪ್ರೋಕ್ಯೂರ್‌ಮೆಂಟ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಸರಬರಾಜು ಕೆಲಸಗಳಿಗಾಗಿ ಇ-ಪ್ರೋಕ್ಯೂರ್‌ಮೆಂಟ್ ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karantaka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ಬೆಳಗಾವಿ ಹಾಲು ಒಕ್ಕೂಟಕ್ಕೆ 3.5ಟನ್ ಬಾಯ್ಲರ್‌ನ ವಿನ್ಯಾಸ, ಸರಬರಾಜು, ಅಳವಡಿಕೆ, ಚಾಲನೆಗೊಳಿಸುವ ಹಾಗೂ ಸಂಬಂಧಿಸಿದ ಇತರೆ ಕೆಲಸಗಳು.	1 ಜಾಬ್	2,70,000/-	4 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 05-10-2023 ರಿಂದ 19-10-2023 ರ ಸಾಯಂಕಾಲ 4:00 ಗಂಟೆಯವರೆಗೆ.
2. ಪ್ರಿ ಬಿಡ್ ಸಭೆ ದಿನಾಂಕ: 12-10-2023.
3. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19-10-2023 ಸಾಯಂಕಾಲ 4:00 ಗಂಟೆಯವರೆಗೆ.
4. ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: 20-10-2023ರಂದು ಸಾಯಂಕಾಲ 4:30 ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ ಸಹಿ/- ನಿರ್ದೇಶಕರು (ಅಭಿಯಂತರ-2)

ಕರ್ನಾಟಕ ಸರ್ಕಾರ

ರಾಷ್ಟ್ರೀಯ ಅರೋಗ್ಯ ಅಭಿಯಾನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಅಧಿಕಾರಿಗಳ ಕಾರ್ಯಾಲಯ, ಯಾದಗಿರಿ ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಆರೋಗ್ಯ ಸಂಘ, ಯಾದಗಿರಿ

ದೂರವಾಣಿ: 9535716637, 7259910781 ಮಿಂಚಂಚೆ: rchoyadgiri2@gmail.com

ಸಂಖ್ಯೆ: ಜಿಲ್ಲಾ.ಆ.ಅ.ಕಾ/ಯಾ/ / 2023-24 ದಿನಾಂಕ: 30.09.2023

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ

ವಿಷಯ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮ ಅನುಷ್ಠಾನಗೊಳಸಲು ಬೇಕಾದ ಮಾನವ ಸಂಪನ್ಮೂಸ ಸೇವೆಯನ್ನು ಒದಗಿಸಲು ಅರ್ಹ ಸಂಸ್ಥೆಗಳಿಂದ ದ್ವೀ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಮರು ಈ-ಟೆಂಡರ್ ಆಹ್ವಾನಿಸಿರುವ ಕುರಿತು.

ಈ ಕಾರ್ಯಾಲಯದ ವಿವಿಧ ಕಾರ್ಯಕ್ರಮಗಳಗಾಗಿ ಮಾನವ ಸಂಪನ್ಮೂಲ ಸೇವೆಯನ್ನು ಅರ್ಹ ಸಂಸ್ಥೆಗಳಿಂದ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ಅರ್ಹ ಪೋರೈಕೆದಾರರಿಂದ ಇ-ಪ್ರಕ್ಯೂರಮೆಂಟ್ ಮೂಲಕ ದ್ವೀ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಮರು ಆಹ್ವಾನಿಸಲಾಗಿದೆ. E-Procurement ನಲ್ಲಿ ವಿವಿಧ ಹಂತದ ಘನಟಾವಳಿಗಳನ್ನು ಜರುಗಿಸಲು ಸಿದ್ಧಪಡಿಸಿದ ಕಾಲಬದ್ಧ ವೇಳಾಪಟ್ಟಿ

1) ಟೆಂಡರ್ ಪ್ರಕಟಣೆ ಹೊರಡಿಸಿರುವ ದಿನಾಂಕ: 30.09.2023 **2) ಟೆಂಡರ್‌ನಲ್ಲಿ ಕಾಯ್ದಿರಿಸಿದ ಮೊತ್ತ:** 227 ಲಕ್ಷಗಳು **3) ಇ.ಎಂ.ಡಿ.ಮೊತ್ತ:** 340500 **4) ಆನ್‌ಲೈನ್ ಮೂಲಕ ಟೆಂಡರ್ ಬುಕ್‌ಲೆಟ್ ಆಸಕ್ತ ಟೆಂಡರ್‌ದಾರರಿಗೆ ಒದಗಿಸುವಂತೆ ಮಾಡುವುದು:** 30.09.2023 **5) ಟೆಂಡರ್ ಬುಕ್‌ಲೆಟ್ ಅಫ್‌ಲೋಡ ಮಾಡಲಾದ ದಿನಾಂಕ:** 30.09.2023, **6) ಟೆಂಡರ್ ಬುಕ್‌ಲೆಟ್ ಅಪ್‌ಲೋಡ ಮಾಡಲು ಕೊನೆಯ ದಿನಾಂಕ ಮತ್ತು ಸಮಯ:** 30.10.2023, 16:00:00 **7) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ:** 02.11.2023,16:00:00 8) ಆರ್ಥಿಕ ಲಕೋಟೆ ತರೆಯುವ ದಿನಾಂಕ: 08.11.2023, 11:00:00

1)ಆನ್‌ಲೈನ್ ಮೂಲಕ ಸಲ್ಲಿಸಿದ ಟೆಂಡರ್‌ಗಳನ್ನು ಮಾತ್ರ ಪರಿಗಣಿಸಲಾಗುವುದು 2) ಕಾರ್ಯಾಲಯದಲ್ಲಿ ಭೌತಿಕವಾಗಿ ಟೆಂಡರ್ ಕವರ್‌ಗಳನ್ನು ನೀಡುವುದನ್ನು ಪರಿಗಣಿಸಲಾಗುವುದಿಲ್ಲ) 3) ಕ್ರ.ಸಂ.7, 8 ರಲ್ಲಿ ಇರುವ ದಿನಾಂಕಗಳನ್ನು ಟೆಂಡರ್ ಸಮಿತಿಯ/ಟೆಂಡರ್ ಸಮಿತಿಯ ಅಧ್ಯಕ್ಷರ ಆಡಳಿತಾತ್ಮಕ ಅನುಕೂಲತೆಗೆ ಅನುಗುಣವಾಗಿ(ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೊಳಸಬಹುದಾಗಿದೆ) 4) ಟೆಂಡರ್‌ನಲ್ಲಿ ನಿಗಧಿತ ಇ.ಎಂ.ಡಿ/ಟೆಂಡರ್ ಬುಕ್‌ಲೆಟ್‌ಗಾಗಿ ನಿಗಧಿಪಡಿಸಿದ ಶುಲ್ಕಗಳಗಾಗಿ ಬ್ಯಾಂಕ್ ಡಿಡಿ(ಹುಂಡಿ)ಯನ್ನು E-Procurement ಮೂಲಕವೇ ಸಲ್ಲಿಸತಕ್ಕದ್ದು

ಸಹಿ/- ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಆರೋಗ್ಯ ಸಂಘ, ಯಾದಗಿರ

ವಾ.ಸಾ.ಸಂ.ಇ/ಯಾದಗಿರಿ/153/ಕೆ.ಎಸ್.ಎಂ.ಸಿ.ಎ/2023-24

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು - 560070.

ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ-2/ಟೆಂಡರ್/05/2023-24 ದಿನಾಂಕ: 03-10-2023

ಕೆಪಿಪಿಪಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Deposit Contribution, 2225-00-103-0-40 Grants, 4210-00-101-0-39 Grants & 2210-00-101-0-36/2023-24 Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕೆಪಿಪಿಪಿ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **19-10-2023 ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://www.kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ವಾಸಾಸಂಇ/ವಾ.ಪ್ರ/1548/ಅಡ್ವರ್ಟೋರ್/2023-24

ನಮ್ಮ ಮೆಟ್ರೋ namma metro ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ G20

(ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಸಹಭಾಗಿತ್ವದ ಉದ್ಯಮ)

ಇ-ಮೇಲ್: contactus@bmrc.co.in ವೆಬ್‌ಸೈಟ್: www.bmrc.co.in

ಬಿಡ್ ಸಂಖ್ಯೆ: ಬಿಎಂಆರ್‌ಸಿಎಲ್/ಫೇಸ್-II/ಐಸಿಬಿ ಸಂ.ಇಪಿ6-ಸಿಸಿ ದಿನಾಂಕ: 03.10.2023

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್, ಇವರು ‘ಹಂತ-2ಎ ಮತ್ತು 2ಬಿ ಗೆ ಗ್ರಿಡ್ ಉಪಕೇಂದ್ರದಿಂದ **66ಕೆವಿ ಭೂಗತ ಕೇಬಲ್‌ನೊಂದಿಗೆ, 66/33ಕೆವಿ ಆರ್‌ಎಸ್‌ಎಸ್‌ನ ಇಂಜಿನಿಯರಿಂಗ್, ಸರಬರಾಜು, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾಚರಣೆಗೊಳಿಸಲು**’ ಅರ್ಹ, ಹೆಸರಾಂತ ಹಾಗೂ ಅನುಭವ ಹೊಂದಿರುವ ಟೆಂಡರ್‌ದಾರರಿಂದ ಏಕ ಹಂತ, ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಅಂತರರಾಷ್ಟ್ರೀಯ ಸ್ಪರ್ಧಾತ್ಮಕ ಬಿಡ್ಡಿಂಗ್ (ಐಸಿಬಿ) ಮೂಲಕ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ದಸ್ತಾವೇಜು ಬೆಲೆ (ಮರುಪಾವತಿಯಾಗದ): **ರೂ. 1,18,000/-** [1,00,000+18,000 (ಜಿಎಸ್‌ಟಿ@18%) (ಅಥವಾ) ಯುಎಸ್‌ಡಿ 1,421 [1204+217 (ಜಿಎಸ್‌ಟಿ@18%)]. ದಸ್ತಾವೇಜುಗಳ ಆನ್‌ಲೈನ್ ಮಾರಾಟ: **09.10.2023 ರಿಂದ 04.11.2023ರ ಮಧ್ಯರಾತ್ರಿಯವರೆಗೆ.** ಟೆಂಡರ್‌ಗಳನ್ನು ಸಲ್ಲಿಸುವುದು: **15.12.2023, ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆವರೆಗೆ.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 15.12.2023, ಮಧ್ಯಾಹ್ನ 3.30 ಗಂಟೆಗೆ.** ಹೆಚ್ಚಿನ ವಿವರಗಳಿಗೆ **ದಿನಾಂಕ: 05.10.2023ರಿಂದ** ನಮ್ಮ ವೆಬ್‌ಸೈಟ್: **www.bmrc.co.in** ಗೆ ಸಂಪರ್ಕಿಸಿ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ-583101

ದೂ.ಸಂ.: 08392-273731,

ಸಂಖ್ಯೆ: ಬನಅಪ್ರಾ/ಇಎನ್‌ಜಿಜಿ/02/2023-24 ದಿನಾಂಕ: 03.10.2023

ಇ-ಹರಾಜು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2022-23ನೇ ಸಾಲಿನ ಸರ್ಕಾರದ ಅನುಮೋದಿತ ಆಯವ್ಯಯದಂತೆ ಪ್ರಾಧಿಕಾರದ ಸಭೆಯ ದಿನಾಂಕ:05.04.2022 ಷಯ ಸಂಖ್ಯೆ:54ರ ನಿರ್ಣಯದಂತೆ ಈ ಕೆಳಕಂಡ **Ballari Urban Development Authority, Ballari (BUDA) invites / offers quotes from the eligible for (1) Public Sector Banks including Regional Rural Banks (RRB's) (2) Private Sector Schedule Commercial Banks for investment by way of callable deposit of a short-term tender** ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ **eligible Bidders** ಇ-ಹರಾಜು ಮೂಲಕ ಅಹ್ವಾನಿಸಲಾಗಿದೆ. **ಕಾಮಗಾರಿ ಹೆಸರು:** 01. Public Sector Banks including Regional Rural Banks (RRB's). **ಅಂದಾಜು ಮೊತ್ತ (ರೂ.ಕೋಟ್ಸಿಗಳಲ್ಲಿ):** Rs. 35.00 Crores. 02. Private Sector Schedule Commercial Banks **ಅಂದಾಜು ಮೊತ್ತ (ರೂ.ಕೋಟ್ಸಿಗಳಲ್ಲಿ):** Rs.15.00 Crores

Particulars/Dates: 1.Auction Published Date : **05.10.2023.** 2.Date and time up to which Auction notice document can be downloaded: **21.10.2023 on or before 15.00 Hrs.** 2(a).Date and time to confirm participation in e-auction by uploading the Declaration in Annexure-B and Annexure –A in the e-portal along with qualification documents: **21.10.2023 on or before 16.00 Hrs.** 3.Evaluation of Bids: **27.10.2023 on or before 15.00 Hrs.** 4.Live e-Auction: **Commences at 11.00 Hrs. & Concludes at 12.30 Hrs. on 08.11.2023.** 5.Amount and Date of Investment: **After Approved in BUDA Ballari Authority Meeting**

ಟೆಂಡರ್‌ನಲ್ಲಿನ ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಅಥವಾ **https://kppp.karnataka.gov.in** ವೆಬ್ ಸೈಟ್‌ನಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ:08392-273731 ರವರಿಂದ ಪಡೆಯಬಹುದಾಗಿದೆ. ನಿಬಂಧನೆಗಳು (1)ಯಾವುದೇ ಕಾರಣಕ್ಕೂ ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಪರ್ಕಜಾಲ (ಅನ್‌ಲೈನ್)ಸಿಗದಿದ್ದರೆ ಈ ಕಛೇರಿ ಜವಾಬ್ದಾರಿಯಾಗಿರುವುದಿಲ್ಲ 2)ಯಾವುದೇ ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಅಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ಇವರು ಕಾಯ್ದಿರಿಸಿಕೊಂಡಿರುತ್ತಾರೆ ಹಾಗೂ ಇನ್ನುಳಿದ ಎಲ್ಲಾ ಷರತ್ತುಗಳು ಅನ್ವಯವಾಗುತ್ತದೆ.

ಸಹಿ/- ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/328/ಕೆಎಸ್‌ಎಂಸಿಎ/2023-24

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79 ಫ್ಯಾಕ್ಸ್: 080-22268667 ಇ-ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ:ಕವಿನಿಆ/6/ಡಿಡಿಡಿ/ಎಫ್-1335/2023-24/669, ಬೆಂಗಳೂರು, ದಿನಾಂಕ: 27-09-2023

ಸೂಚನೆ

ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಿಪೈಡ್ ಸ್ಮಾರ್ಟ್ ಮೀಟರ್) ವಿನಿಯಮಗಳು 2023.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಿಪೈಡ್ ಸ್ಮಾರ್ಟ್ ಮೀಟರ್) ವಿನಿಯಮಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: **16-08-2023ರಂದು** ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ದಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ.

ಆಯೋಗವು ದಿನಾಂಕ: **30-10-2023 ರಂದು ಬೆಳಿಗ್ಗೆ 11.00 ಘಂಟೆಗೆ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿದ್ದು,** ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/- ಕಾರ್ಯದರ್ಶಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/1549/2023-24

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:12/2023-24, ದಿನಾಂಕ: 30.09.2023

2023-24ನೇ ಸಾಲಿನಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಕೋಲಾರ ಜಿಲ್ಲಾ ವ್ಯಾಪ್ತಿಗೆ ಅನುಮೋದನೆಯಾದ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಅನುಮೋದನೆಯಾದ (ಮನೆಮನೆಗೆ ನಳ ಸಂಪರ್ಕ ಕಲ್ಪಿಸುವ) ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೊಂದಾಯಿತ ಅರ್ಹ ಹಾಗೂ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೆಯ ದಿನಾಂಕ: **16.10.2023 ರಂದು 17.30 ಗಂಟೆಯುವರೆಗೆ** ಇರುತ್ತದೆ. ಹೆಚ್ಚಿನ ವಿವರಗಳಿಗೆ ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್- **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾಕು.ನೀ. ಮತ್ತು ನೈ ವಿಭಾಗ, ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:151/ಕೆಎಸ್‌ಎಂಸಿಎ/2023-24

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ನಂ.16-ಡಿ., 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560 052. ದೂರವಾಣಿ: 080-22374834 ಇ-ಮೇಲ್:md.dbcdc@gmail.com

ಸಂಖ್ಯೆ:ದೇಹಿನಿ/ಸ/ಪ್ರಕಟಣೆ/ಸಿಆರ್-18/2023-24 ದಿನಾಂಕ:03.10.2023

ತಿದ್ದುಪಡಿ

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2023-24ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಿ ದಿನಾಂಕ: 01.10.2023 ರಂದು ಹೊರಡಿಸಲಾದ ಪ್ರಕಟಣೆಯಲ್ಲಿ **“ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಯಾವುದೇ ಶುಲ್ಕ ಪಾವತಿಸುವಂತಿಲ್ಲ. ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರ ಕಛೇರಿ, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಛೇರಿಯ ಅವಧಿಯಲ್ಲಿ ಉಚಿತವಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ವ್ಯವಸ್ಥೆ ಇರುತ್ತದೆ”** ಎಂದು ತಿಳಿಸಲಾಗಿರುತ್ತದೆ. ಇದನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿದೆ.

“ನಿಗಮದ ವಿವಿಧ ಯೋಜನೆಗಳಲ್ಲಿ ಸೌಲಭ್ಯಗಳನ್ನು ಪಡೆಯಲು ಇಚ್ಛಿಸುವ ಹಿಂದುಳಿದ ವರ್ಗಗಳ ಅರ್ಜಿದಾರರು ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ http://sevasindhu.karnataka.gov.in ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.”

ಸಹಿ/- ಕಾಂತರಾಜು ಕ.ಸಾ.ಸೇ. (ಆಯ್ಕೆ ಶ್ರೇಣಿ) ವ್ಯವಸ್ಥಾಪಕ ನಿರ್ದೇಶಕರು.

ವಾಸಾಸಂಇ/ವಾಪ್ರ/ಜಿಎ/1546/2023-24

ಕರಾಸಕೈಅನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಅಧೀಕ್ಷಕ ಅಭಿಯಂತರರು, ಕೇಂದ್ರ ಕಛೇರಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-10. ದೂರವಾಣಿ: 080-23407011-25, ವೆಬ್‌ಸೈಟ್:www.kssidc.co.in ಇ-ಮೇಲ್: kssidcho@vsnl.com

ಸಂಖ್ಯೆ:ಇಎನ್‌ಜಿ:ಅ.ಇಪಿ-76: ಹೌಸ್‌ಕೀಪಿಂಗ್ ಸರ್ವೀಸಸ್:ರಾಜಾಜಿನಗರ:2023-24 ದಿನಾಂಕ 03-10-2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಪ್ರಸ್ತಾವನೆ ಸಲ್ಲಿಸಲು ಕೋರಿಕೆ) (ದ್ವಿ ಟೆಂಡರ್ ದಾಖಲೆ ಪದ್ಧತಿ)

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)

ಅಧೀಕ್ಷಕ ಅಭಿಯಂತರರು ವ್ಯವಸ್ಥಾಪಕ ನಿರ್ದೇಶಕರವರ ಪರವಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಕೈಗಾರಿಕಾ ವಸಾಹತು ರಾಜಾಜಿನಗರ, ಬೆಂಗಳೂರು-560010 ರಲ್ಲಿರುವ ಕಾರ್ಪೋರೇಟ್ ಕಛೇರಿ, ಆಡಳಿತ ಕಛೇರಿ ಕಟ್ಟಡ, ಮತ್ತು ಎಸ್.ಜೆ ಕಟ್ಟಡಗಳಿಗೆ ಹೌಸ್‌ಕೀಪಿಂಗ್ ಸೇವೆಯನ್ನು (ಕೆ.ಟಿ.ಪಿ.ಪಿ ನಿಯಮಾನುಸಾರ) ಕರ್ನಾಟಕ ರಾಜ್ಯದಲ್ಲಿ ನೊಂದಾಯಿಸಿಕೊಂಡಿರುವ ಮತ್ತು ಸಾಕಷ್ಟು ಸಂಪನ್ಮೂಲಗಳು, ಮಾನವಶಕ್ತಿ ಹಾಗೂ ಸಾಕಷ್ಟು ಹಿಂದಿನ ಅನುಭವನ್ನು ಹೊಂದಿರುವವರು ಸೇವಾ ಪೂರೈಕೆದಾರರು/ ಗುತ್ತಿಗೆದಾರರು/ ಸಂಸ್ಥೆಗಳು/ ಏಜೆನ್ಸಿಗಳು ಇವರುಗಳು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ.

Sl. No	Name of the Project	Amount put to Tender (Rs in lakhs)	EMD (Rs in Lakhs)	Tender Fee	Period of Tender
1	Providing House Keeping Services for Corporate Office, A.O. Building and S.J. Building KSSIDC at Industrial Estate, Rajajinagar, Bangalore	37.42	0.75	As per e-Procurement Portal	2 Years

ಭರ್ತಿಮಾಡಲಾದ (Online submission) ಟೆಂಡರ್‌ನೊಡನೆ ಟೆಂಡರ್‌ಗೆ ಸಂಬಂಧಿಸಿದ ಶುಲ್ಕ ಮತ್ತು ಇ.ಎಂ.ಡಿ ಮೊತ್ತವನ್ನು ಆನ್‌ಲೈನ್ ಗೇಟ್‌ವೇ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in (Under Karnataka State Small Industries Development Corporation Limited) ಇ-ಪೋರ್ಟಲ್ ಮೂಲಕ ದಿನಾಂಕ: **05-10-2023, ಬೆಳಿಗ್ಗೆ 10.00 ಗಂಟೆಯಿಂದ** ಸಲ್ಲಿಸಲು ಕೋರಿದೆ.

ಟೆಂಡರ್ ನ ಕಾಲಮಿತಿ ವಿವರಗಳು:

- ಅಧೀಕ್ಷಕ ಅಭಿಯಂತರರ ಕಛೇರಿಯಲ್ಲಿ ಪೂರ್ವಬಾವಿ ಸಭೆ ದಿನಾಂಕ: **09.10.2023 ರ 12.30 ಗಂಟೆಗೆ.**
- ಟೆಂಡರ್ ದಸ್ತಾವೇಜುಗಳನ್ನು (Online Submission) ಸಲ್ಲಿಸುವ ಕೊನೆಯ ದಿನಾಂಕ: **19.10.2023 ರ 17.30 ಗಂಟೆಯವರೆಗೆ.**
- ತಾಂತ್ರಿಕ ಟೆಂಡರ್ Document ತೆರೆಯುವ ದಿನಾಂಕ: **21.10.2023 ರ 11.30 ಗಂಟೆಗೆ.**
- ತಾಂತ್ರಿಕ ಬಿಡ್‌ನ ಅನುಮೋದನೆ ನಂತರ ಆರ್ಥಿಕ ಟೆಂಡರ್ Documentಗಳನ್ನು ಇ-ಪೋರ್ಟಲ್ ಮುಖಾಂತರ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಯನ್ನು ಈ ಕೆಳಸಹಿದಾರ ಅಧಿಕಾರಿಯವರ ಕಛೇರಿಯಲ್ಲಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಅಥವಾ ಇ-ಪ್ರಕ್ಯೂರ್‌ಮೆಂಟ್ ಸೆಲ್/ ಹೆಲ್ಪ್‌ಡೆಸ್ಕ್ (ದೂರವಾಣಿ: 8046010000 / 8068948777) ಮುಖಾಂತರ ಪಡೆಯಲು ಕೋರಿದೆ.

ಸಹಿ/- ಅಧೀಕ್ಷಕ ಅಭಿಯಂತರರು

ವಾಸಾಸಂಇ/ವಾಪ್ರ/ಜಿಎ/1543/2023-24

ಮೈತ್ರಿ ಬಗ್ಗೆ ನನ್ನೊಂದಿಗೆ ಚರ್ಚಿಸಿಲ್ಲ: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಹೇಳಿಕೆ

‘ಬಹುತೇಕ ಶಾಸಕರು ಮೈತ್ರಿಗೆ ಒಪ್ಪಿಲ್ಲ’

ಪ್ರಜಾವಾಣಿ ವಾರ್ತೆ

ಸಿ.ಎಂ.ಇಬ್ರಾಹಿಂ

ಬೆಂಗಳೂರು: ‘ಜೆಡಿಎಸ್‌ನ ಬಹುತೇಕ ಶಾಸಕರು ಬಿಜೆಪಿ ಜತೆಗಿನ ಮೈತ್ರಿಯನ್ನು ಒಪ್ಪಿಲ್ಲ. ನಮ್ಮ ಶಾಸಕರಲ್ಲಿ ಬಹುಪಾಲು ಮಂದಿ ಈ ವಿಚಾರದಲ್ಲಿ ನೋವಿನಲ್ಲಿದ್ದಾರೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಯಾವ ಷರತ್ತುಗಳ ಆಧಾರದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ನಡೆದಿದೆ ಎಂಬುದು ಯಾರಿಗೂ ಗೊತ್ತಿಲ್ಲ. ಬಹುತೇಕ ಶಾಸಕರು ಮೈತ್ರಿಯ ಪ್ರಸ್ತಾವವನ್ನು ವಿರೋಧಿಸಿದ್ದರು’ ಎಂದರು.

ನಿಖರವಾಗಿ ಎಷ್ಟು ಮಂದಿ ಶಾಸಕರು ಮೈತ್ರಿಯನ್ನು ವಿರೋಧಿಸಿದ್ದಾರೆ ಎಂಬುದನ್ನು ಬಹಿರಂಗಪಡಿಸಲು ನಿರಾಕರಿಸಿದ ಇಬ್ರಾಹಿಂ, ‘ಬಹುತೇಕ ಶಾಸಕರು’ ಎಂದಷ್ಟೇ ಉತ್ತರಿಸಿದರು.

‘ಮೈತ್ರಿಯ ಕುರಿತು ಈವರೆಗೆ ನನ್ನ ಜತೆ ಯಾರೂ ಚರ್ಚಿಸಿಲ್ಲ. ಬಿಜೆಪಿಯ ನಾಯಕರ ಜತೆ ಸಭೆ ನಡೆಸಿ ಬಂದವರು ಯಾವ ಮಾಹಿತಿಯನ್ನೂ ನೀಡಿಲ್ಲ. ಈ ಮೈತ್ರಿ ಜೆಡಿಎಸ್‌ಗೆ ಬೇಕಾಗಿತ್ತೋ? ಅಥವಾ ಬಿಜೆಪಿಗೆ ಬೇಕಾಗಿತ್ತೋ? ಎಂಬ ಪ್ರಶ್ನೆಗೆ ಉತ್ತರವೇ ಸಿಕ್ಕಿಲ್ಲ’ ಎಂದರು.

‘ಜೆಡಿಎಸ್ ಜಾತ್ಯತೀತ ಸಿದ್ಧಾಂತವನ್ನು ಬಿಡುವುದಿಲ್ಲ ಎಂದು ಪಕ್ಷ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಹೇಳಿದ್ದರು. ಅದನ್ನು ಬಿಜೆಪಿ ಒಪ್ಪಿದೆಯೆ? ಪಕ್ಷದ ಸಿದ್ಧಾಂತವನ್ನು ಬಿಜೆಪಿ ಒಪ್ಪಿಕೊಂಡಿದೆಯೆ? ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆ ತರದಿರುವುದು, ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ವಿಚಾರದಲ್ಲಿ ಜೆಡಿಎಸ್ ನಿಲುವನ್ನು ಆ ಪಕ್ಷ ಒಪ್ಪಿಕೊಂಡಿದೆಯೆ? ಎಂಬ ಪ್ರಶ್ನೆಗಳು ರಾಜ್ಯದ ಜನರ ಮುಂದಿವೆ. ಆ ಬಗ್ಗೆಯೂ ಉತ್ತರಿಸಬೇಕಿದೆ’ ಎಂದು ಹೇಳಿದರು.

ಹಲವು ರಾಜ್ಯದವರ ವಿರೋಧ: ‘ಬಿಜೆಪಿ ಜತೆಗಿನ ಮೈತ್ರಿಯನ್ನು ಜೆಡಿಎಸ್‌ನ ಮಹಾರಾಷ್ಟ್ರ, ಕೇರಳ, ರಾಜಸ್ಥಾನ, ಗುಜರಾತ್ ರಾಜ್ಯ ಘಟಕಗಳು ವಿರೋಧಿಸಿವೆ. ಎಲ್ಲ ರಾಜ್ಯದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಮೈತ್ರಿ ನಿರ್ಧಾರ ಕೈಗೊಳ್ಳಲಾಗಿದೆ. ಈಗ ಪಕ್ಷದ ಚಿಹ್ನೆ ಉಳಿದೀತೆ ಎಂಬ ಪ್ರಶ್ನೆಯೂ ಎದುರಾಗಿದೆ’ ಎಂದರು.

‘ಬಿ.ಎಂ. ಫಾರೂಕ್ ರಾಜಕಾರಣಿಯೇ ಅಲ್ಲ. 100 ತೆಂಗಿನಕಾಯಿ ಖರೀದಿಸಿದರೆ ಹತ್ತು ಉಚಿತ ಸಿಗುತ್ತವಲ್ಲ ಆ ವರ್ಗಕ್ಕೆ ಸೇರಿದವರು ಅವರು’ ಎಂದು ಇಬ್ರಾಹಿಂ ವಾಗ್ದಾಳಿ ನಡೆಸಿದರು.

‘ಅವರೇ ನನ್ನ ಮನೆಗೆ ಬಂದಿದ್ದು’

‘ನಾನಾಗಿಯೇ ಕುಮಾರಸ್ವಾಮಿ ಅವರ ಮನೆಗೆ ಹೋಗಿರಲಿಲ್ಲ. ನನ್ನ ಮನೆಗೆ ಎಷ್ಟು ಬಾರಿ ಅವರು ಬಂದಿದ್ದರು ಎಂಬುದು ನಿಮಗೆಲ್ಲರಿಗೂ ಗೊತ್ತಿದೆ. ಇತ್ತೀಚೆಗೆ ಒಮ್ಮೆ ಕುಮಾರಸ್ವಾಮಿ ಅವರ ಮನೆಯಲ್ಲಿ ಸಭೆ ಇದ್ದ ಕಾರಣಕ್ಕೆ ಹೋಗಿದ್ದೆ’ ಎಂದು ಸಿ.ಎಂ. ಇಬ್ರಾಹಿಂ ಹೇಳಿದರು.

‘ಇಬ್ರಾಹಿಂ ಅವರನ್ನು ಅಧ್ಯಕ್ಷರಾಗಿ ಎಂದು ನಾವು ಕರೆದಿರಲಿಲ್ಲ’ ಎಂಬ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ನಾನು ಇದ್ದ ಅಧಿಕಾರ ಬಿಟ್ಟು ಬಂದವನು. ಈಗಲೂ ಅಧಿಕಾರಕ್ಕಾಗಿ ಎಲ್ಲಿಯೂ ಹೋಗಿಲ್ಲ. ಕಾಂಗ್ರೆಸ್, ಎಎಪಿ, ಜೆಡಿಯು ಸೇರಿದಂತೆ ಹಲವರಿಂದ ಆಹ್ವಾನ ಬಂದಿದೆ. ನನಗೆ ಸಿದ್ಧಾಂತ ಮುಖ್ಯ’ ಎಂದರು.

ಬಿ.ಆರ್. ಪಾಟೀಲಗೆ ‘ಜೆ.ಪಿ. ಪ್ರಶಸ್ತಿ’

ಬೆಂಗಳೂರು: ಭಾರತ ಯಾತ್ರಾ ಕೇಂದ್ರ ನೀಡುವ ‘ಲೋಕನಾಯಕ ಜಯಪ್ರಕಾಶ್ ನಾರಾಯಣ್ ಪ್ರಶಸ್ತಿ’ಗೆ ಆಳಂದ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ₹10 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ. ಇದೇ 11ರಂದು ನಗರದ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ನಡೆಯುವ ಜಯಪ್ರಕಾಶ್ ನಾರಾಯಣ ಅವರ 122ನೇ ಜನ್ಮದಿನಾಚರಣೆಯಲ್ಲಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಬಿ.ಎಲ್. ಶಂಕರ್, ವಿಮರ್ಶಕ ನಟರಾಜ್ ಹುಳಿಯಾರ್ ಸೇರಿದಂತೆ ವಿವಿಧ ಗಣ್ಯರು ಭಾಗವಹಿಸಲಿದ್ದಾರೆ ಎಂದು ಕೇಂದ್ರದ ಪ್ರಧಾನ ಕಾರ್ಯದರ್ಶಿ ಕೆ.ವಿ. ನಾಗರಾಜ ಮೂರ್ತಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಸರ್ಕಾರಕ್ಕೆ ಸಲಹೆ ಕೊಡುವುದು ತಪ್ಪಾ: ಶಾಸಕ ರಾಜು ಕಾಗೆ ಪ್ರಶ್ನೆ

ಕಾಗವಾಡ(ಬೆಳಗಾವಿ ಜಿಲ್ಲೆ): ‘ಸರ್ಕಾರದಲ್ಲಿ ಕೆಲ ವೈಫಲ್ಯಗಳು ಇರುವ ಕಾರಣ ನಾನು ಕೆಲ ಸಲಹೆಗಳನ್ನು ನೀಡಿದ್ದೇನೆ ಹೊರತು ಸರ್ಕಾರದ ವಿರುದ್ಧ ಮಾತನಾಡಿಲ್ಲ. ಸಲಹೆ ಕೊಡುವುದು ತಪ್ಪಾ?’ ಎಂದು ಶಾಸಕ ರಾಜು ಕಾಗೆ ಪ್ರಶ್ನಿಸಿದರು.

ತಾಲ್ಲೂಕಿನ ಉಗಾರ ಗ್ರಾಮದಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕಾಗವಾಡ ಮತಕ್ಷೇತ್ರ ದಲ್ಲಿ ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕೆಲ ಅಧಿಕಾರಿಗಳು ಗ್ರಾಮ ಪಂಚಾಯಿತಿಗೆ ಬರುತ್ತಿಲ್ಲ. ಇದರಿಂದ ಸರ್ಕಾರಿ ಯೋಜನೆಗಳು ಜನರಿಗೆ ಸಕಾಲಕ್ಕೆ ತಲುಪುತ್ತಿಲ್ಲ.

‘ನನ್ನನ್ನೂ ಸೇರಿ ಹಲವು ಜನಪ್ರತಿನಿಧಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಮ್ಮಲ್ಲಿ ಹಲವು ನ್ಯೂನತೆಗಳಿವೆ. ಚುನಾವಣೆಯಲ್ಲಿ ನೀಡಿದ ಆಶ್ವಾಸನೆಗಳನ್ನು ಈಡೇರಿಸಲು ಕೆಲ ತಾಂತ್ರಿಕ ತೊಂದರೆಗಳಿವೆ. ಈ ವಿಚಾರವಾಗಿ ನಾನು ಮಾತನಾಡಿದ್ದೇನೆ. ಸರ್ಕಾರ ಮುಜುಗರಕ್ಕೆ ಒಳಗಾಗುವ ಹೇಳಿಕೆ ಕೊಟ್ಟಿಲ್ಲ’ ಎಂದು ತಿಳಿಸಿದರು.

‘ಸಂವಿಧಾದನ ಆಶಯಗಳಿಗೆ ಅನುಸಾರ ನಾವು ಕೆಲಸ ಮಾಡಬೇಕು. ಆದರೆ, ಅದರಂತೆ ನಾವು ಕೆಲಸ ಮಾಡದ ಕಾರಣ ಶಾಸಕಾಂಗ, ಕಾರ್ಯಾಂಗದ ಕೆಲ ವೈಫಲ್ಯಗಳ ಬಗ್ಗೆ ಮಾತನಾಡಿದ್ದೇನೆ. ನಾನು ಹಿಂದೆ ನೀಡಿದ್ದ ಹೇಳಿಕೆಗೆ ಈಗಲೂ ಬದ್ಧ. ಅದನ್ನು ತಪ್ಪಾಗಿ ಅರ್ಥ ಮಾಡಿಕೊಂಡರೆ, ಅದು ನನ್ನ ತಪ್ಪಲ್ಲ’ ಎಂದರು.

‘ಸರ್ಕಾರ ರಚನೆಯಾಗಿ ನಾಲ್ಕೈದು ತಿಂಗಳಾದರೂ ಅನುದಾನ ಬಿಡುಗಡೆಯಾಗಿಲ್ಲ. ಶಾಸಕರ ನಿಧಿಗೆ ₹50 ಲಕ್ಷ ಹಾಕಲಾಗಿದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಜಿಲ್ಲಾಧಿಕಾರಿ ಈ ಬಗ್ಗೆ ಯಾವುದೇ ಆದೇಶ ಪತ್ರ ನೀಡಿಲ್ಲ. ಹಾಗಾಗಿ ನಾವು ಖಾಲಿ ಕೂತಿದ್ದೇವೆ’ ಎಂದರು.



ಒಬಿಸಿ ಮೀಸಲು: ಸಂಪುಟ ಸಭೆಯಲ್ಲಿ ಇಂದು ಚರ್ಚೆ

ಬೆಂಗಳೂರು: ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸಲು ಮತ್ತು ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡುವ ಸಂಬಂಧ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆ. ಭಕ್ತವತ್ಸಲ ನೇತೃತ್ವದ ಆಯೋಗ ನೀಡಿದ ವರದಿಯ ಕುರಿತು ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಯಲಿದೆ.

ಆಯಾ ಸಮುದಾಯಗಳ ರಾಜಕೀಯ ಪ್ರಾತಿನಿಧ್ಯವನ್ನು ಖಚಿತಪಡಿಸಿದ ಬಳಿಕವೇ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕೆಂದು ಈ ಹಿಂದೆಯೇ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಈ ಹಿನ್ನೆಲೆಯಲ್ಲಿ, ಅಧ್ಯಯನ ನಡೆಸಿ ಶಿಫಾರಸು ಮಾಡಲು 2022ರ ಮೇ 16ರಂದು ಈ ಆಯೋಗವನ್ನು ರಾಜ್ಯ ಸರ್ಕಾರ ರಚಿಸಿತ್ತು.

ಹಿಂದುಳಿದ ಜಾತಿಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸಲು ಸದ್ಯ ಇರುವ ಎರಡು ಪ್ರವರ್ಗಗಳನ್ನು ನಾಲ್ಕು ಪ್ರವರ್ಗಗಳಾಗಿ ಮರು ವರ್ಗೀಕರಿಸಬೇಕು. ಒಟ್ಟು ಸ್ಥಾನಗಳಲ್ಲಿ ಹಿಂದುಳಿದ ಜಾತಿಗಳಿಗೆ ಶೇ 33ರಷ್ಟು ಮೀಸಲಾತಿಯಿದೆ. ಚುನಾವಣೆ ಉದ್ದೇಶಕ್ಕೆ ಹಿಂದುಳಿದ ವರ್ಗಗಳನ್ನು ಪ್ರವರ್ಗ 1, 2, 3 ಮತ್ತು 4 ಎಂದು ಮರು ವರ್ಗೀಕರಿಸಿ, ಮೊದಲ ಎರಡು ಪ್ರವರ್ಗಗಳಿಗೆ ತಲಾ ಶೇ 9.9ರಂತೆ ಮತ್ತು ಪ್ರವರ್ಗ 3 ಮತ್ತು 4ಕ್ಕೆ ತಲಾ ಶೇ 6.6ರಂತೆ ಹಂಚಿಕೆ ಮಾಡಬಹುದು ಎಂದು ಆಯೋಗ ಶಿಫಾರಸು ಮಾಡಿದೆ. ಈ ವರದಿಯಲ್ಲಿರುವ ಇತರ ಶಿಫಾರಸುಗಳ ಬಗ್ಗೆಯೂ ಸಂಪುಟ ಸಭೆಯಲ್ಲಿ ಚರ್ಚೆ ನಡೆಯಲಿದೆ.

‘ಉತ್ತರ–ದಕ್ಷಿಣ ಭಾರತದ ಜಾತಿ ಸಮೀಕರಣ ವಿಭಿನ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಭಾರತದ ಜಾತಿ ಸಮೀಕರಣಕ್ಕೂ ದಕ್ಷಿಣ ಭಾರತದ ಜಾತಿ ಸಮೀಕರಣಕ್ಕೂ ವ್ಯತ್ಯಾಸ ಇದೆ ಎಂದು ಶಾಸಕ ಬಸವರಾಜ ಬೊಮ್ಮಾಯಿ ಅವರು ಹೇಳಿದ್ದಾರೆ.

‘ಜಾತಿ ಗಣತಿ ವರದಿಗೆ ನಾವು ವಿರೋಧ ಮಾಡಿಲ್ಲ. ರಾಜ್ಯ ಸರ್ಕಾರ ಸಾಮಾಜಿಕ ಆರ್ಥಿಕ ಸಮೀಕ್ಷೆ ಮಾಡಿಸಿದ್ದು, ಅದು ಜಾತಿ ಗಣತಿ ಅಲ್ಲ ಎಂದು ಸಿದ್ದರಾಮಯ್ಯ ಅವರೇ ಹೇಳಿದ್ದಾರೆ’ ಎಂದು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

‘ವರದಿ ಬಿಡುಗಡೆ ಮಾಡಿದ ಬಳಿಕ ತುಳಿತಕ್ಕೆ ಒಳಗಾದವರಿಗೆ ನ್ಯಾಯ ಒದಗಿಸುವ ಜವಾಬ್ದಾರಿಯನ್ನೂ ಸರ್ಕಾರ ಹೊಂದಿದೆ. ಈ ವರದಿಯಲ್ಲಿ ಏನಿದೆ ಗೊತ್ತಿಲ್ಲ. ವರದಿ ಈಗಾಗಲೇ ಸೋರಿಕೆ ಆಗಿದೆ ಎಂಬ ಆರೋಪ ಇದೆ. ವರದಿ ಬಂದ ಮೇಲೆ ನೋಡೋಣ. ಸಿದ್ದರಾಮಯ್ಯ ಹಿಂದೆ ಮುಖ್ಯಮಂತ್ರಿ ಆಗಿದ್ದಾಗಲೇ ವರದಿ ಸ್ವೀಕಾರ ಮಾಡಬಹುದಿತ್ತು. ಆದರೆ ಆ ಕೆಲಸ ಮಾಡಲಿಲ್ಲ. ಈಗ ಏನು ಮಾಡುತ್ತಾರೋ ನೋಡೋಣ' ಎಂದು ಹೇಳಿದರು.

‘ಕಂದಾಯ ಗ್ರಾಮಗಳಾಗಿ 5 ಸಾವಿರ ತಾಂಡಾ’

ಬಂಜಾರ ಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಕಿ ಉಳಿದಿರುವ 5 ಸಾವಿರ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಕೆ. ನರಸಿಂಹಯ್ಯ ಸಮಿತಿಗೆ ಮತ್ತೆ ಜೀವ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಪ್ರದೇಶ ಬಂಜಾರ ಸೇವಾ ಸಂಘದ ಸ್ವರ್ಣ ಮಹೋತ್ಸವದ ಅಂಗವಾಗಿ ನಿರ್ಮಿಸಲಾಗಿರುವ ಬಂಜಾರ ಭವನವನ್ನು ಬುಧವಾರ ಉದ್ಘಾಟಿಸಿ ಮಾತನಾಡಿದರು.

‘ತಾಂಡಾ, ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲು ನಾನು ಕಳೆದ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಕೆ. ನರಸಿಂಹಯ್ಯ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ವರದಿ ಪಡೆಯಲಾಗಿತ್ತು. 2,800 ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲಾಗಿತ್ತು. ಬಳಿಕ ಬಂದ ಬಿಜೆಪಿ ನೇತೃತ್ವದ ಸರ್ಕಾರ ನಾಲ್ಕು ವರ್ಷಗಳಲ್ಲಿ ಕೇವಲ 300 ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದೆ. ಆದರೆ, ಪ್ರಧಾನಿ ನರೇಂದ್ರ ಮೋದಿಯವರೇ ಹಕ್ಕುಪತ್ರ ವಿತರಿಸಿ ಅವರೇ ಎಲ್ಲವನ್ನೂ ಮಾಡಿದಂತೆ ತೋರಿಸಿಕೊಂಡರು’ ಎಂದು ಟೀಕಿಸಿದರು.

‘ಸೇವಾಲಾಲ್ ಜಯಂತಿಯನ್ನು ಆರಂಭಿಸಿದ್ದೆವು. ಸೂರಗೊಂಡನಕೊಪ್ಪದಲ್ಲಿ ಸೇವಾಲಾಲ್ ಜನ್ಮ ಭೂಮಿಗೆ ಜಮೀನು ನೀಡಿದ್ದೆವು. ಸೂರಗೊಂಡನಕೊಪ್ಪದಲ್ಲಿ ವಸತಿ ಶಾಲೆ ತೆರೆಯಲು ಮುಂದಿನ ಬಜೆಟ್‌ನಲ್ಲಿ ಅನುದಾನ ಒದಗಿಸಲಾಗುವುದು’ ಎಂದು ಭರವಸೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ನೀರಿನಿಂದ ಸ್ನಾನ ಮಾಡುವವರು ಬಟ್ಟೆ ಬದಲಾಯಿಸುತ್ತಾರೆ. ಬೆವರಿನಿಂದ ಸ್ನಾನ ಮಾಡುವವರು ಇತಿಹಾಸ ಬದಲಾಯಿಸುತ್ತಾರೆ. ನೀವು ಬೆವರು ಸುರಿಸಿ ದುಡಿಯುವ ಜನರು. ದುಡಿಯುವ ವರ್ಗಗಳೊಂದಿಗೆ ಕಾಂಗ್ರೆಸ್ ಹಿಂದೆಯೂ ಇತ್ತು. ಮುಂದೆಯೂ ಇರುತ್ತದೆ. ಅದೇ ಕಾರಣಕ್ಕೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದು ತಿಳಿಸಿದರು.

ರಾಜಕೀಯ ಸಹಿತ ಎಲ್ಲ ಕ್ಷೇತ್ರಗಳಲ್ಲಿ ಅನೇಕರು ಅವಕಾಶಕ್ಕಾಗಿ ಕಾಯುತ್ತಿರುತ್ತಾರೆ. ಕೆಲವರಿಗಷ್ಟೇ ಅವಕಾಶ ಸಿಗುತ್ತದೆ. ಕೆಪಿಎಸ್‌ಸಿ ಸದಸ್ಯರ ಸ್ಥಾನವನ್ನು ಲಂಬಾಣಿ ಸಮುದಾಯಕ್ಕೆ ನೀಡಬೇಕು ಎಂದು ಮುಖ್ಯಮಂತ್ರಿ ತೀರ್ಮಾನ ಮಾಡಿದ್ದಾರೆ ಎಂದರು.

ಸೇವಾಲಾಲ್ ಪ್ರತಿಮೆಯನ್ನು ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಮಾನಪ್ಪ ಲಮಾಣಿ ಅನಾವರಣಗೊಳಿಸಿದರು. ಕಲಾಮೇಳವನ್ನು ಸಂಸದ ಉಮೇಶ್ ಜಾಧವ್ ಉದ್ಘಾಟಿಸಿದರು. ಕರಕುಶಲ ವಸ್ತುಪ್ರದರ್ಶನವನ್ನು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಉದ್ಘಾಟಿಸಿದರು. ಬಂಜಾರ ಸೇವಾ ಸಂಘದ ಅಧ್ಯಕ್ಷೆ ಬಿ.ಟಿ. ಲಲಿತಾ ನಾಯ್ಕ್ ಅಧ್ಯಕ್ಷತೆ ವಹಿಸಿದ್ದರು.

‘ಉಮೇಶ್ ಯಾಮಾರಿದ್ರು’

‘ಉಮೇಶ್ ಜಾಧವ್(ಕಲಬುರಗಿ ಸಂಸದ) ಯಾಮಾರಿದ್ರು. ಅವರು ಕಾಂಗ್ರೆಸ್‌ನಲ್ಲೇ ಉಳಿದಿದ್ದರೆ ಈಗ ಉತ್ತಮ ಸ್ಥಾನದಲ್ಲಿ ಇರುತ್ತಿದ್ದರು. ಈಗ ಆ ಚರ್ಚೆ ಬೇಡ’ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡುವಾಗಲೂ ಇದೇ ವಿಚಾರ ಪ್ರಸ್ತಾಪಿಸಿದರು. ‘ಉಮೇಶ್ ನನ್ನ ಜೊತೆಗೆ ಇದ್ದ. ನಂತರ ಹೋಗಿ ಬಿಟ್ಟ. ಇರ್ಲಿ. ಉಮೇಶ್ ನಮ್ಮದೇ ಅಸಾಮಿ’ ಎಂದು ಹೇಳಿದರು.

ಬಂಜಾರ ಭವನ ಉದ್ಘಾಟನೆ ಕಾರ್ಯಕ್ರಮದಲ್ಲಿ ಕಲಾವಿದರ ಜೊತೆಗೆ ಬಂಜಾರ ಸೇವಾ ಸಂಘದ ಅಧ್ಯಕ್ಷೆ ಬಿ.ಟಿ. ಲಲಿತಾ ನಾಯ್ಕ್ ಅವರೂ ಲಂಬಾಣಿ ನೃತ್ಯಕ್ಕೆ ಹೆಜ್ಜೆ ಹಾಕಿದರು –ಪ್ರಜಾವಾಣಿ ಚಿತ್ರ

ಭಲೇ ಕುಸ್ತಿ... ಕಾಡಸಿದ್ಧೇಶ್ವರ ಜಾತ್ರೆ ಪ್ರಯುಕ್ತ ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿಯಲ್ಲಿ ಬುಧವಾರ ನಡೆದ ರಾಷ್ಟ್ರ ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಹಿಮಾಚಲ ಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕ ಸೇರಿ ವಿವಿಧ ರಾಜ್ಯಗಳಿಂದ 60ಕ್ಕೂ ಹೆಚ್ಚು ಕುಸ್ತಿಪಟುಗಳು ಪಾಲ್ಗೊಂಡು, ಸೆಣಸಾಡಿದರು –ಪ್ರಜಾವಾಣಿ ಚಿತ್ರ

ಪ್ರವೀಣ್ ಹತ್ಯೆ: ಜಾಮೀನು ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿಣಿಯ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ಮೂವರು ಆರೋಪಿಗಳಿಗೆ ಹೈಕೋರ್ಟ್ ಜಾಮೀನು ನಿರಾಕರಿಸಿದೆ.

ಜಾಮೀನು ಕೋರಿ ಆರೋಪಿಗಳಾದ ಕೆ.ಇಸ್ಮಾಯಿಲ್ ಶಫಿ, ಕೆ.ಮೊಹಮ್ಮದ್ ಇಕ್ಬಾಲ್ ಮತ್ತು ಎಂ.ಶಹೀದ್ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಚ್‌.ಬಿ. ಪ್ರಭಾಕರ್ ಶಾಸ್ತ್ರಿ ಮತ್ತು ಅನಿಲ್ ಕೆ.ಕಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ಪ್ರಕಟಿಸಿದೆ.

‘ಪ್ರವೀಣ್ ನೆಟ್ಟಾರು ಮೇಲೆ ದಾಳಿ ನಡೆದ ಸಂದರ್ಭದಲ್ಲಿ ಮೂವರೂ ಆರೋಪಿಗಳು ಭೌತಿಕವಾಗಿ ಹಾಜರಿರಲಿಲ್ಲ ನಿಜ. ಆದರೆ, ಅವರ ಹತ್ಯೆಗೆ ಯೋಜನೆ ರೂಪಿಸಲು ಹಮ್ಮಿಕೊಂಡಿದ್ದ ಪಿತೂರಿ ಸಭೆಯಲ್ಲಿ ಭಾಗವಹಿಸಿದ್ದರು ಮತ್ತು ಹತ್ಯೆಯಲ್ಲಿ ಸಕ್ರಿಯ ಪಾತ್ರ ವಹಿಸಿರುವುದನ್ನು ಸಾಬೀತುಪಡಿಸಲು ಸೂಕ್ತ ಸಾಕ್ಷ್ಯಧಾರಗಳಿವೆ’ ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಮೇಲ್ಮನವಿ ತಿರಸ್ಕರಿಸಿದೆ. ಮೇಲ್ಮನವಿದಾರರ ಪರ ಮೊಹಮದ್ ತಾಹಿರ್ ಮತ್ತು ಪ್ರಾಸಿಕ್ಯೂಷನ್ ಪರ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು.

2022ರ ಜುಲೈ 26ರಂದು ಸುಳ್ಯ ತಾಲ್ಲೂಕಿನ ಬೆಳ್ಳಾರೆಯಲ್ಲಿ ಪ್ರವೀಣ್ ನೆಟ್ಟಾರು ಅವರನ್ನು ದುಷ್ಕರ್ಮಿಗಳು ಹತ್ಯೆ ಮಾಡಿದ್ದರು. ಬೈಕ್‌ನಲ್ಲಿ ಬಂದ ಅಪರಿಚಿತರು ತಲವಾರಿನಿಂದ ಪ್ರವೀಣ್ ಅವರ ತಲೆಗೆ ಹೊಡೆದು ಪರಾರಿಯಾಗಿದ್ದರು. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಮೃತಪಟ್ಟಿದ್ದರು.

‘ವರ್ಷವಿಡೀ ಕರ್ನಾಟಕ ಸಂಭ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಾಜ್ಯಕ್ಕೆ ‘ಕರ್ನಾಟಕ’ ಎಂದು ನಾಮಕರಣಗೊಂಡು 50 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ‘ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ’ ಹೆಸರಿನಲ್ಲಿ ನ. 1ರಿಂದ ಒಂದು ವರ್ಷ (2024ರ ನ. 1ರವರೆಗೆ) ‘ಕರ್ನಾಟಕ ಸಂಭ್ರಮ’ ಆಚರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಕನ್ನಡ ಮತ್ತು ಸಂಸ್ಕೃತಿ, ಪ್ರವಾಸೋದ್ಯಮ ಮತ್ತು ಇತರ ಇಲಾಖೆಗಳ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸುವ ಕುರಿತು ಅವರು ಬುಧವಾರ ಪೂರ್ವಭಾವಿ ಸಭೆ ನಡೆಸಿದರು. ಕಾರ್ಯಕ್ರಮದ ಲಾಂಛನವನ್ನು ಇದೇ 17ರಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ.

ವರ್ಷವಿಡೀ ನಡೆಯುವ ಕಾರ್ಯಕ್ರಮದಲ್ಲಿ ಕರ್ನಾಟಕದ ದೇಶೀ ಸಂಸ್ಕೃತಿಯನ್ನು ಹೆಚ್ಚು ಬಿಂಬಿಸಬೇಕು. ದೇಶೀ ಕ್ರೀಡೆಗಳನ್ನೂ ಹಮ್ಮಿಕೊಳ್ಳಬೇಕು. ಯುವ ಪೀಳಿಗೆಗೂ ಕನ್ನಡ ನಾಡು, ಸಂಸ್ಕೃತಿ, ಪ್ರಾದೇಶಿಕ ಭವ್ಯತೆಯನ್ನು ದಾಟಿಸುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಮುಖ್ಯಮಂತ್ರಿ ಸಲಹೆ ನೀಡಿದರು.

ಇದೇ ವೇಳೆ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ನಾಡಿನ ಸಾಹಿತಿಗಳ ಜೊತೆ ಈ ಬಗ್ಗೆ ಚರ್ಚಿಸಿ ಸಲಹೆಗಳನ್ನು ಪಡೆಯಲಾಗಿದೆ ಎಂದರು.

ವಿಧಾನಸೌಧ ಮತ್ತು ಶಾಸಕರ ಭವನದ ಮಧ್ಯೆ ತಾಯಿ ಭುವನೇಶ್ವರಿ, ಮೈಸೂರಿನಲ್ಲಿ ದೇವರಾಜ ಅರಸರ ಪ್ರತಿಮೆ ಸ್ಥಾಪನೆ, ಧಾರವಾಡದಲ್ಲಿ ದಿ. ಅದರಗುಂಚಿ ಶಂಕರಗೌಡ, ಬಳ್ಳಾರಿಯಲ್ಲಿ ಹುತಾತ್ಮ ರಂಜಾನ್ ಸಾಬ್, ಗದಗದಲ್ಲಿ ದಿ. ಅಂದಾನಪ್ಪ ದೊಡ್ಡಮೇಟಿ ಸ್ಮಾರಕ ಅಭಿವೃದ್ಧಿ, ಜೀರ್ಣೋದ್ಧಾರ ಕೆಲಸ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ.

ಹಲ್ಮಿಡಿ ಶಾಸನದ ಪ್ರತಿಕೃತಿಗಳ ಸ್ಥಾಪನೆ, ಲೇಸರ್ ಶೋ, ಧ್ವನಿ, ಬೆಳಕು ಕಾರ್ಯಕ್ರಮ, ಕರ್ನಾಟಕಕ್ಕೆ ಕೊಡುಗೆ ನೀಡಿದ 50 ಮಹಿಳೆಯರಿಗೆ ಪ್ರಶಸ್ತಿ ಪ್ರದಾನ ಹಾಗೂ 2024ರ ನವೆಂಬರ್‌ನಲ್ಲಿ ಸಮಾರೋಪ ಸಮಾರಂಭ ಆಯೋಜಿಸಲು ಕೂಡಾ ಸಭೆಯಲ್ಲಿ ನಿರ್ಧರಿಸಲಾಯಿತು.

‘ಹಿಂದಿನ ಸರ್ಕಾರ ಏಕೆ ಆಚರಿಸಲಿಲ್ಲ?’

‘ಕರ್ನಾಟಕ’ ಎಂದು ನಾಮಕರಣಗೊಂಡ 50ನೇ ವರ್ಷದ ಸಂಭ್ರಮವನ್ನು ಹಿಂದಿನ ಸರ್ಕಾರ (2022 ನ. 1ರಿಂದ 2023ರ ನ. 1ರವರೆಗೆ) ಆಚರಿಸಬೇಕಿತ್ತು. ಹಿಂದಿನ ಸರ್ಕಾರ ಏಕೆ ಆಚರಿಸಲಿಲ್ಲ? ಈ ನಿರ್ಲಕ್ಷ್ಯ ಸರಿಯಾ’ ಎಂದು ಅಧಿಕಾರಿಗಳನ್ನು ಮುಖ್ಯಮಂತ್ರಿ ಪ್ರಶ್ನಿಸಿದರು.

‘ಈಗ 50 ವರ್ಷ ಪೂರ್ಣಗೊಂಡು 51ನೇ ವರ್ಷಕ್ಕೆ ಕಾಲಿಟ್ಟಿದೆ. 50ನೇ ವರ್ಷವನ್ನು 2022ರ ನವೆಂಬರ್‌ನಲ್ಲಿಯೇ ಆಚರಿಸಬೇಕಿತ್ತು. ಈ ವಿಚಾರದಲ್ಲಿ ಹಿಂದಿನ ಸರ್ಕಾರ ಎಡವಿದೆ. 50 ವರ್ಷ ತುಂಬಿದ ಬಳಿಕ ಈ ಸಂಭ್ರಮ ಆಯೋಜಿಸಿದರೆ ಅದಕ್ಕೆ ಮಹತ್ವ ಇರುತ್ತದೆಯೇ’ ಎಂದೂ ಪ್ರಶ್ನಿಸಿದ ಮುಖ್ಯಮಂತ್ರಿ, ಕೊನೆಗೆ ಮುಂದಿನ ವರ್ಷವಿಡೀ ಆಚರಿಸಲು ತೀರ್ಮಾನ ತೆಗೆದುಕೊಂಡರು.

100 ಅಡಿ ದಾಟಿದ ಕೆಆರ್‌ಎಸ್

ಪ್ರಜಾವಾಣಿ ವಾರ್ತೆ

ಮಂಡ್ಯ: ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಜಲಾಶಯದ ನೀರಿನ ಮಟ್ಟ ಬುಧವಾರ 100.36 ಅಡಿಗೆ ಏರಿಕೆ ಕಂಡಿದೆ.

ಬುಧವಾರ ಬೆಳಿಗ್ಗೆ 8 ಗಂಟೆ ವೇಳೆಗೆ 9,042 ಕ್ಯೂಸೆಕ್ ಒಳಹರಿವು, 1,482 ಕ್ಯೂಸೆಕ್ ಹೊರಹರಿವು ದಾಖಲಾಗಿದೆ.

30 ದಿನ ಪೂರೈಸಿದ ಕಾವೇರಿ ಹೋರಾಟ: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ತಿಂಗಳು ಪೂರೈಸಿದೆ. ಬುಧವಾರ 30 ದಿನ ಪೂರ್ಣಗೊಂಡಿದ್ದು ಹೋರಾಟಕ್ಕೆ ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿ ಉತ್ತಮ ಬೆಂಬಲ ವ್ಯಕ್ತವಾಗುತ್ತಿದೆ.

ಕಾವೇರಿ ನೀರು ನಿರ್ವಹಣಾ ಸಮಿತಿ ತಮಿಳುನಾಡಿಗೆ ನೀರು ಪೂರೈಸುವ ಸೂಚನೆ ನೀಡಿದ ನಂತರ ಹಿತರಕ್ಷಣಾ ಸಮಿತಿ ಸರ್‌ಎಂವಿ ಪ್ರತಿಮೆ ಎದುರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿತು. ಸಮಿತಿಯ ಹೋರಾಟಕ್ಕೆ ರಾಜಕೀಯ ಪಕ್ಷಗಳು, ಸಾರ್ವಜನಿಕರು ಅಭೂತಪೂರ್ವ ಬೆಂಬಲ ವ್ಯಕ್ತಪಡಿಸಿರುವ ಕಾರಣ ಹೋರಾಟ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಬುಧವಾರ ರಾಜ್ಯ ಗುತ್ತಿಗೆದಾರರ ಸಂಘದ ಸದಸ್ಯರು ಹಾಗೂ ರಂಗ ಕಲಾವಿದರು ಹೋರಾಟಕ್ಕೆ ಬೆಂಬಲ ನೀಡಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	100.36	9,052	1,482
ಹಾರಂಗಿ	2,859	2,855.30	1,981	1,400
ಕಬಿನಿ	2284.00	2,276.06	3,349	1,000
ಹೇಮಾವತಿ	2,922	2,900.05	3,418	1,360
ಲಿಂಗನಮಕ್ಕಿ	1,819	1,788.50	4,308	4,111.63
ಸೂಪಾ (ಮೀ)	564	546.38	4,233	3,174
ಮಾಣಿ	595	581.34	514	00
ತುಂಗಭದ್ರಾ	1,633	1,617.16	3,850	9,737
ಮಲಪ್ರಭಾ	2079.50	2,064.41	00	1,019
ಘಟಪ್ರಭಾ	2175	2,169.78	5,603	186
ಭದ್ರಾ	186	159	790	3,244
ಆಲಮಟ್ಟಿ (ಮೀ)	519.60	518.95	39,064	11,553
ನಾರಾಯಣಪುರ (ಮೀ)	492.25	491.50	9,998	10,322

* ನೆಲಮಟ್ಟದಿಂದ

ಪಾಲಿಟೆಕ್ನಿಕ್ ಪಠ್ಯಕ್ರಮ–20ಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ತಾಂತ್ರಿಕ ಶಿಕ್ಷಣ ಇಲಾಖೆ ಎನ್‌ಇಪಿ–2020ಗೆ ಪೂರಕವಾಗಿ ಪಾಲಿಟೆಕ್ನಿಕ್ ಕಾಲೇಜುಗಳಿಗೆ ರೂಪಿಸಿದ ಪಠ್ಯಕ್ರಮಕ್ಕೆ ಹಲವು ಕಾಲೇಜುಗಳ ಪ್ರಾಂಶುಪಾಲರು, ಅಧ್ಯಾಪಕರು ವಿರೋಧ ವ್ಯಕ್ತಪಡಿಸಿದರು.

ವಿಕಾಸಸೌಧದಲ್ಲಿ ಬುಧವಾರ ಡಿಪ್ಲೊಮಾ ಶಿಕ್ಷಣದಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಕುರಿತು ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ತಮ್ಮ ಅಭಿಪ್ರಾಯ ಹಂಚಿಕೊಂಡರು.

2020-21ನೇ ಶೈಕ್ಷಣಿಕ ವರ್ಷದಿಂದ ಪರಿಚಯಿಸಲಾದ ಹೊಸ ಪಠ್ಯಕ್ರಮದಲ್ಲಿ ಹಲವು ಪ್ರಮುಖ ವಿಷಯಗಳನ್ನು ತೆಗೆದುಹಾಕಲಾಗಿದೆ. ಮೆಕ್ಯಾನಿಕಲ್ ಮತ್ತು ಸಿವಿಲ್ ಎಂಜಿನಿಯರಿಂಗ್‌ನ ಪ್ರಮುಖ ಪಾಠಗಳನ್ನು ಕೈಬಿಡಲಾಗಿದೆ. ಇದರಿಂದ ಡಿಪ್ಲೊಮಾ ಶಿಕ್ಷಣ ಪೂರೈಸಿದ ನಂತರ ಉನ್ನತ ಶಿಕ್ಷಣಕ್ಕೆ ತೆರಳುವ ವಿದ್ಯಾರ್ಥಿಗಳಿಗೆ ತೊಡಕಾಗಿದೆ ಎಂದು ನ್ಯೂನತೆ ತೆರೆದಿಟ್ಟರು.

ಶಿವಮೊಗ್ಗ ಘಟನೆ: ಕರ್ನಾಟಕಕ್ಕೆ ಕಾದಿದೆ ಅಪಾಯ– ಸಿ.ಟಿ. ರವಿ ಎಚ್ಚರಿಕೆ

ನ್ಯಾಯಾಂಗ ತನಿಖೆಗೆ ಬಿಜೆಪಿ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗದಲ್ಲಿ ನಡೆದ ಗಲಾಟೆಯ ಹಿಂದೆ ರಾಜ್ಯದ ಶಾಂತಿ ಹಾಳು ಮಾಡುವ ಉದ್ದೇಶ ಇದ್ದಂತಿದೆ. ಆದ್ದರಿಂದ ಈ ಘಟನೆಯ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಒತ್ತಾಯಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಶಿವಮೊಗ್ಗ, ಕೋಲಾರ ಘಟನೆಗಳ ಮೂಲಕ ಟೆಸ್ಟಿಂಗ್ ಡೋಸ್ ಕೊಟ್ಟಿದ್ದಾರೆ. ಕರ್ನಾಟಕಕ್ಕೆ ಮುಂದೆ ದೊಡ್ಡ ಅಪಾಯ ಕಾದಿದೆ’ ಎಂದು ಹೇಳಿದರು.

ಹಿಂದೂ ಸಂಘಟನೆಗಳು ಮತ್ತು ಹಿಂದೂ ಕಾರ್ಯಕರ್ತರ ಮೇಲಿನ ಸುಳ್ಳು ಮೊಕದ್ದಮೆಗಳನ್ನು ವಾಪಸ್ ಪಡೆಯಲು ಆಗ್ರಹಿಸಿದರು. ‘ಪುನೀತ್ ಕೆರೆಹಳ್ಳಿ ಮೇಲಿನ ಸುಳ್ಳು ಆರೋಪಕ್ಕೆ ಗೃಹ ಸಚಿವರು ಉತ್ತರ ಕೊಡಲಿ. ಇಲ್ಲವಾದರೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸಲಿ’ ಎಂದೂ ಆಗ್ರಹಿಸಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ, ‘ಕೇರಳ ಮತ್ತು ಕಾಶ್ಮೀರ ಇಸ್ಲಾಮಿಕ್ ರಾಜ್ಯಗಳಾದ ಮಾದರಿಯಲ್ಲೇ ಕರ್ನಾಟಕದಲ್ಲೂ ಅದೇ ವಾತಾವರಣ ಸೃಷ್ಟಿ ಮಾಡಲು ಮುಸ್ಲಿಮರನ್ನು ಪ್ರಚೋದಿಸುವ ಕೆಲಸ ಸಿದ್ದರಾಮಯ್ಯ ಅವರ ಸರ್ಕಾರದಿಂದ ನಡೆದಿದೆ. ಒಂದು ಸಮುದಾಯದ ಜನ ಅಟ್ಟಹಾಸ ಮಾಡುತ್ತಿದೆ. ಆದರೆ, ಈ ಸರ್ಕಾರ ಹಿಂದೂಗಳಿಗೆ ರಕ್ಷಣೆ ಕೊಡುತ್ತಿಲ್ಲ. ಹಿಂದೂಗಳು ಮತ್ತು ಸನಾತನ ಧರ್ಮದ ವಿಚಾರ ಬಂದರೆ ಪ್ರಿಯಾಂಕ್ ಖರ್ಗೆ ಮತ್ತು ಅವರ ತಂದೆ ಹೇಳಿಕೆ ಕೊಡುತ್ತಾರೆ. ಆದರೆ, ಕೋಲಾರದಲ್ಲಿ ತಮ್ಮದೇ ಸಮುದಾಯದ ಸಂಸದರ ವಿರುದ್ಧ ಎಸ್ಪಿ ಉದ್ಧಟತನದಿಂದ ವರ್ತಿಸಿದರೆ, ಕುತ್ತಿಗೆ ಪಟ್ಟಿ ಹಿಡಿದು ಹೊರಗೆ ಹಾಕಿದರೆ ಖರ್ಗೆ ಮಾತನಾಡಿಲ್ಲ. ಇದನ್ನು ತಾಲಿಬಾನಿ ಸರ್ಕಾರ ಎನ್ನದಿರಲು ಸಾಧ್ಯವೇ’ ಎಂದು ಪ್ರಶ್ನೆ ಮಾಡಿದರು.

ಇಂದು ಸತ್ಯಶೋಧನಾ ತಂಡ ಭೇಟಿ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೇತೃತ್ವದಲ್ಲಿ ಬಿಜೆಪಿ ನಾಯಕರ ಸತ್ಯಶೋಧನಾ ತಂಡ ಗುರುವಾರ ಶಿವಮೊಗ್ಗದ ರಾಗಿಗುಡ್ಡಕ್ಕೆ ಭೇಟಿ ನೀಡಲಿದೆ.

ತಂಡದಲ್ಲಿ ಕೆ.ಎಸ್.ಈಶ್ವರಪ್ಪ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಶಾಸಕ ಆರಗ ಜ್ಞಾನೇಂದ್ರ, ಸಂಸದ ಬಿ.ವೈ.ರಾಘವೇಂದ್ರ, ವಿಧಾನಪರಿಷತ್ ಸದಸ್ಯರಾದ ಎನ್.ರವಿಕುಮಾರ್, ಎಸ್.ರುದ್ರೇಗೌಡ, ಡಿ.ಎಸ್.ಅರುಣ್, ಭಾರತಿ ಶೆಟ್ಟಿ, ಶಾಸಕ ಎಸ್.ಎನ್. ಚನ್ನಬಸಪ್ಪ ಇದ್ದಾರೆ.

27 ಎಫ್‌ಐಆರ್, 64 ಮಂದಿ ಬಂಧನ

ಬೆಂಗಳೂರು: ‘ಶಿವಮೊಗ್ಗದಲ್ಲಿ ನಡೆದಿದ್ದ ಗಲಾಟೆ ಸಂಬಂಧ ಇದುವರೆಗೂ ಒಟ್ಟು 27 ಪ್ರಕರಣ ದಾಖಲಿಸಿಕೊಂಡು 64 ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಹೇಳಿದರು.

‘ಶಿವಮೊಗ್ಗದಲ್ಲಿ ಪರಿಸ್ಥಿತಿ ಶಾಂತವಾಗಿದೆ. ಸ್ಥಳೀಯ ಪೊಲೀಸರು ಭದ್ರತೆ ವಿಚಾರದಲ್ಲಿ ಉತ್ತಮವಾಗಿ ಕೆಲಸ ಮಾಡಿದ್ದಾರೆ. ಶಿವಮೊಗ್ಗ ಪ್ರಕರಣವನ್ನು ಇಲಾಖೆ ಗಂಭೀರವಾಗಿ ಪರಿಗಣಿಸಿದೆ. ರಾಜ್ಯದ ಬೇರೆಲ್ಲೂ ಈ ರೀತಿಯ ಘಟನೆಗಳು ನಡೆಯದಂತೆ ಎಚ್ಚರಿಕೆ ವಹಿಸುವಂತೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ’ಎಂದರು.

ಖಾಸಗಿ ಎಂಜಿನಿಯರಿಂಗ್: ಕಡಿವಾಣಕ್ಕೆ ನಿಯಮ– ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪ್ರದೇಶಗಳಲ್ಲಿ ಅಧಿಕ ಸಂಖ್ಯೆಯಲ್ಲಿ ತಲೆ ಎತ್ತುತ್ತಿರುವ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಿಗೆ ಕಡಿವಾಣ ಹಾಕಲು ಸೂಕ್ತ ನಿಯಮ ರೂಪಿಸುವ ಚಿಂತನೆ ನಡೆದಿದೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಹೇಳಿದರು.

ಬುಧವಾರ ಮಾತನಾಡಿದ ಅವರು, ಖಾಸಗಿ ವಿಶ್ವವಿದ್ಯಾಲಯಗಳು ಮನಬಂದಂತೆ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಸೀಟುಗಳನ್ನು ನೀಡುತ್ತಿವೆ. ಇದು ನಿರುದ್ಯೋಗ ಸಮಸ್ಯೆಗೆ ದಾರಿಯಾಗಿದೆ. ಇದಕ್ಕೆ ಕಡಿವಾಣ ಅಗತ್ಯ ಎಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಗೆ (ಎಐಸಿಟಿಇ) ಪತ್ರ ಬರೆದಿದ್ದೆ. ಕೆಲವು ಸಂಸ್ಥೆಗಳು ರಾಜ್ಯದ ನಿಯಂತ್ರಣದ ಅಡಿ ಬರುವ ಕಾರಣ ರಾಜ್ಯ ಸರ್ಕಾರವೇ ನಿಯಮ ರೂಪಿಸಬಹುದು ಎಂದು ಸಲಹೆ ನೀಡಿದೆ. ಹಾಗಾಗಿ, ತಾಂತ್ರಿಕ ಶಿಕ್ಷಣ ನಿಯಮ ತಿದ್ದುಪಡಿ ತರಲು ಚರ್ಚೆ ನಡೆದಿದೆ ಎಂದರು.

ಕಾಲೇಜುಗಳ ಸಂಖ್ಯೆ ಹೆಚ್ಚಳದಿಂದ ಎಂಜಿನಿಯರಿಂಗ್ ಶಿಕ್ಷಣದ ಗುಣಮಟ್ಟ ಕಡಿಮೆಯಾಗುತ್ತಿದೆ. ಪ್ರಸ್ತುತ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ (ವಿಟಿಯು) ವ್ಯಾಪ್ತಿಗೆ ಒಳಪಡುವ ಕಾಲೇಜಿಗಳಲ್ಲೂ ಸಾಕಷ್ಟು ಸಮಸ್ಯೆ ಇದೆ. ಸರಿಪಡಿಸಿಕೊಳ್ಳದೇ ಇದ್ದರೆ ವಿಟಿಯುವನ್ನೇ ಹೊಣೆ ಮಾಡಲಾಗುವುದು. ಡೀಮ್ಡ್ ವಿಶ್ವವಿದ್ಯಾಲಯಗಳನ್ನು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನೇರವಾಗಿ ನಿಯಂತ್ರಿಸುತ್ತಿದೆ. ಹಾಗಾಗಿ, ಯುಜಿಸಿಗೂ ಪತ್ರ ಬರೆಯಲಾಗುವುದು ಎಂದರು.

ರಾಜ್ಯ ಶಿಕ್ಷಣ ನೀತಿಗೆ ವಾರದಲ್ಲಿ ಸಮಿತಿ

ಉನ್ನತ ಶಿಕ್ಷಣದಲ್ಲಿ ಜಾರಿಗೆ ತಂದಿದ್ದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ರದ್ದು ಮಾಡಲಾಗಿದೆ. ರಾಜ್ಯ ಶಿಕ್ಷಣ ನೀತಿ ರೂಪಿಸಲು ಒಂದು ವಾರದಲ್ಲಿ ಸಮಿತಿ ರಚನೆ ಮಾಡಲಾಗುವುದು. ಸಮಿತಿ ರಚನೆಯ ನಂತರ ಉಳಿದ ಮಾಹಿತಿ ನೀಡಲಾಗುವುದು ಎಂದು ಸಚಿವ ಸುಧಾಕರ್ ಹೇಳಿದರು.

ನಾಗ್ಪುರದ ಎರಡು ಸರ್ಕಾರಿ ಆಸ್ಪತ್ರೆಗಳಲ್ಲಿ 23, ನಾಂದೇಡದಲ್ಲಿ ಮತ್ತೆ 6 ಮಂದಿ ಸಾವು

ಮಹಾರಾಷ್ಟ್ರ: 80 ದಾಟಿದ ಮೃತರ ಸಂಖ್ಯೆ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ/ನಾಗ್ಪುರ: ಮಹಾರಾಷ್ಟ್ರದ ಮೂರು ಪ್ರತ್ಯೇಕ ಆಸ್ಪತ್ರೆಗಳಲ್ಲಿ ಬುಧವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಒಟ್ಟು 29 ರೋಗಿಗಳು ಮೃತಪಟ್ಟಿದ್ದಾರೆ. ಇದರೊಂದಿಗೆ ಕಳೆದ ಮೂರು ದಿನಗಳಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಮೃತಪಟ್ಟ ರೋಗಿಗಳ ಸಂಖ್ಯೆ 80ರ ಗಡಿ ದಾಟಿದಂತಾಗಿದೆ.

'ಸಂಸ್ಥೆಯ ಆಸ್ಪತ್ರೆಯಲ್ಲಿ 14 ರೋಗಿಗಳು ಮೃತಪಟ್ಟಿದ್ದಾರೆ' ಎಂದು ನಾಗ್ಪುರದ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಸಂಸ್ಥೆಯ (ಜಿಎಂಸಿಎಚ್) ಡೀನ್ ಡಾ.ರಾಜ್ ಗಜಭಿಯೆ ತಿಳಿಸಿದ್ದಾರೆ.

ನಾಗ್ಪುರದಲ್ಲಿರುವ ಮತ್ತೊಂದು ಆರೋಗ್ಯಸಂಸ್ಥೆ, ಇಂದಿರಾಗಾಂಧಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ (ಐಜಿಜಿಎಂಸಿಎಚ್) 9 ರೋಗಿಗಳು ಮೃತಪಟ್ಟಿದ್ದಾರೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ನಾಂದೇಡದ ಡಾ.ಶಂಕರರಾವ್ ಚವಾಣ್ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ (ಎಸ್‌ಸಿಜಿಎಂಸಿಎಚ್) ಬುಧವಾರ ಮತ್ತೆ 6 ಮಂದಿ ಮರಣ ಹೊಂದಿದ್ದಾರೆ. ಈ ಆಸ್ಪತ್ರೆಯಲ್ಲಿ ಭಾನುವಾರದಿಂದ ಮಂಗಳವಾರದವರೆಗೆ 35 ರೋಗಿಗಳು ಮೃತಪಟ್ಟಿದ್ದರೆ, ಛತ್ರಪತಿ ಸಂಭಾಜಿನಗರದ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ 18 ಮಂದಿ ಮೃತಪಟ್ಟಿದ್ದರು.

'ನಾಗ್ಪುರದ ಜಿಎಂಸಿಎಚ್ 1,900 ಹಾಸಿಗೆಗಳ ಸಾಮರ್ಥ್ಯ ಹೊಂದಿದ್ದು, ದಿನವೊಂದಕ್ಕೆ ಸರಾಸರಿ 10 ರಿಂದ 12 ಸಾವುಗಳು ಸಂಭವಿಸುತ್ತವೆ. ಕೊನೆಗಳಿಗೆಯಲ್ಲಿ ಇಲ್ಲವೇ ಗಂಭೀರ ಸ್ಥಿತಿಯಲ್ಲಿರುವ ರೋಗಿಗಳನ್ನು ಈ ಆಸ್ಪತ್ರೆಗೆ ಕರೆತರಲಾಗುತ್ತದೆ. ಅವರಲ್ಲಿ ಬಹುತೇಕ ರೋಗಿಗಳಿಗೆ ತೀವ್ರ ನಿಗಾ ಘಟಕದಲ್ಲಿ ದಾಖಲಿಸಿ ಚಿಕಿತ್ಸೆ ನೀಡುವ ಅಗತ್ಯವಿರುತ್ತದೆ. ಇಂತಹ ರೋಗಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಮೃತಪಟ್ಟಿದ್ದಾರೆ' ಎಂದು ಸಂಸ್ಥೆಯ ಡೀನ್ ಡಾ.ರಾಜ್ ಗಜಭಿಯೆ ಹೇಳಿದ್ದಾರೆ.

'ವೆಂಟಿಲೇಟರ್ ಅಳವಡಿಸಿ ಚಿಕಿತ್ಸೆ ಅಗತ್ಯವಿರುವಂತಹ ರೋಗಿಗಳನ್ನು ಒಳಗೊಂಡಂತೆ, ಗಂಭೀರ ಸ್ಥಿತಿಯಲ್ಲಿರುವ ರೋಗಿಗಳನ್ನೇ ಐಜಿಜಿಎಂಸಿಎಚ್‌ಗೆ ಕರೆತರಲಾಗುತ್ತದೆ' ಎಂದು ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಐಜಿಜಿಎಂಸಿಎಚ್ 800 ಹಾಸಿಗೆಗಳ ಸಾಮರ್ಥ್ಯ ಹೊಂದಿದೆ. ದಿನವೊಂದಕ್ಕೆ ಸರಾಸರಿ 6 ರೋಗಿಗಳು ಮರಣ ಹೊಂದುತ್ತಾರೆ ಎಂದೂ ತಿಳಿಸಿದ್ದಾರೆ.

ಸುತ್ತಲಿನ ಜಿಲ್ಲೆಗಳಿಂದ ಅಲ್ಲದೆ, ನೆರೆಯ ಮಧ್ಯಪ್ರದೇಶ ಹಾಗೂ ಛತ್ತೀಸಗಢದಿಂದ ಸಾಕಷ್ಟು ಸಂಖ್ಯೆಯ ಜನರು ಚಿಕಿತ್ಸೆಗಾಗಿ ನಾಗ್ಪುರಕ್ಕೆ ಬರುತ್ತಾರೆ.

ತನಿಖೆಗೆ ಆದೇಶ: ರಾಜ್ಯದ 3 ಆಸ್ಪತ್ರೆಗಳಲ್ಲಿ ಸಂಭವಿಸಿರುವ ಸಾವುಗಳ ಕುರಿತು ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಸರ್ಕಾರ ತನಿಖೆಗೆ ಆದೇಶಿಸಿದೆ.

'ಸಾವಿನ ಪ್ರತಿಯೊಂದು ಪ್ರಕರಣ ಕುರಿತು ತನಿಖೆ ನಡೆಸಲಾಗುವುದು. ಈ ವಿಷಯದಲ್ಲಿ ವೈದ್ಯರ ಅಥವಾ ಆಸ್ಪತ್ರೆಗಳ ಸಿಬ್ಬಂದಿ ಇಲ್ಲವೇ ವೈದ್ಯಕೀಯ ಉಪಕರಣಗಳು ಮತ್ತು ಔಷಧಗಳ ಕೊರತೆಯಿಂದಾಗಿ ಈ ಸಾವುಗಳು ಸಂಭವಿಸಿವೆಯೇ ಎಂಬುದನ್ನು ಪತ್ತೆ ಹಚ್ಚಲಾಗುವುದು' ಎಂದು ಸರ್ಕಾರ ಹೇಳಿದೆ.

ಭೇಟಿ: ವಿಧಾನಸಭೆಯಲ್ಲಿ ವಿರೋಧ ಪಕ್ಷದ ವಿಜಯ ವಡೆಟ್ಟಿವಾರ್, ವಿಧಾನಪರಿಷತ್‌ನ ವಿಪಕ್ಷ ನಾಯಕ ಅಂಬಾದಾಸ್ ದನ್ವೆ ಅವರು ನಾಂದೇಡ್ ಹಾಗೂ ಛತ್ರಪತಿ ಸಂಭಾಜಿನಗರ ಆಸ್ಪತ್ರೆಗಳಿಗೆ ಭೇಟಿ ನೀಡಿ, ಪರಿಸ್ಥಿತಿ ಅವಲೋಕಿಸಿದ್ದಾರೆ.

ಆಗ್ರಹ: ವಿವಿಧ ಆಸ್ಪತ್ರೆಗಳಲ್ಲಿ ಸಂಭವಿಸಿರುವ ಸಾವುಗಳ ಹೊಣೆ ಹೊತ್ತು ಆರೋಗ್ಯ ಸಚಿವ ಡಾ.ತಾನಾಜಿ ಸಾವಂತ್, ವೈದ್ಯಕೀಯ ಶಿಕ್ಷಣ ಸಚಿವ ಹಸನ್ ಮುಶ್ರೀಫ್ ಅವರು ರಾಜೀನಾಮೆ ನೀಡಬೇಕು ಎಂದು ವಿಪಕ್ಷಗಳ ಮೈತ್ರಿಕೂಟ ಮಹಾ ವಿಕಾಸ್ ಆಘಾಡಿ (ಎಂವಿಎ) ಆಗ್ರಹಿಸಿದೆ.

ವರದಿ ನೀಡಲು ಸರ್ಕಾರಕ್ಕೆ ಹೈಕೋರ್ಟ್ ಸೂಚನೆ

ಮುಂಬೈ(ಪಿಟಿಐ): ಮಹಾರಾಷ್ಟ್ರದ ನಾಂದೇಡ್ ಮತ್ತು ಛತ್ರಪತಿ ಸಂಭಾಜಿನಗರದಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಭವಿಸಿರುವ ಸಾವುಗಳ ಕುರಿತು ಸ್ವಯಂ ಪ್ರೇರಿತ ವಿಚಾರಣೆ ಕೈಗೆತ್ತಿಕೊಂಡಿರುವ ಬಾಂಬೆ ಹೈಕೋರ್ಟ್, ಸಾವುಗಳ ಕುರಿತು ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

'ರಾಜ್ಯದ ಆರೋಗ್ಯ ವ್ಯವಸ್ಥೆಗಳಿಗೆ ರಾಜ್ಯ ಬಜೆಟ್‌ನಲ್ಲಿ ಒದಗಿಸಿರುವ ಅನುದಾನ ಕುರಿತು ಗುರುವಾರ ಮಾಹಿತಿ ಸಲ್ಲಿಸಬೇಕು' ಎಂದು ಅಡ್ವೊಕೇಟ್ ಜನರಲ್ ಬೀರೇಂದ್ರ ಸರಾಫ್ ಅವರಿಗೆ ಮುಖ್ಯನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಹಾಗೂ ನ್ಯಾಯಮೂರ್ತಿ ಆರೀಫ್ ಡಾಕ್ಟರ್ ಅವರಿದ್ದ ವಿಭಾಗೀಯ ಪೀಠ ನಿರ್ದೇಶನ ನೀಡಿತು.

ಬೆಳಿಗ್ಗೆ ಕಲಾಪ ಆರಂಭಗೊಂಡಾಗ, ಆಸ್ಪತ್ರೆಗಳಲ್ಲಿ ಸಂಭವಿಸಿದ ಸಾವುಗಳ ಕುರಿತು ನ್ಯಾಯಾಲಯ ಸ್ವಯಂ ಪ್ರೇರಿತ ವಿಚಾರಣೆ ನಡೆಸಬೇಕು ಎಂದು ಕೋರಿ ವಕೀಲ ಮೋಹಿತ್ ಖನ್ನಾ ಎಂಬುವವರು ಅರ್ಜಿ ಸಲ್ಲಿಸಿದ್ದರು.

'ಈ ವಿಚಾರವಾಗಿ ಅರ್ಜಿ ಸಲ್ಲಿಸಿದರೆ, ಸೂಕ್ತ ಆದೇಶ ನೀಡಲು ಸಾಧ್ಯ' ಎಂದು ವಿಭಾಗೀಯ ಪೀಠವು ಅರ್ಜಿದಾರ ಖನ್ನಾ ಅವರಿಗೆ ಸೂಚಿಸಿತ್ತು.

ಸಾವುಗಳು ಸಂಭವಿಸಿರುವ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳು, ಔಷಧಗಳ ಲಭ್ಯತೆ, ಅನುದಾನ ಮತ್ತಿತರ ವಿವರಗಳನ್ನು ಸಂಗ್ರಹಿಸುವಂತೆಯೂ ಅರ್ಜಿದಾರಗೆ ಸೂಚಿಸಿತ್ತು.

ಮಧ್ಯಾಹ್ನ ಕಲಾಪ ಆರಂಭಗೊಂಡಾಗ, ಈ ವಿಚಾರವಾಗಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸುವುದಾಗಿ ಪ್ರಕಟಿಸಿದ ನ್ಯಾಯಪೀಠ, ವಿಚಾರಣೆಯನ್ನು ಗುರುವಾರ ನಡೆಸುವುದಾಗಿ ಹೇಳಿತು.

ಸಂಸದ ಪಾಟೀಲ ವಿರುದ್ಧ ಪ್ರಕರಣ

ಮುಂಬೈ: ನಾಂದೇಡದ ಡಾ.ಶಂಕರರಾವ್ ಚವಾಣ್ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಡೀನ್ ಡಾ.ಶ್ಯಾಮರಾವ್ ವಾಕೋಡೆ ಅವರು ನೀಡಿದ ದೂರಿನ ಅನ್ವಯ ಶಿವಸೇನಾ (ಶಿಂದೆ ಬಣ) ಸಂಸದ ಹೇಮಂತ್ ಪಾಟೀಲ ವಿರುದ್ಧ ಪ್ರಕರಣ ದಾಖಲಾಗಿದೆ.

ಐಪಿಸಿ, ಎಸ್‌ಸಿ, ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆ, ಮಹಾರಾಷ್ಟ್ರ ವೈದ್ಯಕೀಯ ಸೇವೆ ಸಿಬ್ಬಂದಿ ಮತ್ತು ಸೇವಾ ಸಂಸ್ಥೆಗಳ (ಹಿಂಸಚಾರ ಮತ್ತು ಹಾನಿ ಅಥವಾ ನಷ್ಟ ತಡೆ) ಕಾಯ್ದೆಯಡಿ ನಾಂದೇಡ್ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಸ್ಪತ್ರೆಯಲ್ಲಿ ಕಳೆದ ಎರಡು ದಿನಗಳಲ್ಲಿ 31 ರೋಗಿಗಳು ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿದ್ದ ಹಿಂಗೋಲಿ ಸಂಸದ ಹೇಮಂತ್ ಪಾಟೀಲ, ಡೀನ್ ಡಾ.ವಾಕೋಡೆ ಅವರಿಂದ ಶೌಚಾಲಯಗಳನ್ನು ಸ್ವಚ್ಛಗೊಳಿಸಿದ್ದರು. ಈ ಕುರಿತ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ಐಎಂಎ ದೂರು: ಸಂಸದ ಹೇಮಂತ್ ಪಾಟೀಲ ವಿರುದ್ಧ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಮಹಾರಾಷ್ಟ್ರ ಘಟಕವು ಮುಖ್ಯಮಂತ್ರಿ ಏಕನಾಥ ಶಿಂದೆ ಅವರಿಗೆ ದೂರು ನೀಡಿದೆ.

ಸಂಸದ ಪಾಟೀಲ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ದೂರಿನಲ್ಲಿ ಎಚ್ಚರಿಸಲಾಗಿದೆ.

ಬೆಟ್ಟಿಂಗ್ ಆ್ಯಪ್ ಪ್ರಕರಣ: ರಣಬೀರ್‌ಗೆ ಇ.ಡಿ ಸಮನ್ಸ್



ನವದೆಹಲಿ (ಪಿಟಿಐ): ಛತ್ತೀಸ್‌ಗಢದ ಮಹಾದೇವ್ ಬೆಟ್ಟಿಂಗ್ ಆ್ಯಪ್‌ನೊಂದಿಗೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ನಟ ರಣ್‌ಬೀರ್ ಕಪೂರ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ಜಾರಿ ಮಾಡಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಆ್ಯಪ್ ಪ್ರವರ್ತಕರೊಬ್ಬರ ವಿವಾಹದಲ್ಲಿ ನೃತ್ಯ ಮಾಡುವುದಾಗಿ ಅವರಿಂದ ಕಪೂರ್ ಹಣ ಪಡೆದು ವಂಚಿಸಿದ್ದಾರೆ ಎಂದು ಇ.ಡಿ ಆರೋಪಿಸಿದೆ ಎಂದು ಅವರು ತಿಳಿಸಿದ್ದಾರೆ.

ಅ.6ರಂದು ರಾಯ್‌ಪುರ ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಇ.ಡಿ ತಿಳಿಸಿದೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ 14-15 ಸೆಲಬ್ರಿಟಿಗಳು ಮತ್ತು ನಟರಿಗೆ ಇ.ಡಿ ಶೀಘ್ರವೇ ಸಮನ್ಸ್ ನೀಡಲಿದೆ ಎಂದು ಹೇಳಿದ್ದಾರೆ.

ಸೌರಭ್ ಚಂದ್ರಕಾರ್ ಮತ್ತು ರವಿ ಉಪ್ಪಾಳ್ ಆರಂಭಿಸಿದ್ದ ಬೆಟ್ಟಿಂಗ್ ಆ್ಯಪ್ ದುಬೈನಿಂದ ಕಾರ್ಯಾಚರಣೆ ನಡೆಸುತ್ತಿದೆ. ಇದು ಬೇನಾಮಿ ಖಾತೆಗಳ ಮೂಲಕ ಹಣ ಅಕ್ರಮ ವರ್ಗಾವಣೆ ಮಾಡುತ್ತಿತ್ತು ಎಂದು ಇ.ಡಿ ಆರೋಪಿಸಿದೆ. ಬೆಟ್ಟಿಂಗ್ ಆದಾಯವನ್ನು ವಿದೇಶದ ಖಾತೆಗಳಿಗೆ ವರ್ಗಾಯಿಸಲು ದೊಡ್ಡ ಪ್ರಮಾಣದ ಹವಾಲಾ ಕಾರ್ಯಾಚರಣೆಗಳನ್ನು ನಡೆಸಲಾಗುತ್ತಿದೆ ಎಂದು ಅದು ಹೇಳಿದೆ

ಅಭಿಷೇಕ್ ಬ್ಯಾನರ್ಜಿಗೆ ಸಮನ್ಸ್



ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿನ ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಅಕ್ಟೋಬರ್ 9ರಂದು ವಿಚಾರಣೆಗೆ ಹಾಜರಾಗುವಂತೆ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ಜಾರಿ ಮಾಡಿದೆ.

ಬ್ಯಾನರ್ಜಿ ಪತ್ನಿ ರುಜಿರಾ ಅವರಿಗೂ ಅಕ್ಟೋಬರ್ 11ರಂದು ವಿಚಾರಣೆಗೆ ಹಾಜರಾಗಲು ಸಮನ್ಸ್ ನೀಡಿದೆ.

'ಅ.9ರಂದು ಬ್ಯಾನರ್ಜಿ ಅವರನ್ನು ಮತ್ತು ಅ.11ರಂದು ರುಜಿರಾ ಅವರನ್ನು ಅಧಿಕಾರಿಗಳು ವಿಚಾರಣೆ ನಡೆಸಲಿದ್ದಾರೆ. ಇಬ್ಬರಿಗೂ ಇಲ್ಲಿನ ಸಿಜಿಒ ಕಾಂಪ್ಲೆಕ್ಸ್‌ನಲ್ಲಿರುವ ಕಚೇರಿಗೆ ಬರಲು ತಿಳಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇದಕ್ಕೂ ಮುನ್ನ ಅಭಿಷೇಕ್ ಬ್ಯಾನರ್ಜಿ ಪೋಷಕರಾದ ಅಮಿತ್ ಮತ್ತು ಲತಾ ಬ್ಯಾನರ್ಜಿ ಅವರಿಗೂ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ವಾರ ವಿಚಾರಣೆ ಹಾಜರಾಗಲು ತಿಳಿಸಲಾಗಿತ್ತು.

ಸಂಸದ ಸಂಜಯ್ ಸಿಂಗ್ ಬಂಧನ

ಒಂದನೇ ಪುಟದಿಂದ...

ಮದ್ಯದ ವ್ಯಾಪಾರಿಗಳಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ದೆಹಲಿ ಅಬಕಾರಿ ನೀತಿ ರೂಪಿಸಲು ಲಂಚ ಪಡೆದ ಆರೋಪ ಎಎಪಿ ನಾಯಕರ ಮೇಲಿದೆ. ಸಿಬಿಐ ದಾಖಲಿಸಿದ್ದ ಎಫ್‌ಐಆರ್ ಆಧಾರದ ಮೇಲೆ ಕಳೆದ ವರ್ಷದ ಆಗಸ್ಟ್‌ನಲ್ಲಿ ಜಾರಿ ನಿರ್ದೇಶನಾಲಯವೂ ಪ್ರಕರಣ ದಾಖಲಿಸಿತ್ತು.

ಆನ್‌ಲೈನ್ ಸುದ್ದಿ ತಾಣ 'ನ್ಯೂಸ್‌ಕ್ಲಿಕ್' ಹಾಗೂ ಅಲ್ಲಿ ಕೆಲಸ ನಿರ್ವಹಿಸುತ್ತಿದ್ದ ಪತ್ರಕರ್ತರಿಗೆ ಸೇರಿದ ಸ್ಥಳಗಳಲ್ಲಿ ದೆಹಲಿ ಪೊಲೀಸರು ಮಂಗಳವಾರ ಶೋಧ ನಡೆಸಿದ್ದರು. ನಂತರ ಅದರ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರನ್ನು ಬಂಧಿಸಿದ್ದರು. ಅದೇ ಮಾದರಿಯಲ್ಲಿಯೇ ಸಿಂಗ್ ಅವರ ಬಂಧನವೂ ಆಗಿದೆ. ಈ ಮಧ್ಯೆ, ಪಶ್ಚಿಮ ಬಂಗಾಳದಲ್ಲಿ ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿ ತೃಣಮೂಲ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರಿಗೆ ವಿಚಾರಣೆಗೆ ಹಾಜರಾಗಲು ಬುಧವಾರ ನೋಟಿಸ್ ಜಾರಿ ಮಾಡಿದೆ.

ಇ.ಡಿ ದಾಳಿ ಮತ್ತು ಸಿಂಗ್ ಬಂಧನವನ್ನು ಎಎಪಿ ತೀವ್ರವಾಗಿ ಖಂಡಿಸಿದೆ. ಜನರ ಪರವಾಗಿ ಅವರು ಮಾತನಾಡಿದ್ದಕ್ಕೆ ಬಂಧಿಸಲಾಗಿದೆ. 'ಇಂಡಿಯಾ' ಮೈತ್ರಿಕೂಟ ರಚನೆಯ ಬಳಿಕ ಬಿಜೆಪಿ ಹತಾಶೆಗೆ ಒಳಗಾಗಿದೆ ಎಂದು ಟೀಕಿಸಿದೆ.

ಸಂಸತ್‌ನಲ್ಲಿ ಅದಾನಿ ಗ್ರೂಪ್ ವಿಷಯದ ಬಗ್ಗೆ ಅವರು ಪ್ರಸ್ತಾಪಿಸಿದ್ದರು. ಇದರ ಸೇಡಿನ ಭಾಗವಾಗಿ ದಾಳಿ ನಡೆಸಿ ಬಂಧಿಸಲಾಗಿದೆ ಎಂದು ಆರೋಪಿಸಿದೆ.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಎಎಪಿ ಕಚೇರಿ ಬಳಿ ಬುಧವಾರ ಪ್ರತಿಭಟನೆ ನಡೆಸಿದರು. – ಪಿಟಿಐ ಚಿತ್ರ

ಮೋದಿ ವಿರುದ್ಧ 'ಇಂಡಿಯಾ' ವಾಗ್ದಾಳಿ

ಸಂಜಯ್ ಸಿಂಗ್ ಹಾಗೂ ಎಎಪಿ ಬೆಂಬಲಕ್ಕೆ ನಿಂತಿರುವ 'ಇಂಡಿಯಾ'ವು, ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದೆ.

'ಮೋದಿ ಸರ್ಕಾರವು ನಿರಂಕುಶ ಧೋರಣೆ ತಳೆದಿದೆ. ತನಿಖಾ ಏಜೆನ್ಸಿಗಳ ಮೂಲಕ ದಾಳಿ ನಡೆಸಿ ಪ್ರತಿಪಕ್ಷಗಳ ನಾಯಕರಲ್ಲಿ ಭೀತಿ ಹುಟ್ಟಿಸಲು ಮುಂದಾಗಿದೆ' ಎಂದು ರಾಜ್ಯಸಭೆಯಲ್ಲಿನ ಕಾಂಗ್ರೆಸ್‌ನ ಉಪ ನಾಯಕ ಪ್ರಮೋದ್ ತಿವಾರಿ ಟೀಕಿಸಿದ್ದಾರೆ.

'ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಛತ್ತೀಸಗಢ ಹಾಗೂ ಜಾರ್ಖಂಡ್‌ನಲ್ಲಷ್ಟೇ ಸಿಬಿಐ ಅಥವಾ ಇ.ಡಿ ದಾಳಿ ನಡೆಯುತ್ತಿದೆ. ಗುಜರಾತ್, ಮಧ್ಯಪ್ರದೇಶ, ಅಸ್ಸಾಂ ಸೇರಿದಂತೆ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ದಾಳಿ ನಡೆಯುತ್ತಿಲ್ಲ ಏಕೆ? ಇದು ಸರ್ವಾಧಿಕಾರದ ಪರಾಕಾಷ್ಠೆ' ಎಂದು ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ಅವರು ಆಪಾದಿಸಿದ್ದಾರೆ.

'ಇದು ಬಿಜೆಪಿ, ಮೋದಿ, ಅಮಿಶಾ ಹಾಗೂ ಅದಾನಿಯ ನಿರಂಕುಶ ಪ್ರಭುತ್ವದ ಹೊಸ ಮಾದರಿಯಾಗಿದೆ' ಎಂದು ಸಮಾಜವಾದಿ ಪಕ್ಷದ ನಾಯಕ ಘನಶ್ಯಾಮ್ ತಿವಾರಿ ಹೇಳಿದ್ದಾರೆ.

ಕ್ರಿಮಿನಲ್ ಸ್ವರೂಪದ ಕೃತ್ಯ ಎಸಗಿದ್ದರೂ ಸಾಂವಿಧಾನಿಕ ರಕ್ಷಣೆ ಅನ್ವಯವೇ?

'ಜನಪ್ರತಿನಿಧಿಗಳಿಗೆ ಕಾನೂನು ರಕ್ಷಣೆ ಪರಿಶೀಲನೆ'

ನವದೆಹಲಿ (ಪಿಟಿಐ): ಶಾಸಕರು ಮತ್ತು ಸಂಸದರು ಕ್ರಿಮಿನಲ್ ಕೃತ್ಯ ಎಸಗಿದ್ದಾಗಲೂ, ಅವರಿಗೆ ಕಾನೂನು ಕ್ರಮದಿಂದ ರಕ್ಷಣೆ ಸಿಗುತ್ತದೆಯೇ ಎಂಬ ಬಗ್ಗೆ ಪರಿಶೀಲನೆ ನಡೆಸುವುದಾಗಿ ಏಳು ನ್ಯಾಯಮೂರ್ತಿಗಳು ಇರುವ ಸುಪ್ರೀಂ ಕೋರ್ಟ್ ಪೀಠವೊಂದು ಹೇಳಿದೆ.

ಸಂಸತ್ತಿನಲ್ಲಿ ಅಥವಾ ವಿಧಾನಸಭೆಗಳಲ್ಲಿ ಮತ ಚಲಾಯಿಸಲು ಮತ್ತು ಮಾತನಾಡಲು ಸಂಸದರು ಅಥವಾ ಶಾಸಕರು ಲಂಚ ತೆಗೆದುಕೊಂಡಿದ್ದರೆ, ಅವರಿಗೆ ಕಾನೂನು ಕ್ರಮದಿಂದ ರಕ್ಷಣೆ ಇರುತ್ತದೆ ಎಂದು 1998ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನ ಪುನರ್ ಪರಿಶೀಲನೆಗೆ ಸಂಬಂಧಿಸಿದ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಆರಂಭಿಸಿತು.

'ಕಾನೂನಿನ ಅಡಿಯಲ್ಲಿ ನೀಡಿರುವ ರಕ್ಷಣೆ ಹಾಗೂ ಒಂದು ನಿರ್ದಿಷ್ಟ ವಿಷಯವನ್ನು – ಅಂದರೆ, ಕೃತ್ಯವು ಕ್ರಿಮಿನಲ್ ಸ್ವರೂಪದ್ದಾಗಿದ್ದರೂ ಶಾಸನ ಸಭೆಗಳ ಸದಸ್ಯರಿಗೆ ಕಾನೂನು ಕ್ರಮದಿಂದ ರಕ್ಷಣೆ ಇರುತ್ತದೆಯೇ ಎಂಬುದನ್ನು ನಾವು ಇಲ್ಲಿ ಪರಿಶೀಲಿಸಬೇಕು' ಎಂದು ಏಳು ನ್ಯಾಯಮೂರ್ತಿಗಳು ಇರುವ ಸಂವಿಧಾನ ಪೀಠ ಹೇಳಿತು.

ಲಂಚವನ್ನು ಕೊಟ್ಟಾಗ ಮತ್ತು ಅದನ್ನು ಶಾಸನ ಸಭೆಯ ಸದಸ್ಯ ಸ್ವೀಕರಿಸಿದಾಗ ಲಂಚದ ಅಪರಾಧ ಆಗಿಹೋಗಿರುತ್ತದೆ. ಇದನ್ನು ಸಂವಿಧಾನದ 105ನೆಯ ವಿಧಿಯ ಮೂಲಕ ಪರಿಶೀಲಿಸುವುದಕ್ಕಿಂತ, ಇದನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅಡಿಯಲ್ಲಿ ನೋಡಬೇಕು ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಆರಂಭದಲ್ಲಿ ವಾದಿಸಿದರು.

1998ರ ತೀರ್ಪನ್ನು ಉಲ್ಲೇಖಿಸಿ ನ್ಯಾಯಪೀಠವು, ಕ್ರಿಮಿನಲ್ ಕೃತ್ಯ ಯಾವುದೇ ಇದ್ದರೂ ಶಾಸನ ಸಭೆಗಳ ಸದಸ್ಯರಿಗೆ ಕಾನೂನಿನ ಕ್ರಮದಿಂದ ರಕ್ಷಣೆ ಇರುತ್ತದೆ ಎಂದು ತೀರ್ಪಿನಲ್ಲಿ ಹೇಳಲಾಗಿದೆ ಎಂದು ಹೇಳಿತು. 'ಕಾನೂನು ಕ್ರಮದಿಂದ ರಕ್ಷಣೆಯ ವಿಚಾರವನ್ನು ನಾವು ಪರಿಶೀಲಿಸಬೇಕಿದೆ' ಎಂದು ಪೀಠ ತಿಳಿಸಿತು. ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ, ಎಂ.ಎಂ. ಸುಂದರೇಶ್, ಪಿ.ಎಸ್. ನರಸಿಂಹ, ಜೆ.ಬಿ. ಪರ್ದಿವಾಲಾ, ಸಂಜಯ್ ಕುಮಾರ್ ಮತ್ತು ಮನೋಜ್ ಮಿಶ್ರಾ ಅವರು ಕೂಡ ಈ ಪೀಠದಲ್ಲಿದ್ದಾರೆ

ಪ್ರಕರಣದ ಪೂರ್ವಾಪರ ಹೀಗಿದೆ..

ಕೋರ್ಟ್ ಸುದ್ದಿ

ಜೆಎಂಎಂ ಲಂಚ ಪ್ರಕರಣವು ದೇಶದಾದ್ಯಂತ ಚರ್ಚೆಯ ವಸ್ತುವಾದ ಸರಿಸುಮಾರು 25 ವರ್ಷಗಳ ನಂತರದಲ್ಲಿ ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 25ರಂದು, 1998ರ ತೀರ್ಪನ್ನು ಮತ್ತೆ ಪರಿಶೀಲನೆಗೆ ಒಳಪಡಿಸುವುದಾಗಿ ಹೇಳಿದೆ. ಸಮಾಜ ಎನ್ನುವ ವ್ಯವಸ್ಥೆಯ ನೈತಿಕತೆಯ ಮೇಲೆ ಗಮನಾರ್ಹವಾದ ಪರಿಣಾಮ ಬೀರುವ ಪ್ರಮುಖ ವಿಷಯ ಇದು ಎಂದು ಏಳು ನ್ಯಾಯಮೂರ್ತಿಗಳ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಈ ವಿಚಾರವನ್ನು ಏಳು ನ್ಯಾಯಮೂರ್ತಿಗಳು ಇರುವ ವಿಸ್ತೃತ ಪೀಠಕ್ಕೆ ವಹಿಸಲು ಐವರು ನ್ಯಾಯಮೂರ್ತಿಗಳ ಪೀಠವೊಂದು ತೀರ್ಮಾನಿಸಿತ್ತು.

ಸಂಸದರು ಸದನದಲ್ಲಿ ಮಾಡುವ ಯಾವುದೇ ಭಾಷಣ ಅಥವಾ ಚಲಾಯಿಸಿದ ಮತಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಕ್ರಮ ಎದುರಿಸುವುದರಿಂದ ಸಂವಿಧಾನದ ಅಡಿಯಲ್ಲಿ ರಕ್ಷಣೆ ಹೊಂದಿರುತ್ತಾರೆ ಎಂದು ಪಿ.ವಿ. ನರಸಿಂಹರಾವ್ ಮತ್ತು ಸಿಬಿಐ ನಡುವಣ ಪ್ರಕರಣದಲ್ಲಿ ಐದು ಮಂದಿ ನ್ಯಾಯಮೂರ್ತಿಗಳ ಸಂವಿಧಾನ ಪೀಠವು 1998ರಲ್ಲಿ ಹೇಳಿತ್ತು. ಸಂವಿಧಾನದ ವಿಧಿಗಳಾದ 105(2) ಮತ್ತು 194(2) ಈ ರಕ್ಷಣೆಯನ್ನು ನೀಡಿವೆ ಎಂದು ಪೀಠವು 1998ರಲ್ಲಿ ಹೇಳಿತ್ತು.

ಸಂಸತ್ತಿನಲ್ಲಿ ಅಥವಾ ಅಲ್ಲಿನ ಯಾವುದೇ ಸಮಿತಿಯಲ್ಲಿ ಆಡಿದ ಮಾತುಗಳು, ಚಲಾಯಿಸಿದ ಮತಕ್ಕೆ ಸಂಬಂಧಿಸಿದಂತೆ ಸಂಸದರು ನ್ಯಾಯಾಲಯಗಳಲ್ಲಿ ಯಾವ ಮೊಕದ್ದಮೆಯನ್ನೂ ಎದುರಿಸಬೇಕಾಗಿಲ್ಲ ಎಂದು ಸಂವಿಧಾನದ 105(2) ವಿಧಿಯು ಹೇಳುತ್ತದೆ. ಇದೇ ಬಗೆಯ ರಕ್ಷಣೆಯನ್ನು ಸಂವಿಧಾನದ 194(2)ನೆಯ ವಿಧಿಯು ಶಾಸಕರಿಗೆ ನೀಡಿದೆ.

ಜಾರ್ಖಂಡ್ ಮುಕ್ತಿ ಮೋರ್ಚಾ ಪಕ್ಷದ ಶಾಸಕಿ ಸೀತಾ ಸೊರೇನ್ ಅವರು ಸಲ್ಲಿಸಿದ್ದ ಅರ್ಜಿಯೊಂದರ ವಿಚಾರಣೆಯನ್ನು 2019ರಲ್ಲಿ ನಡೆಸಿದ್ದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯಿ ನೇತೃತ್ವದ ಪೀಠವು, ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ಎದುರು 'ಶಾಸನ ಸಭೆಗಳ ಸದಸ್ಯರು ಎಸಗಿದ ಕೃತ್ಯ ಕ್ರಿಮಿನಲ್ ಸ್ವರೂಪದ್ದಾಗಿದ್ದರೆ, ಅದಕ್ಕೆ ಕಾನೂನು ಕ್ರಮದಿಂದ ರಕ್ಷಣೆ ಇರುತ್ತದೆಯೇ' ಎಂಬ ಮಹತ್ವದ ಪ್ರಶ್ನೆಯನ್ನು ಇರಿಸಿತ್ತು. ಈ ಪ್ರಶ್ನೆಯು ವ್ಯಾಪಕ ಪರಿಣಾಮ ಬೀರುವಂಥದ್ದು, ಇದು ಸಾರ್ವಜನಿಕ ಮಹತ್ವದ್ದು ಕೂಡ ಎಂದು ಹೇಳಿತ್ತು.

2012ರ ರಾಜ್ಯಸಭಾ ಚುನಾವಣೆಯಲ್ಲಿ ಅಭ್ಯರ್ಥಿಯೊಬ್ಬರ ಪರ ಮತ ಚಲಾಯಿಸಲು ಲಂಚ ಪಡೆದ ಆರೋಪ ಸೀತಾ ಸೊರೇನ್ ಮೇಲಿತ್ತು. ಜೆಎಂಎಂ ಲಂಚ ಪ್ರಕರಣದಲ್ಲಿ ಶಿಬು ಸೊರೇನ್ ಅವರಿಗೆ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ನೆರವಾದ, ಸಂವಿಧಾನ ನೀಡಿರುವ ರಕ್ಷಣೆಯು ತಮಗೂ ಅನ್ವಯವಾಗಬೇಕು ಎಂದು ಸೀತಾ ಅವರು ವಾದಿಸಿದ್ದರು.

ಆ ಅರ್ಜಿಯ ವಿಚಾರಣೆ ನಡೆಸಿದ್ದ ಮೂವರು ನ್ಯಾಯಮೂರ್ತಿಗಳ ಪೀಠವು ಜೆಎಂಎಂ ಲಂಚ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಮರುಪರಿಶೀಲನೆ ನಡೆಸುವುದಾಗಿ ಹೇಳಿತ್ತು.

ನರಸಿಂಹ ರಾವ್ ನೇತೃತ್ವದ ಸರ್ಕಾರದ ವಿರುದ್ಧದ 1993ರ ಅವಿಶ್ವಾಸ ನಿರ್ಣಯದ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯದ ವಿರುದ್ಧ ಮತ ಚಲಾಯಿಸಲು ಶಿಬು ಸೊರೇನ್ ಮತ್ತು ಪಕ್ಷದ ನಾಲ್ಕು ಮಂದಿ ಸಂಸದರು ಲಂಚ ಪಡೆದಿದ್ದಾರೆ ಎಂಬ ಆರೋಪ ಇತ್ತು.

ಆಗ ಅಲ್ಪಮತ ಹೊಂದಿದ್ದ ರಾವ್ ನೇತೃತ್ವದ ಸರ್ಕಾರವು ಇವರ ಬೆಂಬಲದ ಕಾರಣದಿಂದಾಗಿ ಅವಿಶ್ವಾಸ ನಿರ್ಣಯವನ್ನು ಸೋಲಿಸಿತು. ಸೊರೇನ್ ಮತ್ತು ನಾಲ್ಕು ಮಂದಿ ಸಂಸದರ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡಿತು. ಆದರೆ ಸಂವಿಧಾನದ 105(2)ನೆಯ ವಿಧಿಯ ಅಡಿಯಲ್ಲಿ ಇರುವ ರಕ್ಷಣೆಯನ್ನು ಉಲ್ಲೇಖಿಸಿ ಸುಪ್ರೀಂ ಕೋರ್ಟ್ ಪ್ರಕರಣವನ್ನು ವಜಾಗೊಳಿಸಿತು.

ತಮ್ಮ ವಿರುದ್ಧ ದಾಖಲಾದ ಕ್ರಿಮಿನಲ್ ಪ್ರಕರಣವನ್ನು ರದ್ದು ಮಾಡುವಂತೆ ಸಲ್ಲಿಸಿದ್ದ ಮನವಿಯನ್ನು ಜಾರ್ಖಂಡ್ ಹೈಕೋರ್ಟ್ ಒಪ್ಪದೆ ಇದ್ದುದನ್ನು ಪ್ರಶ್ನಿಸಿ ಸೀತಾ ಸೊರೇನ್ ಮೇಲ್ಮನವಿ ಸಲ್ಲಿಸಿದ್ದರು. ಒಬ್ಬ ಅಭ್ಯರ್ಥಿಯಿಂದ ಲಂಚ ಪಡೆದುಕೊಂಡು, ಇನ್ನೊಬ್ಬ ಅಭ್ಯರ್ಥಿಯ ಪರವಾಗಿ ಮತ ಚಲಾಯಿಸಿದ್ದಾರೆ ಎಂದು ಸಿಬಿಐ ಸೀತಾ ಅವರ ವಿರುದ್ಧ ಆರೋಪ ಹೊರಿಸಿತ್ತು.

'ನೆಕ್ಸ್ಟ್' ಪರಾಮರ್ಶೆಗೆ ಸಮಿತಿ ರಚನೆ

ನವದೆಹಲಿ (ಪಿಟಿಐ): 2020ನೇ ಶೈಕ್ಷಣಿಕ ಸಾಲಿನ ಎಂಬಿಬಿಎಸ್ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ನಿರ್ಗಮನ ಪರೀಕ್ಷೆ (ನೆಕ್ಸ್ಟ್) ನಡೆಸುವುದಕ್ಕೆ ಸಂಬಂಧಿಸಿದಂತೆ ಪರಾಮರ್ಶೆ ನಡೆಸಲು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು, ಏಳು ಮಂದಿ ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಿದೆ.

ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಕಾಯ್ದೆ ಅನ್ವಯ ಅಂತಿಮ ವರ್ಷದ ವಿದ್ಯಾರ್ಥಿಗಳು ನೆಕ್ಸ್ಟ್ ಪರೀಕ್ಷೆ ಬರೆಯುವುದು ಕಡ್ಡಾಯ. ಆದರೆ, ಜುಲೈ 13ರಂದು 2019ನೇ ಸಾಲಿನ ವಿದ್ಯಾರ್ಥಿಗಳಿಗೆ ನಡೆಸಬೇಕಿದ್ದ ಪರೀಕ್ಷೆಯನ್ನು ಆಯೋಗವು ಮುಂದೂಡಿತ್ತು.

ಈಗ 2020ನೇ ಸಾಲಿನ ವಿದ್ಯಾರ್ಥಿಗಳಿಗೆ ನೆಕ್ಸ್ಟ್ ನಡೆಸುವುದು ಸೇರಿದಂತೆ ಇದಕ್ಕೆ ಪೂರಕವಾಗಿ ರಾಜ್ಯಗಳು ಮತ್ತು ವೈದ್ಯಕೀಯ ಕಾಲೇಜುಗಳ ಸಿದ್ಧತೆ ಬಗ್ಗೆ ಸಮಿತಿಯು ಪರಿಶೀಲನೆ ನಡೆಸಿ, ಎರಡು ವಾರದೊಳಗೆ ಸಚಿವಾಲಯಕ್ಕೆ ವರದಿ ಸಲ್ಲಿಸಲಿದೆ.

ಹಾಲಿ ಇರುವ ಪರೀಕ್ಷೆಗೆ ಬದಲಾಗಿ ನೆಕ್ಸ್ಟ್‌ಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿರುವ ಹೊಸ ನಿಯಮಗಳ ಬದಲಾವಣೆ ಬಗ್ಗೆಯೂ ಪರಿಶೀಲನೆ ನಡೆಸಲಿದೆ.

ನೆಕ್ಸ್ಟ್‌ಗೆ ಸಲ್ಲಿಸುವ ಅರ್ಜಿಗಳು ಸೇರಿದಂತೆ ಸ್ನಾತಕೋತ್ತರ ಪ್ರವೇಶಾತಿ ಮತ್ತು ವೈದ್ಯಕೀಯ ವೃತ್ತಿ ಆರಂಭಿಸಲು ಅಗತ್ಯವಿರುವ ಪರವಾನಗಿ ಪರೀಕ್ಷೆ ಬಗ್ಗೆಯೂ ಪರಿಶೀಲಿಸಲಿದೆ. ಈ ಪರೀಕ್ಷೆಗೆ ಸಲ್ಲಿಸುವ ಅರ್ಜಿಗಳಿಗೆ ಮಿತಿ ವಿಧಿಸುವ ಕುರಿತು ಪರಾಮರ್ಶಿಸಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೇಘಸ್ಫೋಟಕ್ಕೆ ಹತ್ತು ಸಾವು

ಒಂದನೇ ಪುಟದಿಂದ...

'ಈ ಮೂವರು ಶನಿವಾರ ದ್ವಿಚಕ್ರ ವಾಹನದಲ್ಲಿ ಸಿಕ್ಕಿಂಗೆ ತೆರಳಿದ್ದರು. ಮಂಗಳವಾರ ಬೆಳಿಗ್ಗೆಯಿಂದ ಅವರ ಮೊಬೈಲ್ ನಂಬರ್‌ಗಳ ಸಂಪರ್ಕ ಸಾಧ್ಯವಾಗದ ಕಾರಣ ಪತ್ತೆ ಹಚ್ಚಲು ಸಾಧ್ಯವಾಗಲಿಲ್ಲ. ಸಹಾಯಕ್ಕಾಗಿ ಸಿಕ್ಕಿಂ ಪೊಲೀಸರನ್ನು ಸಂಪರ್ಕಿಸಿದ್ದೇವೆ' ಎಂದು ರಾಯ್‌ಗಂಜ್‌ನ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರವಾಹದಿಂದ ತೀಸ್ತಾ ಜಲಾನಯನ ಪ್ರದೇಶದಲ್ಲಿರುವ ದಿಕ್ಚು, ಸಿಂಗ್‌ತಮ್ ಮತ್ತು ರಂಗ್ಪೋ ಸೇರಿದಂತೆ ಹಲವಾರು ಪಟ್ಟಣಗಳು ಬಾಧಿತವಾಗಿವೆ.

ರಾಷ್ಟ್ರೀಯ ಹೆದ್ದಾರಿ -10ರ ಕೆಲವು ಭಾಗಗಳು ಕೊಚ್ಚಿಹೋಗಿವೆ. ಬಲೂತಾರ್ ಮತ್ತು ಲ್ಯಾಂಕೊ ಜಲವಿದ್ಯುತ್ ಯೋಜನೆಯ ಬಳಿ ಸೇತುವೆಗಳು ಕುಸಿದಿವೆ. ಪ್ರವಾಹ ಪೀಡಿತರಿಗೆ ಕಾಳಜಿ ಕೇಂದ್ರ ತೆರೆದಿದ್ದು, ನೂರಾರು ಜನರು ಆಶ್ರಯ ಪಡೆದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತೀಸ್ತಾ ಹರಿಯುವ ಉತ್ತರ ಬಂಗಾಳ ಮತ್ತು ಬಾಂಗ್ಲಾದೇಶಕ್ಕೆ ಪ್ರವಾಹದ ಎಚ್ಚರಿಕೆ ನೀಡಲಾಗಿದೆ. ಈ ನಡುವೆ ಮಂಗನ್, ಗ್ಯಾಂಗ್ಟಕ್, ಪಕ್ಯೋಂಗ್ ಮತ್ತು ನಾಮ್ಚಿ ಜಿಲ್ಲೆಗಳಲ್ಲಿ ಶಾಲೆಗಳನ್ನು ಅ. 8ರ ವರೆಗೆ ಮುಚ್ಚಲಾಗುವುದು ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

'ಹ್ಲೋನಕ್ ಸರೋವರದ ಕೆಲವು ಭಾಗಗಳಲ್ಲಿ ಮೇಘಸ್ಫೋಟದಿಂದ ಅನೇಕ ಸಂಸ್ಥೆಗಳಿಗೆ ಹಾನಿ ಆಗಿದೆ' ಎಂದು ಸಿಕ್ಕಿಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹೇಳಿದೆ. ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಂಗ್ ಅವರು ಸಿಂಗ್‌ತಮ್‌ಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು. ಸಿಂಗ್‌ತಮ್ ನಗರ ಪಂಚಾಯತ್ ಕಚೇರಿಯಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

'ಈ ಕಷ್ಟದ ಸಮಯದಲ್ಲಿ ಸಂತ್ರಸ್ತರು ಮತ್ತು ಅವರ ಕುಟುಂಬಗಳಿಗೆ ಎಲ್ಲಾ ರೀತಿಯ ಸಹಾಯ ಮತ್ತು ಪರಿಹಾರ ಒದಗಿಸಲು ಸರ್ಕಾರ ಸಂಪೂರ್ಣವಾಗಿ ಬದ್ಧವಾಗಿದೆ ಎಂದು ಭರವಸೆ ನೀಡುತ್ತೇನೆ. ನಾಗರಿಕರ ಸುರಕ್ಷತೆ ಖಚಿತಪಡಿಸಿಕೊಳ್ಳಲು ಲಭ್ಯವಿರುವ ಎಲ್ಲಾ ಸಂಪನ್ಮೂಲ ಸಜ್ಜುಗೊಳಿಸುತ್ತಿದ್ದೇವೆ.' ಎಂದು ತಮಾಂಗ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

'ಸಿಕ್ಕಿಂ ಪ್ರವಾಹ ಕುರಿತು ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಂಗ್ ಅವರಿಂದ ಮಾಹಿತಿ ಪಡೆದಿದ್ದೇನೆ. ಸವಾಲು ಎದುರಿಸಲು ಸಾಧ್ಯವಿರುವ ಎಲ್ಲ ಸಹಕಾರ ನೀಡಲಾಗುವುದು. ಸಂತ್ರಸ್ತರ ಸುರಕ್ಷತೆಗೆ ಪ್ರಾರ್ಥಿಸುತ್ತೇನೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಮೇಘಸ್ಫೋಟಕ್ಕೆ ಭೂಕಂಪ ಕಾರಣವೇ?

ನವದೆಹಲಿ (ಪಿಟಿಐ): ಸಿಕ್ಕಿಂನಲ್ಲಿ ಮೇಘಸ್ಫೋಟಕ್ಕೆ ನೇಪಾಳ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಮಂಗಳವಾರ ಸಂಭವಿಸಿದ ಪ್ರಬಲ ಭೂಕಂಪ ಕಾರಣ ಇರಬಹುದೇ ಎಂಬುದನ್ನು ವಿಜ್ಞಾನಿಗಳು ಅಧ್ಯಯನ ಮಾಡುತ್ತಿದ್ದಾರೆ.

ಹೈದರಾಬಾದ್ ಮೂಲದ ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಸೆಂಟರ್ ಬಿಡುಗಡೆ ಮಾಡಿದ ಉಪಗ್ರಹ ಚಿತ್ರಗಳು ಹ್ಲೋನಕ್ ಸರೋವರದ ವಿಸ್ತೀರ್ಣವು ಸೆ.17 ರಂದು ಇದ್ದ ಅದರ ಗಾತ್ರಕ್ಕೆ ಹೋಲಿಸಿದರೆ 100 ಹೆಕ್ಟೇರ್ ಕಡಿಮೆಯಾಗಿದೆ ಎಂದು ತೋರಿಸಿದೆ.

ಎನ್‌ಡಿಆರ್‌ಎಫ್ ತಂಡ ನಿಯೋಜನೆ

ಹಠಾತ್ ಪ್ರವಾಹದ ಕಾರಣ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಾಗಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮೂರು ತಂಡಗಳನ್ನು ನಿಯೋಜಿಸಿದೆ.

ಗ್ಯಾಂಗ್ಟಕ್‌ನಲ್ಲಿ ಒಂದು ತಂಡ ಮತ್ತು ಪಕ್ಕದ ರಾಜ್ಯ ಪಶ್ಚಿಮ ಬಂಗಾಳದಲ್ಲಿ ಎರಡು ತಂಡಗಳನ್ನು ನಿಯೋಜಿಸಲಾಗಿದೆ. ಸಿಕ್ಕಿಂನಲ್ಲಿ ಸುಮಾರು 2,000 ಪ್ರವಾಸಿಗರು ಸಿಲುಕಿದ್ದಾರೆ ಮತ್ತು ಅವರೊಂದಿಗೆ ಸಂಪರ್ಕ ಸಾಧಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ರಾಜ್ಯ ಆಡಳಿತ ಹೇಳಿದೆ. 39 ಕಾಳಜಿ ಶಿಬಿರಗಳು ತೆರೆಯಲಿದ್ದು, 6,572 ಜನರನ್ನು ಸ್ಥಳಾಂತರಿಸಲಾಗಿದೆ.

ಚೀನಾ ಪರ ಪ್ರಚಾರ ನಡೆಸಿಲ್ಲ: ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಚೀನಾ ಪರ ಪ್ರಚಾರ ಆಂದೋಲನವನ್ನು ತಾನು ನಡೆಸುತ್ತಿಲ್ಲ ಎಂದು ನ್ಯೂಸ್‌ಕ್ಲಿಕ್ ಸುದ್ದಿತಾಣ ಹೇಳಿದೆ. ಇದೇ ಆರೋಪದ ಅಡಿಯಲ್ಲಿ ಈ ಸುದ್ದಿತಾಣದ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರನ್ನು ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯ ಅಡಿಯಲ್ಲಿ ಮಂಗಳವಾರ ಬಂಧಿಸಲಾಗಿದೆ.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಟೀಕೆಗಳನ್ನು ದೇಶದ್ರೋಹ ಅಥವಾ ರಾಷ್ಟ್ರವಿರೋಧಿ ಕೃತ್ಯವೆಂಬಂತೆ ಕಾಣುತ್ತಿದೆ ಎಂದು ಸುದ್ದಿತಾಣವು ಟೀಕಿಸಿದೆ.

ಸುದ್ದಿತಾಣದಲ್ಲಿನ ವಸ್ತು-ವಿಷಯ ಏನಿರಬೇಕು ಎಂಬ ವಿಚಾರದಲ್ಲಿ ತಾನು ನೆವಿಲ್ಲೆ ರಾಯ್ ಸಿಂಘಮ್ ಅವರಿಂದ ಸೂಚನೆಗಳನ್ನು ಪಡೆದುಕೊಳ್ಳುತ್ತಿಲ್ಲ, ತಾನು ವಸ್ತು-ವಿಷಯದ ವಿಚಾರದಲ್ಲಿ ವೃತ್ತಿಯಲ್ಲಿನ ಅತ್ಯುನ್ನತ ಮಾನದಂಡಗಳನ್ನು ಪಾಲಿಸುತ್ತಿರುವುದಾಗಿ ನ್ಯೂಸ್‌ಕ್ಲಿಕ್ ಹೇಳಿದೆ.

ತಾನು ಪಡೆದಿರುವ ಹಣಕಾಸಿನ ನೆರವು ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕವೇ ಬಂದಿದೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ನ್ಯೂಸ್‌ಕ್ಲಿಕ್ ಹೇಳಿದೆ.

'ನಮ್ಮ ಅಧಿಕಾರಿಗಳ ಮೇಲೆ ಜಾರಿ ನಿರ್ದೇಶನಾಲಯ, ದೆಹಲಿ ಪೊಲೀಸರ ಆರ್ಥಿಕ ಅಪರಾಧಗಳ ವಿಭಾಗ ಮತ್ತು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಈ ಮೊದಲು ದಾಳಿ ನಡೆಸಿದ್ದಾರೆ. ಆದರೆ ಕೆಲವು ಡಿಜಿಟಲ್ ಸಾಧನಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದನ್ನು ಹೊರತುಪಡಿಸಿದರೆ ಯಾವುದೇ ದೋಷಾರೋಪಪಟ್ಟಿ ಸಲ್ಲಿಸಿಲ್ಲ' ಎಂದು ಅದು ಹೇಳಿದೆ.

ಪೊಲೀಸ್ ವಶಕ್ಕೆ (ಪಿಟಿಐ ವರದಿ): ಪ್ರಬೀರ್ ಪುರಕಾಯಸ್ಥ ಮತ್ತು ನ್ಯೂಸ್‌ಕ್ಲಿಕ್‌ನ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರನ್ನು ಏಳು ದಿನಗಳ ಅವಧಿಗೆ ಪೊಲೀಸ್ ವಶಕ್ಕೆ ಒಪ್ಪಿಸಲಾಗಿದೆ. ಇವರನ್ನು ದೆಹಲಿ ಪೊಲೀಸರು ಮಂಗಳವಾರ ಬಂಧಿಸಿದ್ದರು.

ನ್ಯೂಸ್‌ಕ್ಲಿಕ್ ಮೇಲಿನ ಕ್ರಮವನ್ನು ವಿರೋಧಿಸಿ ಪತ್ರಕರ್ತರ ವಿವಿಧ ಸಂಘಟನೆಗಳು ಪ್ರೆಸ್ ಕ್ಲಬ್ ಆಫ್ ಇಂಡಿಯಾ ಬಳಿ ಬುಧವಾರ ಪ್ರತಿಭಟನೆ ನಡೆಸಿವೆ. ಪತ್ರಕರ್ತರ ಕೆಲವು ಪ್ರಮುಖ ಸಂಘಟನೆಗಳು ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಮಧ್ಯಪ್ರವೇಶಿಸಬೇಕು ಎಂದು ಕೋರಿವೆ.

ನ್ಯೂಸ್‌ಕ್ಲಿಕ್ ಮೇಲಿನ ಪೊಲೀಸ್ ದಾಳಿಯನ್ನು ಖಂಡಿಸಿ ಮಹಾರಾಷ್ಟ್ರದ ಠಾಣೆಯಲ್ಲಿ ಎನ್‌ಸಿಪಿ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು

2030ರ ವೇಳೆಗೆ ಅರಿಸಿನ ರಫ್ತು ವಹಿವಾಟು ಹೆಚ್ಚಿಸುವ ನಿರೀಕ್ಷೆ

ಅರಿಸಿನ ಮಂಡಳಿ, ಗಿರಿಜನರ ವಿ.ವಿಗೆ ಅಸ್ತು

ನವದೆಹಲಿ (ಪಿಟಿಐ): ತೆಲಂಗಾಣದಲ್ಲಿ ರಾಷ್ಟ್ರೀಯ ಅರಿಸಿನ ಮಂಡಳಿ ಮತ್ತು ಗಿರಿಜನರ ವಿಶ್ವವಿದ್ಯಾಲಯ ಸ್ಥಾಪನೆಗೆ ಕೇಂದ್ರ ಸಂಪುಟ ಸಭೆ ಬುಧವಾರ ಒಪ್ಪಿಗೆ ನೀಡಿದೆ.

2030ರ ವೇಳೆಗೆ ಅರಿಸಿನ ರಫ್ತು ವಹಿವಾಟನ್ನು ₹8,400 ಕೋಟಿಗೆ ಹೆಚ್ಚಿಸುವ ನಿರೀಕ್ಷೆ ಇದೆ. ಅರಿಸಿನ ಮತ್ತು ಅದರ ಉತ್ಪನ್ನಗಳ ಅಭಿವೃದ್ಧಿಗೆ ಮಂಡಳಿ ಶ್ರಮಿಸಲಿದೆ ಎಂದು ವಾಣಿಜ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಈ ಕುರಿತು ನಂತರದಲ್ಲಿ ಸುದ್ದಿಗಾರರಿಗೆ ವಿವರಣೆ ನೀಡಿದ ಕೇಂದ್ರ ಸಚಿವ ಕಿಶನ್ ರೆಡ್ಡಿ ಅವರು, ಮಂಡಲಿಯು ತೆಲಂಗಾಣದ ರೈತರಿಗಷ್ಟೇ ಅಲ್ಲದೆ ಮಹಾರಾಷ್ಟ್ರ, ಕರ್ನಾಟಕ, ಮಧ್ಯಪ್ರದೇಶ, ತಮಿಳುನಾಡು, ಆಂಧ್ರಪ್ರದೇಶ, ಮಿಜೊರಾಂ, ಅಸ್ಸಾಂ, ಗುಜರಾತ್, ಒಡಿಶಾ ಮತ್ತು ಪಶ್ಚಿಮ ಬಂಗಾಳದ ರೈತರಿಗೆ ನೆರವು ನೀಡಲಿದೆ ಎಂದರು.

'ತೆಲಂಗಾಣದ ರೈತರು ಮಂಡಳಿ ಸ್ಥಾಪನೆಗೆ ಒತ್ತಾಯಿಸಿದ್ದರು. ಬೇಡಿಕೆ ಈಡೇರುವವರೆಗೂ ಚಪ್ಪಲಿ ಅಥವಾ ಶೂ ಧರಿಸುವುದಿಲ್ಲ ಎಂದು ಪ್ರತಿಜ್ಞೆಗೈದು 15 ವರ್ಷಗಳಿಂದ ಬರಿಗಾಲಿನಲ್ಲಿ ಓಡಾಡುತ್ತಿದ್ದರು. ಸಂಪುಟ ಸಭೆ ನಿರ್ಧಾರದ ಬಳಿಕ ನಮ್ಮ ಸಿಬ್ಬಂದಿ ರೈತರಿಗೆ ಚಪ್ಪಲಿಗಳನ್ನು ವಿತರಿಸಿದರು' ಎಂದು ಹೇಳಿದರು.

ವಿಶ್ವದ ಅರಿಸಿನ ವ್ಯಾಪಾರ ವಹಿವಾಟಿನಲ್ಲಿ ಭಾರತವು ಶೇ 62ಕ್ಕಿಂತಲೂ ಹೆಚ್ಚಿನ ಪಾಲು ಹೊಂದಿದೆ.

ಮುಲುಗುನಲ್ಲಿ ವಿ.ವಿ: ತೆಲಂಗಾಣದಲ್ಲಿ ಸಾಮಕ್ಕ ಸಾರಕ್ಕ ಕೇಂದ್ರೀಯ ಗಿರಿಜನ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಕೇಂದ್ರೀಯ ವಿಶ್ವವಿದ್ಯಾಲಯಗಳ ಕಾಯಿದೆಗೆ ತಿದ್ದುಪಡಿ ತರಲು ಸಭೆ ಒಪ್ಪಿಗೆ ನೀಡಿದೆ.

ಹೊಸ ವಿಶ್ವವಿದ್ಯಾಲಯವು ರಾಜ್ಯದಲ್ಲಿ ಉನ್ನತ ಶಿಕ್ಷಣದ ಗುಣಮಟ್ಟ ಸುಧಾರಿಸಲಿದೆ ಎಂದು ಸರ್ಕಾರ ಹೇಳಿದೆ. ತೆಲಂಗಾಣದ ಮುಲುಗುನಲ್ಲಿ ಸ್ಥಾಪನೆಯಾಗಲಿರುವ ಈ ವಿಶ್ವವಿದ್ಯಾಲಯಕ್ಕೆ ₹ 889.07 ಕೋಟಿ ಹಣ ಒದಗಿಸಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಮೋದಿ ಅವರು ಈಚೆಗೆ ತೆಲಂಗಾಣದಲ್ಲಿ ಸಾರ್ವಜನಿಕ ಸಭೆಯಲ್ಲಿ, ಕೇಂದ್ರೀಯ ಗಿರಿಜನ ವಿವಿ ಮತ್ತು ಅರಿಸಿನ ಮಂಡಳಿ ಸ್ಥಾಪಿಸುವುದಾಗಿ ಘೋಷಿಸಿದ್ದರು.

ನದಿ ನೀರು ಹಂಚಿಕೆ: ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ನಡುವೆ ನದಿ ನೀರು ಹಂಚಿಕೆ ಕುರಿತು ಅನುಸರಿಸಬೇಕಾದ ನಿಯಮಗಳಿಗೆ ಸಂಪುಟ ಒಪ್ಪಿಗೆ ನೀಡಿದೆ. ಕೃಷ್ಣಾ ನದಿ ನೀರು ನ್ಯಾಯಮಂಡಳಿ ಈ ನಿಯಮಗಳನ್ನು ರೂಪಿಸಿದೆ.

ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು, 'ಎರಡೂ ರಾಜ್ಯಗಳ ಅಭಿವೃದ್ಧಿ ಯೋಜನೆಗಳ ಆಧಾರಿತವಾಗಿ ನ್ಯಾಯಾಧೀಕರಣವು ನೀರು ಹಂಚಿಕೆ ಮಾಡಲಿದೆ' ಎಂದ ಹೇಳಿದರು.

ಮುಖ್ಯಾಂಶಗಳು

- ಕೇಂದ್ರೀಯ ವಿವಿ ಕಾಯ್ದೆಗೆ ತಿದ್ದುಪಡಿ
- ₹ 889.07 ಕೋಟಿ ವೆಚ್ಚದಲ್ಲಿ ವಿಶ್ವವಿದ್ಯಾಲಯ
- ವಿಶ್ವದ ಅರಿಸಿನ ವ್ಯಾಪಾರದಲ್ಲಿ ಭಾರತದ ಪಾಲು ಶೇ 62ಕ್ಕೂ ಹೆಚ್ಚು

ಸಂಕ್ಷಿಪ್ತ ಸುದ್ದಿ

ಲಾಲು, ತೇಜಸ್ವಿಗೆ ಜಾಮೀನು

ನವದೆಹಲಿ (ಪಿಟಿಐ): ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್, ಅವರ ಪತ್ನಿ ರಾಬ್ಡಿದೇವಿ ಮತ್ತು ಅವರ ಮಗ, ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರಿಗೆ ದೆಹಲಿಯ ನ್ಯಾಯಾಲಯವೊಂದು ಉದ್ಯೋಗಕ್ಕಾಗಿ ಭೂಮಿ ಹಗರಣದಲ್ಲಿ ಬುಧವಾರ ಜಾಮೀನು ಮಂಜೂರು ಮಾಡಿತು.

ಪ್ರಕರಣಕ್ಕೆ ಸಂಬಂಧಿಸಿ ಜುಲೈ 3ರಂದು ಸಿಬಿಐ ಹೊಸದಾಗಿ ಆರೋಪ ಪಟ್ಟಿ ಸಲ್ಲಿಸಿತ್ತು. ಇದನ್ನು ಪರಿಗಣಿಸಿದ್ದ ನ್ಯಾಯಾಲಯವು ಲಾಲು, ರಾಬ್ಡಿ, ತೇಜಸ್ವಿ ಮತ್ತು ಇತರ 14 ಮಂದಿ ಆರೋಪಿಗಳಿಗೆ ನ್ಯಾಯಾಲಯಕ್ಕೆ ಹಾಜರಾಗುವಂತೆ ಸೂಚಿಸಿ ಸೆಪ್ಟೆಂಬರ್ 22ರಂದು ಸಮನ್ಸ್ ನೀಡಿತ್ತು.

ವಿಶೇಷ ನ್ಯಾಯಾಧೀಶೆ ಗೀತಾಂಜಲಿ ಗೋಯೆಲ್ ಜಾಮೀನು ಮಂಜೂರು ಮಾಡಿದರು.

ಸಂಸತ್ ಸದಸ್ಯ ಸ್ಥಾನದಿಂದ ಫೈಜಲ್ ಅನರ್ಹ

ನವದೆಹಲಿ: ಲೋಕಸಭಾ ಸಚಿವಾಲಯವು ಲಕ್ಷದ್ವೀಪದ ಎನ್‌ಸಿಪಿ ಸಂಸದ ಮೊಹಮ್ಮದ್ ಫೈಜಲ್ ಪಿ.ಪಿ ಅವರನ್ನು ಸಂಸತ್ ಸದಸ್ಯ ಸ್ಥಾನದಿಂದ ಬುಧವಾರ ಅನರ್ಹಗೊಳಿಸಿದೆ.

ಕೊಲೆ ಯತ್ನ ಪ್ರಕರಣವೊಂದರಲ್ಲಿ ಮೊಹಮ್ಮದ್ ಫೈಜಲ್ ಪಿ.ಪಿ ಅವರಿಗೆ ಶಿಕ್ಷೆ ವಿಧಿಸಿ ನೀಡಿದ್ದ ತೀರ್ಪನ್ನು ಅಮಾನತುಗೊಳಿಸಿ ತಾನು ನೀಡಿದ್ದ ಆದೇಶವನ್ನು ಕೇರಳ ಹೈಕೋರ್ಟ್ ಅಕ್ಟೋಬರ್ 3ರಂದು ರದ್ದುಪಡಿಸಿದ ಕಾರಣ, ಈ ಕ್ರಮ ಕೈಗೊಳ್ಳಲಾಗಿದೆ.

ಫೈಜಲ್ ಅವರಿಗೆ ಶಿಕ್ಷೆ ವಿಧಿಸಿ ನೀಡಿದ್ದ ತೀರ್ಪನ್ನು ಅಮಾನತುಗೊಳಿಸಿ ನೀಡಿರುವ ಆದೇಶವನ್ನು ಮರುಪರಿಶೀಲಿಸುವಂತೆ ಕೇರಳ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ಸೂಚಿಸಿತ್ತು.

❦ ಸುಭಾಷಿತ ❦

ನಿಮಗೆ ಏನೂ ಕೆಲಸ ಇಲ್ಲದಿದ್ದಾಗ ಮಾತ್ರ ಗಡಿಯಾರವನ್ನು ನೋಡಿ... ಕೆಲಸ ಮಾಡುತ್ತಿರುವಾಗ ಗಡಿಯಾರವನ್ನು ನೋಡಬೇಡಿ. ಗಡಿಯಾರವು ಯಶಸ್ಸಿಗೆ ಹಾಕುವ ಬೀಗದಂತೆ.

-ಬಿಲ್ ಗೇಟ್ಸ್

ಪುಸ್ತಕ ಖರೀದಿ: ವಿಳಂಬ ಸಲ್ಲ 'ಪುಸ್ತಕ ಸಂಸ್ಕೃತಿ' ನೀತಿ ಅಗತ್ಯ

ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಪೂರೈಕೆಯಾಗಬೇಕಾದ 2020ನೇ ಸಾಲಿನ ಪುಸ್ತಕಗಳ ಪಟ್ಟಿಗೆ ಅನುಮೋದನೆ ನೀಡಲು ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿರುವುದು, ಸರ್ಕಾರದ ಆದ್ಯತೆಯ ಪಟ್ಟಿಯಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಗೆ ಇರುವ ಸ್ಥಾನವನ್ನು ಸೂಚಿಸುವಂತಿದೆ. ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಸಮಯಕ್ಕೆ ಸರಿಯಾಗಿ ಪುಸ್ತಕಗಳನ್ನು ಕೊಳ್ಳದೇ ಹೋದರೆ, ಪ್ರಕಾಶಕರು ಸಂಕಷ್ಟಕ್ಕೆ ಸಿಲುಕುವುದರ ಜೊತೆಗೆ ಪುಸ್ತಕ ಸಂಸ್ಕೃತಿಯೂ ಬಿಕ್ಕಟ್ಟನ್ನು ಎದುರಿಸುತ್ತದೆ. 2020ರ ಖರೀದಿ ಪ್ರಕ್ರಿಯೆ ಪೂರ್ಣಗೊಳ್ಳದಿರುವುದರಿಂದ, 2021 ಹಾಗೂ 2022ನೇ ಸಾಲಿನ ಪುಸ್ತಕಗಳ ಆಯ್ಕೆ ಹಾಗೂ ಖರೀದಿ ಪ್ರಕ್ರಿಯೆಗೂ ಹಿನ್ನಡೆಯಾಗಿದೆ. ಅಂತಿಮಗೊಂಡ ಪುಸ್ತಕಗಳ ಪಟ್ಟಿಗೆ ಅನುಮೋದನೆ ನೀಡಬೇಕೆನ್ನುವ ಪ್ರಕಾಶಕರ ಕೋರಿಕೆಗೆ ನಿಕಟಪೂರ್ವ ಸರ್ಕಾರವೂ ಸ್ಪಂದಿಸಿಲ್ಲ, ಈಗಿನ ಸರ್ಕಾರವೂ ಈವರೆಗೆ ನಿರ್ಧಾರ ಕೈಗೊಳ್ಳದೆ ವಿಳಂಬನೀತಿ ಅನುಸರಿಸುತ್ತಿರುವಂತಿದೆ. ಪುಸ್ತಕಗಳ ಆಯ್ಕೆಗೆ ಸಂಬಂಧಿಸಿದಂತೆ ಇತ್ತೀಚೆಗಷ್ಟೇ ಪುಸ್ತಕ ಆಯ್ಕೆ ಸಮಿತಿಯನ್ನು ಸರ್ಕಾರ ನೇಮಿಸಿದೆ. ಆದರೆ, ಹಿಂದಿನ ಅವಧಿಯ ಪುಸ್ತಕಗಳ ಖರೀದಿಯೇ ಪೂರ್ಣಗೊಳ್ಳದಿರುವುದರಿಂದ, ಹೊಸ ಸಮಿತಿಯ ಆಯ್ಕೆ ಹಾಗೂ ನಂತರದ ಖರೀದಿ ಪ್ರಕ್ರಿಯೆಗಳು ಸಹಜವಾಗಿಯೇ ವಿಳಂಬವಾಗಲಿವೆ. ಪುಸ್ತಕಗಳ ಖರೀದಿಗೆ ಸಂಬಂಧಿಸಿದಂತೆ ₹10 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಘೋಷಿಸಲಾಗಿದ್ದರೂ ಆರ್ಥಿಕ ಇಲಾಖೆ ಅನುಮೋದನೆ ನೀಡದಿರುವುದರಿಂದ ಖರೀದಿ ಪ್ರಕ್ರಿಯೆ ಸ್ಥಗಿತಗೊಂಡಿದೆ ಎಂದು ವರದಿಯಾಗಿದೆ. ಪುಸ್ತಕಗಳ ಖರೀದಿಗೆ ಸಂಬಂಧಿಸಿದಂತೆ ಸರ್ಕಾರ ಯಾವ ನೆಪವನ್ನೂ ಹೇಳಬಾರದು. 'ಗ್ರಂಥಾಲಯ ಕರ'ದ ಹೆಸರಿನಲ್ಲಿ ನಾಗರಿಕರಿಂದ ಹಣ ಸಂಗ್ರಹಿಸುವುದರಿಂದ, ಪುಸ್ತಕ ಖರೀದಿಗೆ ಹಣದ ಮುಗ್ಗಟ್ಟು ಎದುರಾಗಬಾರದು. ಪುಸ್ತಕ ಸಂಸ್ಕೃತಿ ಕಾರಣಕ್ಕಾಗಿ ಸಾರ್ವಜನಿಕರಿಂದ ಸಂಗ್ರಹಿಸಿದ ಹಣವನ್ನು ಅನ್ಯ ಉದ್ದೇಶಗಳಿಗೆ ಬಳಸುವುದನ್ನು ಸರ್ಕಾರ ಇನ್ನಾದರೂ ನಿಲ್ಲಿಸಬೇಕು. ಕನ್ನಡದ ಅತ್ಯುತ್ತಮ ಪುಸ್ತಕಗಳನ್ನು ಓದುವ ಅವಕಾಶದಿಂದ ಓದುಗರು ವಂಚಿತರಾಗದಂತೆ ನೋಡಿಕೊಳ್ಳುವ ಸಾಂಸ್ಕೃತಿಕ ಹೊಣೆಗಾರಿಕೆಯಿಂದ ಸರ್ಕಾರ ನುಣುಚಿಕೊಳ್ಳಬಾರದು.

ಸಾರ್ವಜನಿಕ ಗ್ರಂಥಾಲಯಗಳಿಗೆ ಪೂರೈಕೆಯಾಗುವ ಪುಸ್ತಕಗಳ ಆಯ್ಕೆಯ ಮಾನದಂಡವು ಓದುಗರ ಅಗತ್ಯಗಳಿಗೆ ಪೂರಕ ಆಗಿರುವಂತೆ ನೋಡಿಕೊಳ್ಳಬೇಕು

ಗ್ರಂಥಾಲಯಗಳಿಗೆ ಪುಸ್ತಕ ಖರೀದಿಸುವ ಚಟುವಟಿಕೆ ಪ್ರತಿವರ್ಷವೂ ವಿಳಂಬವಾಗುವುದು ಹಾಗೂ ಪ್ರಕಾಶಕರು ಅಳಲು ತೋಡಿಕೊಳ್ಳುವುದು ಸಹಜ ಎನ್ನುವಂತಾಗಿದೆ. ಪುಸ್ತಕ ಖರೀದಿಯ ಈ ಪ್ರಕ್ರಿಯೆ ಪ್ರತಿವರ್ಷ ನಿಗದಿತ ಸಮಯದಲ್ಲಿ ಹಾಗೂ ಗೊಂದಲಗಳಿಗೆ ಆಸ್ಪದವಿಲ್ಲದಂತೆ ನಡೆಯಲು ಅಗತ್ಯವಾದ ಕ್ರಮ ಕೈಗೊಳ್ಳಲು ಯಾವ ಪಕ್ಷದ ನೇತೃತ್ವದ ಸರ್ಕಾರವೂ ಇಚ್ಛಾಶಕ್ತಿ ಪ್ರದರ್ಶಿಸಿಲ್ಲ. ಓದುವ ಅಭ್ಯಾಸ ಕ್ಷೀಣಿಸುತ್ತಿರುವ ಸಂದರ್ಭಗಳಲ್ಲಿ, ಪುಸ್ತಕ ಸಂಸ್ಕೃತಿಯ ರಾಯಭಾರಿಗಳಂತೆ ಸಾರ್ವಜನಿಕ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ. ಗ್ರಾಮಾಂತರ ಪ್ರದೇಶಗಳಲ್ಲಿ ಲಕ್ಷಾಂತರ ಓದುಗರು ತಮ್ಮ ಓದಿನ ಹಸಿವೆಯನ್ನು ಗ್ರಂಥಾಲಯಗಳ ಮೂಲಕ ತಣಿಸಿಕೊಳ್ಳುತ್ತಿದ್ದಾರೆ. ಹೊಸ ಪುಸ್ತಕಗಳು ಸಕಾಲಕ್ಕೆ ಸೇರ್ಪಡೆಗೊಳ್ಳದೆ ಹೋದರೆ, ಗ್ರಂಥಾಲಯಗಳು ಓದುಗರನ್ನು ಆಕರ್ಷಿಸುವುದು ಹೇಗೆ ಸಾಧ್ಯ? ಸಾರ್ವಜನಿಕ ಗ್ರಂಥಾಲಯಗಳನ್ನು ದುರ್ಬಲಗೊಳಿಸುವ ಮೂಲಕ ಪುಸ್ತಕ ಸಂಸ್ಕೃತಿಗೆ ಪೆಟ್ಟು ಕೊಡುವ ಕೆಲಸವನ್ನು ಸರ್ಕಾರ ಮಾಡಬಾರದು. ಹೊಸ ಪುಸ್ತಕಗಳನ್ನು ಒಳಗೊಳ್ಳುವುದು, ತಂತ್ರಜ್ಞಾನ ಅಳವಡಿಕೆಯ ಮೂಲಕ ಗ್ರಂಥಾಲಯಗಳನ್ನು ಸಮಕಾಲೀನಗೊಳಿಸುವುದು ಹಾಗೂ ಸದಾ ಜೀವಂತವಾಗಿರುವಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ಎಲ್ಲ ನಾಗರಿಕರಿಗೂ ಆಹಾರವನ್ನು ಖಚಿತಪಡಿಸುವ ಅನ್ನಭಾಗ್ಯ ಯೋಜನೆಯಂತೆಯೇ ಓದುಗರಿಗೆ ಪುಸ್ತಕಗಳನ್ನು ಖಚಿತಪಡಿಸುವ ಪುಸ್ತಕಭಾಗ್ಯ ಯೋಜನೆಯನ್ನೂ ಸರ್ಕಾರ ರೂಪಿಸಬೇಕು. ಸಾಂಸ್ಕೃತಿಕ ಆರೋಗ್ಯದ ದೃಷ್ಟಿಯಿಂದ ಪುಸ್ತಕಭಾಗ್ಯ ಯೋಜನೆಗೆ ವಿಶೇಷ ಮಹತ್ವವಿದೆ. ಪುಸ್ತಕ ಖರೀದಿಗೆ ಸಂಬಂಧಿಸಿದಂತೆ ವಾರ್ಷಿಕ ಕ್ಯಾಲೆಂಡರ್ ರೂಪಿಸುವುದು ಇಂದಿನ ಅಗತ್ಯ. ಖರೀದಿಗೆ ಪುಸ್ತಕಗಳ ಆಹ್ವಾನ, ಆಯ್ಕೆ ಪ್ರಕ್ರಿಯೆ, ಆಯ್ಕೆಯಾದ ಪುಸ್ತಕಗಳ ಪಟ್ಟಿ ಪ್ರಕಟ ಹಾಗೂ ಕೊಳ್ಳುವ ಪ್ರಕ್ರಿಯೆ– ಇವೆಲ್ಲವೂ ಸರ್ಕಾರದ ಮರ್ಜಿಗೆ ತಕ್ಕಂತೆ ನಡೆಯದೆ, ನಿರ್ದಿಷ್ಟ ದಿನಾಂಕಗಳಂದು ನಡೆಯುವಂತೆ ಸರ್ಕಾರ ಕ್ಯಾಲೆಂಡರ್ ರೂಪಿಸಬೇಕು. ಹಾಗೆಯೇ, ಗ್ರಂಥಾಲಯಗಳಿಗೆ ಆಯ್ಕೆಗೊಳ್ಳುವ ಪುಸ್ತಕಗಳಿಗೆ ಗುಣಮಟ್ಟದ ಖಾತರಿ ಇರುವಂತೆಯೂ ನೋಡಿಕೊಳ್ಳಬೇಕು. ಕಳಪೆ ಪುಸ್ತಕಗಳ ಆಯ್ಕೆ–ಖರೀದಿಯಿಂದಾಗಿ ಗ್ರಂಥಾಲಯಗಳು ಅನಗತ್ಯ ವಸ್ತುಗಳನ್ನು ತುಂಬುವ ಕೊಠಡಿಗಳಾಗದಂತೆ ಎಚ್ಚರಿಕೆ ವಹಿಸಬೇಕು. ಸಾರ್ವಜನಿಕ ಗ್ರಂಥಾಲಯಗಳಿಗೆ ಪೂರೈಕೆಯಾಗುವ ಪುಸ್ತಕಗಳ ಆಯ್ಕೆಯ ಮಾನದಂಡವು ಓದುಗರ ಅಗತ್ಯಗಳಿಗೆ ಪೂರಕ ಆಗಿರಬೇಕು.

ದಿನದ ಟ್ವೀಟ್

ಉತ್ತಮ ಮುಂದಡಿ

ಜೊಮ್ಯಾಟೊ ಅಪ್ಲಿಕೇಷನ್‌ನಲ್ಲಿ ಕನ್ನಡ ಆಯ್ಕೆ ಕೊಟ್ಟಿದ್ದಾರೆ. ಇದು ಇತರರಿಗೆ ಮಾದರಿ. ನಾವು ಇದನ್ನು ಹೆಚ್ಚಾಗಿ ಬಳಸುವುದರ ಮೂಲಕ, ಕನ್ನಡ ಆಯ್ಕೆ ಕೊಟ್ಟಿರುವ ಅವರನ್ನು ಪ್ರೋತ್ಸಾಹಿಸೋಣ. ಇದರಿಂದ ಕನ್ನಡ ಆಯ್ಕೆ ಸದಾ ಉಳಿಯುತ್ತದೆ. ಜೊತೆಗೆ ಕನ್ನಡ ಬಲ್ಲವರಿಗೆ ಉದ್ಯೋಗದ ಅವಕಾಶ ಸೃಷ್ಟಿಯಾಗುತ್ತದೆ. ನಾವು ಹೀಗೆಯೂ ಕನ್ನಡಕ್ಕೆ ಶಕ್ತಿ ತುಂಬಬಹುದು.

ಗಿರೀಶ್ ಕಾರ್ಗದ್ದೆ, ಎಂಜಿನಿಯರ್

ಕಿಡಿನುಡಿ

ಸಿಕ್ಕಿಂ ಅಣೆಕಟ್ಟು ದುರಂತ. 1,200 ಮೆಗಾವಾಟ್ ಸಾಮರ್ಥ್ಯದ ₹ 14,000 ಕೋಟಿ ಅಂದಾಜುವೆಚ್ಚದ ಅಣೆಕಟ್ಟು ನಾಶ! ತಜ್ಞರು ಬಹಳಷ್ಟು ಬಾರಿ ಎಚ್ಚರಿಕೆ ನೀಡಿದ್ದರು. ಯಾರೂ ಕಿವಿಗೊಡಲಿಲ್ಲ. ಚಾರ್‌ಧಾಮ್ ಹೆದ್ದಾರಿಗೆ ಸಂಬಂಧಿಸಿದಂತೆಯೂ ಇದೇ ಬಗೆಯ ಎಚ್ಚರಿಕೆಯನ್ನು ಪದೇಪದೇ ನೀಡಲಾಗಿತ್ತು. ಅಲ್ಲಿಯೂ ಯಾರೂ ಅದನ್ನು ಲೆಕ್ಕಿಸಲೇ ಇಲ್ಲ. ಹಿಮಾಲಯದ ತಪ್ಪಲಿನ ರಾಜ್ಯಗಳ ವಿಶಿಷ್ಟ ಭೌಗೋಳಿಕ ಸ್ವರೂಪವು ಹಲವಾರು ನಿರ್ಬಂಧಗಳನ್ನು ಬೇಡುತ್ತದೆ. ಆದರೆ, ನಾವು ಅದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದೇ ಇಲ್ಲ.

ಸಂದೀಪ್ ಮನುಧಾನೆ, ಉದ್ಯಮಿ

25 ವರ್ಷಗಳ ಹಿಂದೆ

ಸೋಮವಾರ, 5-10-1998

- **ಕೇಂದ್ರ ಸರ್ಕಾರಕ್ಕೆ ಬೆದರಿಕೆ ಇಲ್ಲ: ವಾಜಪೇಯಿ**

ನವದೆಹಲಿ, ಅ. 4 (ಯುಎನ್‌ಐ, ಪಿಟಿಐ): ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರಕ್ಕೆ ಯಾವ ತೊಂದರೆಯೂ ಇಲ್ಲ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸ್ಪಷ್ಟಪಡಿಸಿದ್ದಾರೆ.

ಉದ್ದೇಶಿತ ಉತ್ತರಾಂಚಲ ರಾಜ್ಯಕ್ಕೆ ಉಧಂಸಿಂಗ್ ನಗರ ಸೇರ್ಪಡೆ ಸಂಬಂಧ ಉಂಟಾಗಿರುವ ವಿವಾದದ ಇತ್ಯರ್ಥಕ್ಕೆ ಅಕಾಲಿ ದಳದ ಮುಖಂಡರ ಜತೆ ಅ. 7ರಂದು ಮಾತುಕತೆ ನಡೆಸಲಾಗುವುದು ಎಂದು ಅವರು ಹೇಳಿದ್ದಾರೆ.

ಈ ನಡುವೆ, ಅ. 7ರಂದು ಮಾತುಕತೆಗೆ ಬರುವಂತೆ ಪ್ರಧಾನಿ ವಾಜಪೇಯಿ ಅವರು ಪಂಜಾಬ್ ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್ ಮತ್ತು ಅಕಾಲಿದಳದ ಹಿರಿಯ ನಾಯಕ ಗುರುಚರಣ್ ಸಿಂಗ್ ತೊಹ್ರಾ ಅವರನ್ನು ಆಹ್ವಾನಿಸಿದ್ದಾರೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಮದನ್‌ಲಾಲ್ ಖುರಾನಾ ಅವರು ದೆಹಲಿಯಲ್ಲಿ ತಿಳಿಸಿದ್ದಾರೆ.

- **ತಮಿಳುನಾಡಿನಲ್ಲಿ ಘರ್ಷಣೆ ಪೊಲೀಸ್ ಗುಂಡಿಗೆ 6 ಬಲಿ**

ರಾಮನಾಥಪುರ, ಅ. 4 (ಪಿಟಿಐ): ಪರಸ್ಪರ ಘರ್ಷಣೆಯಲ್ಲಿ ತೊಡಗಿದ್ದ ಎರಡು ಜಾತಿಗಳ ಉದ್ರಿಕ್ತ ಗುಂಪುಗಳನ್ನು ಚದುರಿಸಲು ಪೊಲೀಸರು ಹತ್ತು ಸುತ್ತು ಗುಂಡು ಹಾರಿಸಿದಾಗ 6 ಮಂದಿ ಮೃತಪಟ್ಟು, ಒಬ್ಬರು ಗಾಯಗೊಂಡ ಘಟನೆ ಇಲ್ಲಿಗೆ 10 ಕಿ.ಮೀ. ದೂರದ ತಿರುಪುಲನಿಯಲ್ಲಿ ನಡೆದಿದೆ.

ಗೋಲಿಬಾರ್‌ನಿಂದ 45 ವರ್ಷದ ಮಹಿಳೆಯೊಬ್ಬರು ಸ್ಥಳದಲ್ಲೇ ಮೃತಪಟ್ಟರೆ, ತೀವ್ರವಾಗಿ ಗಾಯಗೊಂಡಿದ್ದ 27 ವರ್ಷದ ಯುವಕನೊಬ್ಬ ಸರ್ಕಾರಿ ಆಸ್ಪತ್ರೆಗೆ ಸಾಗಿಸುವ ದಾರಿಯಲ್ಲಿ ಮೃತಪಟ್ಟಿದ್ದಾನೆ.

50 ವರ್ಷಗಳ ಹಿಂದೆ

ಶುಕ್ರವಾರ, 5-10-1973

- **ಭತ್ತ, ರಾಗಿ, ಮೆಕ್ಕೆಜೋಳಕ್ಕೆ ಸಂಗ್ರಹಣೆ ಬೆಲೆ 70 ರೂ.**

ನವದೆಹಲಿ, ಅ. 4– ಈಗಿನ ಖಾರಿಫ್ ಸುಗ್ಗಿಯಲ್ಲಿ ಸ್ಟ್ಯಾಂಡರ್ಡ್ ದರ್ಜೆ ಭತ್ತದ ಸಂಗ್ರಹಣೆ ಬೆಲೆಯು ಕ್ವಿಂಟಲ್ ಒಂದಕ್ಕೆ 70 ರೂಪಾಯಿ ಎಂದು ಕೇಂದ್ರ ಸರ್ಕಾರವು ಇಂದು ಪ್ರಕಟಿಸಿತು.

ಕಳೆದ ಖಾರಿಫ್ ಸುಗ್ಗಿಯಲ್ಲಿ ಭತ್ತದ ಬೆಲೆಯು ಕ್ವಿಂಟಲ್ ಒಂದಕ್ಕೆ 56 ರೂ. ಇತ್ತು. ಈಗಿನ ಬೆಲೆ ಅದಕ್ಕಿಂತ ಗಣನೀಯ ಪ್ರಮಾಣದಷ್ಟು ಹೆಚ್ಚು. ಅಲ್ಲದೆ ಖಾರಿಫ್ ಸುಗ್ಗಿ ಬಗ್ಗೆ ಈ ಮುನ್ನ ಪ್ರಕಟಿಸಿದ ಬೆಂಬಲ ಬೆಲೆಗಿಂತ 7 ರೂಪಾಯಿ ಹೆಚ್ಚು.

- **ಕರ್ನಾಟಕ ವಿ.ವಿ. ಹೆಸರು ಬದಲಾವಣೆ ಮಾಡಲು ಸಲಹೆ**

ಹುಬ್ಬಳ್ಳಿ, ಅ. 4– ಕರ್ನಾಟಕ ವಿಶ್ವವಿದ್ಯಾಲಯದ ಹೆಸರನ್ನು ಧಾರವಾಡ ವಿಶ್ವವಿದ್ಯಾಲಯ ಎಂದು ಬದಲಾಯಿಸಲು ಶಿಕ್ಷಣ ಇಲಾಖೆಯ ಕಮಿಷನರ್ ಶ್ರೀ ಸ್ಯಾಮ್ಯುಯೆಲ್ ಅಪ್ಪಾಜಿ ಅವರು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಅವರಿಗೆ ಬರೆದಿರುವ ಪತ್ರದಲ್ಲಿ ಸಲಹೆ ಮಾಡಿದ್ದಾರೆ.

ಹಿಂದೂ, ಹಿಂದುತ್ವ ಮತ್ತು ಸನಾತನ ನಡುವಣ ವ್ಯತ್ಯಾಸ ತಿಳಿಯದ ಗೊಂದಲ

ಒಂದು ಕವಲಿನ ಪಾರಮ್ಯ...

ಅನುರಣನ

ಎ.ನಾರಾಯಣ

ತಮಿಳುನಾಡಿನ ಮಂತ್ರಿಯೊಬ್ಬರು ಸನಾತನ ಎಂಬ ಪರಿಕಲ್ಪನೆಯ ಬಗ್ಗೆ ಹೇಳಬಾರದ್ದನ್ನು ಹೇಳಿದರೋ ಅಥವಾ ಹೇಳಬಹುದಾದದ್ದನ್ನು ಹೇಳಬಾರದ ರೀತಿಯಲ್ಲಿ ಹೇಳಿದರೋ ಅಂತೂ ಈ ಹೇಳಿಕೆಯ ಸುತ್ತಣ ಚರ್ಚೆ ಇನ್ನೂ ಜೀವಂತವಾಗಿದೆ. ರಾಜಕೀಯವಾಗಿ ಇದು ಹೊಡೆಯುವವನ ಕೈಗೆ ಬಡಿಗೆ ನೀಡಿದ ರೀತಿಯ ಹೇಳಿಕೆ. ಯಾಕೆಂದರೆ, 'ಹಿಂದೂ ಧರ್ಮ', 'ಸನಾತನ' ಮತ್ತು 'ಹಿಂದುತ್ವ' ಎಂಬ ಪರಿಕಲ್ಪನೆಗಳ ಕುರಿತಂತೆ ಸಾಮಾನ್ಯ ಜನರ ಮನಸ್ಸಿನಲ್ಲಿ ತೀವ್ರವಾದ ಗೊಂದಲವಿದೆ. ಇದು ನಿವಾರಣೆ ಆಗುವತನಕ ಭಾರತದ ಬಹುಸಂಖ್ಯಾತರ ಧರ್ಮದ ವಿಚಾರವಾಗಿ ಯಾರು ಯಾವುದೇ ಅರ್ಥದಲ್ಲಿ ಏನೇ ಕಟು ಹೇಳಿಕೆ ನೀಡಿದರೂ ಅದರಿಂದಾಗಿ ಲಾಭ ಆಗುವುದು 'ಧರ್ಮ ಅಪಾಯದಲ್ಲಿದೆ' ಎನ್ನುವ ಭ್ರಮೆ ಮೂಡಿಸಿ ರಾಜಕೀಯ ಮಾಡಲು ಹೊಂಚು ಹಾಕುತ್ತಿರುವವರಿಗೆ ಮಾತ್ರ.

'ಹಿಂದೂ ಧರ್ಮ', 'ಸನಾತನ' ಮತ್ತು 'ಹಿಂದುತ್ವ' ಈ ಮೂರರ ಮಧ್ಯೆ ಒಂದು ಸಂಬಂಧ ಇದೆ. ಈ ಸಂಬಂಧಕ್ಕಿಂತ ಹೆಚ್ಚಾಗಿ ಜನರಿಗೆ ಅರ್ಥ ಆಗಬೇಕಾಗಿರುವುದು ಅವುಗಳ ನಡುವಣ ವ್ಯತ್ಯಾಸ. ಈ ವ್ಯತ್ಯಾಸವನ್ನು ಹುಡುಕುವುದೆಂದರೆ, ಯಾವುದೇ ಧರ್ಮದಲ್ಲಿ ಹುಳುಕು ಹುಡುಕುವುದಲ್ಲ, ಯಾರನ್ನೂ ಅಣಕಿಸುವುದಲ್ಲ, ನಾಶವಾಗಿಹೋಗಿ ಎಂದು ಶಪಿಸುವುದೂ ಅಲ್ಲ. ಇದ್ದದ್ದನ್ನು ಇದ್ದ ಹಾಗೆ ಅರ್ಥೈಸಿ ಹೇಳುವುದು.

ಯಾವ ಜನಸಮೂಹವನ್ನು ಚರಿತ್ರೆಯ ಯಾವುದೋ ಕಾಲಘಟ್ಟದಲ್ಲಿ ಹಿಂದೂ ಧರ್ಮದವರೆಂದು ಗುರುತಿಸಲಾಯಿತೋ ಅವರಲ್ಲಿ 'ಜೀವ' ಮತ್ತು 'ದೇವ' ಇವೆರಡರ ನಡುವಣ ಸಂಬಂಧವನ್ನು ತರಹೇವಾರಿ ಅನುಸರಿಸಿ ಆಚರಿಸುವವರೆಲ್ಲಾ ಸೇರಿದ್ದಾರೆ. ಅವರಲ್ಲಿ ದೇವರನ್ನು ನಂಬುವವರೂ ಇದ್ದಾರೆ, ನಂಬದವರೂ ಇದ್ದಾರೆ, ನಂಬುವವರಲ್ಲಿ ದೇವರನ್ನು ಮೂರ್ತ ರೂಪದಲ್ಲಿ ಕಲ್ಪಿಸುವವರು, ಅಮೂರ್ತ ರೂಪದಲ್ಲಿ ಪರಿಭಾವಿಸುವವರು, ಮಂತ್ರಗಳ ಮೂಲಕ ಪೂಜಿಸುವವರು, ಬೈಗುಳಗಳ ಮೂಲಕ ಅರ್ಚಿಸುವವರು, ಮದ್ಯ-ಮಾಂಸ ಇಟ್ಟು ಸಂಪ್ರೀತಗೊಳಿಸುವವರು ಹೀಗೆ ಎಲ್ಲರೂ ಸೇರಿದ್ದಾರೆ. ಅಲ್ಲಿ ಯಾವ ಒಂದು ಗ್ರಂಥವೂ ದೊಡ್ಡದಲ್ಲ, ಯಾವ ಒಂದು ವಿಚಾರಧಾರೆಯೂ ಶ್ರೇಷ್ಠ ಅಂತ ಇಲ್ಲ.

ಹೀಗೆ ಯಾವ ನಿರ್ದಿಷ್ಟ ಮೇರೆಯೂ ಇಲ್ಲದ ಒಂದು ಒಕ್ಕೂಟದಂತಿರುವ ಈ ಧಾರ್ಮಿಕ ವ್ಯವಸ್ಥೆಯನ್ನು ಭಾರತದ ಸಂವಿಧಾನವೂ ಹಿಂದೂ ಧರ್ಮ ಎಂದು ಒಪ್ಪಿಕೊಂಡು ಅಧಿಕೃತವಾಗಿ ಗುರುತಿಸಿದೆ. ಈ ಮಹಾ ಹಿಂದೂ ಸಾಗರದಲ್ಲಿ ಶ್ರುತಿ, ಸ್ಮೃತಿ, ಪುರಾಣಗಳ ಆಧಾರದ ಮೇಲೆ ನಿಂತಿರುವ ಸನಾತನವೂ ಸೇರಿದೆ. ಅದು ಮೊದಲಿನಿಂದಲೇ ಇತ್ತೋ ಆನಂತರ ಬಂದು ಸೇರಿಕೊಂಡಿತೋ ಎನ್ನುವುದು ಇಲ್ಲಿ ಅಪ್ರಸ್ತುತ. ಹಿಂದೂ ಧರ್ಮದಲ್ಲಿ ಅದೂ ಸೇರಿದೆ ಮತ್ತು ಅದಕ್ಕೆ ಸ್ವಲ್ಪ ಮಟ್ಟಿಗಿನ ನಿರ್ದಿಷ್ಟ ಗ್ರಂಥಗಳು, ಕಟ್ಟಲೆಗಳು, ಸ್ಥಾಪನಾಚಾರ್ಯರುಗಳೆಲ್ಲಾ ಇದ್ದಾರೆ ಎನ್ನುವುದಷ್ಟೇ ಇಲ್ಲಿ ಪ್ರಸ್ತುತ.

ಹಿಂದೂ ಧರ್ಮ ಎನ್ನುವುದು ಈ ಸನಾತನ ಆವರಣದಾಚೆಗೂ ಇರುವುದರಿಂದ, ವೇದ-ಉಪನಿಷತ್ತು- ಗೀತೆ- ಪುರಾಣದಂತಹವುಗಳ ಹಾಗೂ ಈ ಗ್ರಂಥಗಳ ಮೂಲಕ ಮುನ್ನೆಲೆಗೆ ಬಂದಿರುವ ದೇವಾನು-ದೇವತೆಗಳ ಹಂಗೇ ಇಲ್ಲದವರು ಕೂಡಾ ಹಿಂದೂಗಳೇ. ಸನಾತನ ಅಥವಾ ವೈದಿಕ ಎಂದು ಕರೆಯಲಾಗುವ ಭಾಗ ಹಿಂದೂ ಧರ್ಮದ ಒಂದು ಕವಲೇ ವಿನಾ ಅದರ ಒಡಲಲ್ಲ.

ಆದರೆ, ಶತಶತಮಾನಗಳಿಂದ ಈ ಸನಾತನ–ವೈದಿಕ ಕವಲೇ ಇಡೀ ಹಿಂದೂ ಸಮಾಜದ ಮೇಲೆ ಒಂದು ರೀತಿಯ ಧಾರ್ಮಿಕ ಪಾರುಪತ್ಯವನ್ನು ಹೇರುತ್ತಾ ಬಂದು ವೈದಿಕವೇ ಹಿಂದೂ ಧರ್ಮ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ದೇಶದ ಸಂಸ್ಕೃತಿ ಎಂದರೆ ಸನಾತನ ಆಚರಣೆಗಳು ಮಾತ್ರ, ದೇಶದ ಅನನ್ಯತೆ ಎಂದರೆ ಸನಾತನ ಪುರಾಣದ ಯಾವುದೋ ಪಾತ್ರ ಎಂದು ಪ್ರತಿಷ್ಠಾಪಿಸಲಾಗುತ್ತದೆ. ಸನಾತನ ಗ್ರಂಥಗಳ ಮೂಲಕ ಸಮಾಜದೊಳಗೆ ಬೇರುಬಿಟ್ಟ ಶ್ರೇಣೀಕರಣ ಮತ್ತು ತಾರತಮ್ಯ ನೀತಿಗಳನ್ನು ಸುಧಾರಿಸುವ ಕೆಲಸ ಸುಧಾರಕರ ಶ್ರಮದಿಂದ ಕಾಲಕಾಲಕ್ಕೆ ನಡೆಯಿತು. ಇಲ್ಲಿ ಸುಧಾರಣೆ ಸಾಧ್ಯವಿಲ್ಲ ಎಂದು ಮನಗಂಡ ಕೆಲವರು ಹೊರನಡೆದು ಬೇರೆ ಧರ್ಮಗಳನ್ನು ಸ್ಥಾಪಿಸಿದ್ದೂ ಆಗಿದೆ.

ಸುಧಾರಣೆ ಒಳಗಿಂದ ಆಗಲಿ ಅಥವಾ ಹೊರ ನಡೆದವರಿಂದ ಆಗಲಿ, ಅದನ್ನು ಹಿಮ್ಮೆಟ್ಟಿಸುವ ಕೆಲಸ ಸನಾತನದ ಕಡೆಯಿಂದ ನಡೆದು ಅದರ ಪಾರಮ್ಯವನ್ನು ಅದು ಉಳಿಸಿಕೊಳ್ಳುತ್ತಾ ಬಂದಿದೆ ಎಂಬ ಅಂಶವನ್ನೇ ಅಂಬೇಡ್ಕರ್ ಅವರು ಪ್ರತಿಕ್ರಾಂತಿ (counter revolution) ಅಂತ ಕರೆದದ್ದು. ಕೊನೆಗೆ ಸಂವಿಧಾನದ ಮೂಲಕವೂ ಹಿಂದೂ ಧರ್ಮದ ಮೇಲಿನ ಸನಾತನ ಪಾರಮ್ಯವನ್ನು ಅಲುಗಾಡಿಸಲು ಅಂದುಕೊಂಡಮಟ್ಟಿಗೆ ಆಗಲಿಲ್ಲ ಎಂಬ ನಿರಾಸೆಯಿಂದ ಅಂಬೇಡ್ಕರ್ ಹಿಂದೂ ಧರ್ಮದ ಗೊಡವೆಯೇ ಬೇಡ ಅಂತ ಹೊರನಡೆದದ್ದು.

ತಮಿಳುನಾಡಿನಲ್ಲಿ ಒಂದು ಸಣ್ಣ ಪ್ರತಿರೋಧ ಕಾಣಿಸಿಕೊಂಡದ್ದು ಬಿಟ್ಟರೆ, ಹಿಂದೂ ಧರ್ಮದೊಳಗಣ ವೈದಿಕ ಸಾಮ್ರಾಜ್ಯ ವಿಸ್ತರಣೆಗೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಯಾವ ಅಡ್ಡಿಯೂ ಎಂದೂ ಆಗಿದ್ದಿಲ್ಲ. ಸುಧಾರಣೆ ಬೇಕು ಎನ್ನುವ ಆಗ್ರಹ ಆಗಿರಬಹುದು. ವೈದಿಕೇತರರು ತಮ್ಮ ಕೀಳರಿಮೆಯಿಂದಲೋ ಅಥವಾ ಔದಾರ್ಯದಿಂದಲೋ ವೈದಿಕ ಪಾರಮ್ಯವನ್ನು ಬಹುಮಟ್ಟಿಗೆ ಒಪ್ಪಿಕೊಂಡು ಬಿಟ್ಟಿದ್ದಾರೆ. ಆದರೆ ಅದೇ ವೇಳೆಗೆ ಅಳಿದುಳಿದ ಸನಾತನೇತರ ಕುರುಹುಗಳನ್ನೂ ಅಳಿಸಿ ವಿಶಾಲ ಹಿಂದೂ ಧರ್ಮವನ್ನು ಸನಾತನದ ಆವರಣದೊಳಗೆ ಕಟ್ಟಿಹಾಕುವ ಕೆಲಸ ಮುಂದುವರಿದಿದೆ. ಉದಾಹರಣೆಗೆ, ಸನಾತನಕ್ಕೆ ಸಂಬಂಧವೇ ಇಲ್ಲದ ತುಳುನಾಡಿನ ಭೂತಾರಾಧನೆಯಲ್ಲಿ ಈಗ ಸನಾತನ ಸಂಪ್ರದಾಯಗಳದ್ದೇ ಮೇಲುಗಾರಿಕೆ.

ಕೇರಳದ ಓಣಂ ಹಬ್ಬದಲ್ಲಿ ಬಲಿ ಚಕ್ರವರ್ತಿಯನ್ನು ಆರಾಧಿಸಲಾಗುತ್ತದೆ. ಕೇರಳದ ರಾಜ್ಯಗೀತೆ ಕೂಡಾ ಬಲಿಯ ರಾಜ್ಯವನ್ನು ಕೊಂಡಾಡುತ್ತದೆ. ಹಾಗಂತ ಅಲ್ಲಿ ಸನಾತನದ ಮೇಲುಗಾರಿಕೆಗೆ ಯಾವ ಕೊರತೆಯೂ ಆಗಿಲ್ಲ. ರಾಜ್ಯದ ಉದ್ದಗಲಕ್ಕೆ ಭವ್ಯ ಸನಾತನ ದೇಗುಲಗಳು ಇದ್ದಷ್ಟು ಬೇರೆಲ್ಲೂ ಇಲ್ಲ. ಆದರೂ ಕೇರಳದಲ್ಲಿ ಈಗ ಬಲಿಯ ಬದಲಿಗೆ ವಾಮನನ ಪೂಜೆಯೇ ನಡೆಯಬೇಕೆಂಬ ಬೇಡಿಕೆ ಹುಟ್ಟಿಕೊಂಡಿದೆ. ಯಾಕೆಂದರೆ, ವೈದಿಕ ಪುರಾಣದಲ್ಲಿ ಬಲಿ ರಾಕ್ಷಸನಾಗಿದ್ದ ಮತ್ತು ವೈದಿಕ ದೇವರಾದ ವಿಷ್ಣುವಿನ ಅವತಾರವಾದ ವಾಮನನು ಬಲಿಯನ್ನು ಕೊಂದ ಎಂಬ ಕತೆ ಇದೆ. ಅದಕ್ಕೆ ಪ್ರತಿರೋಧ ಒಡ್ಡಿದವರನ್ನೆಲ್ಲಾ ರಾಕ್ಷಸರಂತೆ ಬಿಂಬಿಸಿ ತನ್ನ ಹೆಚ್ಚುಗಾರಿಕೆಯನ್ನು ಸ್ಥಿರಗೊಳಿಸುವುದು ಸನಾತನದ ಒಂದು ತಂತ್ರ. ಈಗಲೂ ಅದರ ಬಳಕೆ ನಡೆಯುತ್ತಿದೆ. ಕರ್ನಾಟಕದಲ್ಲಿ, ವೈದಿಕ ದಸರಾದ ಜತೆಗೆ ಮಹಿಷ ದಸರಾವನ್ನೂ ಆಚರಿಸುತ್ತೇವೆ ಎಂಬ ಸನಾತನೇತರರ ಬೇಡಿಕೆಗೆ ಬರುವ ವಿರೋಧ ಕೂಡಾ ಈ ಧಾರ್ಮಿಕ ವಸಾಹತುಶಾಹಿ ಮನೋಭಾವದ ಪ್ರತೀಕ.

ಈಗ ಹಿಂದುತ್ವದ ವಿಚಾರಕ್ಕೆ ಬರೋಣ. ಸ್ವಾತಂತ್ರ್ಯಸಂಗ್ರಾಮದುದ್ದಕ್ಕೂ ಗಾಂಧೀಜಿಯು ಭಾರತ ಎಲ್ಲ ಧರ್ಮೀಯರಿಗೂ ಸೇರಿದ್ದು ಎಂದು ಪ್ರತಿಪಾದಿಸಿದ್ದು ಸನಾತನವಾದಿಗಳಿಗೆ ಸಮ್ಮತವಾಗಿರಲಿಲ್ಲ. ಗಾಂಧೀಜಿಯನ್ನು ಕೊಂದ ಗೋಡ್ಸೆ ಪ್ರೇರೇಪಣೆ ಪಡೆದದ್ದು ನಿಜವಾದ ಹಿಂದೂ ಧರ್ಮದಿಂದ ಅಲ್ಲ. ಆತ ಹಿಂದೂ ಧರ್ಮದ ಯಾವ ಕವಲಿನಿಂದ ಪ್ರೇರೇಪಣೆ ಪಡೆದುಕೊಂಡಿರಬಹುದು ಎಂದು ಊಹಿಸುವುದು ಕಷ್ಟವೂ ಅಲ್ಲ. ಆ ಪ್ರೇರೇಪಣೆಯೇ ಈಗ ಹಿಂದುತ್ವದ ರೂಪದಲ್ಲಿ ಕಾಣಿಸುವುದು. ಈ ದೇಶದಲ್ಲಿ ರಾಜಕೀಯ ಅಧಿಕಾರ ಸನಾತನ– ವೈದಿಕ ಪಾರಮ್ಯವನ್ನು ಒಪ್ಪುವ ಹಿಂದೂಗಳದ್ದೇ ಆಗಿರಬೇಕು ಎನ್ನುವ ವಾದವೇ 'ಹಿಂದುತ್ವ'.

ದೇಶದ ಮತ್ತು ವಿಶಾಲ ಹಿಂದೂ ಧರ್ಮದ ಬಹುತ್ವಕ್ಕೆ ಹೊಂದಿಕೆಯಾಗದ ಅಪಾಯಕಾರಿ ಹಿಂದುತ್ವ ಯೋಜನೆಗೆ ಅಂದು ಅಡ್ಡಿಯಾಗಿದ್ದು ಗಾಂಧೀಜಿ. ಅದಕ್ಕೇ ಅವರನ್ನು ಮುಗಿಸಿದ್ದು. ದೇಶವಿಭಜನೆ, 'ಮುಸ್ಲಿಂ ತುಷ್ಟೀಕರಣ'ದಂತಹ ಸಮರ್ಥನೆಗಳೆಲ್ಲಾ ನೆಪ. ಹಿಂದುತ್ವ ರಾಜಕೀಯವನ್ನು ವಿಶಾಲ ಹಿಂದೂ ಧರ್ಮ ಆರಂಭದಿಂದಲೂ ಒಪ್ಪಿಕೊಂಡಿರಲಿಲ್ಲ. ಗಾಂಧೀಜಿಯ ಹತ್ಯೆಯಂತೂ ಹಿಂದುತ್ವ ರಾಜಕೀಯವನ್ನು ಹಿಂದೂ ಸಮಾಜವು ಮಾರುದ್ದ ದೂರವಿಡುವಂತೆ ಮಾಡಿತು. ಹಿಂದುತ್ವ ರಾಜಕೀಯ ಹಟ ಬಿಡಲಿಲ್ಲ. ಬದಲಾಗಿ ಇನ್ನೊಂದು ಧರ್ಮವನ್ನು ವೈರಿ ಸ್ಥಾನದಲ್ಲಿ ನಿಲ್ಲಿಸಿ, ಆ ಧರ್ಮದವರಿಂದಾಗಿ ಇಡೀ ಹಿಂದೂ ಧರ್ಮಕ್ಕೆ ಅಪಾಯವಿದೆ ಎಂದು ದೊಡ್ಡ ಸಂಖ್ಯೆಯ ಹಿಂದೂಗಳನ್ನು ನಂಬಿಸಿ ಅದೀಗ ದೇಶವನ್ನು ಹಿಂದೂರಾಷ್ಟ್ರ ಮಾಡಲು ಬಹಿರಂಗವಾಗಿಯೇ ಸನ್ನಾಹ ನಡೆಸುತ್ತಿದೆ. ಅದಕ್ಕೆ ಮೊದಲ ಹಂತದಲ್ಲಿ ಅಡ್ಡಿಯಾದ ಗಾಂಧಿಯವರಿಗೆ ಆದ ಗತಿಯೇ ಈಗ ಅಂತಿಮ ಹಂತದಲ್ಲಿ ಅಡ್ಡಿಯಾಗಿರುವ ಸಂವಿಧಾನಕ್ಕೂ ಆಗುವ ಲಕ್ಷಣ ಗೋಚರಿಸುತ್ತಿದೆ.

ಚುರುಮುರಿ

ಮಾಹಿತಿಯೇ ಸಂಪತ್ತು!

• ಗುರು ಪಿ.ಎಸ್.

'ನಾನು ಒಬಿಸಿ, ಬಂದೀನಿ ಕೈಬೀಸಿ, ಎಲೆಕ್ಷನ್‌ಗೆ ನಿಲ್ತೀನಿ, ಗೆದ್ದೇ ಗೆಲ್ತೀನಿ...'

'ನಾನು ನಂದಿನಿ...' ಧಾಟಿಯಲ್ಲಿ ಹಾಡ್ಕೊಂಡು ಬಂದ ಮುದ್ದಣ್ಣ.

'ಏನ್ ಮುದ್ದಣ್ಣ, ತುಂಬಾ ಖುಷಿಯಲ್ಲಿದೀಯ, ಏನೇನೋ ಹಾಡು ಬೇರೆ ಹಾಡ್ತಿದೀಯ?' ಕೇಳಿದ ವಿಜಿ.

'ಜಾತಿಗಣತಿ ಎಫೆಕ್ಟ್ ಸರ್'.

'ಕರ್ನಾಟಕ ಜಾತಿಗಣತಿ ವಿವರ ರಿಲೀಸ್ ಆಯ್ತಾ?'

'ಕರ್ನಾಟಕದ್ದಲ್ಲ ಸರ್, ಬಿಹಾರದ್ದು'.

'ಏನಂತೆ ಹೈಲೈಟ್?'

'ಬಿಹಾರದಲ್ಲಿ ಒಬಿಸಿಗಳೇ ಜಾಸ್ತಿ ಇರೋದಂತೆ ಸರ್'.

'ಓಹ್ ಅದಕ್ಕೇನಾ, ಇಷ್ಟು ದಿನ ಧರ್ಮ, ಧರ್ಮ ಅಂತಿದ್ದೋನು, ಈಗ ನಾನು ಒಬಿಸಿ, ನಾನು ಒಬಿಸಿ ಅಂತ ಹಾಡು ಹೇಳ್ತಿರೋದು? ಈ ಸಡನ್ ಬದಲಾವಣೆ ನೋಡಿದರೆ ನಿನ್ನದು ಸಹಜ ಖುಷಿಯಲ್ಲ, ಅನಿವಾರ್ಯ ಸಂಕಟ ಅನಿಸುತ್ತೆ' ತಿವಿದ ವಿಜಿ.

'ಬದಲಾವಣೆ ಜಗದ ನಿಯಮ' ಎನ್ನುತ್ತಾ ಹುಳ್ಳಗೆ ನಕ್ಕ ಮುದ್ದಣ್ಣ.

'ಅದ್ ಸರಿ, ಬಿಹಾರಕ್ಕೂ ಕರ್ನಾಟಕಕ್ಕೂ ಏನು ಸಂಬಂಧ?'

'ನಾವು ಪೊಲಿಟಿಷಿಯನ್ಸ್ ಅಣ್ಣ, ಯಾವುದೇ ರಾಜ್ಯದ ಮಾಹಿತಿ ಸಿಕ್ಕರೂ ಇಡೀ ದೇಶದ ಚಿತ್ರಣ ಏನು ಅಂತ ಗೊತ್ತುಮಾಡ್ಕೊಂಡು ಬಿಡ್ತೀವಿ'.

'ನಮ್ ಜಾತಿ ಮಂತ್ರಿಗಳು ಜಾಸ್ತಿ ಇಲ್ಲ, ಆಯಕಟ್ಟಿನ ಸ್ಥಳಗಳಲ್ಲೂ ನಮ್ಮವರಿಲ್ಲ ಎಂದು ಗಲಾಟೆ ಶುರುವಾಗಿದೆ. ಇನ್ನು, ಕರ್ನಾಟಕ ಜಾತಿಗಣತಿ ಬಿಡುಗಡೆಯಾಗಿ ಅದರಲ್ಲಿ ಬೇರೆ ಜಾತಿಯವರು ಹೆಚ್ಚಿದ್ದಾರೆ ಅಂತ ಬಂದರೆ?'

'ಆಗ ಇದ್ದೇ ಇದೆಯಲ್ಲ, ಧರ್ಮದ ಪರವಾಗಿ, ಧರ್ಮ ರಕ್ಷಣೆಗಾಗಿ ಹೋರಾಟ'.

'ಮತ್ತೆ ಒಬಿಸಿ ಕಲ್ಯಾಣ?'

'ಅಯ್ಯೋ ಅಣ್ಣ, ಕೇಳಿದ್ದೇ ಕೇಳ್ತೀರಲ್ಲ. ಯಾರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೋ ಅವರ ಪರ ನಮ್ಮ ಮಾತು, ಮಾತಷ್ಟೇ'.

'ಅಂದ್ರೆ, ಜಾತಿಗಣತಿ ಪ್ರಯೋಜನ?'

'ಎಲೆಕ್ಷನ್ ಗೆಲ್ಲೋಕೆ ಮಾಹಿತಿ ಬೇಕಷ್ಟೇ. ನಮಗೆ ಇನ್‌ಫರ್ಮೇಷನ್ ಈಸ್ ವೆಲ್ತ್' ನಗುತ್ತಾ ಹೊರಟ ಮುದ್ದಣ್ಣ.

ಸಂಗತ

ಸೇಡು, ದ್ವೇಷದ ಸಂದೇಶ ಬೇಕೆ?

ದ್ವೇಷ ಮತ್ತು ಪ್ರತೀಕಾರದಿಂದ ಕೂಡಿದ ಸಂದೇಶಗಳನ್ನು ಹರಡುವುದರ ಮೂಲಕ ನಾವು ನಮ್ಮ ಮಕ್ಕಳಿಗೆ ಏನನ್ನು ಕಲಿಸುತ್ತಿದ್ದೇವೆ ಎಂದು ಪಾಲಕರು ಯೋಚಿಸಬೇಕಿದೆ

• ರಾಜಕುಮಾರ ಕುಲಕರ್ಣಿ

ಬೆಳಿಗ್ಗೆ ವಾಕಿಂಗ್ ವೇಳೆ ಎದುರಾದ ಹಿರಿಯರ ತಂಡ ಗಹನವಾದ ಚರ್ಚೆಯಲ್ಲಿ ತೊಡಗಿತ್ತು. ಸಾಮಾಜಿಕ ಮಾಧ್ಯಮವಾದ ವಾಟ್ಸ್‌ಆ್ಯಪ್ ಬಳಕೆಗೆ ಭವಿಷ್ಯದಲ್ಲಿ ನಿರ್ದಿಷ್ಟ ಶುಲ್ಕವನ್ನು ಗ್ರಾಹಕರು ಭರಿಸುವಂತಾಗಬೇಕು ಎನ್ನುವ ಆಶಯ ತಂಡದಲ್ಲಿದ್ದ ಹಿರಿಯರದಾಗಿತ್ತು. ಈ ಮೂಲಕವಾದರೂ ವಾಟ್ಸ್‌ಆ್ಯಪ್‌ನ ದುರ್ಬಳಕೆ ಕಡಿಮೆಯಾಗಬಹುದು ಎನ್ನುವುದು ಈ ಆಶಯದ ಹಿಂದಿನ ಸದುದ್ದೇಶವಾಗಿತ್ತು.

'ನಿನಗೆ ಮೋಸ ಮಾಡಿದವರು ಸದ್ಯದ ಪರಿಸ್ಥಿತಿಯಲ್ಲಿ ನಗುನಗುತ್ತಾ ಇರಬಹುದು, ಆದರೆ ಆ ನಗು ಶಾಶ್ವತವಲ್ಲ. ಮಾಡಿದ ಮೋಸಕ್ಕೆ ನರಳಿ ನರಳಿ ಕಣ್ಣೀರಿಡುವ ದಿನ ಬಂದೇ ಬರುತ್ತದೆ, ಕಾದು ನೋಡಿ' ಇಂಥದ್ದೊಂದು ಸಂದೇಶವನ್ನು ಪರಿಚಿತರೊಬ್ಬರು ತಮ್ಮ ವಾಟ್ಸ್‌ಆ್ಯಪ್ ಸ್ಟೇಟಸ್ ಮೂಲಕ ಹಂಚಿಕೊಂಡಿದ್ದರು. ಇನ್ನೊಬ್ಬರಿಗೆ ಕೆಟ್ಟದ್ದನ್ನು ಬಯಸುವ ಈ ಸಂದೇಶವು ಮನಸ್ಸಿನ ವಿಕೃತಿಗೆ ಕನ್ನಡಿ ಹಿಡಿದಂತಿದೆ. ವಿಷ ಉಣಿಸಿದವನಿಗೆ ಹಾಲನೆರೆ, ಕಲ್ಲು ಹೊಡೆದವನ ಮನೆಗೆ ಹೂವನೆಸೆ ಎಂದು ಹಿರಿಯರು ನುಡಿದು, ಅದರಂತೆ ಬದುಕಿ ಬಾಳಿದ ಈ ಸಮಾಜದಲ್ಲಿ ಈಗ ವಿಕೃತ ಸಂದೇಶಗಳು ರವಾನೆಯಾಗುತ್ತಿವೆ.

ಬುದ್ಧಗುರುವಿನ ಕರುಣೆ, ಬಸವಣ್ಣನ ಚಿಂತನೆ, ಗಾಂಧೀಜಿಯ ಸತ್ಯಸಂಧತೆಯನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತಿ ಬೆಳೆಸಬೇಕಾದ ಪಾಲಕರೇ ಸಾಮಾಜಿಕ ಮಾಧ್ಯಮಗಳಲ್ಲಿ ಅನಾರೋಗ್ಯಕರವಾದ ಸಂದೇಶಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಒಂದರ್ಥದಲ್ಲಿ ಇಂಥ ಸಂದೇಶಗಳ ಮೂಲಕ ಸ್ವತಃ ಪಾಲಕರೇ ಮಕ್ಕಳಲ್ಲಿ ದ್ವೇಷದ ಬೀಜವನ್ನು ಬಿತ್ತಿದಂತಾಗುತ್ತದೆ. ಇನ್ನೊಂದು ವಿಧದಲ್ಲಿ, ಇಂಥ ಕೆಟ್ಟ ಸಂದೇಶಗಳು ಮಕ್ಕಳ ಓದಿನ ಅಭಿರುಚಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆಯಿದೆ. ಈಗಾಗಲೇ ಮಕ್ಕಳು ಮೊಬೈಲ್ ವ್ಯಸನಿಗಳಾಗಿದ್ದು ಪುಸ್ತಕಗಳ ಓದಿನ ಅಭಿರುಚಿ ಕ್ಷೀಣಿಸುತ್ತಿರುವ ಹೊತ್ತಿನಲ್ಲಿ, ಭಾಷೆಯೊಂದನ್ನು ಕೆಟ್ಟ ಸಂದೇಶಗಳ ಮೂಲಕ ಮಕ್ಕಳಿಗೆ ಪರಿಚಯಿಸುವುದರಿಂದ ಮತ್ತಷ್ಟು ಅಪಾಯವನ್ನು ಆಹ್ವಾನಿಸಿದಂತೆ ಆಗುತ್ತದೆ.

ಸಾಮಾಜಿಕ ಮಾಧ್ಯಮದ ಮೂಲಕ ದ್ವೇಷ, ಸೇಡು ಮತ್ತು ಪ್ರತೀಕಾರದ ಸಂದೇಶಗಳನ್ನು ಹರಡುವುದು ಒಂದು ರೀತಿಯ ಮಾನಸಿಕ ಕ್ರೌರ್ಯ. ಮನೋವಿಶ್ಲೇಷಣಾ ತಜ್ಞ ಎರಿಕ್ ಫ್ರಾಮ್ ತನ್ನ 'ದಿ ಅನಾಟಮಿ ಆಫ್ ಹ್ಯೂಮನ್ ಡಿಸ್ಟ್ರಕ್ಟಿವ್‌ನೆಸ್' ಎಂಬ ಗ್ರಂಥದಲ್ಲಿ ವಿಶ್ಲೇಷಿಸಿರುವ ಮಾನವ ಸ್ವಭಾವದ ವ್ಯಾಖ್ಯಾನವನ್ನು ಕಥೆಗಾರ ಎಸ್.ದಿವಾಕರ್ ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಆ ವ್ಯಾಖ್ಯಾನ ಹೀಗಿದೆ- 'ಇತರರನ್ನು ಹಂಗಿಸುವ, ಅವರ ಭಾವನೆಗಳ ಮೇಲೆ ಹಲ್ಲೆ ಮಾಡುವ ಮಾನಸಿಕ ಕ್ರೌರ್ಯವಿದೆಯಲ್ಲ, ಅದು ದೈಹಿಕ ಕ್ರೌರ್ಯಕ್ಕಿಂತ ಹೆಚ್ಚು ವ್ಯಾಪಕ. ಇಂಥ ಕ್ರೌರ್ಯ ಎಸಗುವವನು ಸ್ವತಃ ಸುರಕ್ಷಿತವಾಗಿರುತ್ತಾನೆ. ಯಾಕೆಂದರೆ ಅವನು ಉಪಯೋಗಿಸುವುದು ದೈಹಿಕ ಶಕ್ತಿಯನ್ನಲ್ಲ ಶಬ್ದಗಳನ್ನು ಮಾತ್ರ'.

ಉತ್ತಮ ಪುಸ್ತಕ, ಸನ್ಮಾರ್ಗದ ಮಾತು, ಒಳ್ಳೆಯ ಸಿನಿಮಾ, ಸುಂದರ ಪ್ರವಾಸಿತಾಣದಂತಹ ಮಹತ್ವದ ಮತ್ತು ಆರೋಗ್ಯಕರವಾದ ಮಾಹಿತಿಯನ್ನು ಜಾಲತಾಣಗಳಲ್ಲಿ ಹಂಚಿಕೊಳ್ಳುವುದು ಬೌದ್ಧಿಕವಾಗಿ ಹಾಗೂ ಸಾಮಾಜಿಕವಾಗಿ ಒಂದು ಉತ್ತಮವಾದ ನಡೆ. ವಿಷಯಾಧಾರಿತ ಚರ್ಚೆ ಮತ್ತು ಸಂವಾದಗಳಿಗೆ ಸಾಮಾಜಿಕ ಮಾಧ್ಯಮ ವೇದಿಕೆಯಾಗಬೇಕು. ಒಟ್ಟಾರೆ, ಹಂಚಿಕೊಂಡ ಸಂದೇಶಗಳು ನಮ್ಮ ಬೌದ್ಧಿಕ ವಿಕಾಸಕ್ಕೆ ನೆರವಾಗಬೇಕು. ವಿಪರ್ಯಾಸವೆಂದರೆ, ಸಾಮಾಜಿಕ ಮಾಧ್ಯಮವನ್ನು ದ್ವೇಷ, ಪ್ರತೀಕಾರದ ಸಾಧನೆಗೆ ಗುರಾಣಿಯಾಗಿಸಿಕೊಳ್ಳುವವರ ಸಂಖ್ಯೆಯೇ ಹೆಚ್ಚು. ಧರ್ಮ ಮತ್ತು ಸಮುದಾಯಗಳ ಬಗ್ಗೆ ಅವಹೇಳನಕಾರಿ ಸಂದೇಶಗಳ ಮೂಲಕ ಸಮಾಜದಲ್ಲಿನ ಸೌಹಾರ್ದದ ವಾತಾವರಣವನ್ನು ಕದಡಲಾಗುತ್ತಿದೆ.

ಚುನಾವಣೆಯ ಸಂದರ್ಭದಲ್ಲಿ ಫೇಸ್‌ಬುಕ್ ಮತ್ತು ವಾಟ್ಸ್‌ಆ್ಯಪ್ ಅನ್ನು ಎದುರಾಳಿಗಳ ತೇಜೋವಧೆಗಾಗಿ ರಾಜಕಾರಣಿಗಳು ವ್ಯಾಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಸೃಜನಶೀಲ ಕ್ಷೇತ್ರವೆಂದೇ ಪರಿಗಣಿತವಾದ ಸಾಹಿತ್ಯದ ವಿಷಯದಲ್ಲೂ ಬರಹಗಾರರು ಪರಸ್ಪರ ನಿಂದನೆಗೆ ಪ್ರಬಲ ಅಸ್ತ್ರವಾಗಿ ಈ ಮಾಧ್ಯಮವನ್ನು ಉಪಯೋಗಿಸುತ್ತಿರುವುದು ಆತಂಕದ ಸಂಗತಿ.

ಸಾಮಾಜಿಕ ಮಾಧ್ಯಮದ ಮೂಲಕ ಕೆಟ್ಟ ಸಂದೇಶಗಳನ್ನು ರವಾನಿಸುತ್ತಿರುವ ರೋಗಗ್ರಸ್ತ ಮನಃಸ್ಥಿತಿಯನ್ನು ನಿಯಂತ್ರಿಸಲು ಮನಃಶಾಸ್ತ್ರಜ್ಞ ಎರಿಕ್ ಬರ್ನ್ ಪರಿಚಯಿಸಿದ 'ಟ್ರ್ಯಾನ್ಸಾಕ್ಷನಲ್ ಅನ್ಯಾಲಿಸಿಸ್' ಎನ್ನುವ ಪರಿಕಲ್ಪನೆಯನ್ನು ಶಿಕ್ಷಣ ಮತ್ತು ಬೋಧನೆಯ ಮೂಲಕ ಕಾರ್ಯಗತಗೊಳಿಸಬೇಕಾದ ಅಗತ್ಯವಿದೆ. ಈ ಪರಿಕಲ್ಪನೆಯು ಮನುಷ್ಯನು ಮನುಷ್ಯನಂತೆ ಬದುಕುವುದನ್ನು ಹೇಳಿಕೊಡುತ್ತದೆ. ಸಂಭಾಷಣೆ ಸಂದರ್ಭದಲ್ಲಿ ತನ್ನ ಮಾತು ಮತ್ತು ವರ್ತನೆ ಎದುರಿಗಿರುವ ವ್ಯಕ್ತಿಗೆ ನೋವನ್ನು ಉಂಟುಮಾಡದಂತೆ ಪೂರ್ವಸಿದ್ಧತೆಯೊಂದಿಗೆ ಮಾತಿಗಿಳಿಯುವುದೇ ಈ ಸಿದ್ಧಾಂತದ ಪ್ರಮುಖ ಲಕ್ಷಣವಾಗಿದೆ.

'ನಿನ್ನನ್ನು ಎಷ್ಟು ನಿಂದಿಸಿದರೂ ನಿನಗೆ ನೋವಾಗುವುದಿಲ್ಲವೇ' ಎಂದ ದೇವದತ್ತನ ಮಾತಿಗೆ ಗೌತಮ ಬುದ್ಧ ಪ್ರತಿಕ್ರಿಯಿಸಿದ್ದು ಹೀಗೆ- 'ಒಬ್ಬ ಇನ್ನೊಬ್ಬನಿಗೆ ಏನಾದರೂ ಕೊಡುತ್ತಾನೆ. ಆ ಇನ್ನೊಬ್ಬನು ಅದನ್ನು ತೆಗೆದುಕೊಳ್ಳದೇ ಹೋದರೆ, ಅದು ಕೊಡುವವನಿಗೇ ಸೇರುತ್ತದೆ. ನೀನು ನನಗೆ ರಾಶಿರಾಶಿ ಬೈಗುಳಗಳನ್ನು ಕೊಟ್ಟೆ, ಅದನ್ನು ನಾನು ತೆಗೆದುಕೊಳ್ಳಲಿಲ್ಲ. ಆಗ ಬೈಗುಳಗಳ ರಾಶಿ ಯಾರಿಗೆ ಸೇರಬೇಕು? ನಿನಗೇ ತಾನೆ?'.

ಸಾಮಾಜಿಕ ಜಾಲತಾಣಗಳಲ್ಲಿ ಅನಾರೋಗ್ಯಕರವಾದ ಸಂದೇಶಗಳು ಪುಂಖಾನುಪುಂಖವಾಗಿ ಹರಿದಾಡುತ್ತಿರುವ ಈ ಸಂದರ್ಭದಲ್ಲಿ, ಬುದ್ಧ ಗುರುವಿನ ನಿರ್ಲಿಪ್ತ ಗುಣವನ್ನು ಮೈಗೂಡಿಸಿಕೊಳ್ಳಬೇಕಾದದ್ದು ಅಗತ್ಯವಾಗಿದೆ.

ವಾಚಕರ ವಾಣಿ

ಏಕವ್ಯಕ್ತಿ, ಐದು ಹುದ್ದೆ ನಿರ್ವಹಣೆ!

ಸುಮಾರು 35 ಯೋಜನೆಗಳನ್ನು ಒಳಗೊಂಡಿರುವ 'ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ'ಯಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ನಿರ್ದೇಶಕರನ್ನು ಹೊರತುಪಡಿಸಿ 19 ಮಂದಿ ಸಿಬ್ಬಂದಿ ಇದ್ದಾರೆ. ಜಂಟಿ ನಿರ್ದೇಶಕರು, ಉಪನಿರ್ದೇಶಕರು, ಸಹಾಯಕ ನಿರ್ದೇಶಕರು, ಕಚೇರಿ ವ್ಯವಸ್ಥಾಪಕರು ಮತ್ತು ಶಾಖಾಧಿಕಾರಿಯ ತಲಾ ಒಂದು ಹುದ್ದೆ, ಅಧೀಕ್ಷಕರು- 3, ಪ್ರಥಮ ದರ್ಜೆ ಸಹಾಯಕರು- 9 ಮತ್ತು ದ್ವಿತೀಯ ದರ್ಜೆ ಸಹಾಯಕರ 2 ಹುದ್ದೆಗಳಿವೆ. ಇವುಗಳಲ್ಲಿ ಅರ್ಧಕ್ಕಿಂತ ಹೆಚ್ಚು, ವಿವಿಧ ಇಲಾಖೆಗಳಿಂದ ಈ ಇಲಾಖೆಗೆ ಅನುಕಂಪದ ಆಧಾರದ ಮೇಲೆ ಭರ್ತಿಯಾಗಿರುವ ಹುದ್ದೆಗಳೇ ಆಗಿವೆ. ಇಲಾಖೆಯ ಜಿಲ್ಲಾ ಕಚೇರಿಗಳೂ ಇದಕ್ಕೆ ಹೊರತಾಗಿಲ್ಲ.

ಅತ್ಯಂತ ಶೋಚನೀಯ ಎಂದರೆ, ಬೆಂಗಳೂರು ನಗರ ಅಂಗವಿಕಲರ ಕಲ್ಯಾಣಾಧಿಕಾರಿ ತಮ್ಮ ಹುದ್ದೆಯೊಂದಿಗೆ ಹೆಚ್ಚುವರಿಯಾಗಿ, ಅಂಗವಿಕಲರ ಹಕ್ಕುಗಳು– 2016 ಕಾಯ್ದೆಯಡಿ ಬರುವ ಸಹಾಯಕ ಆಯುಕ್ತರ ಹುದ್ದೆ ಸೇರಿದಂತೆ ನಿರ್ದೇಶನಾಲಯದ ಪ್ರಮುಖ ಹುದ್ದೆಗಳಾದ ಸಹಾಯಕ ನಿರ್ದೇಶಕರು, ಉಪ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರ ಹುದ್ದೆಗಳನ್ನೂ ನಿಭಾಯಿಸುತ್ತಿದ್ದಾರೆ. ಹೀಗೆ, ಏಕಕಾಲದಲ್ಲಿ ಏಕವ್ಯಕ್ತಿ ಮೂರು ಸ್ಥಳಗಳಲ್ಲಿರುವ ಮೂರು ಕಚೇರಿಗಳ ಐದು ಹುದ್ದೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವೇ? ಇದನ್ನು ಗಮನಿಸಿದರೆ, 21 ಬಗೆಯ ವೈಕಲ್ಯದ ಸುಮಾರು 20 ಲಕ್ಷ ಅಂಗವಿಕಲರು ಹಾಗೂ 58 ಲಕ್ಷ ಹಿರಿಯ ನಾಗರಿಕರಿರುವ ಇಲಾಖೆಯ ಸ್ಥಿತಿ ಏಕೋಪಾಧ್ಯಾಯ ಶಾಲೆಯ ಮುಖ್ಯೋಪಾಧ್ಯಾಯನಂತೆ ಆಗಿರುವುದು ವಿಪರ್ಯಾಸ.

ಕೇಂದ್ರ ಕಚೇರಿಯ ಸ್ಥಿತಿಯೇ ಹೀಗಾದರೆ, ಇನ್ನು ಸಬಲೀಕರಣಗೊಳ್ಳುವ ಕನಸು ಹೊತ್ತು ಕುಳಿತ ಲಕ್ಷಾಂತರ ಅಂಗವಿಕಲರ ಸ್ಥಿತಿ ಏನಾಗಬೇಡ ಎಂಬ ಕೊರಗು ಕಾಡದಿರಲು ಸಾಧ್ಯವೇ? ಆದ್ದರಿಂದ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವುದರೊಂದಿಗೆ ಇಲಾಖೆಯ ಬಲವರ್ಧನೆ ಹಾಗೂ ಅಂಗವಿಕಲರ ಸಬಲೀಕರಣಕ್ಕೆ ಸರ್ಕಾರ ಒತ್ತು ನೀಡಬೇಕಾಗಿದೆ.

ಚಂದ್ರಶೇಖರ ಪುಟ್ಟಪ್ಪ, ಬೆಂಗಳೂರು

ಶ್ರೀಮಂತರು ಅಧ್ಯಕ್ಷರಾಗಿದ್ದರೆ...

'ಮೀಸಲಾತಿ: ಉದ್ದೇಶ ಮುಕ್ಕಾಗದಿರಲಿ' ಎಂಬ ಮಲ್ಲಿಕಾರ್ಜುನ ಹೆಗ್ಗಳಗಿ ಅವರ ಲೇಖನ (ಸಂಗತ, ಅ. 3) ಓದಿದಾಗ, ನನಗಾದ ಅನುಭವವೊಂದು ನೆನಪಿಗೆ ಬಂದಿತು. ಇತ್ತೀಚೆಗೆ ನಮ್ಮೂರಿನ ಉತ್ಸವವನ್ನು ಊರಿನ ಶ್ರೀಮಂತರೆಲ್ಲಾ ಸೇರಿ ಚಂದಾ ಹಣದಿಂದ ಏರ್ಪಡಿಸಿದ್ದರು. ಊರಲ್ಲೆಲ್ಲಾ ಮೆರವಣಿಗೆ, ಗ್ರಾಮ ಪಂಚಾಯಿತಿ ಆವರಣದಲ್ಲಿ ಸಭಾ ಕಾರ್ಯಕ್ರಮ ಹಾಗೂ ಅಲ್ಲಿಯೇ ಉಪಾಹಾರದ ವ್ಯವಸ್ಥೆ. ಗ್ರಾಮ ಪಂಚಾಯಿತಿ ಅಧ್ಯಕ್ಷರು ಮೀಸಲಾತಿಯಿಂದ ಬಂದ ಕೆಳವರ್ಗದ ಬಡ ವ್ಯಕ್ತಿ. ಹಾಗಾಗಿ, ಈ ಕಾರ್ಯಕ್ರಮ ಅವರ ಗಮನಕ್ಕೆ ಬಾರದೆ ಅವರ ಅನುಪಸ್ಥಿತಿಯಲ್ಲಿಯೇ ಯಾವುದೇ ಅಡೆತಡೆ ಇಲ್ಲದೆ ನಡೆದುಹೋಯಿತು.

ಎಲ್ಲಾ ಮುಗಿದ ಮೇಲೆ ಆತ ಬಂದು ತಮ್ಮ ಸಹವರ್ತಿಗಳೊಂದಿಗೆ, ತಾನು ಬಡವನಾಗಿದ್ದರಿಂದ ತನ್ನ ಗಮನಕ್ಕೆ ಬಾರದೇ ಕಾರ್ಯಕ್ರಮ ನಡೆಯಿತು, ಒಂದುವೇಳೆ ಶ್ರೀಮಂತರು ಅಧ್ಯಕ್ಷರಾಗಿದ್ದರೆ ಹೀಗಾಗಲು ಬಿಡುತ್ತಿದ್ದರೇ ಎಂದು ಗದ್ಗದಿತರಾಗಿ ಕೇಳುತ್ತಿದ್ದ ರೀತಿ ಎಂಥ ಕಲ್ಲು ಹೃದಯಗಳನ್ನೂ ಕರಗಿಸುವಂತಿತ್ತು!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ರೈತರ ಮೂಗಿಗೆ ಅರಿಸಿನ ಹಚ್ಚುವ ಪ್ರಯತ್ನ!

'ಹನ್ನೆರಡು ವರ್ಷಗಳ ಬಳಿಕ ಚಪ್ಪಲಿ ಧರಿಸಿದ ರೈತ' ಸುದ್ದಿ (ಪ್ರ.ವಾ., ಸೆ. 2) ಓದಿ ಈ ಪತ್ರ. ಅರಿಸಿನ ಬೆಳೆಗೆ ಒಂದು ಮಂಡಳಿ ಸ್ಥಾಪಿಸುವ ಪ್ರಧಾನಿ ಘೋಷಣೆ ಇದಕ್ಕೆ ಕಾರಣ. ಕರ್ನಾಟಕದಲ್ಲೂ ಅರಿಸಿನದ ಬೆಳೆಗಾರರಿದ್ದಾರೆ- ಮುಖ್ಯವಾಗಿ ಚಾಮರಾಜನಗರ, ಮೈಸೂರು, ಬೆಳಗಾವಿ ಜಿಲ್ಲೆಗಳಲ್ಲಿ. ಕಮಾಡಿಟಿ ಬೋರ್ಡ್‌ಗಳು ರಾಷ್ಟ್ರಮಟ್ಟದಲ್ಲಿ ಐದಿವೆ: ಕಾಫಿ, ಟೀ, ರಬ್ಬರ್, ತಂಬಾಕು ಹಾಗೂ ಸಂಬಾರ ಪದಾರ್ಥಗಳಿಗೆ. ಕೊನೆಯದರಲ್ಲಿ ಅರಿಸಿನ ಕೂಡ ಇದೆ. ಆದರೆ ನ್ಯಾಷನಲ್ ಟರ್ಮರಿಕ್ ಬೋರ್ಡನ್ನು ಟೊಬ್ಯಾಕೊ ಬೋರ್ಡ್ ಮಾದರಿಯಲ್ಲಿ ರೂಪಿಸುತ್ತಾರಂತೆ.

ದೇಶದ ಅರಿಸಿನ ಬೆಳೆಯ ಶೇ 35ರಷ್ಟು ಕ್ಷೇತ್ರ ಹಾಗೂ ಶೇ 47ರಷ್ಟು ಉತ್ಪಾದನೆ ಆಂಧ್ರಪ್ರದೇಶದಲ್ಲಿದೆ. ಅಲ್ಲಿನ ಕೃಷಿ ವಿಶ್ವವಿದ್ಯಾಲಯ (ಎಎನ್‌ಜಿಆರ್‌ಎಯು) ಕಡಪ ಜಿಲ್ಲೆಯ ಅರಿಸಿನ ಬೆಳೆಗಾರರ ಸಮಸ್ಯೆಗಳ ಬಗೆಗೆ 2020-21ರಲ್ಲಿ ಅಧ್ಯಯನ ನಡೆಸಿ ಇತ್ತೀಚೆಗೆ ವರದಿ ಬಿಡುಗಡೆ ಮಾಡಿದೆ. ಅದರ ಪ್ರಕಾರ, ರೈತರು ಬೆಲೆ ಹಾಗೂ ಅದರ ಏರಿಳಿತ, ಹಣ ಸಿಗುವಲ್ಲಿನ ವಿಳಂಬದ ಬಗೆಗೆ ಹೇಳಿದ್ದಾರೆ. ಬೋರ್ಡ್ ಸ್ಥಾಪಿಸಬೇಕು ಎಂದು ಕೇಳಿಲ್ಲ. ಕಾಫಿ ಬೋರ್ಡ್‌ಗಿಂತ ಟೀ ಬೋರ್ಡ್ ಪರಿಣಾಮಕಾರಿ ಕೆಲಸ ಮಾಡಿದೆ ಎನ್ನಬಹುದು. ರಬ್ಬರ್ ಬೋರ್ಡ್‌ಗೆ ಬೆಲೆ ಹಾಗೂ ಬೇಡಿಕೆ ಕುಸಿತದ ಬಗೆಗೆ ಹೆಚ್ಚೇನೂ ಮಾಡಲಾಗುತ್ತಿಲ್ಲ. ತಂಬಾಕಿನ ಕ್ಷೇತ್ರ ನಿಯಂತ್ರಿಸುವ ಪ್ರಯತ್ನ ನಡೆದಿದೆ. ಒಟ್ಟಾರೆ ಈ ಸರಕು ಮಂಡಳಿಗಳ ಕೆಲಸ ಮಾರುಕಟ್ಟೆ ಸಂಶೋಧನೆ, ರಫ್ತು ಉತ್ತೇಜನ ಹಾಗೂ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದಕ್ಕೆ ಸೀಮಿತವಾಗಿದೆ. ಕ್ಷೇತ್ರ ಮಟ್ಟದಲ್ಲಿ ರೈತರಿಗೆ ಅಷ್ಟು ಸಹಾಯ ಆಗದು.

ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ತೆಲಂಗಾಣದಲ್ಲಿ ಅರಿಸಿನ ಮಂಡಳಿಯನ್ನು ಸ್ಥಾಪಿಸುತ್ತೇವೆ ಎಂದು ಹೇಳುವುದು ಅದನ್ನು ಪ್ರಚಾರದ ಸರಕಾಗಿ ಬಳಸಿದಂತೆ. ಮೂಲಸೌಕರ್ಯ ಒದಗಿಸುವುದು ಕೇಂದ್ರ ಸರ್ಕಾರಕ್ಕೆ ಕಷ್ಟ, ಮೌಲ್ಯವರ್ಧನೆಯಲ್ಲಿ ಖಾಸಗಿ ರಂಗದ ಪಾತ್ರ ಹೆಚ್ಚು. ಹಾಗಾಗಿ ನರೇಂದ್ರ ಮೋದಿಯವರು ರೈತರ ಮೂಗಿಗೆ ಅರಿಸಿನ ಹಚ್ಚಲೆತ್ನಿಸಿದ್ದಾರೆ ಎನ್ನಬಹುದು. ಇದರ ಜತೆಗೆ ಮಾಡಿರುವ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪನೆಯ ಘೋಷಣೆಯೂ ಹಾಗೇ- ಅಂತಹ ಸಂಸ್ಥೆಗಳು ಕೆಲ ಕಾಲದ ನಂತರ ಸಂಪನ್ಮೂಲ ಕೊರತೆಯಂತಹ ಸಮಸ್ಯೆಗಳಿಂದ ಚೇತನಾರಹಿತವಾಗಿವೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ರನ್ನು– ವಿನ್ನು

ಬದಲಾಗಬಹುದು
ಇಂದಿನಿಂದ
ಕ್ರಿಕೆಟ್ ಪ್ರೇಮಿಗಳ
ದಿನಚರಿ,
ಎಷ್ಟು ರನ್ನು?
ಯಾರು ವಿನ್ನು?
ಇಷ್ಟೇ ಉಭಯ
ಕುಶಲೋಪರಿ...

ಮ.ಗು.ಬಸವಣ್ಣ
ನಂಜನಗೂಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಶ ತಾಣಗಳಲ್ಲಿ 'ವಿಶ್ವಕಪ್'



ನರೇಂದ್ರ ಮೋದಿ ಕ್ರೀಡಾಂಗಣ
ಮೊಟೇರಾ, ಅಹಮದಾಬಾದ್
ಆರಂಭ: 1983
2006: ನವೀಕರಣ
2020: ಮರುನಿರ್ಮಾಣ
1,32,000 ಸಾಮರ್ಥ್ಯ
ವಿಶ್ವಕಪ್ ಪಂದ್ಯಗಳು **5**
1987 : 1
1996 : 1
2011 : 3
ಈ ವರ್ಷ: 5 (ಉದ್ಘಾಟನೆ, ಫೈನಲ್ ಸೇರಿ)

ICC MEN'S CRICKET WORLD CUP INDIA 2023



ವಾಂಖೆಡೆ ಕ್ರೀಡಾಂಗಣ
ಮುಂಬೈ ಆರಂಭ: 1974
32,000 ಸಾಮರ್ಥ್ಯ
ವಿಶ್ವಕಪ್ ಪಂದ್ಯಗಳು **6**
1987 : 2
1996 : 1
2011 : 3
ಈ ವರ್ಷ: 5

ಎಂ.ಸಿ.ಎ ಕ್ರೀಡಾಂಗಣ
ಪುಣೆ ಆರಂಭ: 2012
37,000 ಸಾಮರ್ಥ್ಯ
ವಿಶ್ವಕಪ್ ಪಂದ್ಯಗಳು: ಆಗಿಲ್ಲ
ಈ ವರ್ಷ: 5

ಎಂ. ಚಿನ್ನಸ್ವಾಮಿ ಕ್ರೀಡಾಂಗಣ
ಬೆಂಗಳೂರು ಆರಂಭ: 1969
40,000 ಸಾಮರ್ಥ್ಯ
ವಿಶ್ವಕಪ್ ಪಂದ್ಯಗಳು **7**
1987 : 1
1996 : 1
2011 : 5
ಈ ವರ್ಷ: 5

ಭಾರತದ ಪ್ರಮುಖ ಹತ್ತು ನಗರಗಳ ಕ್ರೀಡಾಂಗಣಗಳಲ್ಲಿ ಗುರುವಾರದಿಂದ ನವೆಂಬರ್ 19ರವರೆಗೆ ನಡೆಯಲಿರುವ ಐಸಿಸಿ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಹತ್ತು ತಂಡಗಳು ಸೆಣಸಲಿವೆ. ಒಟ್ಟು 48 ಪಂದ್ಯಗಳು ಕ್ರಿಕೆಟ್ ರಸಿಕರ ಮನತಣಿಸುವ ನಿರೀಕ್ಷೆ ಗರಿಗೆದರಿದೆ.

ಎಂ.ಎ. ಚಿದಂಬರಂ ಕ್ರೀಡಾಂಗಣ
ಚೆನ್ನೈ ಆರಂಭ: 1916
50,000 ಸಾಮರ್ಥ್ಯ
ವಿಶ್ವಕಪ್ ಪಂದ್ಯಗಳು **7**
1987 : 2
1996 : 1
2011 : 4
ಈ ವರ್ಷ: 5

ಈಡನ್ ಗಾರ್ಡನ್
ಕೋಲ್ಕತ್ತ ಆರಂಭ: 1864
68,000 ಸಾಮರ್ಥ್ಯ
ವಿಶ್ವಕಪ್ ಪಂದ್ಯಗಳು **6**
1987 : 2
1996 : 1
2011 : 3
ಈ ವರ್ಷ: 5

ಬಿಆರ್‌ಎಸ್‌ಎಬಿವಿಇ ಕ್ರೀಡಾಂಗಣ
ಲಖನೌ ಆರಂಭ: 2017
63,000 ಸಾಮರ್ಥ್ಯ
ವಿಶ್ವಕಪ್ ಪಂದ್ಯಗಳು: ಆಗಿಲ್ಲ
ಈ ವರ್ಷ: 5

ಅರುಣ್ ಜೇಟ್ಲಿ ಕ್ರೀಡಾಂಗಣ
(ಫಿರೋಜ್ ಶಾ ಕೋಟ್ಲಾ)
ನವದೆಹಲಿ ಆರಂಭ: 1883
41,000 ಸಾಮರ್ಥ್ಯ
ವಿಶ್ವಕಪ್ ಪಂದ್ಯಗಳು **5**
1987 : 1
1996 : 1
2011 : 3
ಈ ವರ್ಷ: 5

ರಾಜೀವ್‌ಗಾಂಧಿ ಕ್ರೀಡಾಂಗಣ
ಹೈದರಾಬಾದ್ ಆರಂಭ: 2003
39,000 ಸಾಮರ್ಥ್ಯ
ವಿಶ್ವಕಪ್ ಪಂದ್ಯಗಳು: ಆಗಿಲ್ಲ
ಈ ವರ್ಷ: 3

ಎಚ್‌ಪಿಸಿಎ ಕ್ರೀಡಾಂಗಣ
ಧರ್ಮಶಾಲಾ ಆರಂಭ: 2003
23,000 ಸಾಮರ್ಥ್ಯ
ವಿಶ್ವಕಪ್ ಪಂದ್ಯಗಳು: ಆಗಿಲ್ಲ
ಈ ವರ್ಷ: 5

ಆತಿಥೇಯ ಬಳಗಕ್ಕೆ ವಿಶ್ವಕಪ್ ಜಯದ ಕನಸು...

ಅಹಮದಾಬಾದಿನ ಮೊಟೇರಾದಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಗುರುವಾರ ಏಕದಿನ ಕ್ರಿಕೆಟ್ ವಿಶ್ವಕಪ್ ಆರಂಭವಾಗಲಿದೆ. ನಾಲ್ಕನೇ ಬಾರಿ ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸಿರುವ ಭಾರತಕ್ಕೆ ಇದು ಅತ್ಯಂತ ಪ್ರತಿಷ್ಠಿತವಾಗಿದೆ. ತವರಿನ ಅಂಗಳದಲ್ಲಿ ವಿಶ್ವಕಪ್ ಜಯಿಸುವ ತವಕದಲ್ಲಿದೆ. ಕೆಲವು ಯುವ ಆಟಗಾರರಿಗೆ ಇದು ಮೊದಲ ವಿಶ್ವಕಪ್ ಟೂರ್ನಿಯಾಗಿದೆ. ಆದರೆ ಕೆಲ ಅನುಭವಿಗಳಿಗೆ ಅವರ ವೃತ್ತಿಜೀವನದ ಕೊನೆ ವಿಶ್ವಕಪ್ ಆಗಲಿದೆ. ಅದರಲ್ಲೂ ತಮ್ಮ ಸೀನಿಯರ್ ಆಟಗಾರರಿಗೆ ಗೆಲುವಿನ ವಿದಾಯ ಹೇಳುವಲ್ಲಿ ಈ ಯುವಪಡೆ ಸಫಲವಾದರೆ ಭವಿಷ್ಯದ ತಾರೆಗಳಾಗುವುದು ಖಚಿತ.

ಏಕದಿನ ಕ್ರಿಕೆಟ್‌ನಲ್ಲಿ ಭಾರತದ ಆಟಗಾರರ ಸಾಧನೆ

ರೋಹಿತ್ ಶರ್ಮಾ (ನಾಯಕ)
ಬಲಗೈ ಬ್ಯಾಟರ್
36 ವರ್ಷ
● ಪಂದ್ಯ: 251
● ರನ್: 10112

ಶುಭಮನ್ ಗಿಲ್
ಬಲಗೈ ಬ್ಯಾಟರ್
23 ವರ್ಷ
● ಪಂದ್ಯ: 35
● ರನ್: 1917

ಇಶಾನ್ ಕಿಶನ್, ವಿಕೆಟ್‌ಕೀಪರ್
ಎಡಗೈ ಬ್ಯಾಟರ್
25 ವರ್ಷ
● ಪಂದ್ಯ: 25
● ರನ್: 886

ಶ್ರೇಯಸ್ ಅಯ್ಯರ್
ಬಲಗೈ ಬ್ಯಾಟರ್
28 ವರ್ಷ
● ಪಂದ್ಯ: 47
● ರನ್: 1801

ವಿರಾಟ್ ಕೊಹ್ಲಿ
ಬಲಗೈ ಬ್ಯಾಟರ್
34 ವರ್ಷ
ಪಂದ್ಯ:281
ರನ್: 13083

ಕೆ.ಎಲ್. ರಾಹುಲ್
ವಿಕೆಟ್‌ಕೀಪರ್, ಬಲಗೈ ಬ್ಯಾಟರ್
31 ವರ್ಷ
● ಪಂದ್ಯ: 61
● ರನ್: 2291

ಸೂರ್ಯಕುಮಾರ್ ಯಾದವ್
ಬಲಗೈ ಬ್ಯಾಟರ್
33 ವರ್ಷ
● ಪಂದ್ಯ: 30
● ರನ್: 661

ಹಾರ್ದಿಕ್ ಪಾಂಡ್ಯ
ಆಲ್‌ರೌಂಡರ್
29 ವರ್ಷ
● ಪಂದ್ಯ: 82
● ರನ್: 1758
● ವಿಕೆಟ್: 79

ಆರ್. ಅಶ್ವಿನ್
ಸ್ಪಿನ್ ಆಲ್‌ರೌಂಡರ್
37 ವರ್ಷ
● ಪಂದ್ಯ: 115
● ರನ್: 707
● ವಿಕೆಟ್: 155

ರವೀಂದ್ರ ಜಡೇಜ, (34 ವರ್ಷ)
ಎಡಗೈ – ಆಲ್‌ರೌಂಡರ್
ಪಂದ್ಯ: 186
ರನ್: 2636
ವಿಕೆಟ್: 204

ಜಸ್‌ಪ್ರೀತ್ ಬೂಮ್ರಾ
ಬಲಗೈ ವೇಗಿ
29 ವರ್ಷ
● ಪಂದ್ಯ: 78
● ವಿಕೆಟ್: 129
● ರನ್: 73

ಮೊಹಮ್ಮದ್ ಶಮಿ
ಬಲಗೈ ವೇಗಿ
33 ವರ್ಷ
● ಪಂದ್ಯ: 94
● ವಿಕೆಟ್: 171
● ರನ್: 210

ಮೊಹಮ್ಮದ್ ಸಿರಾಜ್
ಬಲಗೈ ವೇಗಿ
29 ವರ್ಷ
● ಪಂದ್ಯ: 30
● ವಿಕೆಟ್: 54
● ರನ್: 37

ಕುಲದೀಪ್ ಯಾದವ್
ಎಡಗೈ ಸ್ಪಿನ್ನರ್
28 ವರ್ಷ
● ಪಂದ್ಯ: 90
● ವಿಕೆಟ್: 152
● ರನ್: 170

ಶಾರ್ದೂಲ್ ಠಾಕೂರ್
ಮಧ್ಯಮವೇಗಿ
31 ವರ್ಷ
ಪಂದ್ಯ: 44
ವಿಕೆಟ್: 63
ರನ್: 329

ಧರ್ಮಣ್ಣನಿಗೆ 'ರಾಜಯೋಗ'

ಧರ್ಮಣ್ಣ ಕಡೂರು

ಹಾಸ್ಯನಟ ಧರ್ಮಣ್ಣ ಕಡೂರು ನಾಯಕನಾಗಿ ನಟಿಸಿರುವ 'ರಾಜಯೋಗ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಲಿಂಗರಾಜ ಉಚ್ಚಂಗಿದುರ್ಗ ಕಥೆ ಬರೆದು ನಿರ್ದೇಶನ ಮಾಡಿರುವ ಚಿತ್ರವನ್ನು ಶ್ರೀರಾಮರತ್ನ ಪ್ರೊಡಕ್ಷನ್ಸ್ ನಿರ್ಮಿಸಿದೆ.

'ಗ್ರಾಮೀಣ ಭಾಗದಲ್ಲಿ ನಡೆಯುವ ಕಥೆ. ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಒಂದಲ್ಲ ಒಂದು ದಿನ ರಾಜಯೋಗ ಬಂದೇ ಬರುತ್ತದೆ ಎನ್ನುವುದೇ ಈ ಚಿತ್ರದ ಸಂದೇಶ. ತಂದೆ, ಮಗನ ನಡುವೆ ನಡೆಯುವ ಕಥೆ. ಜೋತಿಷ್ಯ ಸುಳ್ಳಲ್ಲ, ಆದರೆ ಅದನ್ನು ಕೆಲವರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಚಿತ್ರ ಸಾರುತ್ತದೆ' ಎಂದರು ನಿರ್ದೇಶಕರು.

'ನಾನಿಲ್ಲಿ ಕೂರಲು ಕಾರಣ 'ರಾಮಾ ರಾಮಾ ರೇ ತಂಡ'. ಈ ಚಿತ್ರದಲ್ಲಿ ಕಥೆ, ನಿರ್ದೇಶಕ ಇಬ್ಬರೂ ನಾಯಕರು. ನಾನೊಂದು ಪಾತ್ರ ಮಾಡಿದ್ದೇನೆ ಅಷ್ಟೇ. ಈ ಪಾತ್ರದಲ್ಲಿ ಕಾಮಿಡಿ, ಎಮೋಷನ್ ಎಲ್ಲವೂ ಇದೆ. ಗ್ರಾಮೀಣ ಭಾಗದಲ್ಲಿ ನಡೆಯುವ ಕಥೆಯಲ್ಲಿ ಸಂಬಂಧದ ಮೌಲ್ಯಗಳನ್ನು ಹಾಸ್ಯದ ಹಿನ್ನೆಲೆಯಲ್ಲಿ ಹೇಳಲು ಪ್ರಯತ್ನಿಸಿದ್ದೇವೆ. ಈ ಸಿನಿಮಾ ನೋಡುವಾಗ ಹಿರಿಯ ನಟರಾದ ಅನಂತನಾಗ್, ಶಶಿಕುಮಾರ್ ಖಂಡಿತ ನೆನಪಾಗುತ್ತಾರೆ' ಎಂದರು ನಟ ಧರ್ಮಣ್ಣ.

ನಾಯಕಿಯಾಗಿ ನಿರೀಕ್ಷಾ ರಾವ್ ನಟಿಸಿದ್ದಾರೆ. ಚಿತ್ರದಲ್ಲಿ 6 ಹಾಡುಗಳಿದ್ದು, ಅಕ್ಷಯ್ ರಿಶಭ್ ಸಂಗೀತ ಸಂಯೋಜನೆ ಮಾಡಿದ್ದಾರೆ. ವಿಷ್ಣುಪ್ರಸಾದ್ ಛಾಯಾಗ್ರಹಣ, ಬಿ.ಎಸ್.ಕೆಂಪರಾಜು ಅವರ ಸಂಕಲನ ಈ ಚಿತ್ರಕ್ಕಿದೆ.

ಸೆಟ್ಟೇರಿದ 'ರಾವಣ್'

ಈ ಹಿಂದೆ 'ಮಿಸ್ ನಂದಿನಿ' ಎಂಬ ಸಿನಿಮಾ ಮಾಡಿದ್ದ ಗುರುದತ್ ಎಸ್. ಆರ್. ನಿರ್ದೇಶನದ ನೂತನ ಚಿತ್ರ 'ರಾವಣ್' ಸೆಟ್ಟೇರಿದೆ. ಸಸ್ಪೆನ್ಸ್, ಥ್ರಿಲ್ಲರ್ ಚಿತ್ರಕ್ಕೆ ಕಡೂರು ಮೂಲದ ನೀಲಕಂಠಸ್ವಾಮಿ, ಜಗದೀಶ್ ಬಂಡವಾಳ ಹೂಡುತ್ತಿದ್ದಾರೆ.

'ಒಂದು ಕೇಸ್ ಅನ್ನು ಹತ್ತು ರೀತಿಯಲ್ಲಿ ಯೋಚಿಸಿ ಆರೋಪಿಯನ್ನು ಕಂಡು ಹಿಡಿಯುತ್ತಾರೆ. ಅದೇ ರೀತಿ ಈ ಚಿತ್ರದ ಕ್ಲೈಮಾಕ್ಸ್‌ನಲ್ಲಿ ರಾವಣ್ ಯಾರು ಎಂಬುದು ತಿಳಿಯಲಿದೆ' ಎನ್ನುತ್ತಾರೆ ನಿರ್ದೇಶಕರು.

'ಕಬ್ಜ' ಸೇರಿದಂತೆ ಕೆಲ ಚಿತ್ರಗಳಲ್ಲಿ ಖಳನಟನಾಗಿದ್ದ ರತನ್ ಚೆಂಗಪ್ಪ ಈ ಚಿತ್ರದ ನಾಯಕ. ಇವರು ತನಿಖಾಧಿಕಾರಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. 'ಹರಿಕಥೆ ಅಲ್ಲ ಗಿರಿಕಥೆ' ಖ್ಯಾತಿಯ ತಪಸ್ವಿನಿ ಪೂಣಚ್ಚ ನಾಯಕಿ ಪಾತ್ರದಲ್ಲಿದ್ದಾರೆ. ಸಿದ್ಲಿಂಗು ಶ್ರೀಧರ್, ಪ್ರಮೋದ್ ಶೆಟ್ಟಿ, ರಂಗಾಯಣ ರಘು, ರಘು ಪಾಂಡೇಶ್ವರ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಮನು ಛಾಯಾಗ್ರಹಣ, ವೆಂಕಿ ಯುಡಿವಿ ಸಂಕಲನ ಚಿತ್ರಕ್ಕಿದೆ. ಕೇರಳ, ಸಾಗರ, ಮಡಿಕೇರಿ, ಮಂಗಳೂರು ಮೊದಲಾದೆಡೆ ಚಿತ್ರೀಕರಣ ನಡೆಸಲು ತಂಡ ಆಲೋಚಿಸಿದೆ.

ತಪಸ್ವಿನಿ ಪೂಣಚ್ಚ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಸತ್ಯವನ್ನು ಎಷ್ಟೇ ಮುಚ್ಚಿಟ್ಟರೂ ಅದು ಹೊರಬರುತ್ತದೆ. ಇದು ರಾಜೀವ್ ಗಾಂಧಿ ಮತ್ತು ಸೋನಿಯಾ ಗಾಂಧಿಯವರ ನಿಜವಾದ ಛಾಯಾಚಿತ್ರ. ಈ ನಕಲಿ ಗಾಂಧಿ ಕುಟುಂಬವು ವಾಸ್ತವವಾಗಿ ಮೊಹಮ್ಮದ್ ಗಾಜಿಯ ಕುಟುಂಬವಾಗಿದೆ. ಈ ಫೋಟೊವನ್ನು 10 ಜನರಿಗೆ ಕಳುಹಿಸಿ, ದೇಶವನ್ನು ಜಾಗೃತಗೊಳಿಸಿ ಮತ್ತು ಭಾರತವನ್ನು ಪಾಕಿಸ್ತಾನವಾಗಿ ಬದಲಾಗದಂತೆ ರಕ್ಷಿಸಿ' ಎಂಬ ಬರಹವಿರುವ ಪೋಸ್ಟ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಇದು ತಿರುಚಿದ ಮಾಹಿತಿ ಇರುವ ಸುದ್ದಿಯಾಗಿದೆ.

ರಾಜೀವ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರು ಹಿಂದೂ ಸಂಪ್ರದಾಯದಂತೆ 1968ರ ಫೆ.25ರಂದು ಮದುವೆ ಆಗಿದ್ದಾರೆ. ಮಾರನೆಯ ದಿನ 'ದಿ ಇಂಡಿಯನ್ ಎಕ್ಸ್‌ಪ್ರೆಸ್' ಸೇರಿದಂತೆ ಹಲವು ಪತ್ರಿಕೆಗಳು ಈ ಬಗ್ಗೆ ಫೋಟೊ ಸಹಿತ ವರದಿ ಪ್ರಕಟಿಸಿವೆ. ಕಾಂಗ್ರೆಸ್ ವೆಬ್‌ಸೈಟ್ ಹಾಗೂ 'ಇಂದಿರಾ ಗಾಂಧಿ: ಆ್ಯನ್ ಇಂಟಿಮೇಟ್ ಬಿಯೋಗ್ರಫಿ' ಎನ್ನುವ ಪುಸ್ತಕದಲ್ಲಿಯೂ ಈ ವಿಷಯ ಪ್ರಸ್ತಾಪವಾಗಿದೆ. ಇನ್ನು ಈ ಚಿತ್ರದಲ್ಲಿ ಇರುವುದು ರಾಜೀವ್ ಹಾಗೂ ಸೋನಿಯಾ ಗಾಂಧಿ ಅವರೇ ಆಗಿದ್ದಾರೆ. ಮದುವೆಯ ನಂತರ ಫ್ಯಾನ್ಸಿಡ್ರೆಸ್ ಪಾರ್ಟಿಯನ್ನು ಆಯೋಜಿಸಲಾಗಿತ್ತು. ಆ ವೇಳೆ ಈ ಇಬ್ಬರೂ, ಮುಸ್ಲಿಂ ಸಮುದಾಯದವರು ತೊಡುವ ವೇಷ ಧರಿಸಿದ್ದರು. ಇದೇ ಸಂದರ್ಭದ ಮತ್ತೊಂದು ಫೋಟೊ 'ಇಂಡಿಯನ್ ಕಲ್ಚರ್' ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಇದು ಫ್ಯಾನ್ಸಿಡ್ರೆಸ್ ಪಾರ್ಟಿಯ ಫೋಟೊ ಎಂದು ಕ್ಯಾಪ್ಷನ್‌ನಲ್ಲಿ ಬರೆಯಲಾಗಿದೆ. ಆದ್ದರಿಂದ, ಗಾಂಧಿ ಕುಟುಂಬವು ಗಾಜಿಯ ಕುಟುಂಬ ಎನ್ನುವುದು ಸುಳ್ಳು ಸುದ್ದಿ ಎಂದು 'ದಿ ಕ್ವಿಂಟ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಸೋಲೇ ಗೆಲುವಿನ ಮೆಟ್ಟಿಲು

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಇಂಗ್ಲೆಂಡಿನ ಜೊನಾಥನ್ ಎಡ್ವರ್ಡ್ಸ್ ಜಗತ್ತಿನ ಅತ್ಯುತ್ತಮ ಟ್ರಿಪಲ್ ಜಂಪ್ ಪಟು ಎನಿಸಿಕೊಂಡಿರುವವರು. ಮೊದಲಬಾರಿ 1988ರ ಸೋಲ್ ಒಲಂಪಿಕ್ಸ್‌ನಲ್ಲಿ ಭಾಗವಹಿಸಿದಾಗ ಆತನಿಗೆ ಇಪ್ಪತ್ತೆರಡು ವರ್ಷ. ನೂರಾರು ದೇಶಗಳ ಅತ್ಯುತ್ತಮ ಆಟಗಾರರ ನಡುವೆ ಜೊನಾಥನ್ ಪಡೆದ ಸ್ಥಾನ ಇಪ್ಪತ್ಮೂರು. 1992ರ ಬಾರ್ಸಿಲೋನಾ ಒಲಂಪಿಕ್ಸ್‌ನಲ್ಲಿ ಮೂವತ್ತೈದನೇ ಸ್ಥಾನ.

ಬೇಸರವಾದರೂ ಜೊನಾಥನ್ ಧೃತಿಗೆಡಲಿಲ್ಲ. ತಮ್ಮ ತಯಾರಿಯಲ್ಲಿ ಏನು ತಪ್ಪಾಗಿದೆ ಎಂದು ನೋಡಿಕೊಂಡರು. ಅಭ್ಯಾಸದ ಅವಧಿಯನ್ನು ಹಿಗ್ಗಿಸಿದರು. 1996ರ ಅಟ್ಲಾಂಟಾ ಒಲಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲಲೇಬೇಕೆಂದು ಪಣ ತೊಟ್ಟರು. ಈ ನಡುವೆ 1995ರ ವಿಶ್ವಚಾಂಪಿಯನ್‌ಶಿಪ್‌ನಲ್ಲಿ ಹದಿನೆಂಟು ಮೀಟರುಗಳಿಗಿಂತ ದೂರ ಜಿಗಿದು ಆ ಸಾಧನೆ ಮಾಡಿದ ಮೊದಲ ಟ್ರಿಪಲ್ ಜಂಪ್ ಪಟುವಾದರು. ಇಪ್ಪತ್ತು ನಿಮಿಷಗಳ ಅಂತರದಲ್ಲಿ ತಮ್ಮ ದಾಖಲೆ ತಾವೇ ಮುರಿದು ಎರಡೆರಡು ವಿಶ್ವದಾಖಲೆ ನಿರ್ಮಿಸಿದ್ದರು. ಇವತ್ತಿಗೂ ಆ ವಿಶ್ವದಾಖಲೆ ಹಾಗೇ ಇದೆ.

ವಿಶ್ವಚಾಂಪಿಯನ್ ಆದೆ ಎಂದು ಒಲಂಪಿಕ್ಸ್ ತಯಾರಿ ನಿಲ್ಲಿಸಲಿಲ್ಲ. ಆದರೆ 1996ರ ಅಟ್ಲಾಂಟಾ ಒಲಂಪಿಕ್ಸ್‌ನಲ್ಲಿ ಕನಿಷ್ಠ ಅಂತರದಲ್ಲಿ ಚಿನ್ನ ತಪ್ಪಿ ಬೆಳ್ಳಿ ಪದಕ ಮಡಿಲಿಗೆ ಬಿತ್ತು. ಆದರೆ ಜೊನಾಥನ್‌ಗೆ ಸಮಾಧಾನವಿಲ್ಲ. ಒಲಂಪಿಕ್ಸ್‌ನಲ್ಲಿ ದೇಶದ ರಾಷ್ಟ್ರಗೀತೆ ಮೊಳಗಿಸುವ ಕನಸನ್ನು 1988ರಿಂದ ಎದೆಯಲ್ಲಿಟ್ಟುಕೊಂಡಿದ್ದ ಆಟಗಾರನಾತ. 2000ನೇ ಇಸವಿಯಲ್ಲಿ ಸಿಡ್ನಿಯಲ್ಲಿ ಒಲಂಪಿಕ್ಸ್. ಹನ್ನೆರಡು ವರ್ಷಗಳ ಸತತ ಪರಿಶ್ರಮ ಫಲ ಕೊಟ್ಟಿತು. ಆಸ್ಟ್ರೇಲಿಯಾದಲ್ಲಿ ಇಂಗ್ಲೆಂಡಿನ ರಾಷ್ಟ್ರಗೀತೆ ಅನುರಣಿಸಿತು.

ಸೋಲಿಗೆ ತಲೆಬಾಗದೇ ಸತತವಾಗಿ ಪ್ರಯತ್ನಪಟ್ಟರೆ ಗುರಿ ಸಾಧಿಸಬಹುದು ಎನ್ನುವುದಕ್ಕೆ ಅತ್ಯುತ್ತಮ ಉದಾಹರಣೆ ಇದು. ನಡೆಯುವಾಗ ಎಡವಿದೆವೆಂದು ನಡಿಗೆಯನ್ನೇ ನಿಲ್ಲಿಸಿದರೆ ಗುರಿ ತಲುಪಲು ಸಾಧ್ಯವಿಲ್ಲವೆಂಬ ಸರಳ ಸತ್ಯವನ್ನು ಅರ್ಥ ಮಾಡಿಕೊಳ್ಳದೇ ಎಷ್ಟೋ ಜನರು ಹತಾಶರಾಗುತ್ತಾರೆ. ಉದಾಹರಣೆಗೆ ಉದ್ಯೋಗಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವಾಗ ಒಂದೆರಡು ಸಲ ಅಥವಾ ಒಂದೆರಡು ವರ್ಷ ಪ್ರಯತ್ನ ಪಟ್ಟು ನಿರಾಶರಾಗಿ ಓದುವುದನ್ನೇ ನಿಲ್ಲಿಸಿಬಿಡುತ್ತಾರೆ. ಕಳೆದ ವರ್ಷ ನಮ್ಮ ಪರಿಚಿತರೊಬ್ಬರ ಮಗಳಿಗೆ ಎರಡು ಬ್ಯಾಂಕುಗಳಲ್ಲಿ ಒಟ್ಟಿಗೇ ನೌಕರಿ ಸಿಕ್ಕಿತ್ತು. ಸಿಹಿ ಕೊಡಲು ಬಂದ ತಂದೆ ಮಗಳು ನಲವತ್ತನೇ ಬಾರಿ ಪರೀಕ್ಷೆ ಬರೆದು ಆಯ್ಕೆಯಾಗಿದ್ದನ್ನು ಖುಶಿಯಿಂದ ಹೇಳಿದರು.

ನಿಜ, ಐದಾರು ವರ್ಷಗಳಷ್ಟು ದೀರ್ಘಾವಧಿ ಸಮಯ ಕೊಡುವುದು ಕಷ್ಟವೇ. ಆದರೆ ವಿದ್ಯಾಭ್ಯಾಸ ನಡೆಸುತ್ತಲೇ, ಉದ್ಯೋಗ ಮಾಡುತ್ತಲೇ ಪರೀಕ್ಷಾ ತಯಾರಿ ಮಾಡಿಕೊಳ್ಳಬಹುದು. ಸಮಯ ಹೊಂದಾಣಿಕೆ ಕಷ್ಟವಾದರೂ, ಸುಸ್ತಾದರೂ, ಮೊಬೈಲ್ ಸಹವಾಸ ಬಿಡುವುದು ಇಷ್ಟವಿಲ್ಲದಿದ್ದರೂ ಶಿಸ್ತಿನಿಂದ ಅಧ್ಯಯನ ನಡೆಸುವ ಪ್ರತಿಯೊಬ್ಬರೂ ಯಶಸ್ಸು ಕಾಣಬಹುದು. ಉದ್ಯೋಗ ಪಡೆಯುವುದು ಮಾತ್ರವಲ್ಲ, ನಮ್ಮ ಕ್ಷೇತ್ರ ಯಾವುದೇ ಇರಲಿ ತಾಳ್ಮೆಯಿಂದ ಮುನ್ನಡೆಯುವುದೊಂದೇ ಯಶಸ್ಸಿಗೆ ದಾರಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಅಕ್ಟೋಬರ್ 5, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಸಪ್ತಮಿ ಅಹೋರಾತ್ರ ನಕ್ಷತ್ರ: ಮೃಗಶಿರ ಗಂ. 19-40 ಯೋಗ: ವರಿಯಾನ್ ಗಂ. 29-22 ಕರಣ: ವಿಷ್ಟಿ ಗಂ. 18-03, ಕನ್ಯಾ ಮಾಸದ 18 ನೇ ದಿನ, ಮಳೆನಕ್ಷತ್ರ: ಹಸ್ತ 3. ರಾಹುಕಾಲ : ಮಧ್ಯಾಹ್ನ 01-30 – 03-00,
ಸೂರ್ಯೋದಯ : 06-23 ಸೂರ್ಯಾಸ್ತ : 06-14, ಮುಸ್ಲಿಂ ದಿನಾಂಕ : 19 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 1, 7

ಮೇಷ: ವೃತ್ತಿರಂಗದಲ್ಲಿ ಹೊಸ ವಿಚಾರಗಳ ಅನ್ವೇಷಣೆಯ ಕೈಗೂಡುವಿಕೆ ಆರ್ಥಿಕವಾಗಿ ತೊಂದರೆ ಕೊಟ್ಟರೂ ಮುಂದಿನ ದಿನದಲ್ಲಿ ಲಾಭ ತರಲಿದೆ. ಆರೋಗ್ಯದಲ್ಲಿ ಜ್ವರ ಅಥವಾ ಅಲರ್ಜಿಯಂತಹ ವ್ಯತ್ಯಾಸಗಳಾಗಬಹುದು.

ವೃಷಭ: ದವಸ ಧಾನ್ಯ ಹಾಗೂ ಮಸಾಲಾ ಸಾಮಗ್ರಿಗಳ ರಫ್ತು ವ್ಯಾಪಾರಿಗಳು ಮತ್ತು ಏಜೆಂಟರ್‌ಗಳಿಗೆ ವ್ಯವಹಾರದಲ್ಲಿ ಹೆಚ್ಚಿನ ಅನುಕೂಲವಾಗುವುದು. ಗೌರವಕ್ಕೆ ಚ್ಯುತಿ ಬಾರದಂತೆ ಕಾಪಾಡಿಕೊಳ್ಳಿ.

ಮಿಥುನ: ಈಗ ದೈವಬಲ ಉಂಟಾಗಿದ್ದು ನಿಮ್ಮ ಆರ್ಥಿಕ ಪರಿಸ್ಥಿತಿಯು ಸುಧಾರಣೆಯತ್ತ ಸಾಗಿರುವುದನ್ನು ಅನುಭವ ಪೂರ್ವಕವಾಗಿ ಕಾಣುವಿರಿ. ಆಲಸ್ಯತನವನ್ನು ದೂರಮಾಡಿಕೊಳ್ಳುವುದರಿಂದ ಅಭಿವೃದ್ಧಿಗೆ ಒಳ್ಳೆಯದು.

ಕರ್ಕಾಟಕ: ವಿದೇಶದಲ್ಲಿನ ಹುದ್ದೆಗೆ ಕರೆ ಬಂದು ಹೋಗುವ ತಯಾರಿಯನ್ನು ನಡೆಸುವಿರಿ. ಕಾರ್ಯಗಳನ್ನು ಕಾರ್ಯರೂಪಕ್ಕೆ ತರಲು ಹೆಚ್ಚಿನ ಪರಿಶ್ರಮದ ಅಗತ್ಯವಿದೆ. ಇಂಧನ ಮಾರಾಟಗಾರರಿಗೆ ಅನುಕೂಲಕರ ದಿನ.

ಸಿಂಹ: ರಿಯಲ್ ಎಸ್ಟೇಟ್ ವ್ಯವಹಾರ ಮಾಡುವವರಿಗೆ ಕಾರ್ಯ ಸಾಧನೆಯು ಅನುಕೂಲ ರೀತಿಯಲ್ಲಿ ಮುನ್ನಡೆಯಲಿದೆ. ಹಾಗೂ ವರಮಾನ ಹೆಚ್ಚಲಿದೆ. ಇನ್ನೊಬ್ಬರಿಗೆ ತಿಳಿವಳಿಕೆ ಹೇಳುವ ಕೆಲಸವನ್ನು ಈ ದಿನ ಮಾಡದಿರಿ.

ಕನ್ಯಾ: ವಿದ್ಯಾರ್ಥಿಗಳಿಗೆ ಆಲಸ್ಯದ ಪರ್ವತ ಎದುರಾಗುವುದರಿಂದ ವಿದ್ಯಾರ್ಜನೆಯಲ್ಲಿ ಸ್ವಲ್ಪ ಹಿನ್ನಡೆಯಾಗಲಿದೆ. ಸಹೋದ್ಯೋಗಿಗಳೊಂದಿಗಿನ ಬಾಂಧವ್ಯ ಇನ್ನಷ್ಟು ಉತ್ತಮಗೊಳ್ಳಲಿದೆ. ನೆಮ್ಮದಿಯುತ ಜೀವನ ಮುಂದುವರಿಸುವಿರಿ.

ತುಲಾ: ಮತ್ತೊಬ್ಬರ ಜೀವನದಲ್ಲಿ ನಿಮ್ಮ ಪಾತ್ರ ಮಹತ್ವದ್ದು ಎಂದು ತಿಳಿದು ಬಹಳ ಸಂತೋಷವಾಗುವುದು. ವೈದ್ಯಕೀಯ ವಿದ್ಯಾರ್ಥಿಗಳು ಓದಿನಲ್ಲಿ ಹೆಚ್ಚಿನ ಪರಿಶ್ರಮ ವಹಿಸಬೇಕಾಗುತ್ತದೆ. ಗೃಹನಿರ್ಮಾಣ ಕಾರ್ಯಕ್ಕೆ ಚಾಲನೆ.

ವೃಶ್ಚಿಕ: ಹಿಂಜರಿಕೆಯ ಮತ್ತು ಭಯದ ಸ್ವಭಾವ ಹಿನ್ನಡೆಗೆ ಕಾರಣವಾಗಿದೆ. ಹಾಗಾಗಿ ಯಾವುದಕ್ಕೂ ಹಿಮ್ಮೆಟ್ಟದೆ ಬೇರೆಯವರ ಮಾತಿಗೆ ಚಿಂತೆ ಪಡದೆ ನಿಗದಿತ ಸಮಯದಲ್ಲಿ ಕೆಲಸ ಮುಗಿಸುವ ಪ್ರಯತ್ನವಿರಲಿ.

ಧನು: ಅಂದುಕೊಂಡಷ್ಟು ನಿಮ್ಮ ಪರಿಸ್ಥಿತಿ ಕೆಟ್ಟದಾಗಿ ಇಲ್ಲದ ಕಾರಣವಾಗಿ ಹೆಚ್ಚಿನ ಲಾಭಗಳಿಸುವ ಉದ್ದೇಶವಿದ್ದಲ್ಲಿ ಸ್ವಲ್ಪ ಸಮಯ ತಾಳ್ಮೆಯಿಂದ ಕಾಯಬೇಕಾಗುವುದು. ಮೂಳೆಗೆ ಸಂಬಂಧಿಸಿದ ಸಮಸ್ಯೆ ನಿರ್ಲಕ್ಷಿಸಬೇಡಿ.

ಮಕರ: ಕುಟುಂಬ ನಿರ್ವಹಣೆಗಾಗಿ ಅಧಿಕ ಮಟ್ಟದ ಖರ್ಚು ಮಾಡಬೇಕಾದ ಪರಿಸ್ಥಿತಿ ಎದುರಾದರೂ ಆದಾಯಕ್ಕೇನೂ ಕೊರತೆ ಇರುವುದಿಲ್ಲ. ಸ್ನೇಹಪರ ಸ್ವಭಾವದಿಂದ ವೈಯಕ್ತಿಕ ಸ್ಥಾನ ಮಾನಗಳು ಲಭಿಸುವುದು.

ಕುಂಭ: ಅಧಿಕ ಕೋಪದಿಂದ ಕೆಲವು ವಿಚಾರದಲ್ಲಿ ನಷ್ಟದ ಅನುಭವ ಆಗುವಂತಾಗಲಿದೆ. ಹೊಸದಾಗಿ ಉದ್ಯೋಗಕ್ಕೆ ಸೇರಲು ಹೆಚ್ಚಿನ ಸಿದ್ಧತೆ ನಡೆಸುವಿರಿ. ಅನಿರೀಕ್ಷಿತವಾಗಿ ನಡೆಯುವ ಕೆಲಸಗಳಿಂದ ಸಂತಸ ಹೆಚ್ಚುವುದು.

ಮೀನ: ರಾಜಕೀಯ ವ್ಯಕ್ತಿತ್ವವನ್ನು ಹೊಂದಿರುವ ನಿಮಗೆ ಜನರ ಭಾವನೆಗಳಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕೆಂಬುದು ಚೆನ್ನಾಗಿ ತಿಳಿದಿದೆ, ಅದರಂತೆಯೇ ನಡೆಯಿರಿ. ಕೆಲಸಗಳಲ್ಲಿ ಅಭಿವೃದ್ಧಿ ಕಾಣುವಿರಿ.

ಪದಬಂಧ 5461

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಬುದ್ಧಿಯಿಲ್ಲದವನು (4)
3.ಮದುವೆ ಗಂಡಿನ ಆದಾಯ (4)
5.ಸುಲಭವಲ್ಲದುದು ಇದು (3)
7.ವಿಶೇಷವಾದ ದ್ರೋಹ (3)
9.ಲಾಂಗೂಲ ಹಿಡಿದಿರುವ ಹುಡುಗ (3)
10.ಮೊದಲನೆಯ ಹಿಂದೂ ಸಂವತ್ಸರ (3)
11.ಆಸೆ ಈ ರೀತಿ ಮೂಡಿದೆ (3)
13.ನಯವಾಗಿ ಹೊಳೆಯುತ್ತಿರುವ ಅಕ್ಷಿ (3)
14.ಕಡಲ ಹತ್ತಿರವಿರುವ ಆನೆಯ ಮರಿ (3)
16.ಮಾತೆಯಲ್ಲಿರುವ ಗೌರವ ಕಾಣುತ್ತಿದೆಯೇ? (3)
18.ಕರದಲ್ಲಿರುವ ಶವ (4)
19.ಪಕ್ಕದ ಗೃಹವಿದು (4)

ಮೇಲಿಂದ ಕೆಳಕ್ಕೆ
1.ಮನವಿಟ್ಟು ಮಾಡಿಕೊಂಡ ಅರಿಕೆ (3)
2.ನಗರದಿಂದ ತಂದಿರುವ ದಾಗೀನು (2)
3.ಭವನದ ಬಳಿರುವ ಕಾಡು (2)
4.ನಡುವೆಯೇ ಬಂದಿರುವ ಕಂಪನ (3)
6.ಎಲೆ ಅಡಕೆಯ ಸಂಚಿ (3)
8.ಅಶ್ವದ ಮೊಗವಿದು (5)
9.ಬಾಲ ಹಿಡಿದಿರುವ ಅನುಯಾಯಿ (5)
12.ಅದ್ವಿತೀಯವಾದುದನ್ನು ಹೀಗೆನ್ನಿ (3)
13.ಈತ ನೃತ್ಯ ಮಾಡುವವನು (3)
15.ದೇವರ ಸ್ತುತಿಯನ್ನು ಹಾಡುವುದು (3)
16.ಮಾರನೆಯ ದಿನ ಕಾಣಿಸಿದ ಮನ್ಮಥ! (2)
17.ಧಾನ್ಯದ ಹೊಡೆ ಇಲ್ಲಿದೆ (2)

1			2	■	3			4
	■	■	5	6		■	■	
7		8	■		■	9		
■	■		■		■		■	■
10			■	■	■	11		
■	■		■	12	■		■	■
13			■		■	14		15
	■	■	16		17	■	■	
18				■	19			

5460ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುವಾದ 3.ರಾಯಭಾರಿ
5.ರಮಣಿ 6.ಸಮಯ
8.ನಗಾರಿ 9.ವಿವರ
10.ಕಳಸ 12.ಜಟಿಲ
14.ಸಮಾಧಾನ
15.ತೆರೆಮರೆ

ಮೇಲಿಂದ ಕೆಳಕ್ಕೆ:
1.ಅಗಸ 2.ದರ 3.ರಾಣಿ
4.ರಿಪೇರಿ 7.ಯಮಕಿಂಕರ
8.ನಯವಂಚಕ
9.ವಿರಸ 11.ಸಕ್ಕರೆ
12.ಜನ 13.ಲತೆ

ಸುಡೊಕು 5847

	8			5		9		
1	9		6		4			3
	5			7			2	4
5		8	9					
	1					7	5	2
4		7					8	
2		5		9			3	
	6		3		5	2		7
3		9		6			4	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5846 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ ಆರ್ ಪೇಟೆ	₹7861-7900
ತಿಪಟೂರು	₹7100-8706

ಷೇರುಪೇಟೆ ವಹಿವಾಟು

286

65,512 ಹಿಂದಿನ ಅಂತ್ಯ — 65,226 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,528
ಇಂದಿನ ಅಂತ್ಯ	19,436
▼	92
ದಿನದ ಕನಿಷ್ಠ	19,333

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹537

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1690 (1715)
ಸೋಯಾ (ರಿಫೈನ್ಡ್)	₹875 (875)
ಸೂರ್ಯಕಾಂತಿ (ರಿಫೈನ್ಡ್)	₹875 (875)
ಪಾಮೋಲಿನ್	₹820 (822)

ವಿನಿಮಯ ದರ

$ ಡಾಲರ್	83.24
£ ಪೌಂಡ್	100.94
€ ಯುರೊ	87.37
¥ ಯೆನ್ (100ಕ್ಕೆ)	56

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹265-506
ದ್ವಿತಳಿ (ಬಿ.ವಿ)	₹300-612

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹143.50
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹127

(ಪ್ರತಿ ಕೆ.ಜಿಗೆ)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

17ನೇ ವಾರ್ಷಿಕ ಚಿರಸ್ಮರಣೆ



ಶ್ರೀ ಸುಧಾ ಕೃಷ್ಣಪ್ಪ, ಆನೇಕಲ್
ನಿಧನ: 13.09.2006
ನೀವು ನಮ್ಮನ್ನಗಲಿ ಇಂದಿಗೆ ಹದಿನೇಳು ವರ್ಷವಾಯಿತು. ನಿಮ್ಮ ಸವಿನೆನಪೇ ನಮಗೆ ದಿವ್ಯ ಚೇತನ, ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಪರಮಾತ್ಮನಲ್ಲಿ ಸದಾ ಪ್ರಾರ್ಥಿಸುವ ಹಾಗೂ ನಿಮ್ಮ ಸವಿನೆನಪಿನಲ್ಲಿರುವ
ಮಕ್ಕಳು, ಕುಟುಂಬ ಹಾಗೂ ಬಂಧು-ಮಿತ್ರರು

ವಾಹನೋದ್ಯಮ: ₹83 ಲಕ್ಷ ಕೋಟಿ ಮೌಲ್ಯದ ರಫ್ತು ನಿರೀಕ್ಷೆ

ನವದೆಹಲಿ (ಪಿಟಿಐ): ಭಾರತದ ವಾಹನ ವಲಯವು 2035ರ ವೇಳೆಗೆ ₹83 ಲಕ್ಷ ಕೋಟಿ ಮೌಲ್ಯದ ರಫ್ತು ಉದ್ಯಮವಾಗಿ ಬೆಳೆಯುವ ಸಾಮರ್ಥ್ಯ ಹೊಂದಿದೆ ಎಂದು ಅಮೆರಿಕದ ಆರ್ಥರ್ ಡಿ. ಲಿಟ್ಲ್ ಸಂಸ್ಥೆಯು ಹೇಳಿದೆ.

ವಿನ್ಯಾಸ, ಅಭಿವೃದ್ಧಿ ಮತ್ತು ತಯಾರಿಕೆ ಹಾಗೂ ಜಾಗತಿಕ ಮಾರುಕಟ್ಟೆಯನ್ನು ತಲುಪುವ ನಿಟ್ಟಿನಲ್ಲಿ ಭಾರತದ ವಾಹನ ಉದ್ಯಮವು ಜಾಗತಿಕ ಕೇಂದ್ರವಾಗಿ ಬೆಳೆಯಬಲ್ಲದು. ಇದಕ್ಕೆ ಪೂರಕವಾಗಿ ಕಂಪನಿಗಳು ತಮ್ಮ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕು ಎಂದು ಸಂಸ್ಥೆಯ ಭಾರತ ಮತ್ತು ದಕ್ಷಿಣ ಏಷ್ಯಾದ ವ್ಯವಸ್ಥಾಪಕ ಪಾಲುದಾರ ಬಾರ್ನಿಕ್ ಚಿತ್ರನ್ ಮೈತ್ರಾ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-25000
ಹೊಸತು	28000-45000
ಹಳತು	46000-48000
ಹೊನ್ನಾವರ	
ಹೊಸಚಾಲಿ	37500-41000
ಕಾರ್ಕಳ	
ಹಳತು	30000-48500
ಕುಮಟ	
ಚಿಪ್ಪು	32019-34509
ಕೋಕ	21019-33019
ಫ್ಯಾಕ್ಟರಿ	12019-25379
ಹಳೆಚಾಲಿ	39999-40939
ಹೊಸಚಾಲಿ	37809-40019
ಪುತ್ತೂರು	
ಹೊಸತು	34000-45000
ಶಿವಮೊಗ್ಗ	
ಬೆಟ್ಟೆ	42110-52600
ಗೊರಬಲು	16509-36088
ರಾಶಿ	38116-48921
ಸರಕು	54369-77740
ಶಿರಸಿ	
ಬೆಟ್ಟೆ	32280-43619
ಬಿಳಿಗೋಟು	22018-36539
ಚಾಲಿ	36699-41628
ಕೆಂಪುಗೋಟು	31618-34899
ರಾಶಿ	45599-48399

ವಿ–ಗಾರ್ಡ್‌ನಿಂದ ಹೊಸ ಫ್ಯಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿ–ಗಾರ್ಡ್ ಕಂಪನಿಯು 'ಇನ್‌ಸೈಟ್–ಜಿ' ಹೆಸರಿನ ಪ್ರೀಮಿಯಂ ಬಿಎಲ್‌ಡಿಸಿ ಹೈ–ಸ್ಪೀಡ್ ಫ್ಯಾನ್ ಬಿಡುಗಡೆ ಮಾಡಿದೆ.

5 ಸ್ಟಾರ್ ರೇಟಿಂಗ್ ಹೊಂದಿರುವ ಈ ಫ್ಯಾನ್ 5 ವರ್ಷಗಳ ವಾರಂಟಿಯನ್ನೂ ಒಳಗೊಂಡಿದೆ. 370 ಆರ್‌ಪಿಎಂ ಮೋಟರ್ ಇದ್ದು, ಧೂಳು ನಿವಾರಕ ಕೋಟಿಂಗ್ ಇರುವುದರಿಂದ ಸುಲಭವಾಗಿ ಸ್ವಚ್ಛಗೊಳಿಸಬಹುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕೇಂದ್ರ ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಹೇಳಿಕೆ

ಡಿಸೆಂಬರ್‌ಗೆ ತಗ್ಗಲಿದೆ ಹಣದುಬ್ಬರ

ನವದೆಹಲಿ (ರಾಯಿಟರ್ಸ್): ಚಿಲ್ಲರೆ ಹಣದುಬ್ಬರದ ಪ್ರಮಾಣವು ಡಿಸೆಂಬರ್ ವೇಳೆಗೆ ಇಳಿಕೆ ಕಾಣುವ ಸಾಧ್ಯತೆ ಇದೆ ಎಂದು ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಹೇಳಿದ್ದಾರೆ.

ಹಲವು ಅಂಶಗಳು ಚಿಲ್ಲರೆ ಹಣದುಬ್ಬರ ಇಳಿಕೆ ಆಗುತ್ತಿರುವುದನ್ನು ಸೂಚಿಸುತ್ತಿವೆ. ಡಿಸೆಂಬರ್ ವೇಳೆಗೆ ಹಣದುಬ್ಬರವು ಇಳಿಕೆ ಕಾಣುವ ಎಲ್ಲ ಸಾಧ್ಯತೆಗಳಿವೆ ಎಂದು ಅವರು ತಿಳಿಸಿದ್ದಾರೆ.

ಚಿಲ್ಲರೆ ಹಣದುಬ್ಬರವು ಜುಲೈ ಮತ್ತು ಆಗಸ್ಟ್‌ನಲ್ಲಿ ಆರ್‌ಬಿಐನ ಗರಿಷ್ಠ ಮಿತಿಗಿಂತಲೂ (ಶೇ 6) ಹೆಚ್ಚಿನ ಮಟ್ಟದಲ್ಲಿಯೇ ಇದೆ. ಜುಲೈನಲ್ಲಿ 15 ತಿಂಗಳುಗಳ ಗರಿಷ್ಠ ಮಟ್ಟವಾದ ಶೇಕಡ 7.44ಕ್ಕೆ ತಲುಪಿದ್ದ ಚಿಲ್ಲರೆ ಹಣದುಬ್ಬರ ಪ್ರಮಾಣವು ಆಗಸ್ಟ್‌ನಲ್ಲಿ ಶೇ 6.83ಕ್ಕೆ ಇಳಿಕೆ ಕಂಡಿದೆ. ತರಕಾರಿಗಳ ಬೆಲೆಯಲ್ಲಿ ಇಳಿಕೆ ಕಂಡುಬಂದಿದ್ದು ಆಗಸ್ಟ್‌ನಲ್ಲಿ ಚಿಲ್ಲರೆ ಹಣದುಬ್ಬರ ತಗ್ಗಲು ಪ್ರಮುಖ ಕಾರಣವಾಗಿದೆ.

ಮುಖ್ಯಾಂಶಗಳು
- ನಿಯಂತ್ರಣದತ್ತ ಆಹಾರ ವಸ್ತುಗಳ ದರ
- ಶೇ 5.9ಕ್ಕೆ ತಗ್ಗಲಿದೆ ವಿತ್ತೀಯ ಕೊರತೆ

ಆಹಾರ ವಸ್ತುಗಳ ದರವು ತೀವ್ರವಾಗಿ ಏರಿಕೆ ಕಂಡಿದ್ದು ಹಣದುಬ್ಬರ ಪ್ರಮಾಣ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ. ಪ್ರತಿಕೂಲ ಹವಾಮಾನದಿಂದಾಗಿಯೂ ತರಕಾರಿಗಳು ಮತ್ತು ಧಾನ್ಯಗಳ ಉತ್ಪಾದನೆ ಕಡಿಮೆ ಆಗುವಂತೆ ಮಾಡಿದೆ.

ಚಿಲ್ಲರೆ ಹಣದುಬ್ಬರವು ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 5.7ಕ್ಕೆ ಇಳಿಕೆ ಕಾಣಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜು ಮಾಡಿದೆ. 2024ನೇ ಹಣಕಾಸು ವರ್ಷದಲ್ಲಿ ಶೇ 5.4ಕ್ಕೆ ಇಳಿಕೆ ಆಗಲಿದೆ ಎಂದೂ ಅದು ಹೇಳಿದೆ.

2025–26ನೇ ಹಣಕಾಸು ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಶೇ 4.5ಕ್ಕಿಂತಲೂ ಕಡಿಮೆ ಮಟ್ಟದಲ್ಲಿ ನಿಯಂತ್ರಿಸಲು ಸರ್ಕಾರ ಬದ್ಧವಿರುವುದಾಗಿ ಸೋಮನಾಥನ್ ಹೇಳಿದ್ದಾರೆ. 2024ರ ಮಾರ್ಚ್ 31ಕ್ಕೆ ಅಂತ್ಯವಾಗುವ ಹಣಕಾಸು ವರ್ಷಕ್ಕೆ ವಿತ್ತೀಯ ಕೊರತೆಯನ್ನು ಶೇ 5.9ಕ್ಕೆ ತಗ್ಗಿಸುವ ಗುರಿಯನ್ನು ಸರ್ಕಾರ ಇಟ್ಟುಕೊಂಡಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ವಂಚನೆ: ಇಬ್ಬರು ಭಾರತೀಯರು ದೋಷಿ

ಹ್ಯೂಸ್ಟನ್(ಪಿಟಿಐ): ಕೋವಿಡ್ ಪಿಡುಗಿನ ನಂತರ ಜಾರಿಯಲ್ಲಿದ್ದ ಆರ್ಥಿಕ ನೆರವು ಯೋಜನೆಯಡಿ ಸಾಲ ಪಡೆದು ಕೋಟ್ಯಂತರ ರೂಪಾಯಿ ವಂಚಿಸಿ, ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ಭಾರತ ಮೂಲದ ಇಬ್ಬರನ್ನು ದೋಷಿಗಳು ಎಂದು ನ್ಯಾಯಾಂಗ ಇಲಾಖೆ ಹೇಳಿದೆ.

41 ವರ್ಷದ ನಿಶಾಂತ್ ಪಟೇಲ್ ₹ 3.9 ಕೋಟಿ ಹಾಗೂ 49 ವರ್ಷದ ಹರ್ಜೀತ್ ಸಿಂಗ್ ₹ 7.8 ಕೋಟಿ ವಂಚಿಸಿದ್ದಾರೆ. ಸಾಲ ಪಡೆಯುವುದಕ್ಕಾಗಿ ಸುಳ್ಳು ಅರ್ಜಿಗಳನ್ನು ಸಲ್ಲಿಸಿದ್ದಾಗಿ ಇಬ್ಬರೂ ಒಪ್ಪಿಕೊಂಡಿದ್ದಾರೆ ಎಂದು ಇಲಾಖೆ ಹೇಳಿದೆ.

ಈ ಇಬ್ಬರಿಗೆ ಶಿಕ್ಷೆಯ ಪ್ರಮಾಣವನ್ನು ಮುಂದಿನ ವರ್ಷ ಜನವರಿ 4ರಂದು ಘೋಷಿಸಲಾಗುತ್ತದೆ. ಗರಿಷ್ಠ 5 ವರ್ಷ ಜೈಲು ಶಿಕ್ಷೆ ವಿಧಿಸಲು ಅವಕಾಶ ಇದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧ: ಪ್ರೈಮ್ ಡೇಟಾಬೇಸ್ ವರದಿ

ಐಪಿಒ: ತಗ್ಗಿದ ಬಂಡವಾಳ ಸಂಗ್ರಹ

ಮುಂಬೈ (ಪಿಟಿಐ): ಆರಂಭಿಕ ಸಾರ್ವಜನಿಕ ಹೂಡಿಕೆ (ಐಪಿಒ) ಮೂಲಕ ಕಂಪನಿಗಳು ಬಂಡವಾಳ ಸಂಗ್ರಹಿಸುವ ಪ್ರಮಾಣವು ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಶೇ 26ರಷ್ಟು ಇಳಿಕೆ ಕಂಡಿದೆ ಎಂದು ಪ್ರೈಮ್ ಡೇಟಾಬೇಸ್ ಸಂಸ್ಥೆ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ 31 ಕಂಪನಿಗಳು ಐಪಿಒಗೆ ಬಂದಿದ್ದು, ಒಟ್ಟು ₹26,300 ಕೋಟಿ ಬಂಡವಾಳ ಸಂಗ್ರಹ ಆಗಿದೆ. ಆದರೆ ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ 14 ಐಪಿಒ ಮೂಲಕ ₹35,456 ಕೋಟಿ ಬಂಡವಾಳ ಸಂಗ್ರಹ ಆಗಿತ್ತು ಎಂದು ಅದು ಮಾಹಿತಿ ನೀಡಿದೆ.

ಆದರೆ, 2022ರ ಮೇ ಎಲ್‌ಐಸಿ ಐಪಿಒ ಹೊರತುಪಡಿಸಿದರೆ ಈ ಬಾರಿ ಬಂಡವಾಳ ಸಂಗ್ರಹವು ಶೇ 76ರಷ್ಟು ಹೆಚ್ಚಾಗಿದೆ ಎಂದು ತಿಳಿಸಿದೆ.

ಈಕ್ವಿಟಿ ಮೂಲಕ ಸಂಗ್ರಹಿಸುವ ಬಂಡವಾಳವು 2022ರ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ₹43,694 ಕೋಟಿಯಷ್ಟು ಇತ್ತು. 2023ರ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ಶೇ 69ರಷ್ಟು ಹೆಚ್ಚಾಗಿ, ₹73,747 ಕೋಟಿಗೆ ಏರಿಕೆ ಕಂಡಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪ್ರಣವ್ ಹಲ್ದಿಯಾ ಹೇಳಿದ್ದಾರೆ.

ಮುಖ್ಯಾಂಶಗಳು
- 28 ಕಂಪನಿಗಳ ಐಪಿಒಗೆ ಸೆಬಿ ಒಪ್ಪಿಗೆ
- ಐಪಿಒಗಾಗಿ ಸೆಬಿ ಒಪ್ಪಿಗೆ ಕಾಯುತ್ತಿವೆ 41 ಕಂಪನಿಗಳು

ಎಸ್‌ಎಂಇ ಪ್ಲಾಟ್‌ಫಾರಂ, ಆರ್‌ಇಐಟಿ, ಒಎಫ್‌ಎಸ್, ಅರ್ಹ ಸಾಂಸ್ಥಿಕ ನೀಡಿಕೆ (ಕ್ಯುಐಪಿ) ಮತ್ತು ಸಾರ್ವಜನಿಕ ಸಾಲ ನೀಡಿಕೆ ಮೂಲಕ ಸಂಗ್ರಹ ಮಾಡಿರುವ ಬಂಡವಾಳವನ್ನೂ ಇದು ಒಳಗೊಂಡಿದೆ ಎಂದು ಅವರು ತಿಳಿಸಿದ್ದಾರೆ.

ಆಫರ್ ಫಾರ್ ಸೇಲ್ (ಒಎಫ್‌ಎಸ್) ಮೂಲಕ ₹1,446 ಕೋಟಿ ಬಂಡವಾಳ ಸಂಗ್ರಹ ಆಗಿದೆ. ಹಿಂದಿನ ಅವಧಿಯಲ್ಲಿ ₹15,541 ಕೋಟಿ ಸಂಗ್ರಹ ಆಗಿತ್ತು. ಕ್ಯುಐಪಿ ಮೂಲಕ ಸಂಗ್ರಹಿಸುವ ಮೊತ್ತವು ₹20,748 ಕೋಟಿಯಿಂದ ₹5,238 ಕೋಟಿಗೆ ಕುಸಿತ ಕಂಡಿದೆ ಎಂದು ಸಂಸ್ಥೆಯು ಹೇಳಿದೆ.

ಐಪಿಒ ಮೂಲಕ ಮ್ಯಾನ್‌ಕೈಂಡ್ ಫಾರ್ಮಾ ₹4,326 ಕೋಟಿಯಷ್ಟು ಗರಿಷ್ಠ ಬಂಡವಾಳ ಸಂಗ್ರಹಿಸಿದೆ. ಜೆಎಸ್‌ಡಬ್ಲ್ಯು ಇನ್ಫ್ರಾಸ್ಟ್ರಕ್ಚರ್ ₹2,800 ಕೋಟಿ ಮತ್ತು ಆರ್.ಆರ್. ಕೇಬಲ್ ₹1,964 ಕೋಟಿ ಬಂಡವಾಳ ಸಂಗ್ರಹಿಸಿವೆ.

ಹಲವು ವಲಯಗಳು ಐಪಿಒಗೆ ಬಂದಿವೆಯಾದರೂ ಬ್ಯಾಂಕಿಂಗ್, ಫೈನಾನ್ಶಿಯಲ್ ಸರ್ವಿಸಸ್ ಆ್ಯಂಡ್ ಇನ್ಶುರೆನ್ಸ್ (ಬಿಎಫ್‌ಎಸ್‌ಐ) ವಲಯದ ಕಂಪನಿಗಳು ಕೇವಲ ₹1,525 ಕೋಟಿ ಬಂಡವಾಳ ಸಂಗ್ರಹಿಸಿವೆ. ಹಿಂದಿನ ಅವಧಿಯಲ್ಲಿ ಐಪಿಒ ಮೂಲಕ ಸಂಗ್ರಹ ಆಗಿದ್ದ ಮೊತ್ತದಲ್ಲಿ ಈ ವಲಯದ ಪಾಲು ಶೇ 61ರಷ್ಟು ಇತ್ತು ಎಂದು ಸಂಸ್ಥೆಯು ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9606385001, 9606523307

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Accounts & Finance

ವಿಜಯನಗರ ಬೆಂಗಳೂರು ಮತ್ತು ಸುತ್ತಮುತ್ತ ಅನುಭವಿ ಅಕೌಂಟೆಂಟ್ ಬೇಕಾಗಿದ್ದಾರೆ. ಮಹಿಳೆಯರಿಗೆ ಆದ್ಯತೆ. ಸಂಪರ್ಕಿಸಿ: 9591050749 /08041158379

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳಿಗೆ ಸೂಕ್ತ ವೇದಿಕೆ!
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ.
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9845114560 | +91 9900428036
+91 9731810277 | 080- 45557163/164

ಕ್ಲಾಸಿಫೈಡ್ಸ್
ADMISSION CORNER



At Hindustan Business School, we believe students learn best when they experience authentic real world learning. That's why we've forged strong industry collaborations to provide you with rich hands-on experiences that set you apart. HBS offers MBA aspirants the chance to intern, gain invaluable insights and build a network that will help them advance in their future careers. Through our 'Earn while you Learn' program, students benefit from paid internships, providing them with a taste of corporate life even before graduation. This one-of-a-kind initiative is a pioneering collaboration between Industry and Academia, ensuring you're not just prepared for the global industrial landscape, but are also well ahead of the game. Enroll at Hindustan Business School today.
HBS HINDUSTAN BUSINESS SCHOOL
8971404357
9740037853
HINDUSTAN BUSINESS SCHOOL
P. B. No. 3776, Ashwathanagar, Marathahalli, Bengaluru 560037
Ph: +91-80-25238650, 25232217
Email: contactus@hindustanacademy.edu.in
www.hindustanacademy.edu.in

Wanted

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500 - 67,000/- SSLC, PUC,Degree ಸಂಪರ್ಕಿಸಿ 9945791526, 8861041526

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಪ್ರವಾಸ

Travel

22.11.2023 ವಿಜಯವಾಡ ಭದ್ರಾಚಲಂ ವಾಸವಿಪೆನುಗೊಂಡ ಕಲ್ಕತ್ತ,ಗಂಗಾಸಾಗರ್ ಪೂರಿಜಗನ್ನಾಥ್ ಕೋನಾರ್ಕ್,ಭುವನೇಶ್ವರ್. 11.12.2023 16 ದಿನಗಳ ಅಷ್ಟ ಜ್ಯೋತಿರ್ಲಿಂಗಗಳು ಮಹಾರಾಷ್ಟ್ರ,ಮಧ್ಯಪ್ರದೇಶ ಗುಜರಾತ್ ಸಂಪರ್ಕಿಸಿ: ವಿಷ್ಣು ಟೂರ್ಸ್ ಅಂಡ್ ಟ್ರಾವಲ್ಸ್ ಬೆಂಗಳೂರು.70 9342287551 8050629305

ಶಿವನಂದಿ ಟ್ರಾವಲ್ಸ್, ಹನುಮಂತನಗರ, ಬೆಂಗಳೂರು.ಕಾಶಿಯಾತ್ರ ವಿಮಾನದಲ್ಲಿ 10ದಿನ 30.10.2023ದೆಹಲಿ,ಆಗ್ರಾ ಮಥುರಾ,ನೈಮಿಷಾರಣ್ಯ ಅಯೋಧ್ಯ,ಕಾಶಿ,ಗಯಾ ವಾರಾಣಸಿ,ಪ್ರಯಾಗ್ ರಾಜ್. 9036056352, 9481027363.

ಗುಜರಾತ್ ಪ್ರವಾಸ 12ದಿನ 26.10.23. ನೇಪಾಳ, ಮುಕ್ತಿನಾಥ್,ಕಾಶಿ, 11ದಿನ 21.11.23. ಸಿಂಗಪುರ್ ಮಲೇಶಿಯಾ 7ದಿನ 4.12.23. ಪುರಿಜಗನ್ನಾಥ್ ಪ್ರವಾಸ 3ದಿನ 15.12.23. ರಾಜಸ್ಥಾನ್ ಪ್ರವಾಸ 9ದಿನ 20.12.23.ನಂದಿನಿ ಟೂರಿಸ್ಟ್ 9916574089

25.10.2023, 26.11.2023, ದೆಹಲಿ, ಹರಿದ್ವಾರ್, ಅಯೋಧ್ಯಾ, ಕಾಶಿ,ಗಯಾ, ಪ್ರಯಾಗ್‌ರಾಜ್25.11.2023 ರಾಜಸ್ಥಾನ್ ಪ್ರವಾಸ 3.12.2023 ಗುಜರಾತ್, ಮಧ್ಯಪ್ರದೇಶ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವೈಯಕ್ತಿಕ

Change of Name

CHANGE OF NAME
I MANJULA RAJANNA (Old name) W/o K RAJANNA Resident of Kannamangala Village & post, Devanahalli Taluk, Banglaore Rural District, Have Changed My Name From MANJULA RAJANNA to J.N.MANJULA Vide affidavit Dated : 3-10-2023 Sworn before the notary A.Narayanaswamy at Devanahalli.

ವ್ಯಾಪಾರ

Business to Business

Others

ಮಹಿಳೆಯರಿಗೆ ರೇಷ್ಮೆ ಸೀರೆ, ಸಿಲ್ಕ್ ಸೀರೆ, ಕಾಟನ್ ಸೀರೆ, ಚೂಡಿದಾರಗಳು, ಕಂತಿನ ಮುಖಾಂತರ ಮಾರಾಟ ಮಾಡಲಾಗುತ್ತದೆ ಸಂಪರ್ಕಿಸಿ: 8892501007/ 9606701007

ರಿಲಯನ್ಸ್‌ನಿಂದ ಬಹು ಉಪಯೋಗಿ ಬ್ಯಾಟರಿ ಬಿಡುಗಡೆ

ಗ್ರೇಟರ್ ನೊಯಿಡಾ (ರಾಯಿಟರ್ಸ್): ರಿಲಯನ್ಸ್ ಕಂಪನಿಯು ವಿದ್ಯುತ್ ಚಾಲಿತ ವಾಹನಗಳಿಗೆ ರಿಮೂವಬಲ್ ಮತ್ತು ಸ್ವಾಪ್ ಮಾಡುವ ಬ್ಯಾಟರಿಯನ್ನು ಅನಾವರಣ ಮಾಡಿದೆ. ಇನ್‌ವರ್ಟರ್ ಜೊತೆಗೆ ಗೃಹೋಪಯೋಗಿ ಸಾಧನಗಳಲ್ಲಿಯೂ ಈ ಬ್ಯಾಟರಿ ಬಳಸಬಹುದು ಎಂದು ಕಂಪನಿ ತಿಳಿಸಿದೆ.

ನವೀಕರಿಸಬಲ್ಲ ಇಂಧನಗಳಿಗೆ ಸಂಬಂಧಿಸಿದ ವಸ್ತುಪ್ರದರ್ಶನದಲ್ಲಿ ಕಂಪನಿಯು ಈ ಬಹುಉಪಯೋಗಿ ಬ್ಯಾಟರಿಯನ್ನು ಪ್ರದರ್ಶಿಸಿದೆ.

ಬ್ಯಾಟರಿಯನ್ನು ವಾಹನಗಳಿಗೆ ಬಳಸುವುದಷ್ಟೇ ಅಲ್ಲದೆ ಟಿ.ವಿ, ಮಿಕ್ಸಿ... ಹೀಗೆ ಗೃಹೋಪಯೋಗಿ ಉಪಕರಣಗಳಿಗೂ ಬಳಕೆ ಮಾಡುವ ಉದ್ದೇಶದಿಂದ ರೂಪಿಸಲಾಗಿದೆ ಎಂದು ಹೆಸರು ಬಹಿರಂಗಪಡಿಸಬಾರದು ಎನ್ನುವ ಷರತ್ತಿನೊಂದಿಗೆ ಕಂಪನಿಯ ಕಾರ್ಯನಿರ್ವಾಹಕ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಿಲಯನ್ಸ್‌ನ ಬ್ಯಾಟರಿ ಸ್ವ್ಯಾಪ್ ಕೇಂದ್ರಗಳಲ್ಲಿ ಬ್ಯಾಟರಿ ಬದಲಿಸಿಕೊಳ್ಳಬಹುದು ಅಥವಾ ಮನೆಗಳಲ್ಲಿ ಸೌರ ವಿದ್ಯುತ್ ಫಲಕಗಳ ಮೂಲಕವೂ ಚಾರ್ಜ್ ಮಾಡಬಹುದು ಎಂದು ಅವರು ಹೇಳಿದ್ದಾರೆ. ಕಂಪನಿಯು ಈ ಬ್ಯಾಟರಿಗಳ ಮಾರಾಟವನ್ನು ಯಾವಾಗಿನಿಂದ ಆರಂಭಿಸಲಿದೆ ಎನ್ನುವ ಕುರಿತು ಅವರು ಮಾಹಿತಿ ನೀಡಿಲ್ಲ.

ಮುಂಬೈ ಧಾರಣೆ

ಶೇಂಗಾ

04-10-2023

ಜಾವಾ 70/80(ಹೊಸ)	12400-12500
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	10700-10800
ದಪ್ಪ ಗುಜರಾತ್(ಹೊಸ)	11500-11600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1725)
ಒಂದು ವಾರದ ಡೆಲಿವರಿ	1695 (1720)
ಸೋಯಾ ಕಚ್ಚಾ	835 (840)
ಪಾಮ್ ವಾರದ ಡೆಲಿವರಿ	818 (820)
ಸೂರ್ಯಕಾಂತಿ ಎಣ್ಣೆ ಕಚ್ಚಾ	805 (800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,350 (56,400)
ಬೆಳ್ಳಿ ಕೆ.ಜಿ 67,400 (67,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಉಜ್ಜಯಿನಿ: ಆರೋಪಿ ಮನೆ ನೆಲಸಮ

ಉಜ್ಜಯಿನಿ (ಮಧ್ಯಪ್ರದೇಶ) (ಪಿಟಿಐ): ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ 12 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪಿಯ ಮನೆಯನ್ನು ಬುಧವಾರ ಸ್ಥಳೀಯ ಆಡಳಿತ ನೆಲಸಮಗೊಳಿಸಿದೆ.

ಅತ್ಯಾಚಾರ ಎಸಗಿದ್ದ ಆಟೊ ಚಾಲಕ ಭರತ್ ಸೋನಿ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಸರ್ಕಾರಕ್ಕೆ ಸೇರಿದ ಜಾಗದಲ್ಲಿ ಆರೋಪಿಯು ನಿರ್ಮಿಸಿದ್ದ ಮನೆ ಮತ್ತು ಅಂಗಡಿಯನ್ನು ನೆಲಸಮಗೊಳಿಸಲಾಗಿದೆ' ಎಂದು ನಗರ ಪೊಲೀಸ್ ವರಿಷ್ಠಾಧಿಕಾರಿ (ಸಿಎಸ್‌ಪಿ) ದೀಪಿಕಾ ಶಿಂದೆ ತಿಳಿಸಿದ್ದಾರೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹10900
ಎಸಿ	₹6300
ಆರ್‌ಪಿ	₹9500
ಆರ್‌ಸಿ	₹5830

ನಿಜ್ಜರ್ ಹತ್ಯೆ: ಸಮಗ್ರ ತನಿಖೆಗೆ ಅಮೆರಿಕ ಪ್ರತಿಪಾದನೆ

ವಾಷಿಂಗ್ಟನ್ (ಪಿಟಿಐ): ಖಾಲಿಸ್ತಾನ ಪರ ಹೋರಾಟಗಾರ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯ ಹಿಂದೆ ಭಾರತದ ಕೈವಾಡವಿದೆ ಎಂಬ ಕೆನಡಾ ಸರ್ಕಾರದ ಆರೋಪ ಗಂಭೀರವಾಗಿದ್ದು, ಈ ಕುರಿತು ಸಮಗ್ರ ತನಿಖೆ ನಡೆಸುವ ಅಗತ್ಯವಿದೆ ಎಂದು ಅಮೆರಿಕ ಪ್ರತಿಪಾದಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೈಟ್‌ಹೌಸ್‌ನ ರಾಷ್ಟ್ರೀಯ ಭದ್ರತಾ ಮಂಡಳಿಯ (ಕಾರ್ಯತಂತ್ರ ಸಂವಹನ) ಸಂಯೋಜಕ ಜಾನ್ ಕಿರ್ಬಿ, 'ನಿಜ್ಜರ್ ಹತ್ಯೆ ಕುರಿತು ಭಾರತದ ಮೇಲಿನ ಆರೋಪ ಗಂಭೀರ ಸ್ವರೂಪದ್ದಾಗಿದೆ. ಈ ಕುರಿತು ತನಿಖೆ ನಡೆಸುವ ಅಗತ್ಯವಿದೆಯೆಂದು ಈ ಹಿಂದೆಯೇ ನಾವು ಹೇಳಿದ್ದೇವೆ. ತನಿಖೆಗೆ ಭಾರತವು ಸಹಕಾರ ಕೂಡ ನೀಡಬೇಕಿದೆ' ಎಂದರು.

ಬಿಧೂಢಿ ಪ್ರಕರಣ 10ರಂದು ವಿಚಾರಣೆ

ನವದೆಹಲಿ: ಲೋಕಸಭೆಯ ವಿಶೇಷ ಅಧಿವೇಶನದಲ್ಲಿ ಬಿಜೆಪಿ ಸಂಸದ ರಮೇಶ್ ಬಿಧೂಢಿ ಅವರು ಬಿಎಸ್‌ಪಿ ಸಂಸದ ಡ್ಯಾನಿಶ್ ಅಲಿ ವಿರುದ್ಧ ನೀಡಿದ್ದ ಆಕ್ಷೇಪಾರ್ಹ ಹೇಳಿಕೆ ಕುರಿತು ದಾಖಲಾಗಿರುವ ದೂರುಗಳ ಬಗ್ಗೆ ಹಕ್ಕುಬಾಧ್ಯತಾ ಸಮಿತಿಯು ಅ.10ರಂದು ವಿಚಾರಣೆ ಆರಂಭಿಸಲಿದೆ.

ಮುಂದಿನ ಮಂಗಳವಾರ ವಿಚಾರಣೆಗೆ ಹಾಜರಾಗುವಂತೆ ಬಿಧೂಢಿ ಅವರಿಗೆ ಸಮಿತಿ ಸಮನ್ಸ್ ಜಾರಿ ಮಾಡಿದೆ.

ರಸಾಯನವಿಜ್ಞಾನ: ಅಮೆರಿಕದ ಮೂವರಿಗೆ ನೊಬೆಲ್ ಪುರಸ್ಕಾರ

ಸ್ಟಾಕ್‌ಹೋಮ್ (ಎಎಫ್‌ಪಿ): 'ಕ್ವಾಂಟಮ್ ಡಾಟ್ಸ್' ಎಂದು ಕರೆಯಲಾಗುವ ಅತ್ಯಂತ ಚಿಕ್ಕ ಕಣಗಳ ಕುರಿತು ನಡೆಸಿದ ಸಂಶೋಧನೆಗಾಗಿ ಅಮೆರಿಕದ ಮೂವರು ವಿಜ್ಞಾನಿಗಳನ್ನು ರಸಾಯನವಿಜ್ಞಾನ ನೊಬೆಲ್ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.



ಮಾಂಗಿ ಬವೆಂಡಿ

ಅಲೆಕ್ಸಿ ಎಕಿಮೋವ್

ಲೂಯಿಸ್ ಬ್ರೂಸ್

ಫ್ರಾನ್ಸ್ ಸಂಜಾತ ಮಾಂಗಿ ಬವೆಂಡಿ, ಲೂಯಿಸ್ ಬ್ರೂಸ್ ಹಾಗೂ ರಷ್ಯಾ ಮೂಲದ ಅಲೆಕ್ಸಿ ಎಕಿಮೋವ್ ನೊಬೆಲ್ ಪುರಸ್ಕಾರಕ್ಕೆ ಭಾಜನರಾದ ವಿಜ್ಞಾನಿಗಳು ಎಂದು ರಾಯಲ್ ಸ್ವೀಡಿಷ್ ಅಕಾಡೆಮಿ ತಿಳಿಸಿದೆ.

62 ವರ್ಷದ ಬವೆಂಡಿ ಅವರು ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ(ಎಂಐಟಿ) ಪ್ರಾಧ್ಯಾಪಕರಾಗಿದ್ದಾರೆ. ಬ್ರೂಸ್ ಅವರು ನ್ಯೂಯಾರ್ಕ್‌ನಲ್ಲಿ ಹಾಗೂ ಎಕಿಮೋವ್ ಅವರು ಅಮೆರಿಕದ ನ್ಯಾನೊ ಕ್ರಿಸ್ಟಲ್ಸ್ ಟೆಕ್ನಾಲಜಿ ಎಂಬ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

'ಟೆಲಿವಿಷನ್ ಸೆಟ್‌ಗಳು, ಎಲ್‌ಇಡಿ ದೀಪಗಳಲ್ಲಿ ಬೆಳಕು ಹೊರಹೊಮ್ಮಿಸುವ ಈ ಕಣಗಳನ್ನು ಸಂಶೋಧಿಸುವಲ್ಲಿ ಈ ಮೂವರು ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ. ದುರ್ಮಾಂಸ ತೆಗೆಯಲು ನಡೆಸುವ ಶಸ್ತ್ರಚಿಕಿತ್ಸೆ ಸೇರಿದಂತೆ ವಿವಿಧ ಚಿಕಿತ್ಸಾ ವಿಧಾನಗಳನ್ನು ನೆರವೇರಿಸುವ ಸಂದರ್ಭದಲ್ಲಿ ಈ ಕಣಗಳು ವೈದ್ಯರಿಗೆ ನೆರವಾಗಲಿವೆ' ಎಂದು ರಾಯಲ್ ಸ್ವೀಡಿಷ್ ಅಕಾಡೆಮಿ ಹೇಳಿದೆ.

ಮಾಹಿತಿ ಸೋರಿಕೆ: ಪುರಸ್ಕಾರಕ್ಕೆ ಆಯ್ಕೆಯಾದವರ ವಿವರಗಳನ್ನು ರಾಯಲ್ ಸ್ವೀಡಿಷ್ ಅಕಾಡೆಮಿ ಘೋಷಿಸುವ ಮುನ್ನವೇ ಈ ಮೂವರು ವಿಜ್ಞಾನಿಗಳ ಹೆಸರುಗಳು ಸೋರಿಕೆಯಾಗಿದ್ದವು. ಕೆಲ ಮಾಧ್ಯಮಗಳು ಈ ಕುರಿತು ವರದಿಯನ್ನೂ ಪ್ರಕಟಿಸಿದ್ದವು.

ಅಮೆರಿಕದ ಈ ಮೂವರು ವಿಜ್ಞಾನಿಗಳನ್ನು ನೊಬೆಲ್ ಪುರಸ್ಕಾರಕ್ಕೆ ಆಯ್ಕೆ ಮಾಡಿರುವ ಕುರಿತು ಅಕಾಡೆಮಿಯೇ ಪತ್ರಿಕಾ ಪ್ರಕಟಣೆ ನೀಡಿತ್ತು ಎಂದು ಸ್ವೀಡನ್‌ನ ಮಾಧ್ಯಮಗಳು ಹೇಳಿವೆ.

ಭಾರತೀಯ ಸೇನಾ ಪಡೆ ವಾಪಸ್: ಮಾಲ್ಡೀವ್ಸ್ ನೂತನ ಅಧ್ಯಕ್ಷರ ಸಂಕಲ್ಪ

ಮಾಲೆ, ಮಾಲ್ಡೀವ್ಸ್ (ಎಎಫ್‌ಪಿ): ಮಾಲ್ಡೀವ್ಸ್‌ನ ನೂತನ ಅಧ್ಯಕ್ಷ, ಚೀನಾ ಪರ ಒಲವು ಹೊಂದಿರುವ ಮೊಹಮ್ಮದ್ ಮುಯಿಝು, ಕಾರ್ಯತಂತ್ರದ ಭಾಗವಾಗಿ ಮಹತ್ವ ಪಡೆದಿರುವ ಹವಳ ದ್ವೀಪ ರಾಷ್ಟ್ರದಲ್ಲಿ ನೆಲೆಗೊಂಡಿರುವ ಭಾರತೀಯ ಸೇನಾ ಪಡೆಗಳನ್ನು ವಾಪಸ್ ಕಳುಹಿಸುವ ಸಂಕಲ್ಪ ಮಾಡಿದ್ದಾರೆ.

'ಮಾಲ್ಡೀವ್ಸ್‌ನಲ್ಲಿ ನೆಲೆನಿಂತಿರುವ ವಿದೇಶಿ ಮಿಲಿಟರಿ ಪಡೆಗಳನ್ನು ನಾವು ಕಾನೂನು ಪ್ರಕಾರ ಹಿಂದಕ್ಕೆ ಕಳುಹಿಸುತ್ತೇವೆ. ಖಚಿತವಾಗಿಯೂ ನಾವು ಅದನ್ನು ಮಾಡುತ್ತೇವೆ' ಎಂದು ರಾಜಧಾನಿ ಮಾಲೆಯಲ್ಲಿ ನಡೆದ ರ್‍ಯಾಲಿಯಲ್ಲಿ ಮುಯಿಝು ಅವರು ಭಾರತದ ಹೆಸರನ್ನು ನೇರವಾಗಿ ಉಲ್ಲೇಖಿಸದೆ ಹೇಳಿದರು.

'ಇಲ್ಲಿಗೆ ಸೇನಾ ಪಡೆಗಳನ್ನು ತಂದವರು ಅವುಗಳನ್ನು ವಾಪಸ್ ಕಳುಹಿಸಲು ಬಯಸುವುದಿಲ್ಲ. ಆದರೆ, ಮಾಲ್ಡೀವ್ಸ್ ಜನರು ವಾಪಸ್ ಕಳುಹಿಸಲು ನಿರ್ಧರಿಸಿದ್ದಾರೆ' ಎಂದು ಅವರು ಹೇಳಿದರು.

ಮಾಲ್ಡೀವ್ಸ್‌ನಲ್ಲಿ ಸೇನಾ ಪಡೆಯನ್ನು ಹೊಂದಿರುವ ಏಕೈಕ ವಿದೇಶವೆಂದರೆ ಅದು ಭಾರತ. ತನ್ನ ವಿಶಾಲ ಕಡಲ ಪ್ರದೇಶದಲ್ಲಿ ಗಸ್ತು ನಡೆಸಲು ಮಾಲ್ಡೀವ್ಸ್‌ಗೆ ಉಡುಗೊರೆಯಾಗಿ ನೀಡಿದ ನಾಲ್ಕು ಬೇಹುಗಾರಿಕಾ ವಿಮಾನಗಳನ್ನು ನಿರ್ವಹಿಸಲು ಭದ್ರತಾ ಸಿಬ್ಬಂದಿಯ ಸಣ್ಣ ಘಟಕವನ್ನು ಭಾರತವು ಈ ದ್ವೀಪ ರಾಷ್ಟ್ರದಲ್ಲಿ ನಿಯೋಜಿಸಿದೆ. ಮುಯಿಝು ಅವರು ತಮ್ಮ ಚುನಾವಣಾ ಪ್ರಚಾರದಲ್ಲಿ ಈ ವಿಚಾರವಾಗಿ 'ಇಂಡಿಯಾ-ಔಟ್' ವಿಷಯ ಬಳಸಿಕೊಂಡಿದ್ದರು.

ಮೊಹಮ್ಮದ್ ಮುಯಿಝು

ಮುಯಿಝು ತಮ್ಮನ್ನು ಚೀನಾ ಪರ ಒಲವು ಹೊಂದಿರುವ ನಾಯಕ ಎನ್ನುವ ಮಾಧ್ಯಮ ವರದಿಗಳನ್ನು ಅಲ್ಲಗಳೆದಿದ್ದು, 'ನಾನು ಮಾಲ್ಡೀವ್ಸ್ ಪರ. ನನ್ನ ಮೊದಲ ಆದ್ಯತೆಯು ಮಾಲ್ಡೀವ್ಸ್ ಮತ್ತು ಇಲ್ಲಿನ ಪರಿಸ್ಥಿತಿ' ಎಂದು ಸ್ಪಷ್ಟಪಡಿಸಿದ್ದಾರೆ.

'ನಾವು ಮಾಲ್ಡೀವ್ಸ್ ಪರವಾದುದನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ನಮ್ಮ ಮಾಲ್ಡೀವ್ಸ್ ಪರ ನೀತಿಯನ್ನು ಗೌರವಿಸುವ ಮತ್ತು ಪಾಲಿಸುವ ಯಾವುದೇ ದೇಶವನ್ನು ಮಾಲ್ಡೀವ್ಸ್‌ನ ಆಪ್ತ ಸ್ನೇಹಿತನಾಗಿ ಪರಿಗಣಿಸಲಾಗುವುದು' ಎಂದು ಅವರು ಹೇಳಿದ್ದಾರೆ.

ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಮತ್ತೆ ಏಳು ಪದಕ ● ಪುರುಷರ 4X400 ಮೀ. ರಿಲೇ ತಂಡಕ್ಕೆ ಬಂಗಾರ ● ಮಹಿಳಾ ರಿಲೇ ತಂಡಕ್ಕೆ ಬೆಳ್ಳಿ ಸಂಭ್ರಮ

ಜಾವೆಲಿನ್: ನೀರಜ್, ಜೇನಾ ರೋಮಾಂಚನ

ಹರ್ಮಿಲನ್ ಬೇನ್ಸ್

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಅಧಿಕಾರಯುತ ಪ್ರದರ್ಶನ ನೀಡಿದ ನೀರಜ್ ಚೋಪ್ರಾ ಮತ್ತು ಕಿಶೋರ್ ಜೇನಾ ಅವರು ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಗೆದ್ದು ಸಂಭ್ರಮಿಸಿದರು.

ಹಾಂಗ್‌ಝೌ ಕ್ರೀಡಾಂಗಣದ ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ಬುಧವಾರವೂ ಪ್ರಾಬಲ್ಯ ಸಾಧಿಸಿದ ಭಾರತದ ಅಥ್ಲೀಟ್‌ಗಳು ಏಳು ಪದಕಗಳನ್ನು ಕೊರಳಿಗೇರಿಸಿಕೊಂಡರು.

ಒಲಿಂಪಿಕ್ ಚಿನ್ನದ ಪದಕ ವಿಜೇತ ನೀರಜ್, ಜಾವೆಲಿನ್‌ಅನ್ನು 88.88 ಮೀ. ದೂರ ಎಸೆದು ಈ ಋತುವಿನ ಶ್ರೇಷ್ಠ ಸಾಧನೆಯೊಂದಿಗೆ ಚಿನ್ನವನ್ನು ತಮ್ಮಲ್ಲೇ ಉಳಿಸಿಕೊಂಡರು. 2018ರ ಜಕಾರ್ತಾ ಕೂಟದಲ್ಲೂ ಅವರು ಚಾಂಪಿಯನ್ ಆಗಿದ್ದರು. ನೀರಜ್, ನಾಲ್ಕನೇ ಪ್ರಯತ್ನದಲ್ಲಿ ಈ ದೂರ ಕಂಡುಕೊಂಡರು.

ಚಾಂಪಿಯನ್ ಸ್ಪರ್ಧಿಗೆ ತಕ್ಕ ಪೈಪೋಟಿ ನೀಡಿದ ಒಡಿಶಾದ ಕಿಶೋರ್, 87.54 ಮೀ. ಸಾಧನೆಯೊಂದಿಗೆ ವೈಯಕ್ತಿಕ ಶ್ರೇಷ್ಠ ಪ್ರದರ್ಶನ ನೀಡಿ ಬೆಳ್ಳಿಯ ನಗು ಬೀರಿದರು. ಕಿಶೋರ್ ಇದರೊಂದಿಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದರು. ಒಲಿಂಪಿಕ್ಸ್ ಅರ್ಹತಾ ಮಟ್ಟ 85.50 ಮೀ. ನಿಗದಿಪಡಿಸಲಾಗಿದೆ. ನೀರಜ್ ಅವರು ಆಗಸ್ಟ್‌ನಲ್ಲಿ ಬುಡಾಪೆಸ್ಟ್‌ನಲ್ಲಿ ನಡೆದಿದ್ದ ವಿಶ್ವ ಚಾಂಪಿಯನ್‌ಷಿಪ್‌ನಲ್ಲೇ (88.77 ಮೀ.) ಒಲಿಂಪಿಕ್ಸ್ ಅರ್ಹತಾ ಮಟ್ಟ ತಲುಪಿದ್ದರು.

ಕಿಶೋರ್ ಮತ್ತು ಜೇನಾ ಅವರಿಗೆ ಇತರ ಸ್ಪರ್ಧಿಗಳಿಂದ ಪೈಪೋಟಿ ಎದುರಾಗಲಿಲ್ಲ. ಕಂಚು ಗೆದ್ದ ಜಪಾನ್‌ನ ರಾಡ್ರಿಕ್ ಜೆನ್‌ಕಿ 82.68 ಮೀ. ದೂರ ಕಂಡುಕೊಂಡರು. ಭಾರತದ ಇಬ್ಬರು ಸ್ಪರ್ಧಿಗಳು ಚಿನ್ನದ ಪದಕಕ್ಕಾಗಿ ನಡೆಸಿದ ಹಣಾಹಣಿಯು ರೋಚಕತೆಯಿಂದ ಕೂಡಿತ್ತು. ಮೊದಲ ಮೂರು ಅವಕಾಶಗಳ ಬಳಿಕ ಜೇನಾ ಅವರು ನೀರಜ್‌ಗಿಂತ ಮುಂದಿದ್ದರು. ಆದರೆ ನಾಲ್ಕನೇ ಅವಕಾಶದ ಬಳಿಕ ನೀರಜ್, ಮುನ್ನಡೆ ಸಾಧಿಸಿದರು.

ಕೈಕೊಟ್ಟ ಎಲೆಕ್ಟ್ರಾನಿಕ್ ಉಪಕರಣ: ನೀರಜ್ ಮೊದಲ ಎಸೆತದಲ್ಲಿ ಉತ್ತಮ ಪ್ರದರ್ಶನ ನೀಡಿದ್ದರು. ಆದರೆ ದೂರ ಅಳೆಯಲು ಬಳಸುವ ಎಲೆಕ್ಟ್ರಾನಿಕ್ ಉಪಕರಣವು ಕಾರ್ಯನಿರ್ವಹಿಸದ ಕಾರಣ ಆ ಎಸೆತವನ್ನು ದಾಖಲಿಸಲು ಆಗಲಿಲ್ಲ. ಇದರಿಂದ ಅವರು ಜಾವೆಲಿನ್‌ಅನ್ನು ಮತ್ತೊಮ್ಮೆ ಎಸೆಯಬೇಕಾಯಿತು.

'ಜೇನಾ ನೀಡಿದ ಪ್ರದರ್ಶನ ನನಗೆ ಸಾಕಷ್ಟು ಖುಷಿ ಕೊಟ್ಟಿದೆ. ಸ್ಪರ್ಧೆಯುದ್ದಕ್ಕೂ ಅವರೊಂದಿಗೆ ನಡೆಸಿದ ಪೈಪೋಟಿಯನ್ನು ನಾನು ಆನಂದಿಸಿದೆ' ಎಂದು ನೀರಜ್ ಪ್ರತಿಕ್ರಿಯಿಸಿದರು.

ಪುರುಷರ ರಿಲೇ ತಂಡ ಸಾಧನೆ: ಅನಾಸ್ ಮೊಹಮ್ಮದ್ ಯಹ್ಯಾ, ಅಮೋಜ್ ಜೇಕಬ್, ಮೊಹಮ್ಮದ್ ಅಜ್ಮಲ್ ಮತ್ತು ರಾಜೇಶ್ ರಮೇಶ್ ಅವರನ್ನೊಳಗೊಂಡ ಭಾರತ ಪುರುಷರ 4X400 ಮೀ. ರಿಲೇ ತಂಡ 3 ನಿ. 01,58 ಸೆ.ಗಳೊಂದಿಗೆ ಗುರಿ ತಲುಪಿ ಚಿನ್ನ ಗೆದ್ದಿತು.

ಇದೇ ವಿಭಾಗದಲ್ಲಿ ಮಹಿಳೆಯರ ತಂಡ ಬೆಳ್ಳಿ ತನ್ನದಾಗಿಸಿಕೊಂಡಿತು. ವಿದ್ಯಾ ರಾಮರಾಜ್, ಐಶ್ವರ್ಯಾ ಮಿಶ್ರಾ, ಪ್ರಾಚಿ ಮತ್ತು ಶುಭಾ ವೆಂಕಟೇಶನ್ ಅವರನ್ನೊಳಗೊಂಡ ತಂಡ 3 ನಿ. 27.85 ಸೆ.ಗಳೊಂದಿಗೆ ಎರಡನೇ ಸ್ಥಾನ ಪಡೆಯಿತು. ಬಹರೇನ್ ತಂಡ ಕೂಟ ದಾಖಲೆಯೊಂದಿಗೆ (3 ನಿ. 27.65 ಸೆ.) ಚಿನ್ನ ಗೆದ್ದರೆ, ಕಂಚಿನ ಪದಕ ಶ್ರೀಲಂಕಾ ತಂಡದ (3 ನಿ. 30.88 ಸೆ.) ಪಾಲಾಯಿತು.

ಬೆಳಿಗ್ಗೆ ನಡೆದ 35 ಕಿ.ಮೀ. ಮಿಕ್ಸೆಡ್ ತಂಡ ನಡಿಗೆ ಸ್ಪರ್ಧೆಯಲ್ಲಿ ಮಂಜು ರಾಣಿ ಮತ್ತು ರಾಮ್ ಬಾಬೂ ಅವರು ಭಾರತಕ್ಕೆ ಕಂಚು ತಂದುಕೊಟ್ಟರು. ಪುರುಷರ ಹೈಜಂಪ್ ಸ್ಪರ್ಧೆಯಲ್ಲಿ ಅನಿಲ್ ಕುಶಾರೆ ಋತುವಿನ ಶ್ರೇಷ್ಠ ಸಾಧನೆ (2.26 ಮೀ.) ಮಾಡಿದರೂ ನಾಲ್ಕನೇ ಸ್ಥಾನಕ್ಕೆ ಜಾರಿದರು. ಜೆಸ್ಸಿ ಸಂದೇಶ್ (2.19 ಮೀ.) 9ನೇ ಸ್ಥಾನ ಪಡೆದರು.

ಕಿಶೋರ್ ಜೇನಾ (ಎಡ), ನೀರಜ್ ಚೋಪ್ರಾ

ಚೀನಾ ತಾಂತ್ರಿಕ ಅಧಿಕಾರಿಗಳಿಂದ ಮೋಸ: ಅಂಜು ಆರೋಪ

ನೀರಜ್ ಚೋಪ್ರಾ ಅವರ ಮೊದಲ ಥ್ರೋನಲ್ಲಿ ದೂರವನ್ನು ದಾಖಲಿಸದೇ ಇದ್ದುದ್ದಕ್ಕೆ, ಮಾಜಿ ಅಥ್ಲೀಟ್ ಅಂಜು ಬಾಬಿ ಜಾರ್ಜ್ ಅವರು ಕ್ರೀಡಾಕೂಟದ ತಾಂತ್ರಿಕ ಅಧಿಕಾರಿಗಳ ವಿರುದ್ಧ ಹರಿಹಾಯ್ದಿದ್ದಾರೆ.

'ಚೀನಾದ ತಾಂತ್ರಿಕ ಅಧಿಕಾರಿಗಳು ಮೋಸ ಮಾಡಿ ಉದ್ದೇಶಪೂರ್ವಕವಾಗಿ ನಮ್ಮ ಅಥ್ಲೀಟ್‌ಗಳಲ್ಲಿ ಗೊಂದಲ ಉಂಟುಮಾಡಲು ಪ್ರಯತ್ನಿಸಿದ್ದಾರೆ' ಎಂದು ಆರೋಪಿಸಿದ್ದಾರೆ.

ಚೋಪ್ರಾ ಅವರ ಮೊದಲ ಪ್ರಯತ್ನ 85 ಮೀ. ದೂರ ದಾಟಿದಂತೆ ಕಂಡುಬಂದಿತ್ತು. ಆದರೆ ಸ್ಪರ್ಧೆಗೆ ನಿಯೋಜನೆಗೊಂಡಿದ್ದ ಅಧಿಕಾರಿಗಳಿಗೆ ದೂರವನ್ನು ದಾಖಲಿಸಲು ಸಾಧ್ಯವಾಗಿರಲಿಲ್ಲ.

ಮತ್ತೊಮ್ಮೆ ಥ್ರೋ ಮಾಡುವಂತೆ ಚೋಪ್ರಾ ಅವರಿಗೆ ಸೂಚಿಸಿದ್ದರು.

'ನನ್ನ ಮೊದಲ ಎಸೆತವನ್ನು ಅವರು ಏಕೆ ದಾಖಲಿಸಲಿಲ್ಲ ಎಂಬುದು ತಿಳಿದಿಲ್ಲ. ಬಳಿಕದ ಇಬ್ಬರು ಸ್ಪರ್ಧಿಗಳು ಸಾಧಿಸಿದ ದೂರವನ್ನು ಅವರು ಅಳೆದಿದ್ದಾರೆ. ಈ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸುತ್ತಲೇ ಇದ್ದೆ' ಎಂದು ಚೋಪ್ರಾ ಅವರು ಸ್ಪರ್ಧೆಯ ಬಳಿಕ ತಿಳಿಸಿದರು.

'ಇದರಿಂದ ಅಚ್ಚರಿ ಹಾಗೂ ಗೊಂದಲಕ್ಕೆ ಒಳಗಾದೆ. ಇದುವರೆಗೆ ಸ್ಪರ್ಧಿಸಿದ ಯಾವುದೇ ಕೂಟದಲ್ಲೂ ಇಂತಹ ಘಟನೆ ನಡೆದಿಲ್ಲ. ಜಾವೆಲಿನ್ ಲ್ಯಾಂಡ್ ಆದ ಜಾಗವನ್ನು ಗುರುತು ಮಾಡುವಲ್ಲಿ ಅವರು ವಿಫಲರಾಗಿರಬಹುದು ಎಂಬುದು ನನ್ನ ಭಾವನೆ' ಎಂದರು.

'ಅಧಿಕಾರಿಗಳ ಜತೆ ಇನ್ನಷ್ಟು ವಾದಿಸುವುದರಲ್ಲಿ ಅರ್ಥವಿಲ್ಲ ಎಂದು ಭಾವಿಸಿದೆ. ಗೊಂದಲ ಉಂಟಾದ್ದರಿಂದ ಸ್ಪರ್ಧೆ ಕೆಲಹೊತ್ತು ಮೊಟಕುಗೊಂಡಿತ್ತು. ಇತರ ಸ್ಪರ್ಧಿಗಳು ತಮ್ಮ ಸರದಿಗಾಗಿ ಕಾಯುತ್ತಿದ್ದರು. ಅವರನ್ನು ನಾನು ಗೌರವಿಸಬೇಕು. ಹೆಚ್ಚು ಸಮಯ ವ್ಯರ್ಥ ಮಾಡದೆ ಮತ್ತೊಮ್ಮೆ ಥ್ರೋ ತೆಗೆದುಕೊಂಡೆ' ಎಂದು ಅವರು ತಿಳಿಸಿದರು.

'ಒಬ್ಬ ಅಥ್ಲೀಟ್ ಆರು ಥ್ರೋಗಳನ್ನು ಮಾಡಬಹುದು ಎಂದು ನಿಯಮ ಹೇಳುತ್ತದೆ. ಆದರೆ ಇದೇ ಮೊದಲ ಬಾರಿ ಸ್ಪರ್ಧೆಯೊಂದರಲ್ಲಿ ನನಗೆ ಏಳು ಥ್ರೋಗಳ ಅವಕಾಶ ಲಭಿಸಿತು' ಎಂದು ನಗು ಬೀರಿದರು.

ನೀರಜ್ ಚೋಪ್ರಾ ಸಾಧನೆ

ಏಷ್ಯನ್‌ಗೇಮ್ಸ್ (2023)	ಚಿನ್ನ
ಡೈಮಂಡ್ ಲೀಗ್ (2023)	ರನ್ನರ್ ಅಪ್
ವಿಶ್ವ ಚಾಂಪಿಯನ್‌ಷಿಪ್ (2023)	ಚಿನ್ನ
ಒಲಿಂಪಿಕ್ಸ್ (2020)	ಚಿನ್ನ
ಡೈಮಂಡ್ ಲೀಗ್ (2022)	ಚಾಂಪಿಯನ್
ವಿಶ್ವ ಚಾಂಪಿಯನ್‌ಷಿಪ್ (2022)	ಬೆಳ್ಳಿ
ಏಷ್ಯನ್‌ಗೇಮ್ಸ್ (2018)	ಚಿನ್ನ
ಕಾಮನ್‌ವೆಲ್ತ್ ಕ್ರೀಡಾಕೂಟ (2018)	ಚಿನ್ನ
ಏಷ್ಯನ್ ಚಾಂಪಿಯನ್‌ಷಿಪ್ (2017)	ಚಿನ್ನ
ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ (2016)	ಚಿನ್ನ
ಏಷ್ಯನ್ ಜೂನಿಯರ್ ಚಾಂಪಿಯನ್‌ಷಿಪ್ (2016)	ಬೆಳ್ಳಿ
ಸೌತ್ ಏಷ್ಯನ್ ಗೇಮ್ಸ್ (2016)	ಚಿನ್ನ

ಹರ್ಮಿಲನ್, ಸಾಬ್ಳೆಗೆ ಬೆಳ್ಳಿ

ಹರ್ಮಿಲನ್ ಬೇನ್ಸ್ ಮತ್ತು ಅವಿನಾಶ್ ಸಾಬ್ಳೆ ಅವರು ಕ್ರಮವಾಗಿ ಮಹಿಳೆಯರ 800 ಮೀ. ಓಟ ಹಾಗೂ ಪುರುಷರ 5,000 ಮೀ. ಓಟದಲ್ಲಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಈ ಕೂಟದಲ್ಲಿ ಇಬ್ಬರಿಗೂ ಇದು ಎರಡನೇ ಪದಕ.

ಕೊನೆಯ ಕೆಲವು ಮೀಟರ್‌ಗಳು ಇದ್ದಾಗ ವೇಗ ಹೆಚ್ಚಿಸಿಕೊಂಡ ಹರ್ಮಿಲನ್ 2 ನಿ. 03.75 ಸೆ.ಗಳಲ್ಲಿ ಗುರಿ ತಲುಪಿದರು. ಸಾಬ್ಳೆ ಅವರು 13 ನಿ. 21.09 ಸೆ.ಗಳಲ್ಲಿ ಓಟ ಪೂರ್ಯೆಸಿದರು.

ಅವಿನಾಶ್ ಸಾಬ್ಳೆ

ಪದಕ ಪಟ್ಟಿ (ಅಗ್ರ 10 ದೇಶ)

ರ‍್ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	171	94	51	316
2	ಜಪಾನ್	37	51	59	147
3	ದಕ್ಷಿಣ ಕೊರಿಯಾ	33	45	70	148
4	ಭಾರತ	18	31	32	81
5	ಉಜ್ಬೇಕಿಸ್ತಾನ	16	16	22	54
6	ಚೀನಾ ತೈಪೆ	12	14	20	46
7	ಥಾಯ್ಲೆಂಡ್	10	12	24	46
8	ಉತ್ತರ ಕೊರಿಯಾ	9	11	8	28
9	ಬಹರೇನ್	9	1	5	15
10	ಹಾಂಗ್‌ಕಾಂಗ್	7	15	28	50

ಸ್ಕ್ವಾಷ್: ಎರಡು ಫೈನಲ್‌ಗೆ ಭಾರತ

ಹಾಂಗ್‌ಝೌ (ಪಿಟಿಐ): ಭಾರತದ ಸೌರವ್ ಘೋಷಾಲ್ ಬುಧವಾರ ಹಾಂಗ್‌ಕಾಂಗ್‌ನ ಹೆನ್ರಿ ಲ್ಯುಂಗ್ ಅವರನ್ನು ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಸೋಲಿಸಿ, ಏಷ್ಯನ್ ಕ್ರೀಡಾಕೂಟದ ಸ್ಕ್ವಾಷ್‌ನಲ್ಲಿ ಎರಡನೇ ಚಿನ್ನದ ಪದಕದತ್ತ ದಿಟ್ಟ ಹೆಜ್ಜೆಯಿಟ್ಟರು.

ಪುರುಷರ ತಂಡ ವಿಭಾಗದಲ್ಲಿ ಚಿನ್ನಕ್ಕೆ ಕಾಣಿಕೆ ನೀಡಿದ್ದ ಸೌರವ್ 11-2, 11-2, 11-6 ರ ರಿಂದ ಹೆನ್ರಿ ವಿರುದ್ಧ ಅಧಿಕಾರಯುತ ಜಯಗಳಿಸಲು ತೆಗೆದುಕೊಂಡಿದ್ದು 33 ನಿಮಿಷಗಳನ್ನಷ್ಟೇ. ವಿಶ್ವ ಕ್ರಮಾಂಕದಲ್ಲಿ ಭಾರತದ ಆಟಗಾರ 19ನೇ ಸ್ಥಾನದಲ್ಲಿದ್ದಾರೆ.

ಘೋಷಾಲ್ ಗುರುವಾರ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಏನ್ ಯೊವ್ ಎನ್‌ಜಿ (ಮಲೇಷ್ಯಾ) ಅವರನ್ನು ಎದುರಿಸಲಿದ್ದಾರೆ.

ಸ್ಕ್ವಾಷ್ ಕೋರ್ಟ್‌ನಲ್ಲಿ ಭಾರತ ಮೂರು ಚಿನ್ನದ ಪದಕಗಳನ್ನು ಗೆಲ್ಲುವ ಅವಕಾಶವಿದೆ. ದೀಪಿಕಾ ಪಳ್ಳಿಕಲ್ ಮತ್ತು ಹರಿಂದರ್‌ಪಾಲ್ ಸಂಧು ಅವರು ಮಿಕ್ಸೆಡ್ ಡಬಲ್ಸ್ ಫೈನಲ್ ತಲುಪಿದ್ದು, ಗುರುವಾರ ಚಿನ್ನದ ಪದಕಕ್ಕೆ ಆಡಲಿದ್ದಾರೆ.

ದೀಪಿಕಾ ಮತ್ತು ಹರಿಂದರ್‌ಪಾಲ್ ಸಮಿಫೈನಲ್‌ನಲ್ಲಿ 7-11, 11-7, 11-9 ರಿಂದ ಹಾಂಗ್‌ಕಾಂಗ್‌ನ ಲೀ ಕಾ ಯಿ ಮತ್ತು ವಾಂಗ್ ಚಿ ಹಿಮ್ ಅವರನ್ನು ಸೋಲಿಸಿದ್ದರು. ಆದರೆ ಅಭಯ್ ಸಿಂಗ್ ಮತ್ತು ಅನಾಹತ್ ಸಿಂಗ್ ಅವರು ಸೆಮಿಫೈನಲ್‌ನಲ್ಲಿ ಸೋತಿದ್ದು ಇದ್ದುದರಲ್ಲಿ ಸ್ವಲ್ಪ ಹಿನ್ನಡೆ ಎನಿಸಿತು.

ಆರ್ಚರಿ: ಕಾಂಪೌಂಡ್ ಮಿಕ್ಸೆಡ್ ತಂಡ ವಿಭಾಗದಲ್ಲಿ ಸಾಧನೆ

ಓಜಸ್–ಜ್ಯೋತಿಗೆ ಚಿನ್ನ

ಹಾಂಗ್‌ಝೌ (ಪಿಟಿಐ): ಓಜಸ್ ದೇವತಾಳೆ ಅವರ ಯುವ ಸಾಮರ್ಥ್ಯ ಮತ್ತು ಜ್ಯೋತಿ ಸುರೇಖಾ ವೆನ್ನಂ ಅವರ ಕೌಶಲವು ಏಷ್ಯನ್ ಕ್ರೀಡಾಕೂಟದ ಆರ್ಚರಿಯಲ್ಲಿ ಕಾಂಪಾಂಡ್ ಮಿಕ್ಸೆಡ್ ತಂಡ ವಿಭಾಗದಲ್ಲಿ ಭಾರತಕ್ಕೆ ಚಿನ್ನದ ಪದಕ ತಂದುಕೊಟ್ಟಿತು.

ಬುಧವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿ 159–158 ರಿಂದ ಕೊರಿಯಾದ ಸೊ ಚೆವೊನ್– ಜೂ ಜಾಯೆಹೂನ್ ವಿರುದ್ಧ ರೋಚಕ ಗೆಲುವು ಸಾಧಿಸಿತು.

ಈ ಚಿನ್ನ ಸೇರಿದಂತೆ ಭಾರತದ ಆರ್ಚರಿ ಸ್ಪರ್ಧಿಗಳು ಒಟ್ಟು ನಾಲ್ಕು ಪದಕಗಳನ್ನು ಗೆಲ್ಲುವುದು ಖಚಿತ ವಾಗಿದೆ. ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿ ಭಾರತದ ಆರ್ಚರಿ ತಂಡದ ಅತ್ಯುತ್ತಮ ಸಾಧನೆ ಇದು. 2014ರ ಕೂಟದಲ್ಲಿ ಮೂರು ಪದಕ (ತಲಾ ಒಂದು ಚಿನ್ನ, ಬೆಳ್ಳಿ. ಕಂಚು) ಜಯಿಸಿದ್ದು ಇದುವರೆಗಿನ ಉತ್ತಮ ಸಾಧನೆ ಎನಿಸಿಕೊಂಡಿತ್ತು.

ಫೈನಲ್‌ನಲ್ಲಿ 21 ವರ್ಷದ ಓಜಸ್ ಒಂದು ಪಾಯಿಂಟ್ ಕಳೆದುಕೊಂಡರೂ, ಜ್ಯೋತಿ ಅವರು ನಿಖರ ಗುರಿ ಸಾಧಿಸುವ ಮೂಲಕ ಅದನ್ನು ಸರಿದೂಗಿಸಿಕೊಂಡು ಚಿನ್ನದ ಪದಕ ಗೆಲ್ಲುವಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

140 ನಿಮಿಷಗಳಲ್ಲಿ ಮೂರು ನಾಕೌಟ್ ಪಂದ್ಯಗಳನ್ನು (ಕ್ವಾರ್ಟರ್ ಫೈನಲ್, ಸೆಮಿ ಮತ್ತು ಫೈನಲ್) ಆಡಬೇಕಾಗಿ ಬಂದರೂ ಭಾರತದ ಜೋಡಿ ಒತ್ತಡಕ್ಕೆ ಒಳಗಾಗದೆ ಚಿನ್ನದ ಪದಕ ಕೊರಳಿಗೇರಿಸಿಕೊಂಡಿತು.

27 ವರ್ಷದ ಜ್ಯೋತಿ ಅವರು ನಿರ್ಣಾಯಕ ಘಟ್ಟಗಳಲ್ಲಿ ತಂಡದ ನೆರವಿಗೆ ನಿಂತರು. ಭಾರತದ ಜೋಡಿ ನಾಕೌಟ್ ಹಂತದ ಮೂರು ಪಂದ್ಯಗಳಲ್ಲಿ ಕೇವಲ ನಾಲ್ಕು ಪಾಯಿಂಟ್ಸ್‌ಗಳನ್ನು ಮಾತ್ರ ಕಳೆದುಕೊಂಡಿತು.

ಜ್ಯೋತಿ ಸುರೇಖಾ (ಬಲ) ಮತ್ತು ಓಜಸ್ –ಎಎಫ್‌ಪಿ ಚಿತ್ರ

ಭಾರತದ ಜೋಡಿ ಕ್ವಾರ್ಟರ್ ಫೈನಲ್‌ನಲ್ಲಿ 158–155 ರಿಂದ ಮಲೇಷ್ಯಾ ತಂಡವನ್ನು ಮಣಿಸಿದ್ದರೆ, ಸೆಮಿಫೈನಲ್‌ನಲ್ಲಿ 159–154 ರಿಂದ ಕಜಕಸ್ತಾನ ಎದುರು ಗೆಲುವು ಸಾಧಿಸಿತ್ತು.

ರಿಕರ್ವ್ ವಿಭಾಗದಲ್ಲಿ ನಿರಾಸೆ: ಭಾರತ ರಿಕರ್ವ್ ಮಿಕ್ಸೆಡ್ ತಂಡ ಕ್ವಾರ್ಟರ್ ಫೈನಲ್‌ನಲ್ಲಿ ಎಡವಿತು. ಅತಾನು ದಾಸ್ ಮತ್ತು ಅಂಕಿತಾ ಭಕತ್ ಜೋಡಿ 4–5 ರಿಂದ (36-35, 35-36, 38-35, 34-40) (19-20) ಇಂಡೊನೇಷ್ಯಾ ಎದುರು ಪರಾಭವಗೊಂಡಿತು. ಒಂದು ಹಂತದಲ್ಲಿ 4–2 ರಿಂದ ಮುನ್ನಡೆ ಸಾಧಿಸಿದ್ದ ಭಾರತದ ಜೋಡಿ, ಆ ಬಳಿಕ ಪಂದ್ಯದ ಮೇಲಿನ ಹಿಡಿತ ಕೈಬಿಟ್ಟಿತು.

ಚೆಸ್: 2ನೇ ಸ್ಥಾನದಲ್ಲಿ ಪುರುಷರ ತಂಡ

ಹಾಂಗ್‌ಝೌ (ಪಿಟಿಐ): ಎರಡನೇ ಶ್ರೇಯಾಂಕದ ಭಾರತ ಮಹಿಳಾ ತಂಡ ಏಷ್ಯನ್ ಗೇಮ್ಸ್ ಚೆಸ್‌ನಲ್ಲಿ ಬುಧವಾರವೂ ಉತ್ತಮ ಪ್ರದರ್ಶನ ಮುಂದುವರಿಸಿ ಆರನೇ ಸುತ್ತಿನಲ್ಲಿ ಉಜ್ಬೇಕಿಸ್ತಾನ ತಂಡವನ್ನು 4–0 ಯಿಂದ ಸುಲಭವಾಗಿ ಸೋಲಿಸಿತು. ಪುರುಷರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಭಾರತ, ಆತಿಥೇಯ ಚೀನಾ ಎದುರು 2–2 'ಡ್ರಾ' ಮಾಡಿಕೊಂಡಿತು.

ಚೀನಾ– ಭಾರತ ಪಂದ್ಯದ ನಾಲ್ಕೂ ಬೋರ್ಡ್ ಪಂದ್ಯಗಳು ಡ್ರಾ ಆದವು. ಭಾರತ 9 ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿ ಮುಂದುವರಿಸಿದೆ. ಇರಾನ್ 10 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನದಲ್ಲಿದೆ. ತಂಡ ಗೆದ್ದರೆ ಎರಡು ಪಾಯಿಂಟ್, 'ಡ್ರಾ'ಕ್ಕೆ ಒಂದು ಪಾಯಿಂಟ್ ನೀಡಲಾಗುತ್ತದೆ.

ಮೂರನೇ ಶ್ರೇಯಾಂಕದ ಇರಾನ್ 2–2ರಲ್ಲಿ ವಿಯೆಟ್ನಾಂ ವಿರುದ್ಧ ಡ್ರಾ ಮಾಡಿಕೊಂಡರೆ, ನಾಲ್ಕನೇ ಶ್ರೇಯಾಂಕದ ಉಜ್ಬೇಕಿಸ್ತಾನ 3–1 ರಿಂದ ಮಂಗೋಲಿಯಾ ಎದುರು ಗೆಲುವು ದಾಖಲಿಸಿತು.

ಮಹಿಳಾ ವಿಭಾಗದಲ್ಲಿ ಭಾರತ ಆರನೇ ಸುತ್ತಿನಲ್ಲಿ ಉಜ್ಬೇಕಿಸ್ತಾನ ಎದುರು ಸುಲಭ ಜಯ ಸಾಧಿಸಿತು.

ಕಬಡ್ಡಿ: ಭಾರತಕ್ಕೆ ಸುಲಭ ತುತ್ತಾದ ಥಾಯ್ಲೆಂಡ್ ತಂಡಗಳು

ಹಾಂಗ್‌ಝೌ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ಏಷ್ಯನ್ ಕ್ರೀಡಾಕೂಟದ ಕಬಡ್ಡಿ ಪಂದ್ಯದಲ್ಲಿ ಥಾಯ್ಲೆಂಡ್ ವಿರುದ್ಧ ಸುಲಭ ಗೆಲುವು ಸಾಧಿಸಿದವು.

ಬುಧವಾರ ನಡೆದ ಪಂದ್ಯದಲ್ಲಿ ಏಳು ಬಾರಿಯ ಚಾಂಪಿಯನ್ ಪುರುಷರ ತಂಡದವರು 63–26 ರಿಂದ ಗೆದ್ದರೆ, ಮಹಿಳೆಯರು 54–22 ರಿಂದ ಜಯ ಸಾಧಿಸಿದರು.

ಪಂದ್ಯ ಆರಂಭವಾದ ಕೆಲವೇ ನಿಮಿಷಗಳಲ್ಲಿ ಎದುರಾಳಿಗಳನ್ನು 'ಆಲೌಟ್' ಮಾಡುವಲ್ಲಿ ಭಾರತ ತಂಡದವರು ಯಶ ಕಂಡರು. ವಿರಾಮಕ್ಕೂ ಮುನ್ನ ಮೂರು ಸಲ 'ಆಲೌಟ್' ಮಾಡಿ 37–9 ರಿಂದ ಮುನ್ನಡೆ ಸಾಧಿಸಿದರು. ಎರಡನೇ ಅವಧಿಯಲ್ಲಿ ಅಲ್ಪ ಹೋರಾಟ ನಡೆಸಿದ ಥಾಯ್ಲೆಂಡ್, ಸೋಲಿನ ಅಂತರ ತಗ್ಗಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಪುರುಷರ ತಂಡದವರು 55–18 ರಿಂದ ಬಾಂಗ್ಲಾದೇಶ ತಂಡವನ್ನು ಮಣಿಸಿದ್ದರು.

ಕಳೆದ ಬಾರಿಯ ಬೆಳ್ಳಿ ಪದಕ ವಿಜೇತ ಮಹಿಳಾ ತಂಡದವರೂ ಥಾಯ್ಲೆಂಡ್ ವಿರುದ್ಧ ಉತ್ತಮ ಆರಂಭ ಪಡೆದು ವಿರಾಮದ ವೇಳೆಗೆ 32–9 ರಿಂದ ಮೇಲುಗೈ ಪಡೆದರು. ಎರಡನೇ ಅವಧಿಯಲ್ಲಿ ಮತ್ತೆ 22 ಪಾಯಿಂಟ್ಸ್ ಕಲೆಹಾಕಿ ಸುಲಭವಾಗಿ ಗೆದ್ದರು. ಈ ಗೆಲುವಿನ ಮೂಲಕ 'ಎ' ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಸೆಮಿಫೈನಲ್ ಪ್ರವೇಶಿಸಿದರು.

ಸುನಿಲ್ ಕುಮಾರ್ –ಎಎಫ್‌ಪಿ ಚಿತ್ರ

ಕುಸ್ತಿ: ಸುನಿಲ್ ಕುಮಾರ್‌ಗೆ ಕಂಚು

ಹಾಂಗ್‌ಝೌ (ಪಿಟಿಐ): ಭಾರತದ ಸುನಿಲ್ ಕುಮಾರ್ ಬುಧವಾರ ಏಷ್ಯನ್ ಕ್ರೀಡಾಕೂಟದ ಪುರುಷರ 87 ಕೆಜಿ ಗ್ರೀಕೊ ರೋಮನ್ ಕುಸ್ತಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದಾರೆ.

ಈ ವಿಭಾಗದಲ್ಲಿ 12 ವರ್ಷಗಳ ಬಳಿಕ ಮತ್ತೆ ಭಾರತಕ್ಕೆ ಪದಕ ಒಲಿದಿದೆ. 2010ರಲ್ಲಿ ರವೀಂದರ್ ಸಿಂಗ್ (60 ಕೆಜಿ) ಮತ್ತು ಸುನಿಲ್ ಕುಮಾರ್ ರಾಣಾ (66 ಕೆಜಿ) ಕಂಚಿನ ಪದಕ ಗೆದ್ದಿದ್ದರು.

ಕಂಚಿನ ಪದಕಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಸುನಿಲ್ ಅವರು 2–1ರಿಂದ ಕಿರ್ಗಿಸ್ತಾನದ ಅಟಾಬೆಕ್ ಅಜಿಸ್ಬೆಕೋವ್ ಅವರನ್ನು ಮಣಿಸಿದರು. ಉಭಯ ಆಟಗಾರರ ನಡುವೆ ಸಮಬಲದ ಹೋರಾಟ ನಡೆದು, ಅಂತಿಮವಾಗಿ ಭಾರತದ ಆಟಗಾರ ಮೇಲುಗೈ ಸಾಧಿಸುವಲ್ಲಿ ಯಶಸ್ವಿಯಾದರು.

ಮೊದಲ ಸುತ್ತಿನಲ್ಲಿ ಸುನಿಲ್ 4–3ರಿಂದ ಚೀನಾದ ಫೀ ಪಿಂಗ್ ಅವರನ್ನು ಮಣಿಸುವ ಮೂಲಕ ಗೆಲುವಿನ ಅಭಿಯಾನ ಆರಂಭಿಸಿದ್ದರು.

ನಂತರ ಕ್ವಾರ್ಟರ್ ಫೈನಲ್‌ನಲ್ಲಿ ಕಜಕಿಸ್ತಾನದ ಸುಖ್ರೋಬ್ ಅಬ್ದುಲ್ ಖಾವ್ ವಿರುದ್ಧ ತಾಂತ್ರಿಕ ಕೌಶಲ ಶ್ರೇಷ್ಠತೆಯ ಆಧಾರದಲ್ಲಿ ಗೆದ್ದು, ಸೆಮಿಫೈನಲ್ ಪ್ರವೇಶಿಸಿದ್ದರು. ಅಲ್ಲಿ ಇರಾನ್‌ನ ನಾಸರ್ ಅಲಿಜಾಡೆ ಅವರಿಗೆ 1–4ರಿಂದ ಮಣಿದರು.

ಈ ಮಧ್ಯೆ ಭಾರತದ ಮೂರು ಗ್ರೀಕೊ ರೋಮನ್ ಕುಸ್ತಿಪಟುಗಳು ನಿರಾಸೆ ಅನುಭವಿಸಿದರು. ಜ್ಞಾನೇಂದರ್ (60 ಕೆಜಿ), ನೀರಜ್ (67 ಕೆಜಿ) ಮತ್ತು ವಿಕಾಸ್ (77 ಕೆಜಿ) ಅವರು ಮೊದಲ ಸುತ್ತಿನಲ್ಲೇ ಎಡವಿದರು.

ಬಾಕ್ಸಿಂಗ್: ಭಾರತಕ್ಕೆ ಈ ಬಾರಿ ಐದು ಪದಕ

ಲವ್ಲಿನಾಗೆ ಬೆಳ್ಳಿ, ಪರ್ವೀನ್‌ಗೆ ಕಂಚು

ಹಾಂಗ್‌ಝೌ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಪದಕವಿಜೇತೆ ಲವ್ಲಿನಾ ಬೋರ್ಗೊಹೈನ್ ಅವರು ಮಹಿಳೆಯರ 75 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಬುಧವಾರ ನಿರೀಕ್ಷಿತ ಮಟ್ಟದ ಹೋರಾಟ ಪ್ರದರ್ಶಿಸಲಾಗದೇ ಬೆಳ್ಳಿಯ ಪದಕಕ್ಕೆ ಸಮಾಧಾನಪಡಬೇಕಾಯಿತು. 57 ಕೆ.ಜಿ. ವಿಭಾಗದಲ್ಲಿ ಪರ್ವೀನ್ ಹೂಡಾ ಸೆಮಿಫೈನಲ್‌ನಲ್ಲಿ ಸೋತು ಕಂಚಿನ ಪದಕ ಪಡೆದರು.

ಏಷ್ಯನ್ ಗೇಮ್ಸ್ ಬಾಕ್ಸಿಂಗ್‌ನಲ್ಲಿ ಭಾರತ ಐದು ಪದಕಗಳೊಂದಿಗೆ ಅಭಿಯಾನ ಮುಗಿಸಿತು. ಇದರಲ್ಲಿ ಒಂದು ರಜತ, ನಾಲ್ಕು ಕಂಚಿನ ಪದಕಗಳು ಒಳಗೊಂಡಿವೆ. 4 ವರ್ಷಗಳ ಹಿಂದೆ, ಜಕಾರ್ತಾದಲ್ಲಿ ಭಾರತ ಒಂದು ಚಿನ್ನ, ಒಂದು ಕಂಚಿನ ಪದಕ ಅಷ್ಟೇ ಗಳಿಸಿತ್ತು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಹಾಗೂ ತವರಿನ ನೆಚ್ಚಿನ ಸ್ಪರ್ಧಿ ಲಿನ್ ಯು ಟಿಂಗ್ ಎದುರು ವಿಶ್ವ ಚಾಂಪಿಯನ್ ಲವ್ಲಿನಾ ಅವರ ರಕ್ಷಣಾತ್ಮಕ ತಂತ್ರ ಹೆಚ್ಚೇನೂ ಫಲಕೊಡಲಿಲ್ಲ. ಫೈನಲ್ ಹೆಚ್ಚುಕಮ್ಮಿ ಮಟ್ಟಕ್ಕಿಳಿಯಿತು. ಏಷ್ಯನ್ ಚಾಂಪಿಯನ್ ಕೂಡ ಆಗಿರುವ ಭಾರತದ ಸ್ಪರ್ಧಿ ಆಕ್ರಮಣದ ಮನೋಭಾವ ಪ್ರದರ್ಶಿಸಲಿಲ್ಲ.

'ನಾನು ಸಾಕಷ್ಟು ಪ್ರಯತ್ನ ಹಾಕಿದೆ, ಆದರೆ ಚಿನ್ನ ಗೆಲ್ಲಲಾಗಲಿಲ್ಲ. ಒಲಿಂಪಿಕ್ಸ್‌ನಲ್ಲಾದರೂ ಪದಕದ ಬಣ್ಣ ಬದಲಾಯಿಸಲು ಯತ್ನಿಸುವೆ' ಎಂದು ಬೋರ್ಗೊಹೈನ್ ಹೇಳಿದರು.

ಪರ್ವೀನ್ ಹೂಡಾ 57 ಕೆ.ಜಿ. ವಿಭಾಗದಲ್ಲಿ ಚೀನಾ ತೈಪಿಯ ಲಿನ್ ಯು ಟಿಂಗ್ ಎದುರು ಸೋತು ಕಂಚಿನ ಪದಕ ಪಡೆದರು. ಕಳೆದ ವರ್ಷ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ 63 ಕೆ.ಜಿ. ವಿಭಾಗದಲ್ಲಿ ಸ್ಪರ್ಧಿಸಿದ್ದ ಲವ್ಲಿನಾ ಕಂಚಿನ ಪದಕ ಗೆದ್ದುಕೊಂಡಿದ್ದರು. ಲಿನ್ ಯು ಟಿಂಗ್ ಅವರು ತಮ್ಮ ಎದುರಾಳಿಗಿಂತ ಎರಡು ಇಂಚು ಹೆಚ್ಚು ಎತ್ತರ ಇದ್ದು ಆ ಅನುಕೂಲವನ್ನು ಚೆನ್ನಾಗಿಯೇ ಬಳಸಿಕೊಂಡರು.

23 ವರ್ಷದ ಪರ್ವೀನ್, ಈಗಾಗಲೇ ಒಲಿಂಪಿಕ್ಸ್ ಕೋಟಾ ಬುಕ್ ಮಾಡಿದ್ದಾರೆ. ನಿಖತ್ ಝರೀನ್ (50 ಕೆಜಿ), ಪ್ರೀತಿ ಪವಾರ್ (54 ಕೆ.ಜಿ) ಮತ್ತು ಬೋರ್ಗೊಹೈನ್ ಕೂಡ ಪ್ಯಾರಿಸ್‌ಗೆ ಟಿಕೆಟ್ ಪಡೆದಿದ್ದಾರೆ. ಪುರುಷರ ವಿಭಾಗದಲ್ಲಿ ನರೇಂದರ್ ಬೆರ್ವಾಲ್ (+92 ಕೆ.ಜಿ) ಮಾತ್ರ ಪದಕ ಗೆದ್ದಿದ್ದಾರೆ. ಆದರೆ ಯಾರೂ ಒಲಿಂಪಿಕ್ಸ್ ಅರ್ಹತೆ ಪಡೆಯಲಿಲ್ಲ.



75 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಚೀನಾದ ಲಿ ಕ್ವಿಯಾನ್ ಎದುರು ಸೆಣಸಾಡಿದ ಲವ್ಲಿನಾ ಬೋರ್ಗೊಹೈನ್ (ಎಡಚಿತ್ರ). 57 ಕೆ.ಜಿ. ವಿಭಾಗದಲ್ಲಿ ಕಂಚು ಗೆದ್ದ ಪರ್ವೀನ್ ಹೂಡಾ –ಪಿಟಿಐ ಚಿತ್ರ

ಏಕದಿನ ಕ್ರಿಕೆಟ್ ವಿಶ್ವಕಪ್ – 2023

ಏಕದಿನ ಕ್ರಿಕೆಟ್ ವಿಶ್ವಕಪ್ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ	ಆರಂಭ
ಅ.5	ಇಂಗ್ಲೆಂಡ್–ನ್ಯೂಜಿಲೆಂಡ್	ಅಹಮದಾಬಾದ್	ಮಧ್ಯಾಹ್ನ 2
ಅ.6	ಪಾಕಿಸ್ತಾನ–ನೆದರ್ಲೆಂಡ್ಸ್	ಹೈದರಾಬಾದ್	ಮ.2
ಅ.7	ಬಾಂಗ್ಲಾದೇಶ–ಅಫ್ಗಾನಿಸ್ತಾನ	ಧರ್ಮಶಾಲಾ	ಬೆಳಿಗ್ಗೆ 10.30
ಅ.7	ದಕ್ಷಿಣ ಆಫ್ರಿಕಾ–ಶ್ರೀಲಂಕಾ	ನವದೆಹಲಿ	ಮ.2
ಅ.8	ಭಾರತ–ಆಸ್ಟ್ರೇಲಿಯಾ	ಚೆನ್ನೈ	ಮ.2
ಅ.9	ನ್ಯೂಜಿಲೆಂಡ್–ನೆದರ್ಲೆಂಡ್ಸ್	ಹೈದರಾಬಾದ್	ಮ.2
ಅ.10	ಇಂಗ್ಲೆಂಡ್–ಬಾಂಗ್ಲಾದೇಶ	ಧರ್ಮಶಾಲಾ	ಬೆ.10.30
ಅ.10	ಪಾಕಿಸ್ತಾನ–ಶ್ರೀಲಂಕಾ	ಹೈದರಾಬಾದ್	ಮ.2
ಅ.11	ಭಾರತ–ಅಫ್ಗಾನಿಸ್ತಾನ	ನವದೆಹಲಿ	ಮ.2
ಅ.12	ಆಸ್ಟ್ರೇಲಿಯಾ–ದಕ್ಷಿಣ ಆಫ್ರಿಕಾ	ಲಖನೌ	ಮ.2
ಅ.13	ನ್ಯೂಜಿಲೆಂಡ್–ಬಾಂಗ್ಲಾದೇಶ	ಚೆನ್ನೈ	ಮ.2
ಅ.14	ಭಾರತ–ಪಾಕಿಸ್ತಾನ	ಅಹಮದಾಬಾದ್	ಮ.2
ಅ.15	ಇಂಗ್ಲೆಂಡ್–ಅಫ್ಗಾನಿಸ್ತಾನ	ನವದೆಹಲಿ	ಮ.2
ಅ.16	ಆಸ್ಟ್ರೇಲಿಯಾ–ಶ್ರೀಲಂಕಾ	ಲಖನೌ	ಮ.2
ಅ.17	ದಕ್ಷಿಣ ಆಫ್ರಿಕಾ–ನೆದರ್ಲೆಂಡ್ಸ್	ಧರ್ಮಶಾಲಾ	ಮ.2
ಅ.18	ನ್ಯೂಜಿಲೆಂಡ್–ಅಫ್ಗಾನಿಸ್ತಾನ	ಚೆನ್ನೈ	ಮ.2
ಅ.19	ಭಾರತ–ಬಾಂಗ್ಲಾದೇಶ	ಪುಣೆ	ಮ.2
ಅ.20	ಆಸ್ಟ್ರೇಲಿಯಾ–ಪಾಕಿಸ್ತಾನ	ಬೆಂಗಳೂರು	ಮ.2
ಅ.21	ನೆದರ್ಲೆಂಡ್ಸ್–ಶ್ರೀಲಂಕಾ	ಲಖನೌ	ಬೆ.10.30
ಅ.21	ಇಂಗ್ಲೆಂಡ್–ದಕ್ಷಿಣ ಆಫ್ರಿಕಾ	ಮುಂಬೈ	ಮ.2
ಅ.22	ಭಾರತ–ನ್ಯೂಜಿಲೆಂಡ್	ಧರ್ಮಶಾಲಾ	ಮ.2
ಅ.23	ಪಾಕಿಸ್ತಾನ–ಅಫ್ಗಾನಿಸ್ತಾನ	ಚೆನ್ನೈ	ಮ.2
ಅ.24	ದಕ್ಷಿಣ ಆಫ್ರಿಕಾ–ಬಾಂಗ್ಲಾದೇಶ	ಮುಂಬೈ	ಮ.2
ಅ.25	ಆಸ್ಟ್ರೇಲಿಯಾ–ನೆದರ್ಲೆಂಡ್ಸ್	ನವದೆಹಲಿ	ಮ.2
ಅ.26	ಇಂಗ್ಲೆಂಡ್–ಶ್ರೀಲಂಕಾ	ಬೆಂಗಳೂರು	ಮ.2
ಅ.27	ಪಾಕಿಸ್ತಾನ–ದಕ್ಷಿಣ ಆಫ್ರಿಕಾ	ಚೆನ್ನೈ	ಮ.2
ಅ.28	ಆಸ್ಟ್ರೇಲಿಯಾ–ನ್ಯೂಜಿಲೆಂಡ್	ಧರ್ಮಶಾಲಾ	ಬೆ.10.30
ಅ.28	ನೆದರ್ಲೆಂಡ್ಸ್–ಬಾಂಗ್ಲಾದೇಶ	ಕೋಲ್ಕತ್ತ	ಮ.2
ಅ.29	ಭಾರತ–ಇಂಗ್ಲೆಂಡ್	ಲಖನೌ	ಮ.2
ಅ.30	ಅಫ್ಗಾನಿಸ್ತಾನ–ಶ್ರೀಲಂಕಾ	ಪುಣೆ	ಮ.2
ಅ.31	ಪಾಕಿಸ್ತಾನ–ಬಾಂಗ್ಲಾದೇಶ	ಕೋಲ್ಕತ್ತ	ಮ.2
ನ.1	ನ್ಯೂಜಿಲೆಂಡ್–ದಕ್ಷಿಣ ಆಫ್ರಿಕಾ	ಪುಣೆ	ಮ.2
ನ.2	ಭಾರತ–ಶ್ರೀಲಂಕಾ	ಮುಂಬೈ	ಮ.2
ನ.3	ನೆದರ್ಲೆಂಡ್ಸ್–ಅಫ್ಗಾನಿಸ್ತಾನ	ಲಖನೌ	ಮ.2
ನ.4	ನ್ಯೂಜಿಲೆಂಡ್–ಪಾಕಿಸ್ತಾನ	ಬೆಂಗಳೂರು	ಬೆ.10.30
ಅ.4	ಇಂಗ್ಲೆಂಡ್–ಆಸ್ಟ್ರೇಲಿಯಾ	ಅಹಮದಾಬಾದ್	ಮ.2
ನ.5	ಭಾರತ–ದಕ್ಷಿಣ ಆಫ್ರಿಕಾ	ಕೋಲ್ಕತ್ತ	ಮ.2
ನ.6	ಬಾಂಗ್ಲಾದೇಶ–ಶ್ರೀಲಂಕಾ	ನವದೆಹಲಿ	ಮ.2
ನ.7	ಆಸ್ಟ್ರೇಲಿಯಾ–ಅಫ್ಗಾನಿಸ್ತಾನ	ಮುಂಬೈ	ಮ.2
ನ.8	ಇಂಗ್ಲೆಂಡ್–ನೆದರ್ಲೆಂಡ್ಸ್	ಪುಣೆ	ಮ.2
ನ.9	ನ್ಯೂಜಿಲೆಂಡ್–ಶ್ರೀಲಂಕಾ	ಬೆಂಗಳೂರು	ಮ.2
ನ.10	ದಕ್ಷಿಣ ಆಫ್ರಿಕಾ–ಅಫ್ಗಾನಿಸ್ತಾನ	ಅಹಮದಾಬಾದ್	ಮ.2
ನ.11	ಆಸ್ಟ್ರೇಲಿಯಾ–ಬಾಂಗ್ಲಾದೇಶ	ಪುಣೆ	ಬೆ.10.30
ನ.11	ಇಂಗ್ಲೆಂಡ್–ಪಾಕಿಸ್ತಾನ	ಕೋಲ್ಕತ್ತ	ಮ.2
ನ.12	ಭಾರತ–ನೆದರ್ಲೆಂಡ್ಸ್	ಬೆಂಗಳೂರು	ಮ.2
	ಸೆಮಿಫೈನಲ್		
ನ.15	ಲೀಗ್‌ನಲ್ಲಿ ಅಗ್ರಸ್ಥಾನ ಪಡೆದ ತಂಡ–4ನೇ ಸ್ಥಾನ ಪಡೆದ ತಂಡ	ಮುಂಬೈ	ಮ.2
ನ.16	2ನೇ ಸ್ಥಾನ ಪಡೆದ ತಂಡ–3ನೇ ಸ್ಥಾನ ಪಡೆದ ತಂಡ	ಕೋಲ್ಕತ್ತ	ಮ.2
	ಫೈನಲ್		
ನ.19	ಸೆಮಿಫೈನಲ್ ಪಂದ್ಯಗಳ ವಿಜೇತರು	ಅಹಮದಾಬಾದ್	ಮ.2

ಅಹಮದಾಬಾದಿನಲ್ಲಿ ಬುಧವಾರ ನಡೆದ ವಿಶ್ವಕಪ್ ಪ್ರದರ್ಶನ ಕಾರ್ಯಕ್ರಮದಲ್ಲಿ ಹತ್ತು ತಂಡಗಳ ನಾಯಕರು ಇದ್ದರು. (ಎಡದಿಂದ) ಶಕೀಬ್ ಅಲ್ ಹಸನ್ (ಬಾಂಗ್ಲಾದೇಶ), ದಸುನ್ ಶನಕಾ (ಶ್ರೀಲಂಕಾ), ತೆಂಬಾ ಬವುಮಾ (ದಕ್ಷಿಣ ಆಫ್ರಿಕಾ), ಕೇನ್ ವಿಲಿಯಮ್ಸನ್ (ನ್ಯೂಜಿಲೆಂಡ್), ರೋಹಿತ್ ಶರ್ಮಾ(ಭಾರತ), ಬಾಬರ್ ಆಜಂ (ಪಾಕಿಸ್ತಾನ), ಜೋಸ್ ಬಟ್ಲರ್ (ಇಂಗ್ಲೆಂಡ್), ಕಮಿನ್ಸ್ (ಆಸ್ಟ್ರೇಲಿಯಾ), ಹಷ್ಮತ್‌ಉಲ್ಲಾ ಶಾಹಿದಿ (ಅಫ್ಗಾನಿಸ್ತಾನ), ಸ್ಕಾಟ್ ಎಡ್ವರ್ಡ್ಸ್ (ನೆದರ್ಲೆಂಡ್ಸ್) –ಪಿಟಿಐ ಚಿತ್ರ

ವಿಶ್ವಕಪ್ ಇಂದಿನಿಂದ: ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ಕಿವೀಸ್ ಬಳಗ

ಇಂಗ್ಲೆಂಡ್‌ಗೆ ಗೆಲುವಿನ ಕನಸು

ಅಹಮದಾಬಾದ್(ಪಿಟಿಐ): ನಾಲ್ಕು ವರ್ಷಗಳ ಹಿಂದೆ ನಡೆದಿದ್ದ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಚಾಂಪಿಯನ್ ಇಂಗ್ಲೆಂಡ್ ಮತ್ತು ರನ್ನರ್ಸ್ ಅಪ್ ನ್ಯೂಜಿಲೆಂಡ್ ಗುರುವಾರ ಮುಖಾಮುಖಿಯಾಗಲಿವೆ.

2019ರಲ್ಲಿ ಟೈ ಆಗಿದ್ದ ಫೈನಲ್‌ನಲ್ಲಿ 'ಬೌಂಡರಿ ಕೌಂಟ್' ಆಧಾರದಲ್ಲಿ ಇಂಗ್ಲೆಂಡ್ ತಂಡವು ಕಿವೀಸ್ ಬಳಗದ ಎದುರು ಜಯ ಸಾಧಿಸಿತ್ತು. ಇದೀಗ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಟೂರ್ನಿಯ ಮೊದಲ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಲಿವೆ.

ಜೋಸ್ ಬಟ್ಲರ್ ಇಂಗ್ಲೆಂಡ್ ತಂಡವನ್ನು ಮುನ್ನಡೆಸಲಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಇಂಗ್ಲೆಂಡ್ ತಂಡದ ಆಟಗಾರರು ತಮ್ಮ ಆಟದ ಶೈಲಿಯನ್ನು ಬದಲಿಸಿಕೊಂಡಿದ್ದಾರೆ. ಟೆಸ್ಟ್, ಏಕದಿನ ಮತ್ತು ಟಿ20 ಮಾದರಿಗಳಲ್ಲಿ ಇಂಗ್ಲೆಂಡ್ ಆಟಗಾರರ 'ಬಜ್ ಬಾಲ್ ಸೂತ್ರ'ವು ಎದುರಾಳಿಗಳಿಗೆ ಸಿಂಹಸ್ವಪ್ನವಾಗಿದೆ.

ಯಾವುದೇ ಮಾದರಿಯಿರಲಿ ಮಿಂಚಿನ ಬ್ಯಾಟಿಂಗ್ ಮಾಡುವುದು ಈ ತಂಡದ ವಿಶೇಷ. ಅದರಲ್ಲೂ ಕೊನೆಯ ಹಂತದ ಓವರ್‌ಗಳಲ್ಲಿ ರನ್ ಸೂರೆ ಮಾಡುವಲ್ಲಿ ಹ್ಯಾರಿ ಬ್ರೂಕ್ಸ್, ಲಿಯಾಮ್ ಲಿವಿಂಗ್‌ಸ್ಟೋನ್, ಬೆನ್ ಸ್ಟೋಕ್ಸ್ ಅವರಂತಹವರು ನಿಸ್ಸೀಮರಾಗಿದ್ದಾರೆ.

ಇವರ ಆಟಕ್ಕೆ ಕಡಿವಾಣ ಹಾಕುವುದೇ ಈ ಬಾರಿ ಟೂರ್ನಿಯಲ್ಲಿ ಎಲ್ಲ ತಂಡಗಳ ಬೌಲರ್‌ಗಳ ಮುಂದಿರುವ ದೊಡ್ಡ ಸವಾಲಾಗಿದೆ. ಇಂಗ್ಲೆಂಡ್ ಆಲ್‌ರೌಂಡರ್‌ಗಳಾದ ಮೊಯಿನ್ ಅಲಿ, ಕ್ರಿಸ್ ವೋಕ್ಸ್ ಮತ್ತು ಸ್ಯಾಮ್ ಕರನ್ ಅವರೂ ಪಂದ್ಯ ಗೆದ್ದುಕೊಡಬಲ್ಲ ಸಮರ್ಥರು.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡಿರುವ ತಂಡದ ಬಹುತೇಕರಿಗೆ ಭಾರತದ ವಾತಾವರಣ ಮತ್ತು ಪಿಚ್‌ಗಳಿಗೆ ಹೊಂದಿಕೊಳ್ಳುವುದು ಸುಲಭವಾಗಿದೆ.

ಆದರೆ ನ್ಯೂಜಿಲೆಂಡ್ ತಂಡಕ್ಕೆ ಗಾಯದ ಸಮಸ್ಯೆ ಕಾಡುತ್ತಿದೆ. ನಾಯಕ ಕೇನ್ ವಿಲಿಯಮ್ಸನ್ ಅವರೇ ಮೊದಲ ಪಂದ್ಯದಲ್ಲಿ ಕಣಕ್ಕಿಳಿಯುತ್ತಿಲ್ಲ. ಆದ್ದರಿಂದ ಟಾಮ್ ಲಥಾಮ್ ನಾಯಕತ್ವ ವಹಿಸಿದ್ದಾರೆ.

ಟಾಮ್, ಡೇವೊನ್ ಕಾನ್ವೆ, ಜೇಮ್ಸ್ ನಿಶಾಮ್ ಹಾಗೂ ಗ್ಲೆನ್ ಫಿಲಿಪ್ಸ್ ಅವರು ತಂಡದ ಬ್ಯಾಟಿಂಗ್ ಶಕ್ತಿಯಾಗಿದ್ದಾರೆ. ಆದರೆ ಬೌಲಿಂಗ್ ವಿಭಾಗದಲ್ಲಿ ಅನುಭವಿ ವೇಗಿ ಟಿಮ್ ಸೌಥಿ ಅವರ ಫಿಟ್‌ನೆಸ್ ಇನ್ನೂ ಪರೀಕ್ಷೆಗೊಳಪಡಬೇಕಿದೆ. ಟ್ರೆಂಟ್ ಬೌಲ್ಟ್, ಲಾಕಿ ಫರ್ಗ್ಯುಸನ್ ಮತ್ತು ಈಶ ಸೌಥಿ ಅವರ ಅವರ ಮೇಲೆ ಬೌಲಿಂಗ್ ವಿಭಾಗ ಅವಲಂಬಿಸಿದೆ.

ತಂಡಗಳು: ಇಂಗ್ಲೆಂಡ್: ಜಾಸ್ ಬಟ್ಲರ್ (ನಾಯಕ–ವಿಕೆಟ್‌ಕೀಪರ್), ಜೋ ರೂಟ್, ಜಾನಿ ಬೆಸ್ಟೊ (ವಿಕೆಟ್‌ಕೀಪರ್), ಹ್ಯಾರಿ ಬ್ರೂಕ್ಸ್, ಲಿಯಾಮ್ ಲಿವಿಂಗ್‌ಸ್ಟೋನ್, ಡೇವಿಡ್ ಮಲಾನ್, ಬೆನ್ ಸ್ಟೋಕ್ಸ್, ಮೋಯಿನ್ ಅಲಿ, ಕ್ರಿಸ್ ವೋಕ್ಸ್, ಸ್ಯಾಮ್ ಕರನ್, ಡೇವಿಡ್ ವಿಲಿ, ಆದಿಲ್ ರಶೀದ್, ಮಾರ್ಕ್ ವುಡ್, ರೀಸ್ ಟಾಪ್ಲಿ, ಗಸ್ ಅಟ್ಕಿನ್ಸನ್. **ನ್ಯೂಜಿಲೆಂಡ್:** ಟಾಮ್ ಲಥಾಮ್ (ನಾಯಕ–ವಿಕೆಟ್‌ಕೀಪರ್), ವಿಲ್ ಯಂಗ್, ಮಾರ್ಕ್ ಚಾಪ್ಮನ್, ಡೇರಿಲ್ ಮಿಚೆಲ್, ಜೇಮ್ಸ್ ನಿಶಾಮ್, ಗ್ಲೆನ್ ಫಿಲಿಪ್ಸ್ (ವಿಕೆಟ್‌ಕೀಪರ್), ರಚಿನ್ ರವೀಂದ್ರ, ಮಿಚೆಲ್ ಸ್ಯಾಂಟನರ್, ಈಶ ಸೋಧಿ, ಟಿಮ್ ಸೋಧಿ, ಟ್ರೆಂಟ್ ಬೌಲ್ಟ್, ಲಾಕಿ ಫರ್ಗ್ಯುಸನ್, ಮ್ಯಾಟ್ ಹೆನ್ರಿ.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

> ಕೆಲವರಿಗೆ ಗಾಯದಿಂದಾಗಿ ಸಣ್ಣ ಆತಂಕವಿತ್ತು. ಆದರೆ ತಂಡದಲ್ಲಿರುವ ಎಲ್ಲರೂ ಪ್ರತಿಭಾವಂತ ಮತ್ತು ಅನುಭವಿಗಳಾಗಿರುವುರಿಂದ ಆತ್ಮವಿಶ್ವಾಸಕ್ಕೆ ಕೊರತೆ ಇಲ್ಲ.
> **ಟಾಮ್ ಲಥಾಮ್** ನ್ಯೂಜಿಲೆಂಡ್ ಹಂಗಾಮಿ ನಾಯಕ

> ಒಂದೊಮ್ಮೆ ಬೆನ್ ಸ್ಟೋಕ್ಸ್ ಫಿಟ್ ಆದರೆ ಮಾತ್ರ ಅಂತಿಮ ಹನ್ನೊಂದರಲ್ಲಿ ಆಯ್ಕೆಗೆ ಪರಿಗಣಿಸುತ್ತೇವೆ. ಇಲ್ಲದಿದ್ದರೆ ಬೇರೆಯವರಿಗೆ ಅವಕಾಶ ನೀಡುತ್ತೇವೆ. ಅವರು ಫಿಟ್ ಆಗುವುದು ಮುಖ್ಯ.
> **ಜೋಸ್ ಬಟ್ಲರ್** ಇಂಗ್ಲೆಂಡ್ ನಾಯಕ

ಮುಖ್ಯಾಂಶಗಳು
- ಇಂಗ್ಲೆಂಡ್‌ಗೆ ಪ್ರಶಸ್ತಿ ಉಳಿಸಿಕೊಳ್ಳುವ ತವಕ
- ಕಿವೀಸ್ ತಂಡಕ್ಕೆ ಕೇನ್ ವಿಲಿಯಮ್ಸನ್ ಅಲಭ್ಯ
- ಬೃಹತ್ ಕ್ರೀಡಾಂಗಣದಲ್ಲಿ ಮೊದಲ ವಿಶ್ವಕಪ್ ಪಂದ್ಯ

ಪಿಚ್ ಹೇಗಿದೆ?

ಈ ಹಿಂದೆ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ನೀಡಿದ ಇತಿಹಾಸ ಇಲ್ಲಿಯ ಪಿಚ್‌ಗೆ ಇದೆ. ಆದರೆ ಈಗ ವಿಶ್ವಕಪ್ ಪಂದ್ಯಕ್ಕೆ ಸಿದ್ಧಗೊಂಡಿರುವ ಪಿಚ್‌ನಲ್ಲಿ ಕೆಂಪು ಮಣ್ಣಿನ ಪಟ್ಟಿಗಳು ಎದ್ದುಕಾಣುತ್ತಿವೆ. ಇದು ಮಧ್ಯಮವೇಗಿಗಳಿಗೆ ನೆರವು ನೀಡುವುದರ ಜೊತೆಗೆ ಬ್ಯಾಟರ್‌ಗಳಿಗೂ ಆಡುವ ಅವಕಾಶವು ಇನಿಂಗ್ಸ್‌ನ ಮಧ್ಯ ಭಾಗದಲ್ಲಿ ಸಿಗುವ ಸಾಧ್ಯತೆ ಇದೆ. ಆದ್ದರಿಂದ ಆರಂಭಿಕ ಓವರ್‌ಗಳಲ್ಲಿ ಬ್ಯಾಟರ್‌ಗಳು ಎಚ್ಚರಿಕೆಯಿಂದ ಆಡಿದರೆ ನಂತರ ಬೀಸಾಟಕ್ಕೆ ಅವಕಾಶವಿದೆ.
ಮಳೆ ಆತಂಕ?: ಈ ಟೂರ್ನಿಯ ಮೊದಲೆರಡು ಅಭ್ಯಾಸ ಪಂದ್ಯಗಳು ಮಳೆಗೆ ಕೊಚ್ಚಿಹೋಗಿವೆ. ಗುವಾಹಟಿ ಮತ್ತು ತಿರುವನಂತಪುರದಲ್ಲಿ ಪಂದ್ಯಗಳು ಮಳೆಗೆ ರದ್ದಾಗಿದ್ದವು. ಆದರೆ, ಅಹಮದಾಬಾದಿನಲ್ಲಿ ಬಿಸಿಲಿನ ವಾತಾವರಣ ಇದೆ. ರಾತ್ರಿ ಹೊತ್ತಿನಲ್ಲಿ ಇಬ್ಬನಿ ಬೀಳುವ ಸಾಧ್ಯತೆಯೂ ಇದೆ.

ಅಮುಲ್ ಈಗ ದಕ್ಷಿಣ ಆಫ್ರಿಕಾ ಕ್ರಿಕೆಟ್ ಟೀಂನ ಪ್ರಾಯೋಜಕರಾಗಿದ್ದಾರೆ!

ಏಕದಿನ ಕ್ರಿಕೆಟ್ ವಿಶ್ವಕಪ್ ಗೆದ್ದ ದೇಶಗಳು

ವರ್ಷ	ವಿಜೇತ ತಂಡ	ರನ್ನರ್ ಅಪ್	ಗೆಲುವಿನ ಅಂತರ
1975	ವೆಸ್ಟ್‌ಇಂಡೀಸ್	ಆಸ್ಟ್ರೇಲಿಯಾ	17 ರನ್
1979	ವೆಸ್ಟ್‌ಇಂಡೀಸ್	ಇಂಗ್ಲೆಂಡ್	92 ರನ್
1983	ಭಾರತ	ವೆಸ್ಟ್‌ಇಂಡೀಸ್	43 ರನ್
1987	ಆಸ್ಟ್ರೇಲಿಯಾ	ಇಂಗ್ಲೆಂಡ್	7 ರನ್
1992	ಪಾಕಿಸ್ತಾನ	ಇಂಗ್ಲೆಂಡ್	22 ರನ್
1996	ಶ್ರೀಲಂಕಾ	ಆಸ್ಟ್ರೇಲಿಯಾ	7 ವಿಕೆಟ್
1999	ಆಸ್ಟ್ರೇಲಿಯಾ	ಪಾಕಿಸ್ತಾನ	8 ವಿಕೆಟ್
2003	ಆಸ್ಟ್ರೇಲಿಯಾ	ಭಾರತ	125 ರನ್
2007	ಆಸ್ಟ್ರೇಲಿಯಾ	ಶ್ರೀಲಂಕಾ	53 ರನ್
2011	ಭಾರತ	ಶ್ರೀಲಂಕಾ	6 ವಿಕೆಟ್
2015	ಆಸ್ಟ್ರೇಲಿಯಾ	ನ್ಯೂಜಿಲೆಂಡ್	7 ವಿಕೆಟ್
2019	ಇಂಗ್ಲೆಂಡ್	ನ್ಯೂಜಿಲೆಂಡ್	ಸೂಪರ್ ಓವರ್ ಟೈ/ ಬೌಂಡರಿ ಆಧಾರದಲ್ಲಿ ವಿಜೇತರ ಘೋಷಣೆ

ಏಕದಿನ ಕ್ರಿಕೆಟ್ ವಿಶ್ವಕಪ್: ಹಲವು ಮೈಲುಗಲ್ಲುಗಳು

5	ಆಸ್ಟ್ರೇಲಿಯಾ ತಂಡ ಗೆದ್ದಿರುವ ಒಟ್ಟು ಏಕದಿನ ವಿಶ್ವಕಪ್
2,278	ವಿಶ್ವಕಪ್ ಪಂದ್ಯಗಳಲ್ಲಿ ಸಚಿನ್ ತೆಂಡೂಲ್ಕರ್ ಗಳಿಸಿದ ರನ್
237	ನ್ಯೂಜಿಲೆಂಡ್‌ನ ಮಾರ್ಟಿನ್ ಗುಪ್ಟಿಲ್ ಗಳಿಸಿದ ಇನ್ನಿಂಗ್ಸ್‌ನ ರನ್
6	ಸಚಿನ್ ಮತ್ತು ರೋಹಿತ್ ಶರ್ಮಾ ಗಳಿಸಿರುವ ಶತಕಗಳು
5	ಒಂದೇ ಟೂರ್ನಿಯಲ್ಲಿ (2019) ರೋಹಿತ್ ಶರ್ಮಾ ಗಳಿಸಿದ ಶತಕ
71	ಆಸ್ಟ್ರೇಲಿಯಾದ ಗ್ಲೆನ್ ಮೆಕ್‌ಗ್ರಾ ಗಳಿಸಿದ ವಿಕೆಟ್
15ಕ್ಕೆ7	ಗ್ಲೆನ್ ಮೆಕ್‌ಗ್ರಾ ಒಂದು ಪಂದ್ಯಗಳಿಂದ ಗಳಿಸಿದ ವಿಕೆಟ್
27	ಒಂದೇ ಟೂರ್ನಿಯಲ್ಲಿ (2019) ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ ಗಳಿಸಿದ ವಿಕೆಟ್
28	ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್ ಪಡೆದ ಕ್ಯಾಚ್‌ಗಳು
417ಕ್ಕೆ6	ಆಸ್ಟ್ರೇಲಿಯಾ ತಂಡ ಅಫ್ಗಾನಿಸ್ತಾನದ ವಿರುದ್ಧ ಗಳಿಸಿದ ಗರಿಷ್ಠ ಸ್ಕೋರ್
36	ಕೆನಡಾ ತಂಡ ಶ್ರೀಲಂಕಾ ವಿರುದ್ಧ ಗಳಿಸಿದ ಕನಿಷ್ಠ ಮೊತ್ತ

ಆಟದತ್ತ ಮಾತ್ರ ಗಮನಹರಿಸಿ: ರೋಹಿತ್

ಅಹಮದಾಬಾದ್ (ಪಿಟಿಐ): ತವರಿನಲ್ಲಿ ವಿಶ್ವಕಪ್ ಕ್ರಿಕೆಟ್ ಟೂರ್ನಿ ಆರಂಭವಾಗುತ್ತಿರುವಂತೆ ಭಾರತ ತಂಡದ ಮೇಲೆ ನಿರೀಕ್ಷೆಯ ಭಾರವೂ ಹೆಚ್ಚುತ್ತಿದೆ. 'ತಂಡ ಬಾಹ್ಯ ವಿಷಯಗಳ ಕಡೆ ತಲೆಕೆಡಿಸಿಕೊಳ್ಳದೇ, ಆಟದತ್ತ ಮಾತ್ರ ಗಮನಹರಿಸಬೇಕಾದ ಸಮಯ ಎದುರಾಗಿದೆ' ಎಂದು ನಾಯಕ ರೋಹಿತ್ ಶರ್ಮಾ ಬುಧವಾರ ತಿಳಿಸಿದರು.

'ನಮ್ಮಿಂದ ಏನು ನಿರೀಕ್ಷಿಸಲಾಗುತ್ತಿದೆ ಎಂಬುದು ಗೊತ್ತು. ತಂಡದ ಭಾಗವಾಗಿರುವ ಆಟಗಾರರಿಗೂ ಗೊತ್ತು. ಈಗ ನಾವು ಇವೆಲ್ಲವನ್ನು ಬಿಟ್ಟು, ತಂಡವಾಗಿ ನಾವು ಮಾಡಬೇಕು ಎಂಬುದರತ್ತ ಮಾತ್ರ ಯೋಚಿಸಬೇಕು' ಎಂದು ರೋಹಿತ್, ಐಸಿಸಿಯ 'ಕ್ಯಾಪ್ಟನ್ಸ್ ಡೇ' ಕಾರ್ಯಕ್ರಮದಲ್ಲಿ ಹೇಳಿದರು.

ಎಂಟರ ಘಟ್ಟಕ್ಕೆ ಸಾತ್ವಿಕ್– ಚಿರಾಗ್

ಹಾಂಗ್‌ಝೌ (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ – ಚಿರಾಗ್ ಶೆಟ್ಟಿ ಅವರು ಏಷ್ಯನ್ ಕ್ರೀಡಾಕೂಟದ ಬ್ಯಾಡ್ಮಿಂಟನ್ ಡಬಲ್ಸ್‌ನಲ್ಲಿ ತೀವ್ರ ಹೋರಾಟದ ನಂತರ ಇಂಡೊನೇಷ್ಯಾದ ಜೋಡಿಯನ್ನು ಸೋಲಿಸಿ ಎಂಟರ ಘಟ್ಟ ತಲುಪಿದರು.

ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಸಾತ್ವಿಕ್- ಚಿರಾಗ್ ಜೋಡಿ ದೀರ್ಘ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ 24–22, 16–21, 21–12 ರಿಂದ ಲಿಯೊ ರೋಲಿ ಕಾರ್ನಾಂಡೊ–ಡೇನಿಯಲ್ ಮಾರ್ಥಿನ್ ಜೋಡಿಯನ್ನು ಸೋಲಿಸಿತು.

ಪಿ.ವಿ.ಸಿಂಧು ಮತ್ತು ಎಚ್.ಎಸ್. ಪ್ರಣಯ್ ಸಿಂಗಲ್ಸ್ ವಿಭಾಗದಲ್ಲಿ ಎದುರಾಳಿಗಳನ್ನು ನೇರ ಸೆಟ್‌ಗಳಿಂದ ಹಿಮ್ಮೆಟ್ಟಿಸಿದರು.

ಮಾಜಿ ವಿಶ್ವ ಚಾಂಪಿಯನ್ ಸಿಂಧು 16ರ ಸುತ್ತಿನ ಪಂದ್ಯದಲ್ಲಿ ಪುತ್ರಿ ಕುಸುಮಾ ವರ್ದಾನಿ (ಇಂಡೊನೇಷ್ಯಾ) ಅವರನ್ನು 21–16, 21–16 ರಿಂದ ಸೋಲಿಸಿದರು. ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಚೀನಾದ ಹೆ ಬಿಂಗ್‌ಜಿಯಾವೊ ಅವರನ್ನು ಎದುರಿಸಲಿದ್ದಾರೆ.

ಪುರುಷರ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಪ್ರಣಯ್ 21–12, 21–13 ರಿಂದ ಕಜಕಸ್ತಾನದ ಡಿಮಿಟ್ರಿ ಪನಾರಿನ್ ಅವರನ್ನು ಸೋಲಿಸಿದರು.

ಸೋತ ಟ್ರೀಸಾ– ಗಾಯತ್ರಿ: ಮಹಿಳೆಯರ ಡಬಲ್ಸ್‌ನಲ್ಲಿ ಟ್ರಿಸಾ ಜೋಳಿ–ಗಾಯತ್ರಿ ಗೋಪಿಚಂದ್ ಜೋಡಿ ಹೊರಬಿತ್ತು. ಕೊರಿಯಾದ ಕಿಮ್ ಸೊಯೊಂಗ್–ಕಾಂಗ್ ಹೀಯಾಂಗ್ ಜೋಡಿ 21–15, 18–21, 21–13 ರಿಂದ ಭಾರತದ ಆಟಗಾರ್ತಿಯರ ಮೇಲೆ ಜಯಗಳಿಸಿತು.

ತನಿಶಾ ಕ್ರಾಸ್ಟೊ–ಸಾಯಿ ಪ್ರತೀಕ್ ಕೃಷ್ಣ ಪ್ರಸಾದ್ ಮಿಕ್ಸೆಡ್ ಡಬಲ್ಸ್‌ನಲ್ಲಿ ಸೋಲನುಭವಿಸಿದರು. ಮಲೇಷ್ಯಾದ ಜೋಡಿ 21–18, 21–18 ರಲ್ಲಿ ಜಯಗಳಿಸಿತು.

ಐಎಸ್‌ಎಲ್: ಬಿಎಫ್‌ಸಿಗೆ ಜಯ

ಬೆಂಗಳೂರು: ಬೆಂಗಳೂರು ಎಫ್‌ಸಿ ತಂಡ, ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಎಸ್‌ಎಲ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 2–1 ಗೋಲುಗಳಿಂದ ಈಸ್ಟ್ ಬೆಂಗಾಲ್ ಎಫ್‌ಸಿ ತಂಡವನ್ನು ಮಣಿಸಿತು.

ನೊರೆಮ್ ಮಹೇಶ್ ಸಿಂಗ್ ಅವರು 15ನೇ ನಿಮಿಷದಲ್ಲಿ ಬೆಂಗಾಲ್ ತಂಡಕ್ಕೆ ಮುನ್ನಡೆ ತಂದಿತ್ತರು. ಸುನಿಲ್ ಚೆಟ್ರಿ 21ನೇ ನಿಮಿಷದಲ್ಲಿ ಪೆನಾಲ್ಟಿ ಕಿಕ್‌ನಲ್ಲಿ ಗೋಲು ಗಳಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು.

72ನೇ ನಿಮಿಷದಲ್ಲಿ ಜಾವಿ ಹೆರ್ನಾಂಡೆಜ್, ಸೊಗಸಾದ ಗೋಲು ಗಳಿಸಿ ಬಿಎಫ್‌ಸಿಗೆ ಋತುವಿನ ಮೊದಲ ಗೆಲುವು ತಂದುಕೊಟ್ಟರು.

ಹಾಕಿ: ದಕ್ಷಿಣ ಕೊರಿಯಾ ವಿರುದ್ಧ 5–3ರಿಂದ ಜಯ

ಭಾರತ ಪುರುಷರ ತಂಡ ಫೈನಲ್‌ಗೆ

ಹಾಂಗ್‌ಝೌ (ಪಿಟಿಐ): ಭಾರತದ ಪುರುಷರ ಹಾಕಿ ತಂಡವು ಏಷ್ಯನ್ ಕ್ರೀಡಾಕೂಟದಲ್ಲಿ ಅಜೇಯ ಓಟವನ್ನು ಮುಂದುವರಿಸಿದ್ದು, ಬುಧವಾರ ಸೆಮಿಫೈನಲ್‌ನಲ್ಲಿ 5–3 ಗೋಲುಗಳಿಂದ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತು ಪ್ರವೇಶಿಸಿದೆ.

2014ರ ಆವೃತ್ತಿಯಲ್ಲಿ ಚಿನ್ನ ಗೆದ್ದಿದ್ದ ಭಾರತ ತಂಡ, ಕಳೆದ ಆವೃತ್ತಿಯಲ್ಲಿ ಕಂಚು ಜಯಿಸಿತ್ತು. ಈ ಬಾರಿ ಫೈನಲ್ ಪ್ರವೇಶಿಸಿರುವುದರಿಂದ ಚಿನ್ನ ಅಥವಾ ಬೆಳ್ಳಿ ಪದಕ ಖಚಿತಗೊಂಡಿದೆ. ಶುಕ್ರವಾರ ಫೈನಲ್‌ನಲ್ಲಿ ಜಪಾನ್ ಜತೆ ಮುಖಾಮುಖಿಯಾಗಲಿದ್ದು, ಭಾರತ ಚಿನ್ನ ಗೆದ್ದರೆ ಪ್ಯಾರಿಸ್ ಒಲಂಪಿಕ್ಸ್‌ಗೆ ನೇರ ಅರ್ಹತೆ ಪಡೆಯಲಿದೆ.

ಭಾರತದ ಪರ ಹಾರ್ದಿಕ್ ಸಿಂಗ್ (5ನೇ ನಿಮಿಷ), ಮನದೀಪ್ ಸಿಂಗ್ (11ನೇ), ಲಲಿತ್ ಕುಮಾರ್ ಉಪಾಧ್ಯಾಯ (15ನೇ), ಅಮಿತ್ ರೋಹಿದಾಸ್ (24ನೇ) ಮತ್ತು ಅಭಿಷೇಕ್ (54ನೇ ನಿ) ತಲಾ ಒಂದು ಗೋಲು ತಂದಿತ್ತರು. ಕೊರಿಯಾ ಪರ ಮಂಜೇ ಜಂಗ್ (17, 20, 42ನೇ) ಹ್ಯಾಟ್ರಿಕ್ ಗೋಲು ಗಳಿಸಿ ಮಿಂಚಿದರು.

5ನೇ ನಿಮಿಷದಲ್ಲಿ ಲಲಿತ್, ಗೋಲು ಹೊಡೆಯಲು ಯತ್ನಿಸಿದಾಗ ಕೊರಿಯಾದ ಗೋಲ್‌ಕೀಪರ್ ಜೇಹಿಯೋನ್ ಕಿಮ್ ತಡೆದರು. ಈ ವೇಳೆ ಮರುಬೌಂಡ್ಸ್ ಆದ ಚೆಂಡನ್ನು ಹಾರ್ದಿಕ್ ಗುರಿ ಸೇರಿಸಿ ಭಾರತಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು.

ಮೊದಲ ಕ್ವಾರ್ಟರ್‌ನಲ್ಲೇ 3-0 ಮುನ್ನಡೆ ಸಾಧಿಸಿದ ಹರ್ಮನ್‌ಪ್ರೀತ್ ಸಿಂಗ್ ಬಳಗ, ದೊಡ್ಡ ಅಂತರದ ಗೆಲುವು ದಾಖಲಿಸುವ ಮುನ್ಸೂಚನೆ ನೀಡಿತ್ತು. ಆದರೆ, ನಂತರ ಚುರುಕಿನ ಆಟವಾಡಿದ ಎದುರಾಳಿ ತಂಡದವರು ಪ್ರಬಲ ಸ್ಪರ್ಧೆ ನೀಡಿದರು.

ಎರಡನೇ ಕ್ವಾರ್ಟರ್‌ನಲ್ಲಿ ಮೂರು ನಿಮಿಷಗಳ ಅಂತರದಲ್ಲಿ ಎರಡು ಗೋಲು ಗಳಿಸುವ ಅಂತರವನ್ನು 3–2ಕ್ಕೆ ತಗ್ಗಿಸಿದರು. ಆದರೆ, ನಂತರದ ನಾಲ್ಕೇ ನಿಮಿಷದಲ್ಲಿ ಅಮಿತ್ ಚೆಂಡನ್ನು ಗುರಿ ಸೇರಿಸಿ ಭಾರತದ ಮುನ್ನಡೆಯನ್ನು ಹೆಚ್ಚಿಸಿದರು.

ಮತ್ತೊಂದು ಸೆಮಿಫೈನಲ್‌ನಲ್ಲಿ ಜಪಾನ್ ತಂಡ 3–2ರಿಂದ ಚೀನಾವನ್ನು ಮಣಿಸಿ ಫೈನಲ್ ಪ್ರವೇಶಿಸಿತು.

ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ತಂಡದ ಆಟಗಾರರು –ಪಿಟಿಐ ಚಿತ್ರ

ಸವಿನೆನಪು

ಶ್ರೀ. ಎಮ್. ಶ್ರೀನಿವಾಸ

11ನೇ ವರ್ಷದ ಚಿರಸ್ಮರಣೆ

ನಿಧನ: 05.10.2012

ನೀವು ನಮ್ಮ ಹೃದಯವನ್ನು ಪ್ರೀತಿ, ಸ್ಪೂರ್ತಿ ಮತ್ತು ಉತ್ತೇಜನದಿಂದ ಸ್ಪರ್ಶಿಸಿದ ಪ್ರತೀ ಬಾರಿಯೂ ನೀವು ಅಮರರಾದಿರಿ. ನೀವು ನಮ್ಮ ನೆನಪುಗಳಲ್ಲಿ, ನಂಬಿಕೆಗಳಲ್ಲಿ ಮತ್ತು ನಮ್ಮ ಕಾರ್ಯಗಳಲ್ಲಿ ಜೀವಂತವಾಗಿದ್ದೀರಿ.

ಕೆ. ನಿರ್ಮಲ ಮತ್ತು ಕುಟುಂಬ ವರ್ಗ